

# ನಿಗೂಢ ತತ್ತ್ವಾರ್ಥ ಬೋಧಿನಿ


ಗ್ರಂಥಕರ್ತ : ತ್ರಿಮತ ಏಕೈಕ ಗುರುವು

**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**


## ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು

---

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**


---





ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 39 ಪ್ರಥಮ ಮುದ್ರಣ : ನವೆಂಬರ್–2017

ಪ್ರತಿಗಳು : 1000 **ಬೆಲೆ.** /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವ ಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ರಾಜಕೀಯ-ರಾಜಕೀಯ
96. ಉಗ್ರವಾದ ಸತ್ಯಕ್ಕೋಸ್ಕರವೇ
97. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
98. ಮಾನವತ್ವ
99. ಧ್ಯಾನ - ಪ್ರಾರ್ಥನೆ - ನಮಾಜ್



# 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಟಿ–ಸೃಷ್ಟಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
 ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
 ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
 ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
 ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
 ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
 ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
 ದೇಹಂ ಮೋಹಂ.
65. ಜೀರ್ಣ+ಆಶಯಮು.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

66. ಮೇಘಂ ಒಕಭೂತಂ–
ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
ಮಹೇಂದ್ರಜಾಲ,
ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
(ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು
ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಶವಮು – ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು – ಮೋಸಮು
125. ಅಕ್ಷರ ಜ್ಞಾನಮು
126. ಲಲಾಜಲಮು
127. ದೈವ ಧರ್ಮಗಳು–ಮತಸಾಂಪ್ರದಾಯಗಳು
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು
130. ಕಾಲಚಕ್ರಂ
131. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

**(ಇಂದೂ ಜ್ಞಾನ ವೇದಿಕೆ ಸದಸ್ಯರು)**

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 7619545963, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್, ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ), ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ, ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್.B**
ವಡ್ಡೇಪಾಲ್ಯಂ (ಗ್ರಾ), ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ, ರಾಯಚೂರು (ಜಿ) Cell :**9632418716**

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ (ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ, ತೊಣಚಿಕೊಪ್ಪಲ್, ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್ ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ಸೆಲ್:9845656774,9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ), ತುಮಕೂರು (ಜಿಲ್ಲೆ).
ಸೆಲ್:8762523963,9740744424

# ವಿಷಯ ಸೂಚಿಕೆ


| ಕ್ರಮ ಸಂಖ್ಯೆ | ವಿಷಯ | | ಪೇಜಿಗಳು |
|---|---|---|---|
| | ರಚನೆಕಾರರ ಮೊದಲ ಮಾತು | : | 11 |
| 1. | ಸಾವಿರ ವಿಧದಲ್ಲಿ ವೇಮನ ಪದ್ಯಗಳ್ ರಾಜಿಸು | : | 15 |
| 2. | ತಾಯಿ ತಂದೆಯರ ಮೇಲೆ ದಯೆತೋರದ ಪುತ್ರನು | : | 15 |
| 3. | ಬ್ರಹ್ಮವನ್ನು ಕೊಂದು ವಿಷ್ಣುವಿನಲ್ಲಿ ಬೆರೆಸಿ | : | 16 |
| 4. | ಕಬ್ಬಿಣದಿ ಮಾಡಿದ ಮೇಣದ ಕಡಿ | : | 18 |
| 5. | ನೀರು ಕ್ಷಾರವಾಯಿತು, ಕ್ಷಾರವು ನೀರಾಯಿತು | : | 20 |
| 6. | ನೀರು ಕಾರವಾಯಿತು ನೀರಾಯಿತು ಕಾರವು | : | 20 |
| 7. | ಹುಡುಗಿ ಎಳೆ ಪ್ರಾಯದಲ್ಲಿ | : | 21 |
| 8. | ಅವನಿಯೊಳೊಬ್ಬ ಸುತ ತಂದೆಗೆ ಹುಟಿ | : | 22 |
| 9. | ನಾಯಿಯನು ತಿಂದವನು ಗುರುಲಿಂಗ ಜಂಗಮನು | : | 23 |
| 10. | ಉಕ್ಕು ಚೂರ್ಣ ತಿನಲು ನಯವಾಗು ಕಷ್ಟವು | : | 24 |
| 11. | ತುಣುಕು ಪಕ್ವ ಕಾಯಿ ದೊಡ್ಡ ಹಾವಿನ ಪರಿ | : | 25 |
| 12. | ಎತ್ತುಗಳೆರಡು ತಿನಲು ಇಹದಲಿ ಸ್ಥಂಭಿಸುವ | : | 27 |
| 13. | ಕೃಷ್ಣ ಪರ್ವದಲ್ಲಿ ವೃತ್ತಿಕಲ್ಲೈವರುಂಟು | : | 28 |
| 14. | ಕಾಮಿಯಲ್ಲದವನು ಕವಿಯಲ್ಲ ರವಿಯಲ್ಲ | : | 29 |
| 15. | ಸಾಯುವವರು ಯಾರು? ಸಾಯದವರು ಯಾರು | : | 30 |
| 16. | ಕಾಂತೆ ಮೇಲೆ ಆಸೆ ಕನಕದ ಮೇಲಾಸೆ | : | 31 |
| 17. | ನಿನ್ನ ನೋಡುತಿರಲು ತನ್ನ ತಾನೆ ಮರೆವ | : | 32 |
| 18. | ಸತಿಯ ಮಾತು ಕೇಳಿ ಅಣ್ಣತಮ್ಮರ ತ್ಯಜಿಸಿ | : | 33 |
| 19. | ಉಪ್ಪು ಹುಣಿಸೆ ಹಣ್ಣು ಊರಿನೊಳ್ ಇರುವಾಗ | : | 34 |
| 20. | ತಾಯಿ ಗರ್ಭದಿಂದ ತಾ ಹುಟ್ಟಿ ಬಂದಾಗ | : | 35 |
| 21. | ತಾಯಿಯನ್ನು ತಿಳಿದವನು ದೈವವನ್ನು ತಿಳಿಯುವನು | : | 36 |
| 22. | ಹೇಮಕಾರ ವಿದ್ಯೆ ಕಲಿತಂಥ ಜನರೆಲ್ಲ | : | 37 |
| 23. | ಬೈದು ಹೊಡೆದರೇನು ತಿರುಗಿ ಮಾತಾಡದೆ | : | 38 |
| 24. | ಎಲೆಯ ಮರೆಯೊಳಿರ್ಪ ಎಲ್ಲ ಲೋಕಂಗಳು | : | 39 |
| 25. | ಅವನು ಅವನು ಅವನು ಅವನೊಳಗಿರುವ | : | 40 |
| 26. | ಮೊದಲು ಮರವಾಗಿದೆ ತುದಿಗೆ ಪಕ್ಷಿಯು ಅಲ್ಲ | : | 41 |

| | | | |
|---|---|---|---|
| 27. | ಭೂಮಿಯ ಮಂದಿಗೆಲ್ಲ ಒಂದೆ ತಟ್ಟೆಯನ್ನಿಟು | : | 42 |
| 28. | ಸತಿಯ ಕಡೆಯ ಜನರು ಆತ್ಮಬಂಧುಗಳಾದು | : | 43 |
| 29. | ಮನೆಯ ಸತಿಯ ತೊರೆದು ಮಹಿಯೊಳು ಜಾರೆಯರ | : | 45 |
| 30. | ಕೆರದೊಳಗಿನ ಕಲ್ಲು ಕಿವಿಯೊಳಗೆ ತೊಣಚಿ | : | 46 |
| 31. | ಅಂಚೆ ಘನಾಕ್ಷರ ಬಿಂದು | : | 47 |
| 32. | ಅಂಟಿ ಅಂಟದಿದ್ದು ಅಮಲದ ತೆರನಾಗಿ | : | 48 |
| 33. | ಇಲಿಯ ತೊಗಲು ತಂದು ವರುಷ ಪೂರ್ತಿ ಒಗೆದರು | : | 49 |
| 34. | ಅಲ್ಪಬುದ್ಧಿಯವನಿಗೆ ಅಧಿಕಾರಕೊಟ್ಟರೆ | : | 50 |
| 35. | ಆರು ತೊಲೆಗಳಿಗೆ ಆಧಾರವಿರುವಂಥ | : | 52 |
| 36. | ಆರು ಮೂರು ಕಟ್ಟಿ ಅಳಲು ಹೊಂದದ | : | 53 |
| 37. | ಮನೆಯ ಒಳಗಿನ ಕೋತಿ ಮತದನೆ ಕಾಣದೆ | : | 54 |
| 38. | ಇಹದಲ್ಲಿ ಸುಖವು ಈಡೇರು ಎಂದು | : | 55 |
| 39. | ಉಪಜಿಹ್ವೆಗೆ ಮೇಲ್ಭಾಗದಲ್ಲಿ | : | 55 |
| 40. | ಉಪ್ಪು ಇರದ ಪಲ್ಯ ಒಪ್ಪುವುದಿಲ್ಲ ರುಚಿಗಳಿಗೆ | : | 57 |
| 41. | ಕಾಷ್ಠದ ಮೇಲಿರುವ ಕಾಷ್ಠಕೆ ಘನವೇನು | : | 58 |
| 42. | ನನಗೆ ಯಾರು ದಿಕ್ಕು ನಾಡುವೆ ನಾಳದೊಳಗೆ | : | 59 |
| 43. | ಚಂದ್ರ ಸೂರ್ಯ ಗತಿಯ ಚರ್ಚಿಸಿ ವೇಗದಿಂ | : | 60 |
| 44. | ತೊರ್ರಿಮಾನುಲೋನಿ ತೋರಟ ಜೀವುಲನೆಲ್ಲ | : | 61 |
| 45. | ಚರ್ಮ ಚೀಲದೊಳ್ ಆದಿಯಲಿ ಇಟ್ಟವನ | : | 62 |
| 46. | ನಲುಗುರು ದೊಂಗಲಬಟ್ಟುಗ ನಾಲ್ವರು ಕಳ್ಳರ ಹಿಡಿಯುಲು | : | 63 |
| 47. | ಐದು ವರ್ಣಗಳೆನ್ನುವ ಯಖಿಲವು ತಿಳಿದರೆ | : | 63 |
| 48. | ಐದುನ್ಯೆದು ನೆನ್ಮಿ ದಾರುನು ನೊಕ್ಕಟಿ | : | 64 |
| 49. | ಒಂದು, ಎರಡು, ಮೂರು ಯೋಗೀಂದ್ರನ ಕೂಡಿ | : | 65 |
| 50. | ಹೊತ್ತು ಮೂಡುವ ಸ್ಥಳ ಹೊತ್ತು ನಿಲ್ಲುವ ಸ್ಥಳ | : | 66 |
| 51. | ಆಸೆಯಿಂದ ಧನವನ್ನು ಪಡೆಯುವುದೇಕೆ | : | 67 |
| 52. | ಬಡವನ ಬಾಧೆ ಪೆಡಂಭೂತವಾಗಿದ್ದು | : | 68 |
| 53. | ಮೂರು ಲೋಕಗಳನ್ನು ಮನವ ನೊಂದುಮಾಡಿ | : | 68 |
| 54. | ಅಂತರಂಗದಲ್ಲಿ ಅಪರಾಧಗಳ ನ್ನೆಸಗಿ | : | 69 |
| 55. | ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲಿ ಬೆಳೆದು | : | 70 |

# ವಿಷಯ ಸೂಚಿಕೆ


| ಕ್ರಮ ಸಂಖ್ಯೆ ವಿಷಯ | | ಪೇಜಿಗಳು |
|---|---|---|
| 56. | ಕೆರೆಗಳಡ್ಡಗಟ್ಟಿ ಸ್ಮಶಾನವನ್ನುಳುಮೆ ಮಾಡಿ | 71 |
| 57. | ಆಕಾಶದ ಮೇಲೆ ಅಂದು ದೊಮ್ಮರ | 72 |
| 58. | ತನುವು ಎನ್ನುವ ಗೃಹದಿ ತನ್ನ ಶತ್ರು ಮಿತ್ರರ | 73 |
| 59. | ಸುಳ್ಳು ಗುರುವು ಗಳಿಪನೆಲ್ಲ ಕರ್ಮಂಗಳ | 74 |
| 60. | ಜೀವಿ ಹೋಗುವ ಮುಂಚೆ ಜೀವ ವಸ್ತುಗಳನ್ನು ಕೊಟ್ಟು | 75 |
| 61. | ಹಾಡುತ್ತ ಹಾಡುತ್ತ ರಾಗವತಿಶಯಿಸು | 76 |
| 62. | ಹೃದಯದಲ್ಲೆ ಇರುವ ಈಶನ ತಿಳಿಯದೆ | 77 |
| 63. | ಜನನ ಮರಣಗಳಿಗೆ ಸ್ವತಂತ್ರನು ತಾನಲ್ಲ | 78 |
| 64. | ಗುರು ಚರಣವ ಹಿಡಿದರೆ ನಾಯಿ ಕಚ್ಚುವುದೆ! | 79 |
| 65. | ಹುಡುಕಿ ಕಾಣಲಾರ ವೇದಾಂತ ವೇದ್ಯನ | 80 |
| 66. | ಸಿರಿಯು ಇರುವ ಸ್ಥಳದಿ ಶೋಧಿಸಲಾಗುವುದು | 81 |
| 67. | ಸತಿಯಲ್ಲೇ ಪತಿ ಹುಟ್ಟಿದ | 81 |
| 68. | ದೊರಸಾನಿ ಯಾರೆ ದೊರೆಕುಮಾರನ್ಯಾರು | 82 |
| 69. | ಒಂದು ಸಂದಿಯೊಳಗೆ ತೂರಿ ಒಂದು ಸಂದಿಯೊಳಗೆ ಬಂದು | 83 |
| 70. | ಹತ್ತಿ ಹಣ್ಣು ನೋಡಲು ಮೇಲ್ಮೈ ಬಹು ಅಂದ | 85 |
| 71. | ಬೇರು ಹುಳವು ಸೇರಿ ವೃಕ್ಷವನ್ನು ಕೊರೆಯುತ್ತದೆ | 86 |
| 72. | ಸೂಳೆ ಸೂಳೆ ಎನ್ನುವರು ಲೌಕಿಕ ಧರ್ಮದಲಿ | 88 |
| 73. | ಜಾತಿಯೊಳಗೆ ಉಳಿದ ಜಾತಿ ಯಾವುದೆಚ್ಚು | 89 |
| 74. | ಕುಲವನುಳ್ಳ ಮನುಜ ಗೋತ್ರವುಳ್ಳವನು | 90 |
| 75. | ಒಕ್ಕಲರಿಗೆ ಬಲವಿರೆ ಕರಣಿಕಗೆ ಬಲವು | 92 |
| 76. | ಕಂಡು ಕಾಣದಿರುವ ಕದಲಿಸನು ಬಾಯಿ | 93 |
| 77. | ಶ್ವಾಸವಿರದ ಚೀಲ ಕಿಂಚಿತ್ತು ಊದಲು | 94 |
| 78. | ತನ್ನ ಗುಣವು ತನಗಿರುವಾಗ | 95 |
| 79. | ನೀನಾಡಿದರೆ ನಾನಾಡುವೆ | 96 |
| 80. | ನಿನ್ನ ನೋಡುತಿರೆ ತುಂಬುವುದು ತತ್ವವು | 97 |
| 81. | ಗಾಳಿ ಗಾಳಿ ಬೆರೆತು ಗಗನದಲಿ ಗಗನದಲಿ | 98 |
| 82. | ಕುಡಿದು ಕುಡಿದು ಧರಣಿ ಮೇಲೆ ಬೀಳುವವರೆಗು | 99 |
| 83. | ಮಣ್ಣು ತಿನ್ನಿರೆನಲು ಉರಿದೇಳುವ ಜನರೆ | 101 |

84. ಜೀವವದು ಎಲ್ಲಿಹುದು ಭಾವವದು ಎಲ್ಲಿಹುದು : 102
85. ದೈವವೆಂದರೆ ಬೇರೆ ದೇಶದಲ್ಲಿರುವನೆ : 103
86. ವಾಕ್‌ನಲ್ಲಿ ಗುರುವು ವಾಕ್ ತತ್ತ್ವದೊಳ್ ಗುರುವು : 104
87. ಕರ್ಮಾ ಕರ್ಮಗಳೊಂದೆ : 106
88. ಅಮ್ಮ ಕಣಾಭಾರ್ಯೆಯೆನೆ : 106
89. ಎಚ್ಚರ ನಿದ್ರೆಯಲಿ ಜೀವಿ ಎಷ್ಟು ಕಾಲವಿದ್ದರೂ : 108
90. ಬ್ರಹ್ಮ ಅಂಡವೆನ್ನುವ ಆ ಪುರದ ಒಳಗೆ : 110
91. ಗುರುವು ಹೇಳೋ ವಿದ್ಯೆ ಗುರುವಿಗೆ ತಿಳಿವುದು : 111
92. ಬೀಜವಿಲ್ಲದಂಥ ವೃಕ್ಷವೊಂದು ಹುಟ್ಟಿ : 112
93. ತಾತನ ಹೆತ್ತ ತಾಯಿ ತನ್ನ ತಂದೆಯ ಹೆತ್ತ ತಾಯಿ : 113
94. ಹುಟ್ಟುವವರು ಯಾರು ಹುಟ್ಟದವರ್‍ಯಾರು : 116
95. ಪಂಚಾಕ್ಷರಿ ಬೀಜಗಳ ವಿವರ : 117
96. ರೂಪ ಹೆಸರು ಎರಡು ರೂಢಿಯಲ್ಲಿದ್ದು : 118
97. ವೃಕ್ಷದಲ್ಲಿ ಹುಟ್ಟಿ ಸಿಡಿದೇಳುವ ಕಾಯಿಗಳು : 120
98. ಮೂಲ ಯಾರೆನ್ನುತ ಮೂವರೊಳಗೆ : 121
99. ಕಾಲು ಮುಂದೆ ನದಿಯ ದಡಕೆ ಈಜದೆ : 122
100. ಹಂಸ ಮಾನಸ ಜಲ ಹತ್ತದಂತೆ ತಿರುಗಿದ : 123
101. ಕಾಲು ಕೈಯಿಲ್ಲ ಕಂಚಿನಂತಿಹುದು : 125
102. ಅವನ ಕಾಣದವನು ಅವನು ಅಲ್ಲವೇ ಅಲ್ಲ : 126
103. ವಿಧಿಲಿಖಿತಕ್ಕಿಂತ ಹೆಚ್ಚು ಕೊಡಲಾರ ದೈವವು : 127
104. ಬ್ರಹ್ಮ ಕುದುರೆಯಾದ ಭವನು ಜೀನು ಆಗಿ : 129
105. ಜಾತಿಯೊಳಗೆ ಯಾವ ಜಾತಿ ಮುಖ್ಯ ವೆನುತ : 130
106. ಓದಿದವನಿಗಿಂತ ಮಡಿವಾಳನೇ ಮೇಲು : 131
107. ಬ್ರಹ್ಮ ಯಾರ ಮಗ ಪರೀಕ್ಷಿಸಿ ಭುವಿಯಲ್ಲಿ : 133
108. ವೇದ ವಿದ್ಯೆಯೆಲ್ಲ ವೇಶ್ಯೆಯಂಥಾದ್ದು : 135
109. ಪತಿಯೊಪ್ಪಿದರೆ ಸತಿಯೊಪ್ಪುವಳು : 137
110. ಆರುಮಂದಿ ಕಳ್ಳರನ್ನು ಹಿಡಿಯಲು : 140
111. ಕೊನೆಯ ಮಾತು : 141

# ರಚನೆಕಾರರ ಮೊದಲ ಮಾತು



ರೆಡ್ಡಿ ಕುಲದಲ್ಲಿ ಹುಟ್ಟಿ ವೇಮನಯೋಗಿ ನಾಮಧೇಯವನ್ನು ಹೊಂದಿದ ವೇಮಾರೆಡ್ಡಿಯವರು ತನ್ನ ಜೀವನದಲ್ಲಿ ಎಷ್ಟೋ ತಿರುವುಗಳನ್ನು ನೋಡಿದ್ದಾನೆ. ಕಷ್ಟ ಸುಖಗಳ ಅಂಚುಗಳು ನೋಡಿ ಜೀವನದ ಮೇಲೆ ಬೇಸರಗೊಂಡು, ಅತ್ತಿಗೆಯ ಸಹಕಾರದಿಂದ, ಶಿವಯೋಗಿ ಉಪದೇಶದಿಂದ, ಪ್ರೇರೇಪಿತನಾಗಿ ಸತ್ಯ ತಿಳಿದುಕೊಂಡು ತಾನು ತಿಳಿದುಕೊಂಡ ಜ್ಞಾನವನ್ನು ಪದ್ಯ ರೂಪಗಳಾಗಿ ಬೋಧಿಸಿದ್ದಾನೆ. ಆತನ ಪದ್ಯಗಳೆಲ್ಲವು ಸುಲಭ ಶೈಲಿಯಲ್ಲಿ ಇರುತ್ತವೆ. ಪ್ರತಿ ಪದ್ಯ ಬಾಹ್ಯಾರ್ಥವಾಗಿ ಹೇಳಿದಂತೆ ಕಾಣಿಸುತ್ತಿರುತ್ತದೆ. ಆದ್ದರಿಂದ ವೇಮನ ತನ್ನ ಪದ್ಯಗಳಲ್ಲಿ ಲೋಕನೀತಿಯನ್ನು ಹೆಚ್ಚಾಗಿ ಹೇಳಿದ್ದಾನೆಂದು ಬಹಳ ಜನ ಹೇಳುತ್ತಿರುವರು. ವಾಸ್ತವವಾಗಿ ತನ್ನ ಪದ್ಯಗಳಲ್ಲಿ ಜ್ಞಾನ ಹೊರತು ನೀತಿ, ನ್ಯಾಯವನ್ನು ಕುರಿತು ಯಾವ ಮಾತ್ರ ಇಲ್ಲ. ವೇಮನನೇ ಸ್ವತಃವಾಗಿ ನಾನು ಹೇಳಿರುವುದೆಲ್ಲಾ ಜ್ಞಾನವೇ ಎಂದಿದ್ದಾನೆ. ಜ್ಞಾನವನ್ನು ಅರ್ಥ ಮಾಡಿಕೊಳ್ಳದವರು ಸಾವಿರ ವಿಧಗಳ ಅರ್ಥಗಳೊಂದಿಗೆ ಆತನ ಪದ್ಯಗಳನ್ನು ಹೋಲಿಸಿ ಕೊಳ್ಳುತ್ತಿರುವರು.

ಭೂಮಿಮೇಲೆ ಜನ್ಮಿಸಿದ ಯೋಗಿಗಳಲ್ಲಿ ಉತ್ತಮವಾದ ಯೋಗಿ ವೇಮನಯೋಗಿ. ಎಲ್ಲರ ಸ್ವಾಮಿಗಳ ಹಾಗೆ ಈತನು ಪ್ರಚಾರ ಆಗದಿದ್ದರು ಎಲ್ಲರಿಗಿಂತ ಉನ್ನತವಾದ ಯೋಗಿಯೆಂದು ನೋಡದೆಯೇ ಹೇಳಬಹುದು. ಕಡಿಮೆ ರಚನೆಯಲ್ಲಿ ಹೆಚ್ಚಿನ ಭಾವ ಸೇರಿಸಿದವರು ಕಡಿಮೆ ಭಾವನೆಯನ್ನು ದೊಡ್ಡ ರಚನೆಗಳಲ್ಲಿ ಅಳವಡಿಸಿದವರಿಗಿಂತ ಪ್ರಶಂಸನೀಯರು. ಬಹಳ ದೊಡ್ಡ ಭಾವನೆಗಳನ್ನು ಚಿಕ್ಕ ಪದ್ಯಗಳಲ್ಲಿ ಅಳವಡಿಸಿದವರು ಒಬ್ಬ ವೇಮನನೇಯೆಂದು ಗಟ್ಟಿಯಾಗಿ ಹೇಳಬಹುದು. ತನ್ನ ಜೀವನದಲ್ಲಿ ತಿಳಿದುಕೊಂಡ ದೈವತ್ವವವನ್ನು ಜ್ಞಾನರೂಪದಲ್ಲಿ ಪದ್ಯಗಳಲ್ಲಿ ಬಚ್ಚಿಟ್ಟಿರುವವರು ವೇಮನ. ಆತನ ಪದ್ಯಗಳನ್ನು ಸುಮ್ಮನೆ ಓದಿದಷ್ಟು ಮಾತ್ರಕ್ಕೆ ಅದರಲ್ಲಿನ ರಹಸ್ಯ ಹೊರಬೀಳುವುದಿಲ್ಲ. ಯೋಚಿಸಿ ನೋಡಿದಾಗಲೇ ಆತನ ಪದ್ಯ ಅರ್ಥವಾಗುತ್ತದೆ.

ತನ್ನ ಪದ್ಯಗಳನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ಎಲ್ಲರಿಗೂ ಇರುವುದಿಲ್ಲವೆಂದು ತಿಳಿದ ವೇಮಾರೆಡ್ಡಿ ತನ್ನ ಅಂತ್ಯಕಾಲದಲ್ಲಿ ತನ್ನ ಕುಲದಲ್ಲಿನ ಕೆಲವರು ಯುವಕರನ್ನು ಕರೆದು ತನ್ನ ಪದ್ಯ ರಹಸ್ಯಗಳೆಲ್ಲವೂ ತಿಳಿಸಿ ನನ್ನ

ಜೀವನವೆಲ್ಲವೂ ಕಳೆದುಹೋಗಿದೆ ನಾನು ಹೇಳಿದ ಜ್ಞಾನವೆಲ್ಲವೂ ನನ್ನ ಹೆಸರಿನ ಮೇಲೆ ನೀವು ಊರೂರೂ ತಿರುಗಿ ಪ್ರಚಾರ ಮಾಡಿ ಅಜ್ಞಾನಿಗಳನ್ನು ಜ್ಞಾನಿಗಳನ್ನಾಗಿ ಬದಲಾಯಿಸಿರೆಂದು ತಿಳಿಸಿದ್ದಾನೆ. ಪ್ರಯಾಣ ಮಾಡುವುದಕ್ಕೆ ಆ ಕಾಲದಲ್ಲಿ ಇಂದಿನಂತೆ ವಾಹನಗಳ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ಪ್ರಯಾಣಕ್ಕೆ ಅನುಕೂಲವಾಗಿ ಒಳ್ಳೆಯ ಕುದುರೆಯನ್ನು ಇಟ್ಟುಕೊಂಡು ಗ್ರಾಮಗಳಿಗೆ ಹೋಗಿ ಅಲ್ಲಿರುವ ಛತ್ರದಲ್ಲಿ ಇಳಿದು ಊರಿನ ಜನರೆಲ್ಲರಿಗೂ ವೇಮಾರೆಡ್ಡಿ ಬಂದಿದ್ದಾನೆಂದು ಡಂಗುರ ಹಾಕಿಸಿ ಸಾಯಂಕಾಲ ತನ್ನ ಹತ್ತಿರಕ್ಕೆ ಎಲ್ಲರು ಬರುವಂತೆ ಮಾಡಿ ತನ್ನ ಪದ್ಯಗಳ ಜ್ಞಾನವನ್ನು ಬೋಧಿಸಿರೆಂದು ವೇಮನ ಹೇಳಿ ಹೋಗಿದ್ದಾನೆ. ಮದುವೆಯಾದವರಿಗೆ ಅನುಕೂಲವಾಗಿ ಇರುವುದಿಲ್ಲವೆಂದು ಮದುವೆಯಾಗದವರಿಗೆ ಮಾತ್ರವೇ ಪ್ರಚಾರ ಕಾರ್ಯವನ್ನು ತಿಳಿಸಿ ಹೋಗಿದ್ದಾನೆ. ಹೋದ ಊರಿನಲ್ಲಿ ಡಂಗುರ ಹಾಕುವುದಕ್ಕೆ ಮನುಷ್ಯ ಒಂದುವೇಳೆ ಸಿಗದೆ ಹೋಗಬಹುದೆಂದು ಡಂಗುರ ಹಾಕುವ ಮನುಷ್ಯನನ್ನು ತನ್ನ ಹಿಂದೆ ಕರೆದುಕೊಂಡು ಹೋಗಲು ಹೇಳಿದ್ದಾನೆ. ಹೀಗೆ ತನ್ನ ಜ್ಞಾನವನ್ನು ಪ್ರಜೆಗಳು ತಿಳಿದುಕೊಳ್ಳಬೇಕೆಂದು ತಪ್ಪದೆ ತನ್ನ ಮಾತು ಆಚರಿಸುವ ಸ್ವಕುಲಸ್ಥರಾದವರಿಗೇ ವೇಮಾರೆಡ್ಡಿ ಹೆಸರಿನೊಂದಿಗೆ ಚಲಾವಣೆ ಆಗಬೇಕೆಂದು ಸಹ ತಿಳಿಸಿದ್ದಾನೆ.

ಬಹಳ ಕಾಲ ವೇಮನ ಆಶಿಸಿದಂತೆ ವೇಮಾರೆಡ್ಡಿ ಹೆಸರಿನೊಂದಿಗೆ ರೆಡ್ಡಿ (ಚೌದರಿ) ಕುಲಸ್ಥರು ಊರೂರು ತಿರುಗಿ ಜ್ಞಾನವನ್ನು ಸಾರುತ್ತಿದ್ದರು. ಇಂದಿನ ಕಾಲದಲ್ಲಿ ಆ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆ ಬಂದಿದೆ. ವೇಮಯ್ಯನವರೇನೋ ಕುದುರೆಗಳ ಮೇಲೆ ಬರುತ್ತಿದ್ದಾರೆ. ದೇವಾಲಯ ಗಳಲ್ಲಾಗಲೀ, ಛತ್ರಗಳಲ್ಲಾಗಲಿ ಇಳಿಯುತ್ತಿದ್ದಾರೆ. ಡಂಗುರ ಹೊಡೆಸುವ, ಕುದುರೆಗಳನ್ನು ಮನೆಗಳ ಮುಂದೆ ಆಡಿಸುತ್ತಿದ್ದಾರೆ. ಧಾನ್ಯವನ್ನು ನೀಡಿಸಿಕೊಂಡು ಹೋಗುತ್ತಿದ್ದಾರೆ. ವೇಮನಯೋಗಿಯ ಮಾತು ನೀರಿನ ಮೂಟೆ ಮಾಡುತ್ತಿದ್ದ ವೇಮಯ್ಯರವರಿದ್ದಾರೆ. ನಾವು ಚಿಕ್ಕಂದಿನಲ್ಲಿ ನೋಡಿದ ವಿಧಾನ ಇದು. ಪ್ರಸ್ತುತ ವೇಮಯ್ಯರವರೇ ಬರವಾಗಿದ್ದಾರೇನೋ ಯೆಂದೆನಿಸುತ್ತಿದೆ. ಅವರ ಸಂಖ್ಯೆ ಬಹಳ ಕಡಿಮೆಯಾದಂತೆ ಇದೆ. ಅವರ ಹತ್ತಿರ ಒಳ್ಳೆಯ ಕುದುರೆ ಇರುತ್ತದೆ ನೋಡೋಣ ಎನ್ನುವ ಆಸೆಯೂ ಸಹ ಇಲ್ಲದಂತಾಗಿದೆ.

ಒಂದು ವೇಳೆ ವೇಮನ ಹೆಸರೊಂದಿಗೆ ಬರುವ ಅವರಿಗೆ ಅನುಕೂಲ ಪರಿಸ್ಥಿತಿಗಳು ಇಲ್ಲದೆ ಹೋಗಬಹುದು. ಆದರೆ ಸ್ವಕುಲಸ್ಥರಾದ ರೆಡ್ಡಿ ಕುಲದವರು ಇಷ್ಟು ಮಂದಿ ಇದ್ದು ಮತ್ತು ಎಷ್ಟೋ ಶ್ರೀಮಂತರಾಗಿ ಹೆಸರು ಪ್ರಖ್ಯಾತಿಗಳು ಇರುವವರಾಗಿ ಇದ್ದು ವೇಮನನಿಗೆ ಏನು ಮಾಡಿದಂತೆ? ಅಸಲು ವೇಮನಯೋಗಿ ಎಂದರೆ ಯಾರೋ ತಿಳಿಯದವರು ಕೂಡ ರೆಡ್ಡಿಕುಲದಲ್ಲಿ ಇದ್ದಾರೆ. ವೇಮನ ಸಮಾಧಿ ಎಲ್ಲಿದೆಯೋ ತಿಳಿಯದವರಿದ್ದಾರೆ. ವೇಮನಯೋಗಿ ಆಶಯಗಳನ್ನು ನೆರವೇರಿಸದವರು ಆತನಿಗೆ ನಾವೇನು ಮಾಡಿದಂತೆ? ನಿಜಕ್ಕೆ ಆತನೇ ನಮಗೆ ಹೆಚ್ಚು ಮಾಡಿದ್ದಾನೆ. ಪರಿಪೂರ್ಣವಾದ ವೇಮನನಿಂದ ರೆಡ್ಡಿ ಕುಲಸ್ಥರಿಗೆ ಎಲ್ಲರಿಗು ಆತನ ಕೀರ್ತಿ ಲಭಿಸಿದೆ.

| | |
|---|---|
| **ಕಲಿಯುಗಮುನ ನುನ್ನ ಕಾಪು ಕುಲಾಲಕು** | **ಕಲಿಯುಗದೊಳಿರುವ ರೆಡ್ಡಿ ಕುಲಗಳಿಗೆ** |
| **ವೇಮನ ಧನಕೀರ್ತಿ ವಿಕ್ರಯಿಂಚೆ** | **ವೇಮನ ಧನಕೀರ್ತಿ ವಿಕ್ರಯಿಸಿತು** |
| **ನುನ್ನ ಧರ್ಮಮೆಲ್ಲ ನುರ್ವಿಲೋ ನರುಲಕು** | **ಇದ್ದ ಧರ್ಮವೆಲ್ಲ ಉರ್ವಿಯೊಳ್ ನರರಿಗೆ** |
| **ಕೋರುಪೆಟ್ಟೆ ಪರಮು ಗೋರಿ ವೇಮಾ** | **ಹಂಚಿ ಬಿಟ್ಟ ಪರಮ ಬಯಸಿ ವೇಮಾ.** |

ವೇಮನ ಒಬ್ಬ ಆಧ್ಯಾತ್ಮಿಕತಜ್ಞನೇ ಅಲ್ಲದೆ ಇಂದಿನ ಹೇತುವಾದಿಗಳಿಗೆ ಎಲ್ಲರಿಗೂ ಆದಿ ಗುರುವಿನಂತಹವನು. ಆತನು ತನ್ನ ಪದ್ಯಗಳಲ್ಲಿ ಎಷ್ಟೋ ಮೂಢ ವಿಶ್ವಾಸಗಳನ್ನು ನಿಷ್ಪಕ್ಷಪಾತವಾಗಿ ಖಂಡಿಸಿದ್ದಾನೆ. ಅಷ್ಟೇ ಅಲ್ಲದೆ ಮೂಢಾಚಾರಗಳನ್ನು, ಅಕ್ರಮ ಜ್ಯೋತಿಷ್ಯವನ್ನು ಹೇತುವಾದಪದ್ಧತಿಯಲ್ಲಿ ಖಂಡಿಸಿ ದೊಡ್ಡವರೆಂದುಕೊಂಡು ಮಾಡುವವರ ಚೇಷ್ಟೆಗಳನ್ನು ಪೂರ್ತಿಯಾಗಿ ವಿಮರ್ಶಿಸಿದ್ದಾನೆ. ಆದ್ದರಿಂದ ಇಂದಿನ ಕಾಲದಲ್ಲಿ ಚಾಂಧಸವಾದಿಗಳಾದ ಕೆಲವರಿಗೆ ವೇಮನವಾದನೆ ಸರಿಹೋಗುವುದಿಲ್ಲ. ಅವರೆಲ್ಲಾ ವೇಮನನನ್ನು ಹುಚ್ಚನ ಕೆಳಗೆ ಜಮಕಟ್ಟುವುದರಿಂದ ವೇಮನವೊಂದರ ಔನ್ನತ್ಯ ಪ್ರಜೆಗಳೆಲ್ಲರಿಗೂ ತಿಳಿಯದೆ ಹೋಗಿದೆ. ಇಂದಿಗೂ ಕೂಡ ಒಂದು ಕುಲದವರು ವೇಮನನನ್ನು ಹೇಳನವಾಗಿ ಮಾತನಾಡುವುದು ಆತನ ಮಾತುಗಳನ್ನು ಮತಿ ಇಲ್ಲದ ಮಾತುಗಳೆನ್ನುವುದು ನಾವು ನೋಡುತ್ತಲೇ ಇದ್ದೇವೆ. ಹಾಗೆ ಕೆಲವರು ಆತನನ್ನು ಎಲ್ಲ ವಿಧಗಳಲ್ಲಿ ಕಡಿಮೆ ಮಾಡಿದಾಗ ಸ್ವತಃ ರೆಡ್ಡಿ ಕುಲಸ್ಥರು ಕೂಡ ಆತನನ್ನು ಗಮನಿಸದೆ ಹೋಗುವುದು, ಆತನ ಹಿರಿಮೆಯನ್ನು ಗುರುತಿಸದೆ ಹೋಗುವುದರಿಂದ ವೇಮನ ಸ್ವಲ್ಪ ಹಿಂದುಳಿದು ಯಾರಿಗೂ ತಿಳಿಯದಂತೆ

ಹೋಗಿದ್ದಾನೆಂದು ಹೇಳಬಹುದು. ಮುಖ್ಯವಾಗಿ ಹೇಳಬೇಕೆಂದರೆ ವೇಮನ ಜೀವಿತ ಧ್ಯೇಯವಾದ ಜ್ಞಾನ ಪ್ರಚಾರ ರೆಡ್ಡಿ ಕುಲಸ್ಥರ ಮೇಲೆಯೇ ವೇಮನ ಇಟ್ಟು ಹೋಗಿದ್ದಾನೆ. ಆತನ ಧ್ಯೇಯವನ್ನು ಸರಿಯಾಗಿ ನಿರ್ವರ್ತಿಸಲಾರದೆ ಹೋಗುವುದು ಒಂದು ಲೋಪವೆಂದೇ ಹೇಳಬಹುದು. ಈ ದಿನ ಸಮಾಜದಲ್ಲಿ ಎಷ್ಟೋ ವಿಷಯಗಳಲ್ಲಿ ಎಷ್ಟೋ ದೊಡ್ಡ ಸ್ಥಾನಗಳವರೆಗು ಬೆಳೆದುಹೋದ ರೆಡ್ಡಿಗಳು ಆಧ್ಯಾತ್ಮಿಕ ವಿಷಯವೊಂದರ ರುಚಿಯನ್ನೇ ತಿಳಿಯದೆ ಹೋಗಿದ್ದಾರೆ. ಇಂದಿಗಾದರೂ ಮೀರಿ ಹೋಗಿರುವುದು ಇಲ್ಲ. ರೆಡ್ಡಿ ಕುಲಸ್ಥರು ವೇಮನ ಪ್ರಚಾರ ಸಂಘವನ್ನು ಸ್ಥಾಪಿಸಿ ಆತನ ಹಿರಿಮೆಯನ್ನು ಸಾರಿ ಹೇಳಿದರೆ ವೇಮನ ಕೀರ್ತಿ ಭಾರತದೇಶದಲ್ಲಿಯೇ ಅಲ್ಲದೆ ವಿದೇಶಗಳಿಗೆ ಕೂಡ ವಿಸ್ತರಿಸಬಲ್ಲದು. 1839ನೇ ವರ್ಷದಲ್ಲಿ ಇಂಗ್ಲೆಂಡ್ ದೇಶಸ್ಥನಾದ ರಾಬರ್ಡ್‌ಬ್ರೌನ್ ವೇಮನ ಪದ್ಯಗಳಲ್ಲಿನ ಆಧ್ಯಾತ್ಮಿಕ ಶಕ್ತಿಯನ್ನು ಗುರುತಿಸಿ ಆತನ ಪದ್ಯಗಳನ್ನು ಇಂಗ್ಲೀಷ್‌ನಲ್ಲಿಯೇ ಅಲ್ಲದೆ ಮತ್ತೆಷ್ಟೋ ವಿದೇಶೀ ಭಾಷೆಗಳಲ್ಲಿ ಮುದ್ರಿಸಿ ಪ್ರಚಾರ ಮಾಡಿದಾಗ ಆತನ ವಾರಸುದಾರರಾದ ನಾವು ವೇಮನ ಎಂದರೆ ಯಾರೋ ತಿಳಿಯದ ಸ್ಥಿತಿಯಲ್ಲಿ ಇರುವುದು ಬಹಳ ನಾಚಿಗೇಡು.

ಜ್ಞಾನಬೋಧನೆಗಳು ಮಾಡಿರೆಂದು ರೆಡ್ಡಿ ಕುಲಸ್ಥರಿಗೆ ಕೀರ್ತಿ ಬರುವಂತೆ ಮಾಡಿ, ಲೋಕದಲ್ಲಿರುವವರಿಗೆಲ್ಲಾ ತನ್ನ ಧರ್ಮಗಳು ತಿಳಿಯುವಂತೆ ಮಾಡಿದ ವೇಮನ ಜನ್ಮ, ರೆಡ್ಡಿ ಕುಲದಲ್ಲಿ ರತ್ನವಂಥಾದ್ದು. ಇಂದಿಗಾದರೂ ರೆಡ್ಡಿ ಕುಲಸ್ಥರು ಎಚ್ಚರಗೊಂಡು ವೇಮನ ಪ್ರಚಾರ ಸಭೆಗಳು ನಿರ್ವಹಿಸಿ ವೇಮನ ಆಶಯಗಳನ್ನು ನೆರವೇರಿಸಿ, ಧನ್ಯರಾಗುತ್ತೀರೆಂದು ನಂಬುತ್ತಿದ್ದೇವೆ. ಹೊಸದಾಗಿ ಬಂದಿರುವ ಅಯ್ಯಪ್ಪಸ್ವಾಮಿ ಭಕ್ತಿಯನ್ನನುಸರಿಸಿ ಕಪ್ಪು ವಸ್ತ್ರಗಳು ಧರಿಸಿ, ಕಾಲುಗಳ ಚೆಪ್ಪಲಿ ಬಿಟ್ಟು, ಗಡ್ಡಗಳು ಬೆಳೆಸಿ ಕಠಿಣವಾದ ಆಚರಣೆ ಆಚರಿಸುವ ತಾಳ್ಮೆ ಇರುವ ನಮಗೆ ಯಾವ ಕಷ್ಟವಿಲ್ಲದ ವೇಮನ ಆಶಯ ಸಾಧ್ಯವಾಗದಿರುವುದಂತು ಏನೂ ಇಲ್ಲ. ಆದ್ದರಿಂದ ಧನವ್ಯಯವೋ, ಶ್ರಮವ್ಯಯವೋ ಮಾಡಿ ವೇಮನ ಹೆಸರು ನಿಲ್ಲಿಸುವಿರೆಂದು ಆಶಿಸುತ್ತಾ ಮುಗಿಸುತ್ತಿದ್ದೇವೆ.

ಇಂತಿ

**ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

| | |
|---|---|
| **వేయి విధము లమరు వేమన పద్యంబు** | **ಸಾವಿರ ವಿಧದಲ್ಲಿ ವೇಮನ ಪದ್ಯಗಳ್ ರಾಜಿಸು** |
| **లర్థమిచ్చు వాని నరసి చూడ** | **ಅರ್ಥ ವೀವವನೆ ಅರಿಸಿ ನೋಡೆ** |
| **చూడ చూడ గల్గు జోద్యమౌ జ్ఞానంబు** | **ನೋಡು ನೋಡಲುಂಟು ಅದ್ಭುತ ಜ್ಞಾನವು** |
| **విశ్వదాభిరామ వినుర వేమా.** | **ವಿಶ್ವದಾಭಿರಾಮ ಕೇಳು ವೇಮಾ. (1)** |

**ಭಾವಾರ್ಥ :–** ವೇಮನಯೋಗಿ ಬರೆದ ಪದ್ಯಗಳು ನೋಡುವುದಕ್ಕೆ ಅನೇಕ ವಿಧಗಳಾಗಿ ಕಾಣಿಸುವವು. ಯಾರ ಲೋಕ ಅವರದೆನ್ನುವ ಗಾದೆಯ ಪ್ರಕಾರ ಒಬ್ಬೊಬ್ಬರಿಗೆ ಒಂದೊಂದು ವಿಧವಾಗಿ ಅವುಗಳ ಭಾವ ತಿಳಿಯುತ್ತಿರುತ್ತದೆ. ಬಹಳ ಮಂದಿ ಪ್ರಪಂಚ ಸಂಬಂಧವಾದ ಅರ್ಥಗಳನ್ನೇ ವೇಮನ ಪದ್ಯಗಳಿಂದ ಗ್ರಹಿಸುತ್ತಿರುವರು. ಆದರೆ ಆತ್ಮಜ್ಞಾನ ತಿಳಿದವನು ವೇಮನ ಪದ್ಯಗಳನ್ನು ಕೇವಲ ಪ್ರಪಂಚ ವಿಷಯಗಳಾಗಿ ಅರ್ಥ ಮಾಡಿಕೊಳ್ಳದೆ ಚೆನ್ನಾಗಿ ಆಳವಾಗಿ ಆಲೋಚಿಸಿ ಜ್ಞಾನ ಸಂಬಂಧವಾದ ಭಾವನೆಯೇ ಅವುಗಳಿಂದ ಅರ್ಥ ಮಾಡಿಕೊಳ್ಳುವನು.

ಕಳ್ಳರಿಗೆ ಕಳ್ಳತನದ ಚಿಂತೆ, ಜಾರರಿಗೆ ಜಾರರಚಿಂತೆ, ಜಗಧೀಶರಿಗೆ ಹೋರಾಟದ ಚಿಂತೆ, ಸಾರವಿವೇಕರಿಗೆ ಸದ್ಗತಿಚಿಂತೆ ಎನ್ನುವಂತೆ ಯಾರು ಎಂತಹವರೋ ಅವರಿಗೆ ಅಂತಹ ಭಾವನೆಯೇ ವೇಮನ ಪದ್ಯಗಳಿಂದ ಸಿಗುತ್ತದೆ. ವೇಮನ ಪದ್ಯಗಳು ಮೇಲ್ನೋಟಕ್ಕೆ ಯಾವ ವಿಧವಾಗಿ ಕಾಣಿಸಿದರೂ, ಒಳಗೆ ವಿಚಿತ್ರವಾದ ಜ್ಞಾನ ಒಳಗೊಂಡಿದೆಯೆಂದು, ಚೆನ್ನಾಗಿ ಆಲೋಚಿಸಿದವರಿಗೇ ಅದರಲ್ಲಿನ ಜ್ಞಾನ ಅರ್ಥವಾಗುತ್ತದೆಂದು ವೇಮನಯೋಗಿಯೇ ತನ್ನ ಪದ್ಯದಲ್ಲಿ ತಿಳಿಸಿದ್ದಾನೆ. ಆತನ ಮಾತುಗಳಿಗೆ ಉದಾಹರಣೆಯಾಗಿ ಕೆಳಗೆ ಒಂದು ಪದ್ಯವನ್ನು ತಿಳಿಸುತ್ತಿದ್ದೇವೆ.

| | |
|---|---|
| **తల్లిదండ్రుల మీద దయలేని పుత్రుండు** | **ತಾಯಿ ತಂದೆಯರ ಮೇಲೆ ದಯೆತೋರದ** |
| **పుట్టనేమి వాడు గిట్టనేమి** | **ಪುತ್ರನು** |
| **పుట్టలోన చెదలు పుట్టదా గిట్టదా** | **ಜನಿಸಲೇನು ಅವನು ಗತಿಸಲೇನು** |
| **విశ్వదాభిరామ వినుర వేమా.** | **ಹುತ್ತದಲ್ಲಿ ಗೆದ್ದಲು ಹುಟ್ಟಿದರೇನು ಸತ್ತರೇನು** |
| | **ವಿಶ್ವದಾಭಿರಾಮ ಕೇಳು ವೇಮಾ. (2)** |

**ಭಾವಾರ್ಥ :–** ಈ ಪದ್ಯವನ್ನು ಬಹಳ ಜನ ಜ್ಞಾನಸಂಬಂಧವಾಗಿ ಅಲ್ಲದೆ ಪ್ರಪಂಚ ಸಂಬಂಧವಾಗಿ ಅರ್ಥ ಮಾಡಿಕೊಳ್ಳುವ ಪ್ರಮಾದವಿದೆ. ನೋಡುತ್ತಾ ನೋಡುತ್ತಾ ನೋಡಬಹುದು ಚೋದ್ಯವಾದ ಜ್ಞಾನವನ್ನು ಎನ್ನುವಂತೆ ಇದರಲ್ಲಿ ಪೂರ್ತಿಯಾಗಿ ಜ್ಞಾನವೇ ಮಿಳಿತವಾಗಿ ಇದೆ. ಭಗವದ್ಗೀತೆ ಪ್ರಕಾರ ಸರ್ವ ಜೀವಿಗಳಿಗು ಪ್ರಕೃತಿ ತಾಯಿಯಾಗಿ ಇದೆ. ಸರ್ವ ಜೀವರಾಶಿಗಳ ಶರೀರಗಳನ್ನು ತಯಾರು ಮಾಡುವ ಪ್ರಕೃತಿ ತಾಯಿಯಾದಾಗ, ಆ ಶರೀರಗಳಿಗೆ ಚೈತನ್ಯ ಕೊಟ್ಟು ಕದಲಿಸುತ್ತಿರುವ ಆತ್ಮ ತಂದೆಯಾಗಿ ಇದ್ದಾನೆ. ತಾಯಿಯಾದ ಪ್ರಕೃತಿ. ತಂದೆಯಾದ ಪರಮಾತ್ಮನನ್ನು ತಿಳಿಯದವನು, ಪ್ರಕೃತಿ ಪುರುಷರ ಮೇಲೆ ಧ್ಯಾಸ (ಗಮನ) ಇಲ್ಲದವನು. ಅವುಗಳ ಜಿಜ್ಞಾಸೆ ಇಲ್ಲದವನು ಹುಟ್ಟಿಯು ಪ್ರಯೋಜನೆ ಇರುವುದಿಲ್ಲ. ಶರೀರವನ್ನು ತಯಾರು ಮಾಡಿದ ಪ್ರಕೃತಿ ಮೇಲೆ, ಶಕ್ತಿ ಕೊಡುತ್ತಿರುವ ಆತ್ಮ ಮೇಲೆ ವಿಚಕ್ಷಣಾ ಜ್ಞಾನ ಇಲ್ಲದವನು ಹುತ್ತದಲ್ಲಿನ ಗೆದ್ದಲಿನೊಂದಿಗೆ ಸಮಾನ.

ಹುತ್ತದಲ್ಲಿನ ಗೆದ್ದಲು ಹುತ್ತದಲ್ಲಿಯೇ ಹುಟ್ಟುತ್ತಿದೆ, ಹುತ್ತದಲ್ಲೇ ಬೆಳೆಯುತ್ತಿದೆ. ಹುತ್ತದಲ್ಲಿಯೇ ಸಾಯುತ್ತಿದೆ. ಆ ವಿಧವಾಗಿಯೇ ಮಾನವನಾಗಿ ಹುಟ್ಟಿದವನು ನಿಜವಾದ ತಾಯಿತಂದೆಯರಾದ ಪ್ರಕೃತಿ ಪುರುಷರನ್ನು ಆಲೋಚಿಸದೆ ಮಾಯೆಯಲ್ಲೇ ಹುಟ್ಟಿ ಮಾಯೆಯಲ್ಲಿಯೇ ಬೆಳೆದು ಮಾಯೆಯಲ್ಲೇ ಸಾಯುತ್ತಾ ಇದ್ದಾನೆ.

| | |
|---|---|
| **ಬ್ರಹ್ಮ ಜಂಪಿ ವಿಷ್ಣುಭಾಗಂಬುನ ಗಲಿಪಿ** | **ಬ್ರಹ್ಮವನ್ನು ಕೊಂದು ವಿಷ್ಣುವಿನಲ್ಲಿ ಬೆರೆಸಿ** |
| **ವಿಷ್ಣು ಜಂಪಿ ಶಿವುನಿ ವೆಲಯ ಗಲಿಪಿ** | **ವಿಷ್ಣುವನ್ನು ಕೊಂದು ಶಿವನಸ್ಥಾನ ಬೆರೆಸಿ** |
| **ಶಿವುನಿ ಜಂಪಿ ತಾನು ಶಿವಯೋಗಿ ಕಾವಲೆ** | **ಶಿವನ ಕೊಂದು ತಾನು ಶಿವಯೋಗಿ ಯಾಗು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (3)** |

**ಭಾವಾರ್ಥ :–** ಸಕಲ ಜೀವರಾಶಿಗಳ ಶರೀರಗಳಲ್ಲಿಯೂ ಮೂರು ಗುಣಗಳು ಇವೆ. 1) ತಾಮಸ 2) ರಾಜಸ 3) ಸಾತ್ತ್ವಿಕ. ಆ ಮೂರು ಗುಣಗಳಲ್ಲಿ

ಜೀವಿಯು ನಿವಾಸ ಇರುತ್ತಾನೆ. ಯಾವುದೋ ಒಂದು ಗುಣ ಭಾಗದಲ್ಲಿ ಜೀವಿಯು ಇರುತ್ತಾನೆ. ತಾಮಸದಲ್ಲಿ ಇರುವಾಗ ರಾಜಸ, ಸಾತ್ತ್ವಿಕಗಳಲ್ಲಿ ಇರುವುದಿಲ್ಲ. ರಾಜಸದಲ್ಲಿ ಇರುವಾಗ ತಾಮಸ, ಸಾತ್ತ್ವಿಕಗಳಲ್ಲಿ ಇರುವುದಿಲ್ಲ. ಸಾತ್ತ್ವಿಕದಲ್ಲಿ ಇರುವಾಗ ತಾಮಸ, ರಾಜಸಗಳಲ್ಲಿ ಇರುವುದಿಲ್ಲ. ಮೂರು ಗುಣಗಳ ನಂತರ ಮೂರು ಗುಣಗಳಿಗೆ ಮಧ್ಯದಲ್ಲಿ ಆತ್ಮ ನಿವಾಸವಿದೆ. ಆತ್ಮವನ್ನು ಸೇರಬೇಕೆಂದರೇ ಜೀವಿಯು ಮೊದಲು ತಾಮಸ ಗುಣಭಾಗವನ್ನು ಬಿಟ್ಟು ರಾಜಸ ಭಾಗದೊಳಗೆ ಸೇರಬೇಕು. ಹಾಗೇ ರಾಜಸ ಗುಣಭಾಗವನ್ನು ಬಿಟ್ಟು ಸಾತ್ತ್ವಿಕ ಗುಣಭಾಗವನ್ನು ಸೇರಬೇಕು. ನಂತರ ಸಾತ್ತ್ವಿಕ ಗುಣಭಾಗವನ್ನು ಕೂಡ ಬಿಟ್ಟು ಆತ್ಮವನ್ನು ಸೇರಬೇಕು. ಆತ್ಮವನ್ನು ಸೇರಿದ ಜೀವಿಯು ತಾನೇ ಆತ್ಮವಾಗಿ ಬದಲಾಗಿ ಹೋಗುವನು. ಆಗ ಜೀವಾತ್ಮ, ಆತ್ಮವಾಗಿ ಬದಲಾಗಿ ಹೋಗಿದೆಯೆನ್ನುವ ಮಾತು.

ಮೇಲಿನ ಪದ್ಯದಲ್ಲಿ ತಾಮಸ ಗುಣಭಾಗವನ್ನು ಬ್ರಹ್ಮಸ್ಥಾನವಾಗಿ ವರ್ಣಿಸಿ ಅದರಲ್ಲಿರುವ ಜೀವಿಯನ್ನು ಬ್ರಹ್ಮ ಎಂದು ಕರೆದಿದ್ದಾರೆ. ಹಾಗೆಯೇ ರಾಜಸ ಗುಣಭಾಗವನ್ನು ವಿಷ್ಣು ಸ್ಥಾನವೆಂದು ಕರೆದಿದ್ದಾರೆ. ಅದರಲ್ಲಿರುವ ಜೀವಿಯನ್ನು ವಿಷ್ಣುವೆಂದು ಕರೆದಿದ್ದಾರೆ. ನಂತರ ಸಾತ್ತ್ವಿಕ ಗುಣಭಾಗವನ್ನು ಶಿವನ ಸ್ಥಾನವಾಗಿ ವರ್ಣಿಸಿ ಅದರಲ್ಲಿರುವ ಜೀವಿಯನ್ನು ಶಿವನಾಗಿ ಹೋಲಿಸಿದ್ದಾರೆ. ಜೀವಿಯು ತಾಮಸ ಭಾಗವನ್ನು ಬಿಟ್ಟು ರಾಜಸ ಭಾಗವನ್ನು ಸೇರುವುದನ್ನು ಬ್ರಹ್ಮವನ್ನು ಕೊಂದು ವಿಷ್ಣುಭಾಗದಲ್ಲಿ ಬೆರೆಸಿ ಎಂದಿದ್ದಾರೆ. ಹಾಗೆಯೇ ರಾಜಸವನ್ನು ಬಿಟ್ಟು ಸಾತ್ತ್ವಿಕವನ್ನು ಸೇರುವುದನ್ನು ವಿಷ್ಣುವನ್ನು ಕೊಂದು ಶಿವನ ಸ್ಥಾನ ಬೆರೆಸಿ ಎಂದಿದ್ದಾರೆ. ನಂತರ ಸಾತ್ತ್ವಿಕವನ್ನು ಕೂಡ ಬಿಟ್ಟು ಆತ್ಮವನ್ನು ಸೇರುವುದನ್ನು ಶಿವನನ್ನು ಕೊಂದು ತಾನು ಶಿವಯೋಗಿ ಆಗಬೇಕೆಂದಿದ್ದಾರೆ. ಆತ್ಮ ಸ್ವರೂಪವಾಗಿ ಬದಲಾಗುವುದನ್ನು ಶಿವಯೋಗಿಯಾಗಿ ವರ್ಣಿಸಿದ್ದಾರೆ. **ಮೂರು ಗುಣಗಳನ್ನು ಜಯಿಸಿದ ನಂತರವೇ ಆತ್ಮಪ್ರಾಪ್ತಿ ಎನ್ನುವ ಭಾವವನ್ನು ತಿಳಿಸುವುದೇ ಮೇಲಿನ ಪದ್ಯದ ಸಾರಾಂಶ.**

| | |
|---|---|
| **ಇನುಮುನ ಜೇಸಿನ ಮ್ಮೆನಪು ಕಡ್ಡಿ** | **ಕಬ್ಬಿಣದಿ ಮಾಡಿದ ಮೇಣದ ಕಡ್ಡಿ** |
| **ಮುಂಟಿ ಮೊನನು ನರ್ರಾವುಲದೊಡ್ಡಿ** | **ಮನೆ ಹಿಂದಿನ ಹಾಯುವ ಹಸುಗಳ ಕೊಟ್ಟಿಗೆ** |
| **ಕೂರ್ಚುಂಡಿ ಮೇಪಿನ ಕುಂದನಪು ಗಡ್ಡಿ** | **ಅವುಗಳು ಮೇಯ್ದಿಹ ಹುಲ್ಲಿನ ಕಡ್ಡಿ** |
| **ವಿಷ್ಣಿ ಚೆಪ್ಪುರಾ ವೇಮಾರೆಡ್ಡಿ.** | **ಬಿಚ್ಚಿ ಹೇಳೋ ವೇಮಾರೆಡ್ಡಿ. (4)** |

**ಭಾವಾರ್ಥ :-** ನಮ್ಮ ಶರೀರದಲ್ಲಿನ ಮನಸ್ಸು ಎಲ್ಲ ಭಾಗಗಳಿಗಿಂತ ಮುಖ್ಯವಾದುದು. ಮನಸ್ಸು ಚಲಿಸದೆ ನಿಂತುಹೋದವನಿಗೆ ಆತ್ಮ ದರ್ಶನ ಸುಲಭವಾಗಿ ಆಗುತ್ತದೆ. ವಶವಾದ ಮನಸ್ಸು ಆತ್ಮ ದರ್ಶನಕ್ಕೆ ಕಾರಣವಾಗುತ್ತಿದೆ. ಆದ್ದರಿಂದ ಅದು ಮಿತ್ರನೊಂದಿಗೆ ಸಮಾನವಾಗಿ ಹೇಳಲ್ಪಡುತ್ತಿದೆ. ವಶವಾಗದೆ ಚಲಿಸುತ್ತಾ ಪ್ರಪಂಚ ವಿಷಯಗಳನ್ನೇ ಪ್ರೇರಣೆ ಮಾಡುತ್ತಾ ಆತ್ಮ ದರ್ಶನಕ್ಕೆ ಆತಂಕಪಡಿಸುವ ಮನಸ್ಸನ್ನು ಶತ್ರುವಾಗಿ ಹೇಳಲ್ಪಡುತ್ತಿದೆ. ಒಂದು ಮನಸ್ಸು ಚಲಿಸಿದ ಪಕ್ಷದಲ್ಲಿ ಶತ್ರುವಾಗಿ, ಚಲಿಸದೆ ನಿಂತುಹೋದ ಪಕ್ಷದಲ್ಲಿ ಮಿತ್ರನಾಗಿ ಇದೆ. ಆದ್ದರಿಂದ ಮನಸ್ಸನ್ನು ಒಂದೇ ಕಡ್ಡಿಯಾಗಿ ಹೋಲಿಸಿ ಆ ಕಡ್ಡೀ ಕಬ್ಬಿಣವಾಗಿ, ಮೇಣವಾಗಿ ಎರಡು ವಿಧಗಳಾಗಿ ಇದೆಯೆಂದು ವೇಮನ ತಿಳಿಸುತ್ತಿದ್ದಾನೆ. ಚಲಿಸುವ ಮನಸ್ಸು ಮೇಣದ ಕಡ್ಡಿಯೊಂದಿಗೆ ಸಮಾನ, ಇಷ್ಟಬಂದಹಾಗೆ ಬಗ್ಗಿ ಹೋಗುತ್ತಿರುತ್ತದೆ. ಚಲಿಸದೆ ಏಕಾಗ್ರತೆಯಾಗಿ ನಿಂತ ಮನಸ್ಸು ಕಬ್ಬಿಣದ ಕಡ್ಡಿಯೊಂದಿಗೆ ಸಮಾನ. ಅದು ಪಕ್ಕಕ್ಕೆ ಬಗ್ಗದೆ ಭದ್ರವಾಗಿ ನಿಂತಿರುತ್ತದೆ.

ಹೊರಗಿರುವ ಜ್ಞಾನೇಂದ್ರಿಯಗಳಿಂದ ಬರುವ ವಿಷಯಗಳು ಎಲ್ಲವು ಮೊದಲು ಮನಸ್ಸಿಗೆ ಸೇರುತ್ತವೆ. ಹಾಗೆ ಸೇರಿದ ವಿಷಯಗಳನ್ನು ಮನಸ್ಸು ಗ್ರಹಿಸಿ ಆ ವಿಷಯಗಳನ್ನು ಒಳಗೆ ಇರುವ ಬುದ್ಧಿ, ಚಿತ್ತ, ಜೀವಿಗೆ ತಿಳಿಸುತ್ತದೆ. ಬುದ್ಧಿ, ಚಿತ್ತ ಹೇಳಿದ ಮರು ಉತ್ತರಗಳನ್ನು ಮನಸ್ಸು ಗ್ರಹಿಸಿ ಹೊರಗಿರುವ ಕರ್ಮೇಂದ್ರಿಯಗಳಿಗೆ ತಿಳಿಸುತ್ತಿರುತ್ತದೆ. ಈ ವಿಧವಾಗಿ ಅಂತರೇಂದ್ರಿಯಗಳಿಗು, ಬಾಹ್ಯೇಂದ್ರಿಯಗಳಿಗು ಮನಸ್ಸು ಮಧ್ಯವರ್ತಿಯಂತೆ ಇದೆ. ಮನಸ್ಸು ಬ್ರಹ್ಮನಾಡಿ

ಕುಂಡಲೀಶಕ್ತಿ ಪ್ರಾರಂಭವಾಗುವ ಭ್ರೂಮಧ್ಯ ಸ್ಥಾನಕ್ಕೆ ಪಕ್ಕದಲ್ಲಿರುವ ಸೂರ್ಯ ಚಂದ್ರನಾಡಿಗಳ ಮೇಲೆ ಇದೆ. ಆದ್ದರಿಂದ ಮನೆಯ ತುದಿ ಎಂದು ಕರೆದಿದ್ದಾರೆ. ಎಲ್ಲಾ ವಿಷಯಗಳು ನರಗಳಿಂದ ಮನಸ್ಸಿಗೆ ಸೇರುತ್ತಿವೆ. ಆದ್ದರಿಂದ ವಿಷಯಗಳನ್ನು ಹಸುಗಳಾಗಿ ಹೋಲಿಸಿ ಅವು ಎಲ್ಲವು ಸೇರುವ ಸ್ಥಳವಾದ ಮನಸ್ಸನ್ನು ಹಿತ್ತಲಿಗೆ (ದನದ ಕೊಟ್ಟಿಗೆಗೆ) ಹೋಲಿಸಿದ್ದಾರೆ.

ಮನಸ್ಸು ಹೊರಗಿನ ವಿಷಯಗಳನ್ನು ಶೇಕರಿಸಿ ಒಳಗಡೆಗೆ, ಒಳಗಿನ ವಿಷಯಗಳನ್ನು ಶೇಕರಿಸಿ ಹೊರಗಡೆಗೆ ಕಳುಹಿಸುವುದೇ ಅಲ್ಲದೆ ಎಲ್ಲ ವಿಷಯಗಳನ್ನು ಜ್ಞಾಪಕ ಇಟ್ಟುಕೊಳ್ಳುವ ಶಕ್ತಿ ಹೊಂದಿದೆ. ಅಷ್ಟೇ ಅಲ್ಲದೆ ಹೊಸ ವಿಷಯಗಳನ್ನು ಕೂಡ ಜ್ಞಾಪಕ ಮಾಡುವ ಶಕ್ತಿ ಇರುವುದಾಗಿ ಇದೆ. ಮೊದಲು ಒಂದು ವಿಷಯವನ್ನು ಜ್ಞಾಪಕ ತರುತ್ತದೆ. ಕೂಡಲೇ ಅದನ್ನು ಬಿಟ್ಟು ಮೊದಲನೆಯದಕ್ಕೆ ಅನುಬಂಧವಾದ ಬೇರೊಂದು ವಿಷಯವನ್ನು ತರುತ್ತದೆ. ಅದನ್ನು ಬಿಟ್ಟು ಅದಕ್ಕೆ ಅನುಬಂಧವಾದ ಮತ್ತೊಂದು ವಿಷಯವನ್ನು ತರುತ್ತದೆ. ಈ ವಿಧವಾಗಿ ಅದು ಒಂದಕ್ಕೊಂದು ಅನುಬಂಧ ವಿಷಯಗಳನ್ನೇ ಜ್ಞಾಪಕ ಮಾಡುತ್ತಾ ಕೊನೆಗೆ ಯಾವ ವಿಷಯವನ್ನೋ ತಂದು ಇಡುತ್ತದೆ. ಮೊದಲ ವಿಷಯಕ್ಕು, ಕೊನೆಯ ವಿಷಯಕ್ಕು ನೋಡಿದರೆ ಸಂಬಂಧ ಇಲ್ಲದಂತಿರುತ್ತದೆ. ಶುರುವಾಗಿರುವುದು ಒಂದು ವಿಷಯ, ಕೊನೆಗೆ ನಿಂತಿರುವುದು ಒಂದು ವಿಷಯವಿರುತ್ತದೆ. ಮನಸ್ಸು ವಿಷಯ ಪ್ರೇರಣೆ ಮಾಡಿದ ಪಕ್ಷದಲ್ಲಿ ಎಡಬಿಡದೆ ವಿಷಯಗಳನ್ನು ತಂದಿಡುತ್ತಿರುತ್ತದೆ.

ಕುಂದನದ ಹುಲ್ಲು ಮೇಲ್ನೋಟಕ್ಕೆ ಹುಲ್ಲಿನಂತೆ ಕಾಣಿಸಿದರೂ ಒಳಗೆ ಬೇರುಗಳು ಒಂದರೊಂದಿಗೆ ಒಂದು ಬೆರೆತಿರುತ್ತವೆ. ಹುಲ್ಲಿನ ಬೇರುಗಳು ಸಹ ಎಡಬಿಡದವುಗಳಾಗಿ ಮನಸ್ಸಿನಂತೇ ಇವೆ. ಆದ್ದರಿಂದ ಕುಂದನದ ಹುಲ್ಲಿಗೆ ಹೋಲಿಸಿದ್ದಾರೆ. ಮನಸ್ಸನ್ನು ಬಿಟ್ಟುಹಾಕಿದರೆ ಎಡಬಿಡದ ಚಿಂತನೆಗಳು ಮಾಡುತ್ತಿರುತ್ತದೆ. ಆದ್ದರಿಂದ ಕುಳಿತು ಮೇಯ್ದರೂ ಹುಲ್ಲು ಎಂದು ಕರೆದಿದ್ದಾರೆ.

| | |
|---|---|
| **ನೀರು ಕಾರಮಾಯೆ ಕಾರಂಬು ನೀರಾಯೆ** | **ನೀರು ಕ್ಷಾರವಾಯಿತು, ಕ್ಷಾರವು ನೀರಾಯಿತು** |
| **ಗಾರಮ್ಮೆನ ನೀರು ಕಾರಮಾಯೆ** | **ಗಾರವಾದ ನೀರು ಕ್ಷಾರವಾಯಿತು** |
| **ಕಾರಮಂದು ನೀರು ಕಡುರಮ್ಯಮುಗನುಂಡು** | **ಕ್ಷಾರದಲ್ಲಿ ನೀರು ಕಡು ರಮ್ಯವಾಗಿರ್ಪುದು** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (5)** |

**ಭಾವಾರ್ಥ :–** ಆತ್ಮದಿಂದ ಹುಟ್ಟಿದ ಆತ್ಮ ಅಂಶವೇ ಜೀವಾತ್ಮ. ಆದ್ದರಿಂದ ಆತ್ಮವನ್ನು ನೀರಿಗೆ ಹೋಲಿಸಿ, ಜೀವಾತ್ಮವನ್ನು ಕಾರವಾಗಿ ಹೋಲಿಸಿ ನೀರು ಕಾರವಾಗಿವೆ ಎಂದಿದ್ದಾರೆ. ಅಂದರೆ ಆತ್ಮವೇ ಜೀವಾತ್ಮವಾಗಿ ಬದಲಾಗಿದೆಯೆಂದು ಅರ್ಥ.

ಯೋಗ ಮಾಡಿದ ಸಮಯದಲ್ಲಿ ಜೀವಾತ್ಮ, ಆತ್ಮನಲ್ಲಿ ಬೆರೆತು ಆತ್ಮವಾಗಿ ಬದಲಾಗಿ ಹೋಗುತ್ತಿದೆ. ಆದ್ದರಿಂದ ಕಾರವು ನೀರಾಯಿತು ಎಂದು ಹೇಳಿದ್ದಾನೆ. ಯೋಗವನ್ನು ಬಿಟ್ಟಾಗ ಆತ್ಮನಲ್ಲಿ ಐಕ್ಯವಾಗಿ ಆತ್ಮವಾಗಿ ಬದಲಾದ ಜೀವಾತ್ಮ ಪುನಃ ಆತ್ಮಗಿಂತ ಬೇರೆಯಾಗಿ ಜೀವಾತ್ಮವಾಗಿ ನಿಲ್ಲುತ್ತಿದೆ. ಆದ್ದರಿಂದ ಕಾರವಾದ ನೀರು ಕಾರವಾದವು ಎಂದು ಸಹ ಹೇಳಿದ್ದಾರೆ.

ಎಲ್ಲಾದರೆ ಜೀವಾತ್ಮ ಇದೆಯೋ ಅಲ್ಲಿ ಆತ್ಮ ಅವನಲ್ಲಿಯೂ ಸಹ ಬೆರೆತು ಸರ್ವ ಜೀವರಾಶಿಗಳಲ್ಲಿಯೂ ನಿವಾಸವಿದೆ. ಆದ್ದರಿಂದ ಕಾರದಲ್ಲಿ ನೀರು ಕಡು ರಮ್ಯವಾಗಿರುತ್ತವೆಂದು ತಿಳಿಸಿದ್ದಾರೆ. ಆತ್ಮವನ್ನು ನೀರಿಗೆ ಹೋಲಿಸಿ, ಜೀವಾತ್ಮವನ್ನು ಕಾರವಾಗಿ ಹೋಲಿಸಿ ಯೋಗ ಸಮಯದಲ್ಲಿ ಜೀವಾತ್ಮ, ಆತ್ಮನಲ್ಲಿ ಬೆರೆಯುತ್ತಿದೆಯೆಂದು, ಯೋಗವಿಲ್ಲದ ಸಮಯದಲ್ಲಿ ಜೀವಾತ್ಮ, ಆತ್ಮವನ್ನು ಬಿಟ್ಟು ಇದೆಯೆಂದು, ಸರ್ವ ಜೀವರಾಶಿಗಳ ಶರೀರಗಳಲ್ಲಿ ಆತ್ಮ ನಿವಾಸವಿದೆ ಯೆಂದು ಸಹ ತಿಳಿಸಿದ್ದಾರೆ.

| | |
|---|---|
| **ನೀರು ಕಾರಮೌನು ನೀರೌನು ಕಾರಂಬು** | **ನೀರು ಕಾರವಾಯಿತು ನೀರಾಯಿತು ಕಾರವು** |
| **ವಾನಿವದ್ದ ನಿದ್ರ ಪೋವಚ್ಚು** | **ಅವನ ಹತ್ತಿರ ನಿದ್ರೆ ಹೋಗಬಹುದು** |
| **ನೀಟಿಲೋನ ನುಂಡ ನಿಖಿಲ ಬ್ರಹ್ಮಾಂಡಮುಲ್** | **ನೀರಿನಲ್ಲಿರುವ ನಿಖಿಲ ಬ್ರಹ್ಮಾಂಡಮುಲ್** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (6)** |

**ಭಾವಾರ್ಥ :–** ಆತ್ಮ ಜೀವಾತ್ಮವಾಗಿ ಬದಲಾಗುತ್ತದೆ. ಜೀವಾತ್ಮ, ಆತ್ಮವಾಗಿಯೂ ಬದಲಾಗುತ್ತದೆ. ಆದ್ದರಿಂದ ನೀರು ಕಾರವಾಗುತ್ತವೆ. ನೀರಾಗುವವು ಕಾರವಾಗಿ ಎಂದು ಹೇಳಿದ್ದಾರೆ. ಆತ್ಮನಲ್ಲಿ ಸೇರಿದ ಜೀವಾತ್ಮ, ಆತ್ಮನಲ್ಲಿಯೇ ಎಷ್ಟು ಕಾಲವಾದರೂ ಇರಬಹುದು. ಆತ್ಮನಲ್ಲಿ ಜೀವಾತ್ಮ ಎಷ್ಟು ಕಾಲ ಸೇರಿರುತ್ತದೋ ಅಷ್ಟು ಕಾಲ ಹೊರಗಿನ ಪ್ರಪಂಚ ತಿಳಿಯುವುದಿಲ್ಲ. ಆದ್ದರಿಂದ ಆ ಕಾಲವನ್ನು ನಿದ್ರೆಯಾಗಿ ಹೋಲಿಸಿ ಅವನ ಹತ್ತಿರ ನಿದ್ರೆ ಹೋಗಬಹುದೆಂದು ಹೇಳಿದ್ದಾರೆ.

ಆತ್ಮನಲ್ಲಿಯೇ ಅಖಿಲ ಪ್ರಪಂಚ ಒಳಗೊಂಡಿದೆ. ಆದ್ದರಿಂದ ನೀರಿನಲ್ಲೆ ಇರುವುದು ನಿಖಿಲ ಬ್ರಹ್ಮಾಂಡವೆಲ್ಲ ಎಂದು ವರ್ಣಿಸಿದ್ದಾರೆ.

| | |
|---|---|
| **ಚಿನ್ನದಿ ಎಲ ಪ್ರಾಯಂಬುನ** | **ಹುಡುಗಿ ಎಳೆ ಪ್ರಾಯದಲ್ಲಿ** |
| **ಕನ್ನದಿ ಪತಿಲೇಕ ಸುತುನಿ ಕಡುಚಿತ್ರಮುಗನ್** | **ಹಡೆದಳು ಪತಿಯಿರದೆ ಸುತನ ಕಡು ಚಿತ್ರವಾಗಿ** |
| **ಯನ್ನಡು ರತಿಕೇಳೆರುಗದು** | **ಎಂದೂ ರತಿಕೇಳಿ ತಿಳಿಯಳು** |
| **ಸನ್ನಿಯ್ಯಕ ಪೆಂಚೆನೆವಡು ಜಗತಿನ ವೇಮಾ.** | **ಮೊಲೆಯುಣಿಸದೆ ಬೆಳೆಸಿದವನ್ಯಾರು** |
| | **ಜಗತಿಯಲಿ ವೇಮಾ. (7)** |

**ಭಾವಾರ್ಥ :–** ಮನುಷ್ಯನಿಗೆ 12 ಗಂಟೆಗಳು ಹಗಲು, 12 ಗಂಟೆಗಳು ರಾತ್ರಿ ಇದ್ದಹಾಗೆ ಪರಮಾತ್ಮನಿಗೆ ಸಾವಿರ ಯುಗಗಳು ರಾತ್ರಿ, ಸಾವಿರ ಯುಗಗಳು ಹಗಲಾಗಿ ಇವೆ. ಪರಮಾತ್ಮ ಹಗಲು ಸಾವಿರ ಯುಗಗಳ ಕಾಲದಲ್ಲಿ ಪ್ರಪಂಚ, ಜೀವರಾಶಿಗಳು ಇವೆ. ರಾತ್ರಿ ಸಾವಿರ ಯುಗಗಳು ಪ್ರಪಂಚವಿಲ್ಲ, ಜೀವರಾಶಿಗಳು ಇಲ್ಲ. ಎಲ್ಲಾ ಪ್ರಳಯ ಹೊಂದುತ್ತಿವೆ. ಹಗಲು ಸಾವಿರ ಯುಗಗಳು ಶುರುವಾದಾಗ ಪ್ರಪಂಚ, ಜೀವಿರಾಶಿಗಳೆಲ್ಲವೂ ಹುಟ್ಟುತ್ತಿವೆ. ಜೀವರಾಶಿಗಳು ಹುಟ್ಟುವ ಸಮಯವನ್ನು ಮೇಲಿನ ಪದ್ಯದಲ್ಲಿ ಪ್ರಾಯವೆಂದು ಹೇಳಿದ್ದಾರೆ. ಸಮಸ್ತ ಪ್ರಪಂಚಕ್ಕೂ ಆದಿಶಕ್ತಿಯಾಗಿ ಹುಟ್ಟುವಿಕೆಯನ್ನು ಕೊಡುತ್ತಿರುವ ಪರಮಾತ್ಮ ಶಕ್ತಿಯನ್ನು ಸ್ತ್ರೀಯಾಗಿ ಹೋಲಿಸಿ ಚಿಕ್ಕವಳು ಎಂದು ಹೇಳಿದ್ದಾರೆ. ಪರಮಾತ್ಮನಿಗೆ ಹಗಲು ಪ್ರಾರಂಭ ಸಮಯದಲ್ಲಿ ಜೀವಾತ್ಮ ಉದ್ಭವಿಸುತ್ತಿದೆ. ಆದ್ದರಿಂದ ಚಿಕ್ಕವಳು ಪ್ರಾಯದಲ್ಲಿ ಎಂದು ಹೇಳುವುದಾಗಿದೆ.

ಪರಮಾತ್ಮನಿಗೆ ಮೀರಿದ ಶಕ್ತಿ ಯಾವುದೂ ಇಲ್ಲ. ಆದ್ದರಿಂದ ಪತಿ ಇಲ್ಲ ಎಂದು ಹೇಳಿದ್ದಾರೆ. ಪರಮಾತ್ಮ ಶಕ್ತಿಯಲ್ಲಿ ಯಾವ ಶಕ್ತಿ ಪ್ರಮೇಯವೂ ಇಲ್ಲದೆ ಜೀವಾತ್ಮ ಉದ್ಭವಿಸುತ್ತಿದೆ. ಆದ್ದರಿಂದ ಜೀವಾತ್ಮವನ್ನು ಸುತನಿಗೆ ಹೋಲಿಸಿ ಹಡೆದಳು ಪತಿ ಇಲ್ಲದೆ ಸುತನನ್ನು ಎಂದು ಹೇಳಿದ್ದಾರೆ. ಇದು ಎಲ್ಲರಿಗು ಅರ್ಥವಾಗದ ವಿಷಯ ಆದ್ದರಿಂದ ಕಡುಚಿತ್ರಮುಗನ್ ಎಂದು ಸಹ ಹೇಳಿದ್ದಾರೆ. ಪರಮಾತ್ಮ ಸರ್ವವ್ಯಾಪಿಯಾಗಿ ಅಣುಅಣುವಿನಲ್ಲಿ ವ್ಯಾಪಿಸಿದೆ. ಎಲ್ಲವೂ ತಾನಾಗಿ ಇದೆ. ಆದ್ದರಿಂದ ಅದು ಯಾವುದರೊಂದಿಗೂ ಬೆರೆಯುವುದಿಲ್ಲ. ಆದ್ದರಿಂದ ಎಂದಿಗೂ ರತಿಕೇಳರಿತಿಲ್ಲ ಎಂದಿದ್ದಾರೆ. ಪರಮಾತ್ಮನಿಗೆ ಉದ್ಭವಿಸಿದ ಜೀವಾತ್ಮ ವನ್ನು ಪರಮಾತ್ಮ ಯಾವಮಾತ್ರ ಪೋಷಿಸುತ್ತಿಲ್ಲ. ಪರಮಾತ್ಮ ಏನು ಮಾಡದೆ ನೋಡುತ್ತಾ ಸಾಕ್ಷಿಯಾಗಿ ಇದ್ದಾನೆ. ಹುಟ್ಟಿದ ಜೀವಾತ್ಮ ಕರ್ಮದಿಂದ ತನಗೆ ತಾನು ಎಷ್ಟು ಜನ್ಮಗಳವರೆಗಾದರೂ ಸಾಗುತ್ತಲೇ ಹೋಗುತ್ತಿದ್ದಾನೆ. ಆದ್ದರಿಂದ ಜೀವಾತ್ಮವನ್ನು ಮೊಲೆಯುಣಿಸದೆ ಬೆಳಸಿದನೆಂದು ಪರಮಾತ್ಮ ನನ್ನುದ್ದೇಶಿಸಿ ಹೇಳಿದ್ದಾರೆ.

| | |
|---|---|
| **ಅವನಿ ನೊಕ್ಕಬಿಡ್ಡ ಯತನಿ ತಂಡ್ರಿಕಿ ಬುಟ್ಟಿ** | **ಅವನಿಯೊಳೊಬ್ಬ ಸುತ ತಂದೆಗೆ ಹುಟ್ಟಿ** |
| **ಅಟ್ಟೇ ಯೇಲೆ ಜಗಮು ಲಗಣಿತಮುಗ** | **ಅಂತೆ ಆಳ್ದ ಜಗವ ಅಗಣಿತವಿದ** |
| **ತಲ್ಲಿಲೇಕ ಪುಟ್ಟಿ ಧಾತ್ರಿನೆಟ್ಲೇಲೆರಾ** | **ತಾಯಿಯಿರದೆ ಹುಟ್ಟಿ, ಧಾತ್ರಿ ಹೇಗೆ ಆಳಿದ** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (8)** |

**ಭಾವಾರ್ಥ :–** ಪ್ರಕೃತಿ ಪರಮಾತ್ಮನಲ್ಲಿ ಉದ್ಭವಿಸಿದೆ. ಆದ್ದರಿಂದ ಪ್ರಕೃತಿಯನ್ನು ಮಗುವಿಗೆ ಹೋಲಿಸಿ ಪರಮಾತ್ಮನನ್ನು ತಂದೆಯಾಗಿ ಹೋಲಿಸಿ ಹೇಳುವುದಾಗಿದೆ. ಹುಟ್ಟಿದ ಪ್ರಕೃತಿ ಜೀವರೂಪವಾಗಿ ಲೆಕ್ಕವಿಲ್ಲದಷ್ಟು ಜೀವರಾಶಿಗಳಾಗಿ ಜಗವೆಲ್ಲಾ ವಿಸ್ತರಿಸಿದೆ. ಆದ್ದರಿಂದ ಹಾಗೇ ಆಳಿದ ಜಗವ ಅಗಣಿತವಾಗಿ ಎಂದು ಪ್ರಕೃತಿಯನ್ನು ಉದ್ದೇಶಿಸಿ ಹೇಳಿದ್ದಾರೆ.

ಪ್ರಕೃತಿಗೆ ತಂದೆ ಪರಮಾತ್ಮ. ಪ್ರಕೃತಿಗೆ ತಾಯಿ ಇಲ್ಲ. ಏನೂ ಇಲ್ಲದ ಆದಿಯಲ್ಲಿ ಪರಮಾತ್ಮ ಒಬ್ಬನೇ ಇದ್ದಾನೆ. ಆತನಿಂದ ಉದ್ಭವಿಸಿರುವುದು ಪ್ರಕೃತಿ, ಆ ಪ್ರಕೃತಿಯಿಂದ ಸರ್ವ ಜೀವರಾಶಿಗಳು ಹುಟ್ಟಿವೆ.

ಪ್ರಕೃತಿ ಹುಟ್ಟುವುದಕ್ಕಿಂತ ಮೊದಲು ಪರಮಾತ್ಮ ಒಬ್ಬನೇ ಇದ್ದಾನೆ. ಆದ್ದರಿಂದ ಪ್ರಕೃತಿಗೆ ತಾಯಿ ಇಲ್ಲವೆಂದು ಹೇಳುತ್ತಿದ್ದೇವೆ. ತಾಯಿ ಇಲ್ಲದೆ ಹುಟ್ಟಿದ ಪ್ರಕೃತಿ ಸ್ತ್ರೀ ಸ್ವರೂಪವಾಗಿ ನಿಂತು ಆತ್ಮದೊಂದಿಗೆ ಸಂಯೋಗ ಹೊಂದಿ ಸಕಲ ಜೀವರಾಶಿಗಳನ್ನು ಹುಟ್ಟಿಸಿ ಪೋಷಿಸುತ್ತಿದೆ. ಈ ವಿಷಯ ಎಲ್ಲರಿಗೂ ತಿಳಿದಿಲ್ಲ ಆದ್ದರಿಂದ ತಾಯಿಯಿಲ್ಲದೆ ಹುಟ್ಟಿ ಧರೆಯನ್ನೆಗೆ ಆಳಿದಳು ಎಂದು ಪ್ರಶ್ನೆ ಹಾಕುತ್ತಾ ಪದ್ಯವನ್ನು ಬರೆದಿದ್ದಾರೆ.

| | |
|---|---|
| **ಕುಕ್ಕನು ತಿನ್ನವಾಡು ಗುರುಲಿಂಗ ಜಂಗಡು** | **ನಾಯಿಯನು ತಿಂದವನು ಗುರುಲಿಂಗ** |
| **ಪಂದಿನಿ ತಿನ್ನವಾಡು ಪರಮಯೋಗಿ** | **ಜಂಗಮನು** |
| **ಏನುಗುನು ತಿನ್ನವಾಡು ಎಂತ ಸುಜ್ಞಾನೋ** | **ಹಂದಿಯನು ತಿಂದವನು ಪರಮ ಯೋಗಿ** |
| **ವಿಶ್ವದಾಭಿರಾಮ ವಿನುರ ವೇಮಾ** | **ಆನೆಯನು ತಿಂದವನು ಅವನೆಷ್ಟು ಸುಜ್ಞಾನಿ** |
| | **ವಿಶ್ವದಾಭಿರಾಮ ಕೇಳು ವೇಮಾ. (09)** |

**ಭಾವಾರ್ಥ :-** ನಮ್ಮ ಶರೀರದಲ್ಲಿ ಮನಸ್ಸು ನಾಯಿಯಂತೆ ಅತಿ ಚಂಚಲ ವಾದುದು. ಒಂದು ಕ್ಷಣವೂ ಸಹ ಸ್ಥಿರವಾಗಿ ಇರದೆ ನಾಯಿ ಮನೆ ಮನೆ ತಿರುಗಿದಂತೆ ಮನಸ್ಸು ಸಹ ವಿಷಯಗಳ ಮೇಲೆಗೆ ಅಲೆಯುತ್ತಿರುತ್ತದೆ. ನಾಯಿಯಂತೆ ಚಂಚಲವಾದ ಮನಸ್ಸನ್ನು ಯಾರು ಜಯಿಸುತ್ತಾನೋ ಅವನು ನಿಜವಾಗಿ ಗುರುವಿನೊಂದಿಗೆ ಸಮಾನ. ಗುರುವು ಮನಸ್ಸು ಜಯಿಸಿದ ಇರುವವನೆನ್ನುವ ವಿಷಯವನ್ನು ನಾಯಿಯನ್ನು ತಿಂದವನು ಗುರುಲಿಂಗನೆಂದು ಮೇಲಿನ ಪದ್ಯದಲ್ಲಿ ಹೇಳಿದ್ದಾರೆ.

ಮನಸ್ಸು ಚಂಚಲವಾದುದೇ ಅಲ್ಲದೆ ಪರಮ ನೀಚವಾದ ವಿಷಯಗಳ ಮೇಲೆ ಸಹ ಹೋಗುತ್ತಿರುತ್ತದೆ. ಆದ್ದರಿಂದ ಇದನ್ನು ಹಂದಿಯೊಂದಿಗೆ

ಸಮಾನವಾಗಿ ಹೋಲಿಸಿ ಅದನ್ನು ಜಯಿಸಿದ ಪರಮಯೋಗಿಯೆಂದು ತಿಳಿಸುತ್ತಾ ಹಂದಿಯನ್ನು ತಿಂದವನು ಪರಮಯೋಗಿ ಎಂದು ವರ್ಣಿಸಿದ್ದಾರೆ.

ಮನಸ್ಸು ಚಂಚಲವಾದುದು. ನೀಚವಾದುದೇ ಅಲ್ಲದೆ ಬಲವಾದುದಾಗಿ ಸಹ ಇದೆ. ಅದನ್ನು ಜಯಿಸಬೇಕೆಂದು ಪ್ರಯತ್ನ ಮಾಡಿದವರಿಗೆ ಸುಲಭವಾಗಿ ಶರಣಾಗುವುದಿಲ್ಲ. ಎಷ್ಟು ಬಲವಾಗಿ ಮನಸ್ಸನ್ನು ನಿಲ್ಲಿಸಬೇಕೆಂದು ಪ್ರಯತ್ನ ಮಾಡಿದರೂ ಅದು ಬಲವಾದುದು ಆದ್ದರಿಂದ ಹೋಗುತ್ತಲೇ ಇರುತ್ತದೆ. ಪ್ರಯತ್ನವೆನ್ನುವ ಹಗ್ಗಗಳಿಗೆ ನಿಲ್ಲದೆ ನಮ್ಮನ್ನು ಸುಲಭವಾಗಿ ಎಳೆದುಕೊಂಡು ಹೋಗುವ ಮನಸ್ಸು ಬಲವಾದುದಾಗಿ ವರ್ಣಿಸುತ್ತಾ ಅದನ್ನು ಆನೆಗೆ ಹೋಲಿಸಿ ಹೇಳಿದ್ದಾರೆ. ಅಂತಹ ಬಲವಾದ ಮನಸ್ಸನ್ನು ಜಯಿಸಿದವನು ಸುಜ್ಞಾನಿ ಎಂದು ಹೇಳುತ್ತಾ ಆನೆಯನ್ನು ತಿಂದವನು ಎಂದು ಹೇಳಿದ್ದಾರೆ.

ಮನಸ್ಸು ಚಂಚಲವಾದುದು ಆದ್ದರಿಂದ ನಾಯಿಯಾಗಿ, ನೀಚವಾದುದು ಆದ್ದರಿಂದ ಹಂದಿಯಾಗಿಯೂ, ಬಲವಾದುದು ಆದ್ದರಿಂದ ಆನೆಯಾಗಿ ವರ್ಣಿಸಿ ಅದನ್ನು ಜಯಿಸುವುದನ್ನು ತಿಂದು ಇಲ್ಲದಂತೆ ಮಾಡುವುದೆಂದು ವರ್ಣಿಸಿ ಹೇಳಿದ್ದಾರೆ.

| | |
|---|---|
| **ಉಕ್ಕು ಚೂರ್ಣಮು ದಿನ ನುಡುಗುನು ಕಷ್ಟಂಬು<br>ಉಕ್ಕು ಚೂರ್ಣಮು ದಿನ ನುಡುಗುನು ಕ್ಷಯಮು<br>ಉಕ್ಕು ಚೂರ್ಣಮು ದಿನ ನುಡುಗುನು ಕರ್ಮಮುಲ್<br>ವಿಶ್ವದಾಭಿರಾಮ ವಿನುರ ವೇಮಾ.** | **ಉಕ್ಕು ಚೂರ್ಣ ತಿನಲು ನಯವಾಗು ಕಷ್ಟವು<br>ಉಕ್ಕು ಚೂರ್ಣ ತಿನಲು ನಯವಾಗುವುದು<br>ಕ್ಷಯವು<br>ಉಕ್ಕು ಚೂರ್ಣ ತಿನಲು ನಯವಾಗುವ<br>ಕರ್ಮಗಳೆಲ್ಲ<br>ವಿಶ್ವದಾಭಿರಾಮ ಕೇಳು ವೇಮಾ. (10)** |

**ಭಾವಾರ್ಥ :–** ಉಕ್ಕು ಎಲ್ಲ ಲೋಹಗಳಿಗಿಂತ ಬಹಳ ಗಟ್ಟಿಯಾದುದು. ಉಕ್ಕಿನೊಂದಿಗೆ ಸಮಾನ ಬಲವಾದ ಪದಾರ್ಥ ಭೂಮಿ ಮೇಲೆ ಯಾವುದೂ ಇಲ್ಲ. ಆ ವಿಧವಾಗಿಯೇ **"ನಹೀ ಜ್ಞಾನೇನ ಸದೃಶಂ ಪವಿತ್ರ ಮಿಹ ವಿದ್ಯತೇ"**

ಎಂದು ಭಗವದ್ಗೀತಾ ವಾಕ್ಯದ ಪ್ರಕಾರ ಜ್ಞಾನಕ್ಕೆ ಮೀರಿರುವುದು ಅದಕ್ಕೆ ಸಾಟಿಯಾಗಿರುವುದು, ಅದಕ್ಕಿಂತ ಪವಿತ್ರವಾದುದು ಯಾವುದೂ ಇಲ್ಲ. ಆದ್ದರಿಂದ ಜ್ಞಾನವನ್ನು ಉಕ್ಕಿನೊಂದಿಗೆ ಸಮಾನವಾಗಿ ಹೋಲಿಸಿ ಹೇಳುವುದಾಗಿದೆ. ಜ್ಞಾನ ತಿಳಿದು, ಆ ಜ್ಞಾನಶಕ್ತಿ ಸಂಪಾದಿಸಿಕೊಂಡವರಿಗೆ ಕರ್ಮಗಳೆಲ್ಲವೂ ನಶಿಸುತ್ತವೆ. **"ಜ್ಞಾನಾಗ್ನಿ ಸರ್ವ ಕರ್ಮಾಣಿ ಭಸ್ಮಸಾತ್"** ಎನ್ನುವಂತೆ ಜ್ಞಾನಶಕ್ತಿ ಎನ್ನುವುದರಿಂದ ಕಷ್ಟಗಳು, ರೋಗಗಳು ಕರ್ಮದಿಂದ ಉಂಟಾಗುವ ಸಮಸ್ತವು ತೊಲಗಿ ಹೋಗುತ್ತವೆ. ಆದ್ದರಿಂದ ಉಕ್ಕು ಚೂರ್ಣ ತಿನ್ನಲು ನಯವಾಗುವವು ಕಷ್ಟ, ಕ್ಷಯ, ಕರ್ಮಗಳೆಂದು ವೇಮನ ಯೋಗಿ ಹೇಳಿದ್ದಾನೆ.

| | |
|---|---|
| **ಪೇಡು ಮುದುರು ಕಾಯ ಪೆನುಬಾಮು ಕುಬುಸಂಬು** | **ತುಣುಕು ಪಕ್ವ ಕಾಯಿ ದೊಡ್ಡ ಹಾವಿನ ಪೊರೆ** |
| **ಜೋಡು ಕೂರ್ಚಿ ರಸಮು ಪೋಕ ಜೇಸಿ** | **ಜೋಡಿಸಿಟ್ಟು ರಸವ ಹೋಗುವಂತೆ ಮಾಡಿ** |
| **ಯೊಕ್ಕ ಯೇಡು ತಿನಗ ನುರ್ವಿ ಹೇಮಮು ತಾನೆ** | **ಒಂದು ವರ್ಷ ತಿನಲು ಉರ್ವಿ ಹೇಮ ತಾನೆ** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (11)** |

**ಭಾವಾರ್ಥ :–** ಪ್ರತಿ ಕಾಯಿ ಹಣ್ಣಾಗುವುದಕ್ಕಿಂತ ಮೊದಲು ಬೀಜಕ್ಕೆ ಕೆಲಸಕ್ಕೆ ಬರುವುದಿಲ್ಲ. ಹಣ್ಣಾದ ಕಾಯಿಯಲ್ಲೇ ಮೊಳಕೆ ಬರುವುದಕ್ಕೆ ತಕ್ಕ ಬಿತ್ತುವ ಬೀಜ ಇರುತ್ತದೆ. ಆ ಬಿತ್ತನೆ ಬೀಜದಲ್ಲಿ ಗಿಡ ಸೂಕ್ಷ್ಮರೂಪವಾಗಿ ಇರುತ್ತದೆ. ಕೊನೆಗೆ ಬೀಜದಲ್ಲಿ ಸೂಕ್ಷ್ಮವಾಗಿ ಅಡಗಿರುವ ಗಿಡ ಬೆಳೆದು ದೊಡ್ಡದಾಗಿ ಅದರ ಸ್ಥೂಲರೂಪ ಕಾಣಿಸುತ್ತದೆ. ಆ ವಿಧವಾಗಿಯೇ ಮನಸ್ಸಿನಲ್ಲಿ ವಿಷಯಗಳು ಸೂಕ್ಷ್ಮವಾಗಿ ಅಡಗಿರುತ್ತವೆ. ಅದು ಯಾವುದೋ ಒಂದು ದಿನ ಹೊರಬಿದ್ದು ಕಾರ್ಯರೂಪವಾಗಿ ನಿಲ್ಲುತ್ತದೆ. ಶರೀರವೆನ್ನುವ ಮರದಲ್ಲಿ ಮನಸ್ಸು ಎನ್ನುವ ಹಣ್ಣಾದ ಕಾಯಿ ಇದೆ. ಅದರಲ್ಲಿ ವಿಷಯ ಬೀಜಗಳಿವೆ. ಚಿಕ್ಕ ಬೀಜದಿಂದ ಮಹಾವೃಕ್ಷ ಹೊರಗೆ ಬಂದಂತೆ, ಕಾಣಿಸದೆ ಇರುವ ಮನಸ್ಸಿನಿಂದ ಸೂಕ್ಷ್ಮವಾಗಿ ಅಡಗಿರುವ ವಿಷಯಗಳು ಮಹಾ ಕಾರ್ಯಗಳಾಗಿ ಹೊರಬೀಳುತ್ತವೆ. ಆದ್ದರಿಂದ ವಿಷಯ ಬೀಜಗಳಿಗೆ ನಿಲಯವಾಗಿರುವ ಮನಸ್ಸನ್ನು ಹಣ್ಣಾದ ಕಾಯಿಗೆ ಹೋಲಿಸುವುದಾಗಿದೆ. ಕಾಯಿಮೇಲಿನ ಸಿಪ್ಪೆಯುನ್ನನುಸರಿಸಿ ಕಾಯಿ

ಹಣ್ಣಾಗಿರುವುದು ಇಲ್ಲದಿರುವುದು ಗುರುತಿಸುತ್ತೇವೆ. ಆದ್ದರಿಂದ ವಿಷಯಗ ಳೊಂದಿಗೆ ತುಂಬಿದ ಮನಸ್ಸನ್ನು ಸಿಪ್ಪೆ ಹಣ್ಣಾದ ಕಾಯಿ ಎಂದು ಕರೆಯುತ್ತಿದ್ದೇವೆ.

ಬುಸಗುಟ್ಟುವುದು ಹಾವು. ಹಾವು ಬಿಟ್ಟಿರುವ ಪೊರೆಯನ್ನು ನೋಡಿ ಹಾವನ್ನು ಹೋಲಿಸಿಕೊಳ್ಳುತ್ತಿದ್ದೇವೆ. ನಮ್ಮ ಶರೀರದಲ್ಲಿ ಸಹ ಕುಂಡಲೀ ಶಕ್ತಿ ಎನ್ನುವ ಹಾವು ಶಬ್ದ ಮಾಡುತ್ತಲೇ ಇದೆ. ಹಾವು ಪೊರೆ ಬಿಟ್ಟಹಾಗೆ ನಮ್ಮ ಶರೀರದಲ್ಲಿನ ಶಕ್ತಿ ಎನ್ನುವ ಹಾವು ಹನ್ನೆರಡು ಅಂಗುಲಗಳ ಉದ್ದವಿರುವ ಶ್ವಾಸವನ್ನು ಬಿಡುತ್ತಿದೆ. ಪೊರೆಯಿಂದ ಹಾವಿನ ಆಕಾರವನ್ನು ನೋಡಿದಂತೆ ಶ್ವಾಸದಿಂದ ಅದಕ್ಕೆ ಕಾರಣವಾದ ಶಕ್ತಿಯನ್ನು ತಿಳಿಯಬಹುದು. ಆದ್ದರಿಂದ ಆತ್ಮಶಕ್ತಿಯನ್ನು ಹಾವಿಗೆ ಹೋಲಿಸಿ ಅದರಿಂದ ಶ್ವಾಸ ರೂಪದಲ್ಲಿ ಹೊರಗೆ ಬೀಳುವ ಗಾಳಿಯನ್ನು ಪೊರೆಯಾಗಿ ಹೋಲಿಸುವುದಾಗಿದೆ.

ಮನಸ್ಸನ್ನು, ಶ್ವಾಸವನ್ನು ಏಕ ಮಾಡಿದಾಗ ಮನಸ್ಸು ಕದಲದೆ ಶ್ವಾಸ ಆಡದೆ ನಿಂತು ಹೋಗುತ್ತದೆ. ಮನೋಮಾರುತಗಳು ಅವಿನಾಭಾವ ಸಂಬಂಧಗಳು ಇರುವಂತಹವು. ಒಂದು ನಿಂತು ಹೋದರೂ ಬೇರೊಂದು ಸಹ ನಿಂತು ಹೋಗುತ್ತದೆ. ಆದ್ದರಿಂದ ಕೆಲವರು ಗಾಳಿಯನ್ನು ಕುಂಭಿಸಿ ವತ್ತಾಯದಿಂದ ನಿಲ್ಲಿಸಿ ಮನಸ್ಸನ್ನು ನಿಂತುಹೋಗುವಂತೆ ಮಾಡುತ್ತಿದ್ದಾರೆ. ಕೆಲವರು ಮನಸ್ಸನ್ನೇ ಪ್ರಯತ್ನವಾಗಿ ನಿಲ್ಲಿಸಿ ಶ್ವಾಸವನ್ನು ನಿಂತುಹೋಗುವಂತೆ ಮಾಡುತ್ತಿದ್ದಾರೆ. ಈ ಎರಡು ನಿಂತು ಬೆರೆತು ಹೋದಾಗಲೇ ಆತ್ಮ ಸಾಕ್ಷಾತ್ಕಾರವಾಗುತ್ತದೆ. ಶ್ವಾಸವನ್ನು ಮನಸ್ಸನ್ನು ಒಂದಾಗಿ ಮಾಡುವುದನ್ನೇ ಕಾಯ ಪೊರೆ ಜೊತೆ ಕೂಡಿಸಿ ರಸವನ್ನು ತೆಗೆದು ಎಂದಿದ್ದಾರೆ. ಎರಡು ಒಂದಾಗಿ ಸೇರಿದಾಗ ಹೊಸದಾಗಿ ತಯಾರಾಗುವ ಯೋಗವೆನ್ನುವ ಸಾರಾಂಶವನ್ನೇ ರಸ ಎಂದು ಕರೆದಿದ್ದಾರೆ. ಯೋಗಸಾಧನೆ ಮಾಡುವುದನ್ನೇ ತಿನ್ನುವುದು ಎಂದಿದ್ದಾರೆ. ಲೋಹಗಳಲ್ಲಿ ಎಲ್ಲದಕ್ಕಿಂತ ಬೆಲೆಯುಳ್ಳದ್ದು, ಕಲ್ಮಷವಿಲ್ಲದ್ದು ಬಂಗಾರ ಆದ್ದರಿಂದ ಆತ್ಮವನ್ನು ಹೇಮವಾಗಿ ಹೋಲಿಸಿ ಹೇಳಿದ್ದಾರೆ. ಯೋಗ ಲಭ್ಯವಾದಾಗ ತಾನೇ ಆತ್ಮವಾಗಿ ಬದಲಾಗಿ ಹೋಗುತ್ತಾನೆ ಆದ್ದರಿಂದ ನುರ್ವಿ ತಾನೆ ಹೇಮವಾಗುತ್ತದೆ ಎಂದು ಹೇಳಿದ್ದಾರೆ.

| | |
|---|---|
| **ಎಡ್ಲು ರೆಂಡು ತಿನ್ನ ನಿಹಮುನ ಸ್ಥಂಭಿಂಚು** | **ಎತ್ತುಗಳೆರಡು ತಿನಲು ಇಹದಲಿ ಸ್ಥಂಭಿಸುವ** |
| **ನೆಡ್ಲು ಮೂಡು ತಿನ್ನ ನಿಹಮು ವಿಡುಚು** | **ಎತ್ತು ಮೂರು ತಿನಲು ಇಹವ ಬಿಡುವ** |
| **ನೆಡ್ಲು ತೆಲಿಯು ಮನುಜುಂಡು ನೇರ್ಪಡ ಯೋಗಿರಾ** | **ಎತ್ತು ತಿಳಿದ ಮನುಜ ಏರ್ಪಡುವ ಯೋಗಿಯು** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (12)** |

**ಭಾವಾರ್ಥ :–** ಸರ್ವ ಪ್ರಪಂಚವೂ ಜೀವರಾಶಿ ತುಂಬಿದೆ. ಸಮಸ್ತ ಜೀವರಾಶಿಗಳು ಸ್ವಯಂ ಶಕ್ತಿ ಇಲ್ಲದಂತಹವು. ಪ್ರತಿ ಜೀವರಾಶಿ ಒಂದು ಶಕ್ತಿಯನ್ನು ಆಧಾರ ಮಾಡಿಕೊಂಡು ಬದುಕುತ್ತಿದೆ. ಅದುವೇ ಆತ್ಮಶಕ್ತಿ. ಜೀವಾತ್ಮ, ಆತ್ಮ ಇಲ್ಲದ್ದು ಇಲ್ಲವೇ ಇಲ್ಲ. ಆದ್ದರಿಂದ ಜೀವಾತ್ಮ, ಆತ್ಮ ಶರೀರದಲ್ಲಿ ನಿವಾಸವಾಗಿ ಇವೆಯೆಂದು ತಿಳಿಯುತ್ತಿದೆ. ಒಂದು ಶರೀರದಲ್ಲಿ ಮಾತ್ರ ಪರಿಮಿತವಾಗಿ ಇರುವುದು ಜೀವಾತ್ಮ. ಎಲ್ಲ ಶರೀರಗಳಲ್ಲಿ ಸಂಬಂಧ ಹೊಂದಿ ಎಲ್ಲ ಜೀವಾತ್ಮಗಳೊಂದಿಗೆ ಕೂಡಿರುವುದು ಆತ್ಮ. ಎಲ್ಲ ಶರೀರಗಳ ಒಳಗೂ, ಹೊರಗೂ ತುಂಬಿರುವುದು ಪರಮಾತ್ಮ. ಬೇರೆಯಾಗಿರುವ ಜೀವಾತ್ಮ, ಆತ್ಮ ಒಂದಾಗಿ ಹೋದರೂ, ಅಂದರೆ ಜ್ಞಾನ ಯೋಗ ಆಚರಿಸಿದ ಸಮಯದಲ್ಲಿ ಇಂದ್ರಿಯ ವಿಷಯಗಳು ಶೇಕರಿಸದೆ ಸ್ಥಂಭಿಸಿ ಹೋಗುತ್ತದೆ. ಆ ಸಮಯದಲ್ಲಿ ಪ್ರಪಂಚ ವಿಷಯ ತಿಳಿಯದಂತೆ ಹೋಗುತ್ತದೆ.

ಎತ್ತುಗಳು ಎಂದರೆ ಜೀವಾತ್ಮ, ಆತ್ಮ, ಪರಮಾತ್ಮ. ಎತ್ತುಗಳು ಎರಡು ತಿಂದರೆ ಎಂದರೆ ಜೀವಾತ್ಮ, ಆತ್ಮ ಒಂದಾಗಿ ಸ್ಥಂಭಿಸಿ ಹೋಗುವುದೆಂದು ತಿಳಿಯಬೇಕು. ಜೀವಾತ್ಮ, ಆತ್ಮ ಸ್ಥಂಭಿಸಿದಾಗ ಪ್ರಪಂಚ ತಿಳಿಯದೆ ಹೋಗುತ್ತದೆ. ಆದ್ದರಿಂದ ಇಹವು ಸ್ಥಂಭಿಸುತ್ತದೆ ಎಂದಿದ್ದಾರೆ.

ಜೀವಾತ್ಮ, ಆತ್ಮ ವಿವರ ಮತ್ತು ವಿಷಯ ತಿಳಿದವನು ಯೋಗಿ. ಆತ್ಮವನ್ನು ಅನುಭವಿಸಿದವನು ಯೋಗಿ. ಆತ್ಮವನ್ನು ಅನುಭವಿಸಿದವನಿಗೆ ಆತ್ಮಗಿಂತ ಬೇರೆಯಾಗಿರುವುದು ಮತ್ತೊಂದು ಇದೆಯೆನ್ನುವ ವಿಷಯ ತಿಳಿಯುತ್ತದೆ ಆದ್ದರಿಂದ ಎತ್ತುಗಳು ತಿಳಿದ ಮನುಜನು ಯೋಗಿ ಎನ್ನಲಾಗಿದೆ.

ಜೀವಾತ್ಮ, ಆತ್ಮನಲ್ಲಿ ಬೆರೆಯುವುದು ಯೋಗ. ಇದು ಶರೀರದೊಂದಿಗೆ ಶರೀರದಲ್ಲಿ ನಡೆಯುವ ಕೆಲಸ. ಜೀವಾತ್ಮ, ಆತ್ಮ ಏಕವಾಗಿ ಪರಮಾತ್ಮನಲ್ಲಿ ಬೆರೆತು ಹೋಗಿ ಶರೀರವನ್ನು ಬಿಟ್ಟು ಮೋಕ್ಷ (ಬಿಡುಗಡೆ) ಹೊಂದುತ್ತಿದ್ದಾನೆ. ಆದ್ದರಿಂದ ಎತ್ತುಗಳು ಮೂರು ತಿಂದು ಇಹವು ಬಿಟ್ಟು ಎನ್ನಲಾಗಿದೆ.

| | |
|---|---|
| **ಕೃಷ್ಣ ಪರ್ವಮಂದು ವೃತ್ತಿಕಲ್ಯೆದುಂಡು** | **ಕೃಷ್ಣ ಪರ್ವದಲ್ಲಿ ವೃತ್ತಿಕಳ್ಳೈವರುಂಟು** |
| **ಕೃತ್ತುಲ್ಯೆದು ಪಟ್ಟಿ ಕೃಷ್ಣಮ್ರಿಂಗೆ** | **ಕೃತ್ತುಗಳ್ಳೈದು ಹಿಡಿದು ಕೃಷ್ಣನುಂಗಿದ** |
| **ವೆಲಯು ಕೃಷ್ಣಲ್ಯೆದು ವೇಮನ ಮ್ರಿಂಗೆರಾ** | **ಹುಟ್ಟಿದ ಕೃಷ್ಣಗಳ್ಳೈದು ವೇಮನ ನುಂಗಿದ** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (13)** |

**ಭಾವಾರ್ಥ :–** ಪ್ರಕೃತಿಯಿಂದ ಶರೀರ ತಯಾರಾಗಿದೆ. ಪ್ರಕೃತಿಯಿಂದ ಕರ್ಮ ತಯಾರಾಗಿದೆ. ಪ್ರಕೃತಿಯಿಂದ ಗುಣಗಳು ತಯಾರಾಗಿವೆ. ಪ್ರಕೃತಿಯಿಂದಲೇ ಅಜ್ಞಾನವೆಲ್ಲವೂ ತಯಾರಾಗಿದೆ. ಆದ್ದರಿಂದ ಶರೀರ ಪ್ರಕೃತಿ ಸಂಬಂಧವಾದುದು. ಪರಮಾತ್ಮ ಸಂಬಂಧ ಒಂದೇ ಒಂದು ಜ್ಞಾನವಾದರೆ ಪ್ರಕೃತಿ ಸಂಬಂಧವಾದವು ಬಹಳ ಇವೆ. ಪ್ರಕೃತಿ ಸಂಬಂಧವಾದುದು ಶರೀರವಾದಾಗ ಪ್ರತಿ ಶರೀರವು ಅಜ್ಞಾನದಿಂದ ಕೂಡಿಕೊಂಡಿದೆ. ಅಜ್ಞಾನ (ಪ್ರಕೃತಿ) ಸಂಬಂಧವಾದ ಶರೀರವನ್ನು ಜ್ಞಾನ (ಪರಮಾತ್ಮ) ಸಂಬಂಧವಾದ ಶರೀರವಾಗಿ ಬದಲಾಯಿಸಬೇಕು.

ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವ ಐದು ಭಾಗಗಳಾಗಿ ಪ್ರಕೃತಿ ಇದೆ. ಆ ಪ್ರಕೃತಿಯಿಂದ ತಯಾರಾದ ಶರೀರವೂ ಸಹ 1. ಜ್ಞಾನೇಂದ್ರಿಯಗಳು 2. ಕರ್ಮೇಂದ್ರಿಯಗಳು 3. ವಾಯುಗಳು 4. ತನ್ಮಾತ್ರಗಳು 5. ಅಂತರೇಂದ್ರಿಯಗಳಾಗಿ ವಿಭಜಿಸಲ್ಪಟ್ಟಿದೆ. ಪ್ರಕೃತಿ ಸ್ವಭಾವವೆಲ್ಲವೂ ಪಂಚ ತತ್ತ್ವಗಳಾಗಿ ಇದೆ ಆದ್ದರಿಂದ ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ವಾಯುಗಳು ಐದು, ತನ್ಮಾತ್ರಗಳು ಐದು, ಅಂತರೇಂದ್ರಿಯಗಳು ಐದಾಗಿ ವಿಭಜಿಸಲ್ಪಟ್ಟಿವೆ.

ಕೃಷ್ಣವೆಂದರೆ ಕಪ್ಪನೆಯದು. ಅಜ್ಞಾನ ಕತ್ತಲೊಂದಿಗೆ ಸಮಾನವಾದುದು ಆದ್ದರಿಂದ ಅಜ್ಞಾನ ಸಂಬಂಧವಾದ ಪ್ರಕೃತಿಯನ್ನು ಕೃಷ್ಣವೆನ್ನುವುದು ನಡೆದಿದೆ. ಪ್ರಕೃತಿ ಪಂಚ ಭಾಗಗಳಾಗಿ ಇದೆ. ಆದ್ದರಿಂದ ಕೃಷ್ಣದಲ್ಲಿ ವೃತ್ತಿಗಳೈದಿವೆ ಎನ್ನಲಾಗಿದೆ. ವೃತ್ತಿಗಳಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿಯಿಂದ ತಯಾರಾದ ಶರೀರ ಐದು ಭಾಗಗಳಾಗಿದೆ. ಆದ್ದರಿಂದ ಶರೀರ ಐದು ಭಾಗಗಳನ್ನು ಕೃತ್ತಿಗಳೆನ್ನುತ್ತಿದ್ದಾರೆ. ಶರೀರ ಭಾಗಗಳೆಲ್ಲವೂ ಅಜ್ಞಾನದಲ್ಲಿಯೇ ಮುಳುಗಿವೆ. ಆದ್ದರಿಂದ ಕೃತ್ತುಗಳೈದು ಹಿಡಿದು ಕೃಷ್ಣ ನುಂಗಿತು ಎಂದಿದ್ದಾರೆ. ಪಂಚೇಂದ್ರಿಯಗಳನ್ನು ಆವರಿಸಿದ ಪಂಚ ಅಜ್ಞಾನಗಳನ್ನು ವೇಮನ ಅಡಗಿಸಿ ಶರೀರದಲ್ಲಿ ಜ್ಞಾನ ಜ್ಯೋತಿಯನ್ನು ಬೆಳಗಿಸಿದ್ದಾನೆ. ಆದ್ದರಿಂದ ಹುಟ್ಟಿದ ಕೃಷ್ಣಗಳೈದು ವೇಮನ ನುಂಗಿದನು ಎಂದಿದ್ದಾರೆ.

| | |
|---|---|
| **ಕಾಮಿಗಾನಿ ವಾಡು ಕವಿಗಾಡು ರವಿಗಾಡು** | **ಕಾಮಿಯಲ್ಲದವನು ಕವಿಯಲ್ಲ ರವಿಯಲ್ಲ** |
| **ಕಾಮಿಗಾಕ ಮೋಕ್ಷಕಾಮಿ ಗಾಡು** | **ಕಾಮಿ ಹೊರತು ಮೋಕ್ಷ ಕಾಮಿ ಅಲ್ಲ** |
| **ಕಾಮಿಯ್ಯೆನವಾಡು ಕವಿಯೌನು ರವಿಯೌನು** | **ಕಾಮಿ ಯಾದ ನರನು ಕವಿಯಪ್ಪ ರವಿಯಪ್ಪ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (14)** |

**ಭಾವಾರ್ಥ :–** ಕಾಮಿ ಎಂದರೆ ಒಂದನ್ನು ಆಶಿಸಿ ಅದನ್ನು ಹೊಂದಿದವನೆಂದು ಅರ್ಥ. ಆಸೆಯನ್ನು ಕಾಮ ಎನ್ನುವುದು ಸಹಜ. ಅಜ್ಞಾನದಿಂದ ಮತ್ತೊಂದನ್ನು ಹೊಂದಬೇಕೆನ್ನುವಂತೆ ಜ್ಞಾನದಿಂದ ಆತ್ಮವನ್ನು ಹೊಂದಬೇಕೆನ್ನುವುದು ಕಾಮವೇ. ಕಾಮ ಗುಣವನ್ನು ಅನುಸರಿಸುವವನು ಕಾಮನು ಅಥವಾ ಕಾಮಿ. ಆತ್ಮವನ್ನು ಹೊಂದಬೇಕೆನ್ನುವ ಕೋರಿಕೆ ಉಂಟಾಗಿ ಆತ್ಮವನ್ನು ಹೊಂದಿದವನು ಯೋಗಿ.

ಆತ್ಮ ಸರ್ವ ಜೀವರಾಶಿಗಳ ಶರೀರಗಳಲ್ಲಿ ನಿವಾಸವಾಗಿದೆ. ಬುದ್ಧಿವಂತಿಕೆಯಲ್ಲಿ ಪ್ರಕಾಶವಂತರಾದ ಕವಿಗಳು, ಕವಿತೆಯಲ್ಲಿ ಪ್ರಕಾಶವಂತರಾದ ಕವಿಗಳು ಆತ್ಮ ಶಕ್ತಿಯಿಂದ ಅಡುವವರೇ ಆದ್ದರಿಂದ ಆತ್ಮನಲ್ಲಿ ಐಕ್ಯವಾದವನು ಕವಿ, ರವಿ ತಾನೇಯಾಗುತ್ತಾನೆ. ಹಾಗೆ ಆತ್ಮವನ್ನು ಹೊಂದದವನು ಒಂದು ಶರೀರ

ಪರಿಧಿಯಲ್ಲಿ ಮಾತ್ರವೇ ಇರುತ್ತಾನೆ. ಆದ್ದರಿಂದ ಆತನು ರವಿಯಾಗಲಿ, ಕವಿಯಾಗಲಿ ಆಗಲಾರನು.

ಆತ್ಮವನ್ನು ಹೊಂದಬೇಕೆನ್ನುವ ಕೋರಿಕೆ ಇಲ್ಲದ ಮತ್ತು ಆಚರಣೆ ಇಲ್ಲದವನು ಪರಮಾತ್ಮವನ್ನು ಆಶಿಸುವುದಿಲ್ಲ, ಹೊಂದುವುದೂ ಇಲ್ಲ. ಆತ್ಮವನ್ನು ಹೊಂದದೆಹೋದರೇ ಪರಮಾತ್ಮವನ್ನು (ಮೋಕ್ಷವನ್ನು) ಸಹ ಹೊಂದಲಾರನು. ಆದ್ದರಿಂದ ಕಾಮಿಗಾಕ ಮೋಕ್ಷಕಾಮಿ ಆಗುವುದಿಲ್ಲ ಎನ್ನುವುದು ನಡೆದಿದೆ.

| | |
|---|---|
| **ಚಚ್ಚುವಾರ ಲೆವರು? ಚಾವನಿ ವಾರೇರಿ?** | **ಸಾಯುವವರು ಯಾರು? ಸಾಯದವರು ಯಾರು** |
| **ಚಚ್ಚಿ ಬ್ರತಿಕಿಯುಂಡು ಜನಮುಲೆವರು?** | **ಸತ್ತು ಬದುಕುತ್ತಿರುವ ಸುಜನರ್ಯಾರು** |
| **ವಿಚ್ಚಲ ವಿಡಿಗಾನು ವಿವರಿಂಚಿ ಚೂಡರಾ** | **ಪೂರ್ಣವಾಗಿ ಕಂಡು ವಿವರಿಸಿ ನೋಡಿರೋ** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (15)** |

**ಭಾವಾರ್ಥ :–** ಜೀವಿಯು ಆತ್ಮನಲ್ಲಿ ಐಕ್ಯವಾದಾಗ ಜೀವ ಪದವು ನಶಿಸಿ ಹೋಗುತ್ತದೆ. ಜೀವಾತ್ಮ ಅಥವಾ ಆತ್ಮರ್ವೇ ಉಳಿದುಹೋಗುತ್ತದೆ. ಆದ್ದರಿಂದ ಜೀವಾತ್ಮವನ್ನು ಸಾಯುವವನು ಎನ್ನಲಾಗಿದೆ. ಭಗವದ್ಗೀತೆಯಲ್ಲಿ ಸಹ ಕ್ಷರನು ಎಂದು ಜೀವಾತ್ಮವನ್ನು ಉಚ್ಛರಿಸುವುದು ನಡೆದಿದೆ. ಆತ್ಮ ಶಾಶ್ವತವಾದುದು, ನಾಶವಿಲ್ಲದ್ದು. ಒಂದು ಶರೀರದಲ್ಲಿ ಅಲ್ಲದೆ ಎಲ್ಲಾ ಶರೀರಗಳಲ್ಲಿ ವ್ಯಾಪಿಸಿದೆ. ಆದ್ದರಿಂದ ಆತ್ಮವನ್ನು ಅಕ್ಷರ ಪುರುಷನೆಂದು ಭಗವದ್ಗೀತೆಯಲ್ಲಿ ಹೇಳಿದ್ದಾರೆ. ಆತ್ಮನಲ್ಲಿ ಐಕ್ಯವಾದ ಜೀವಾತ್ಮ ಕರ್ಮನಾಶವಾದ ನಂತರ ಪರಮಾತ್ಮನಲ್ಲಿ ಐಕ್ಯವಾಗಿ ಹೋಗುತ್ತಾನೆ. ಅಂತಹವರು ಪ್ರಪಂಚವೆಲ್ಲವೂ ನಾಶವಾದರೂ ತಾನು ನಾಶವಾಗುವುದಿಲ್ಲ.

ಆತ್ಮ ನಾಶವಾಗದಿರುವುದು ಆದ್ದರಿಂದ ಸಾಯುವುದಿಲ್ಲವೆಂದು ತಿಳಿಯಬೇಕು. ಜೀವಿಯು ನಾಶವಾಗಿ ಪರಮಾತ್ಮವಾಗಿ ಬದಲಾಗಿ ಪರಮಾತ್ಮನಲ್ಲಿ ಸಾವು, ಹುಟ್ಟುಗಳು ಇಲ್ಲದೆ ಶಾಶ್ವತವಾಗಿ ಉಳಿದುಹೋಗುತ್ತಾನೆ. ಆದ್ದರಿಂದ

ಸತ್ತು ಬದುಕಿ ಇರುವುದೆಂದು ತಿಳಿಯಬೇಕು. ಎಲ್ಲರಿಗೂ ಈ ವಿವರ ತಿಳಿದಿಲ್ಲ. ಆದ್ದರಿಂದ ಇಚ್ಛಾನುಸಾರ ವಿವರಿಸಿ ನೋಡಿರೋ ಎಂದಿದ್ದಾರೆ.

**ಸಾಯುವವರು ಯಾರು?** – **ಜೀವಾತ್ಮಗಳು**

**ಸಾಯದವರ್ಯಾರು?** – **ಆತ್ಮ**

**ಸತ್ತು ಬದುಕಿರುವ ಜನಗಳು ಯಾರು ?** – **ಪರಮಾತ್ಮವಾಗಿ ಬದಲಾದ ಜೀವಾತ್ಮಗಳು**

ಇರುವವು ಮೂರು ಆತ್ಮಗಳೆಂದು ತಿಳಿಯದವನು ಅಜ್ಞಾನಿಯೇ ಎಂದು ತಿಳಿಯಬೇಕು.

| | |
|---|---|
| **కాంతమీద ఆశ కనకంబుమీద యాశ** | **ಕಾಂತೆ ಮೇಲೆ ಆಸೆ ಕನಕದ ಮೇಲಾಸೆ** |
| **లేనివాడు పుడమి లేనివాడు** | **ಇಲ್ಲದವನು ಜಗದಿ ಇಲ್ಲದವನು** |
| **అవి కలిగేనేని అతను కానరాడు** | **ಅದು ಹೊಂದಿದರೆ ಆತನು ಕಾಣುವುದಿಲ್ಲ** |
| **విశ్వదాభిరామ వినురవేమా.** | **ವಿಶ್ವದಾಭಿರಾಮ ಕೇಳು ವೇಮಾ. (16)** |

**ಭಾವಾರ್ಥ :–** ಬಂಗಾರದ ಮೇಲೆ ಆಸೆ, ಸ್ತ್ರೀ ಮೇಲೆ ಆಸೆ ಇಲ್ಲದವನು ಯಾರೂ ಇಲ್ಲ. ವಾಸ್ತವವೇ! ಬಂಗಾರ, ಅದರ ಆಸೆ ಮೇಲೆ ಸ್ತ್ರೀಯರು ಎಷ್ಟು ಮಂದಿ ಯಾದರೂ ಸೇರಬಲ್ಲರು. ಬಂಗಾರ (ಧನ) ಇಲ್ಲದ ದಿನ ಬೆಲೆ ಇಲ್ಲ. ಎರಡೂ ಇಲ್ಲದವನು ದರಿದ್ರನು. ಹಾಗೆಯೇ ಜ್ಞಾನ ಇರುವಾಗ ಮೋಕ್ಷ ಲಭಿಸುತ್ತದೆ. ಜ್ಞಾನ ಇಲ್ಲದಿರುವಾಗ ಮೋಕ್ಷ ಲಭಿಸುವುದಿಲ್ಲ. ಧನ ಇಲ್ಲದವನನ್ನು ಕಾಂತ ವರಿಸದಹಾಗೆ, ಜ್ಞಾನ ಇಲ್ಲದವನಿಗೆ ಮೋಕ್ಷ ವರಿಸುವುದಿಲ್ಲ.

ಮೋಕ್ಷದ ಮೇಲೆ ಆಸೆ, ಜ್ಞಾನದ ಮೇಲೆ ಆಸೆ ಇಲ್ಲದವನು ತನಗೆ ಏನಿದ್ದರೂ ಇಲ್ಲದವನೊಂದಿಗೆ ಸಮಾನ. ಅಂದರೆ ಪ್ರಪಂಚ ವಿಷಯಗಳಲ್ಲಿ ದರಿದ್ರನಹಾಗೆ, ಜ್ಞಾನ ವಿಷಯಗಳಲ್ಲಿ ದರಿದ್ರನೇ. ಒಂದುವೇಳೆ ಜ್ಞಾನ ಹೊಂದಿ ಅದರಿಂದ ಮೋಕ್ಷ ಹೊಂದಿದರೇ ಆತನು ಶರೀರದಲ್ಲಿ ಇರದೆ ಎಲ್ಲೆಡೆ ವ್ಯಾಪಿಸಿ

ಹೋಗುವವನು. ಆದ್ದರಿಂದ ಅದು ಹೊಂದಿದರೇ ಆತನು ಕಾಣುವುದಿಲ್ಲ ಎಂದಿದ್ದಾರೆ.

ಕಾಂತೆ ಮೇಲೆ ಆಸೆ ಎಂದರೆ ಮೋಕ್ಷದ ಮೇಲೆ ಆಸೆ ಎಂದು ಗ್ರಹಿಸಬೇಕು. ಕನಕದ ಮೇಲೆ ಆಸೆ ಎಂದರೆ ಜ್ಞಾನದ ಮೇಲೆ ಆಸೆ ಎಂದು ಗ್ರಹಿಸಬೇಕು.

**ನಿನ್ನುಜೂಚೆನೇನಿ ದನ್ನು ತಾಮರುಚುನು**
**ದನ್ನು ಜೂಚೆನೇನಿ ನಿನ್ನು ಮರಚು**
**ನೇವಿಧಮುನ ಮನುಜುಡೆರುಗು ನಿನ್ನುನು ದನ್ನು**
**ವಿಶ್ವದಾಭಿರಾಮ ವಿನುರವೇಮಾ.**

**ನಿನ್ನ ನೋಡುತಿರಲು ತನ್ನ ತಾನೆ ಮರೆವ**
**ತನ್ನ ನೋಡುತಿರಲು ನಿನ್ನ ಮರೆವ**
**ಯಾವ ವಿಧದಲ್ಲಿ ಮನುಜ ತಿಳಿವನು**
**ನಿನ್ನನ್ನು ತನ್ನನ್ನು**
**ವಿಶ್ವದಾಭಿರಾಮ ಕೇಳು ವೇಮಾ. (17)**

**ಭಾವಾರ್ಥ :–** ಜೀವಾತ್ಮ ಜ್ಞಾನದಿಂದ ಆತ್ಮವನ್ನು ಸೇರಿದರೂ ತನ್ನ ಮೇಲೆ ಜ್ಞಾಪಕ ಇಲ್ಲದೆ ಆತ್ಮ ಜ್ಞಾಪಕದಿಂದ ಇರುತ್ತದೆ. ಅದನ್ನೇ ಯೋಗ ಎನ್ನುತ್ತಾರೆ. ಯೋಗ ಸಮಯದಲ್ಲಿ ಬಾಹ್ಯ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೊಂದಿಗೆ ಸಂಬಂಧವಿಲ್ಲದೆ ಜೀವಾತ್ಮ ತನ್ನನ್ನು ತಾನು ಮರೆತು ಇರುತ್ತಾನೆ. ಆದ್ದರಿಂದ ಆತ್ಮವನ್ನು ನಿನ್ನನ್ನು ಎಂದು ಹೇಳುತ್ತಾ ನಿನ್ನನ್ನು ನೋಡಿ ನಾನು ತನ್ನನ್ನು ತಾನು ಮರೆವನು ಎಂದಿದ್ದಾರೆ.

ಯೋಗವನ್ನು ನಿಲ್ಲಿಸಿ ಆತ್ಮ ಜ್ಞಾಪಕವನ್ನು ಬಿಟ್ಟು ಪುನಃ ಪ್ರಪಂಚ ಧ್ಯಾಸದೊಳಗೆ ಬಂದವನು ಆತ್ಮವನ್ನು ಮರೆತು ಹೋಗುವವನು. ಆದ್ದರಿಂದ ತನ್ನನ್ನು ನೋಡಿ ನಾನು ನಿನ್ನನ್ನು ಮರೆತನು ಎಂದಿದ್ದಾರೆ. ಶರೀರದಿಂದ ಇರುವವರೆಗು ಯೋಗವಾಚರಿಸಿದ ಸಮಯದಲ್ಲಿ ಜೀವಾತ್ಮ ಧ್ಯಾಸ ಹೋಗುತ್ತದೆ. ಯೋಗವಾಚರಿಸದ ಸಮಯದಲ್ಲಿ ಆತ್ಮ ಧ್ಯಾಸ ಹೋಗುತ್ತದೆ. ಹಾಗಲ್ಲದೆ ಪೂರ್ತಿಯಾಗಿ ಜೀವಾತ್ಮ ಮೂರನೆ ಪುರುಷನಾದ ಪರಮಾತ್ಮನಲ್ಲಿ ಐಕ್ಯವಾಗಿ ಹೋದಾಗ ತಾನು ಆತ್ಮಕ್ಕೂ, ಜೀವಾತ್ಮಕ್ಕೂ ಸಾಕ್ಷಿಯಾಗಿ ಇದ್ದಾನೆ. ಸಮಸ್ತ

ಜೀವಿಗಳಲ್ಲಿಯೂ ಮತ್ತು ಹೊರಗೂ ಇದ್ದಾನೆ. ಆದ್ದರಿಂದ ನಿನ್ನನ್ನು ಎನ್ನುವ ಆತ್ಮವನ್ನೂ, ತನ್ನನ್ನು ಎನ್ನುವ ಜೀವಾತ್ಮವನ್ನು ನೋಡುವ ಸ್ಥಿತಿ ಮೋಕ್ಷ ಸ್ಥಿತಿ. ಎಲ್ಲರಿಗೂ ಈ ವಿಷಯ ತಿಳಿದಿಲ್ಲ ಆದ್ದರಿಂದ ಯಾವ ವಿಧವಾಗಿ ತಿಳಿಯಬೇಕು ನಿನ್ನನ್ನು ತನ್ನನ್ನು ಎಂದಿದ್ದಾರೆ.

| | |
|---|---|
| **ಆಲು ಮಾಟಲು ವಿನಿ ಅನ್ನದಮ್ಮುಲ ರೋಸಿ** | **ಸತಿಯ ಮಾತು ಕೇಳಿ ಅಣ್ಣತಮ್ಮರ ತ್ಯಜಿಸಿ** |
| **ವೇರೆ ಪೋವುವಾಡು ವೆರ್ರಿವಾಡು** | **ಬೇರೆ ಹೋಗುವವನು ಹುಚ್ಚನವನು** |
| **ಕುಕ್ಕತೋಕನು ಬಟ್ಟಿ ಗೋದಾವರೀದುನಾ** | **ನಾಯಿ ಬಾಲ ಹಿಡಿದು ಗೋದಾವರೀಜುವನೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (18)** |

**ಭಾವಾರ್ಥ :–** ಅಣ್ಣತಮ್ಮಂದಿರು ಮೊದಲಿನಿಂದ ಇರುವವರು. ಹೆಂಡತಿ ಮಧ್ಯದಲ್ಲಿ ಬರುವವಳು. ಆದರೂ ಮೊದಲಿನಿಂದ ಹತ್ತಿರ ಇರುವ ಅಣ್ಣತಮ್ಮಂದಿರನ್ನು ಬಿಟ್ಟು ಹೆಂಡತಿ ಮಾತು ಕೇಳುವುದು ಸಹಜ. ಹಾಗೆಯೇ ಆತ್ಮ, ಪರಮಾತ್ಮರು ಜೀವಾತ್ಮಗಳಿಗೆ ಅಣ್ಣತಮ್ಮಂದಿರಂತಹವರು. ಹುಟ್ಟಿನಿಂದ ಜೊತೆಯಾಗಿರುವವರು. ಆದರೂ ಸ್ವಲ್ಪ ವಯಸ್ಸು ಬಂದ ನಂತರ ಕೆಲಸ ಮಾಡುವ ಮನಸ್ಸಿಗೇ ಜೀವಿಗಳು ಎಲ್ಲರೂ ಶರಣಾಗಿ ಆತ್ಮ, ಪರಮಾತ್ಮ ಧ್ಯಾಸಗಳನ್ನು ಮರೆಯುವುದು ನಡೆಯುತ್ತಿದೆ. ಆದ್ದರಿಂದ ಹೆಂಡತಿ ಮಾತು (ಮನಸ್ಸುಮಾತು) ಕೇಳಿ ಅಣ್ಣ ತಮ್ಮಂದಿರ (ಆತ್ಮ, ಪರಮಾತ್ಮರ) ಬಿಡುವವನು ಹುಚ್ಚನು ಎಂದು ಹೇಳಲಾಗಿದೆ.

ಮನಸ್ಸು ಚಂಚಲವಾದುದು, ವಕ್ರವಾದುದು. ಹತ್ತಿರಕ್ಕೆ ಬಂದ ನಾಯಿ ಬಾಲದಂತೆ ಅಲ್ಲಾಡುವುದು. ಅದನ್ನು ನಂಬಿದರೆ ಪ್ರಪಂಚವನ್ನು ಜಯಿಸಲಾರನು. ಆದ್ದರಿಂದ ನಾಯಿ ಬಾಲವನ್ನು ಹಿಡಿದು ಗೋದಾವರಿ ಈಜುವನಾ? ಎಂದಿದ್ದಾರೆ. ಮನಸ್ಸನ್ನು ಬಿಟ್ಟು ಆತ್ಮ, ಪರಮಾತ್ಮರ ಸಂಬಂಧ ಏರ್ಪಡಿಸಿಕೊಂಡವನು ಪ್ರಪಂಚ ಅಣೆಕಟ್ಟು ಸುಲಭವಾಗಿ ದಾಟಬಲ್ಲನು.

| | |
|---|---|
| **ಉಪ್ಪು ಚಿಂತಪಂಡು ಊರಿಲೋನುಂಡಗ** | **ಉಪ್ಪು ಹುಣಿಸೆ ಹಣ್ಣು ಊರಿನೊಳ್ ಇರುವಾಗ** |
| **ಕರುವೇಲ ವಚ್ಚುನೋ ಕಾಪುಲಾರಾ** | **ಕ್ಷಾಮವೆಲ್ಲಿ ಬಂತೊ ಜೀವಿಗಳೇ** |
| **ತಾಲಕಂ ಬೆರುಗರು ತಗರಂಬೆರುಗರು** | **ತಾಳಕವರಿಯರು ತವರವರಿಯರು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (19)** |

**ಭಾವಾರ್ಥ :–** ಉಪ್ಪು, ಹುಣಿಸೆಹಣ್ಣು ತಿನ್ನುವಂತಹ ವಸ್ತುಗಳು. ಅವು ಒಂದರೊಂದಿಗೆ ಒಂದು ಬೆರೆತಾಗ ಒಳ್ಳೆಯ ರುಚಿ ಏರ್ಪಡುತ್ತದೆ. ಹಿರಿಯರು ಸಹ ಉಪ್ಪು, ಹುಣಿಸೆಹಣ್ಣು ಇರುವಾಗ ಭಯವೇತಕೆ ಎಂದು ಹೇಳುತ್ತಿರುತ್ತಾರೆ. ರುಚಿ ಉಂಟುಮಾಡುವ ಉಪ್ಪು, ಹುಣಿಸೆಹಣ್ಣು ಇದ್ದರೆ ಯಾವುದೋ ಒಂದು ಪದಾರ್ಥದಿಂದ ಜೊತೆಮಾಡಿಕೊಂಡು ಹಸಿವನ್ನು ತೀರಿಸಿಕೊಳ್ಳುತ್ತೇವೆ. ಆದ್ದರಿಂದ ಬರ ಇಲ್ಲವೆಂದು ಹೊರಗಿನ ಪ್ರಪಂಚದಲ್ಲಿ ಹೇಳಿಕೊಂಡಂತೆ, ವೇಮನ ಜ್ಞಾನಪರವಾಗಿ ಊರೆಂದರೆ ದೇಹವೆಂದು, ಕಾಪುಲಾರಾ ಎಂದರೆ ದೇಹದಲ್ಲಿ ನಿವಾಸಿಸುವ ಜೀವಿಗಳೇ ಎಂದು, ಬರ ಎಂದರೆ ಕರ್ಮ (ಕಷ್ಟ) ಗಳೆಂದು, ಉಪ್ಪು ಎಂದರೆ ಜ್ಞಾನವೆಂದು, ಹುಣಿಸೆಹಣ್ಣು ಎಂದರೆ ಸಾಧನೆಯೆಂದು ತಿಳಿಸುತ್ತಾ ದೊಡ್ಡ ರಹಸ್ಯವನ್ನು ಪದ್ಯದಲ್ಲಿ ಜೋಡಿಸಿದ್ದಾರೆ.

ಜ್ಞಾನವಿದ್ದು ಆಚರಣೆ ಇಲ್ಲದಷ್ಟು ಮಾತ್ರಕ್ಕೆ ಏನು ಪ್ರಯೋಜನವಿಲ್ಲ. ಜ್ಞಾನ ತಿಳಿದು ಆಚರಣೆ ಹೊಂದಿದವನಿಗೆ ಜ್ಞಾನ ಶಕ್ತಿ ಉಂಟಾಗುತ್ತದೆ. "ಜ್ಞಾನಾಗ್ನಿ ಸರ್ವ ಕರ್ಮಾಣಿ ಭಸ್ಮಸಾತ್" ಎನ್ನುವಂತೆ ಗೀತಾವಾಕ್ಯದ ಪ್ರಕಾರ ಜ್ಞಾನ ಶಕ್ತಿ ಕರ್ಮಗಳನ್ನು ಸುಟ್ಟುಹಾಕುತ್ತದೆ. ಅಂತಹವರಿಗೆ ಕರ್ಮಗಳ ಬಂಧವಿರುವುದಿಲ್ಲ. ಕರ್ಮದಿಂದ ಸಂಭವಿಸುವ ಜನ್ಮಗಳು ಸಹ ಇರುವುದಿಲ್ಲ. ಕರ್ಮ ಬಾಧೆಗಳೇ ಇರುವುದಿಲ್ಲ. ಆದ್ದರಿಂದ ಉಪ್ಪು, ಹುಣಿಸೆಹಣ್ಣು ಊರಿನಲ್ಲಿರುವಾಗ ಬರ ಏಕೆ ಬರುತ್ತದೆ ಜೀವಿಗಳೇ ಎಂದು ವೇಮನ ಹೇಳಿದ್ದಾನೆ.

ತಾಳಕ, ತವರ ವಿಭಿನ್ನವಾದವು. ಹಾಗೆಯೇ ಜ್ಞಾನ ಮತ್ತು ಅಜ್ಞಾನಗಳು ವಿಭಿನ್ನವಾದವು. ಕೆಲವರು ಮಾನವರು ಜ್ಞಾನವೆಂದರೆ ಏನೋ ಅಜ್ಞಾನವೆಂದರೆ

ಏನೋ ತಿಳಿಯದೆ ನಿತ್ಯವೂ ಮಾಡುವ ಕೆಲಸಗಳನ್ನೇ ಮಾಡುತ್ತಾ ವಿಮರ್ಶೆ ಇಲ್ಲದವರಾಗಿದ್ದಾರೆ. ಆದ್ದರಿಂದ ಅಂತಹವರನ್ನು ಉದ್ದೇಶಿಸಿ ತಾಳಕವು ತಿಳಿದಿಲ್ಲ, ತವರ ತಿಳಿದಿಲ್ಲ ಎಂದಿದ್ದಾರೆ.

| | |
|---|---|
| **ತಲ್ಲಿಗರ್ಭಮಂದು ದಾಬುಟ್ಟಿನಪುಡು** | **ತಾಯಿ ಗರ್ಭದಿಂದ ತಾ ಹುಟ್ಟಿ ಬಂದಾಗ** |
| **ಮೊದಟ ಬಟ್ಟಲೇದು ತುದಕು ಲೇದು** | **ಮೊದಲು ಬಟ್ಟೆ ಇಲ್ಲ ತುದಿಗು ಇಲ್ಲ** |
| **ನಡುಮ ಬಟ್ಟಗಟ್ಟ ನಗುಬಾಟು ಗಾದೊಕೋ** | **ನಡುವೆ ವಸ್ತ್ರ ಉಡಲು ನಗೆ ಗೇಡು ಅಲ್ಲವೇ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (20)** |

**ಭಾವಾರ್ಥ :–** ಅಗ್ನಿಯಿಂದ ಹೊರಬಿದ್ದ ಅಗ್ನಿ ಕಣದಹಾಗೆ, ಸಮುದ್ರದ ಅಲೆಗಳಿಂದ ನೀರಿನ ಬಿಂದು ಹೊರಬಿದ್ದಹಾಗೆ, ಸೂರ್ಯಗೋಳದಿಂದ ಸುರಿದ ಉಲ್ಕೆಗಳಹಾಗೆ ಪರಮಾತ್ಮನಿಂದ ಬಹಿರ್ಗತವಾಗಿ ಜೀವರೂಪ ತಾಳಿದ ಸಮಯದಲ್ಲಿ ಜೀವಿಗೆ ಕರ್ಮಯೆನ್ನುವುದು ಯಾವಮಾತ್ರವೂ ಇಲ್ಲ. ಅಗ್ನಿಯಲ್ಲಿ ಒತ್ತಡಕ್ಕೆ ಅಗ್ನಿ ಕಣ ಎಗರಿದ ಹಾಗೆ, ಸಮುದ್ರದ ಅಲೆಗಳ ಸ್ಪಂದನೆಗೆ ನೀರಿನ ಬಿಂದು ಹೊರಬಿದ್ದಹಾಗೆ, ಪರಮಾತ್ಮ ಅಂತಃಪ್ರೇರಣೆಯಿಂದ ಆ ಪರಮಾತ್ಮ ಅಂಶವೇ ಜೀವಾತ್ಮವಾಗಿ ಬದಲಾಗಿದೆ ಆದರೆ ಮೊದಲು ಉದ್ಭವಿಸಿದ ಜೀವಿಗೆ ಕರ್ಮಕಾರಣವಿಲ್ಲ. “ಮದ್ಭಾವಾ ಮಾನಸಾ ಜಾತಾ” ಎನ್ನುವಂತೆ ಭಗವದ್ಗೀತಾ ವಾಕ್ಯದ ಪ್ರಕಾರ ಯಾವ ಕರ್ಮ ಕಾರಣವಿಲ್ಲದೆ ಪರಮಾತ್ಮ ಮನೋ ಸಂಕಲ್ಪದಿಂದಲೇ ಮೊದಲು ಜೀವಾತ್ಮ ಉದ್ಭವಿಸಿದ್ದಾನೆ.

**ಮಮೈವಾಂಶೋ ಜೀವಲೋಕೇ ಜೀವಭೂತ ಸ್ಸನಾತನಃ**
**ಮನಷ್ಷಷ್ಠಾಣೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ.**

ಅಂದಹಾಗೆ ಜೀವಿಯು ಪರಮಾತ್ಮ ಅಂಶವಾದರೂ ಪ್ರಕೃತಿಯಲ್ಲಿ ಬಂದು ಬಿದ್ದ ಅಂಶವಾದ್ದರಿಂದ ಜೀವಾತ್ಮ ಎನ್ನುವುದು ನಡೆಯುತ್ತಿದೆ. ಪ್ರಕೃತಿ ತನ್ನ ಅಧೀನದಲ್ಲಿ ಇರುವ ಪ್ರತಿ ಜೀವಿಯನ್ನು ಮೊದಲು ಗುಣಗಳಿಂದ ಪ್ರೇರೇಪಿಸಿ ಕಾರ್ಯಗಳನ್ನು ಮಾಡಿಸಿ ಕರ್ಮಗಳನ್ನಂಟಿಸುತ್ತಿದೆ. ಆಗಿನಿಂದ ಜೇನಿನಲ್ಲಿ ಸಿಲುಕಿದ ನೊಣದಂತೆ ಜೀವಾತ್ಮ, ಕರ್ಮವನ್ನನುಭವಿಸುತ್ತಾ, ಕರ್ಮವನ್ನು

ಸಂಪಾದಿಸುತ್ತಾ ಪ್ರಕೃತಿ ಅಧೀನದಲ್ಲೇ ಇದ್ದಾನೆ. ಸಮುದ್ರದಿಂದ ಹೊರಬಿದ್ದ ನೀರಿನ ಬಿಂದು ಹೊರಗಿನ ಸೂರ್ಯರಶ್ಮಿಗೆ ಇಂಗಿಹೋಗಿ ಆವಿಯಾಗಿ ಬದಲಾಗಿ, ಮಳೆಯಹಾಗಿ ಸುರಿದು, ನದಿಗಳಿಂದ ಪುನಃ ಸಮುದ್ರ ಸೇರುವಂತೆ ಜೀವಾತ್ಮ ಕೂಡ ಜ್ಞಾನಿಯಾಗಿ ಬದಲಾಗಿ, ಮಹರ್ಷಿಯಾಗಿ ನಡೆದು ಪುನಃ ಪರಮಾತ್ಮನನ್ನು ಸೇರಬೇಕು. ಆ ವಿಧವಾಗಿ ಯಾವ ಜೀವಾತ್ಮವಾದರೂ ಪ್ರಕೃತಿಗೆ ವಿರುದ್ಧವಾದ ಜ್ಞಾನವನ್ನು ಸಂಪಾದಿಸಿ ಅದರ ಫಲಿತವಾದ ಜ್ಞಾನಶಕ್ತಿಯಿಂದ ಕರ್ಮವನ್ನು ಪೂರ್ತಿಯಾಗಿ ಸುಟ್ಟಿದ ದಿನ ಪುನಃ ಪರಮಾತ್ಮನಲ್ಲಿ ಐಕ್ಯವಾಗಬಲ್ಲನು.

ಭಗವದ್ಗೀತಾ ಶಾಸ್ತ್ರದ ಪ್ರಕಾರ ನನ್ನ ಬೀಜ ಪ್ರಕೃತಿ ಗರ್ಭದಲ್ಲಿ ಉದ್ಭವಿಸಿ ಜೀವರಾಶಿಗಳಾಗಿ ಶರೀರ ಧರಿಸುತ್ತಿದೆ. ಆದ್ದರಿಂದ ಸರ್ವಜೀವಿಗಳಿಗು ಮಾತೆ ಪ್ರಕೃತಿ ಎನ್ನುವುದು ನಡೆದಿದೆ. ಪರಮಾತ್ಮನಿಂದ ಹೊರಬಿದ್ದು ಪ್ರಕೃತಿ ರೂಪ ಶರೀರ ಧರಿಸಿದ ಮೊದಲ ಸಮಯದಲ್ಲಿ ಕರ್ಮ ಇಲ್ಲ. ಆದ್ದರಿಂದ ತಾಯಿಗರ್ಭದಲ್ಲಿ ತಾಹುಟ್ಟಿದಾಗ ಮೊದಲು ಬಟ್ಟೆ ಇಲ್ಲ ಎಂದಿದ್ದಾರೆ. ಬಟ್ಟೆ ಎಂದರೆ ಶರೀರಕ್ಕೆ ಸುತ್ತಿರುವುದು. ಹಾಗೆಯೇ ಕರ್ಮ ಜೀವಾತ್ಮವನ್ನು ಬಂಧಿಸುವುದು ಆದ್ದರಿಂದ ಕರ್ಮವನ್ನು ವೇಮನ ಬಟ್ಟೆಯಾಗಿ ಸಂಬೋಧಿಸಿದ್ದಾರೆ. ಹಾಗೆಯೇ ಪುನಃ ಪರಮಾತ್ಮನಲ್ಲಿ ಐಕ್ಯವಾಗಿ ಹೋಗುವ ಸಮಯದಲ್ಲಿ ಕೂಡಾ ಕರ್ಮಶೇಷವಿಲ್ಲ. ಆದ್ದರಿಂದ ಕೊನೆಗೆ ಇಲ್ಲ ಎಂದಿದ್ದಾರೆ.

ಮಧ್ಯದಲ್ಲಿ ಉಂಟಾದ ಕರ್ಮದಿಂದ ನಾನಾಬಾಧೆಗಳು, ಬಾಂದವ್ಯಗಳ ಮಧ್ಯದಲ್ಲಿ ಸಿಲುಕಿದ ಜೀವಿಯು ಜ್ಞಾನಿಗಳ ಲೆಕ್ಕದಲ್ಲಿ ಹಾಸ್ಯಾಸ್ಪದವಾಗಿ ಇದ್ದಾನೆ. ಆದ್ದರಿಂದ ಮಧ್ಯದಲ್ಲಿ ಬಟ್ಟೆ ಕಟ್ಟುವುದಕ್ಕೆ ಹಾಸ್ಯಾಸ್ಪದವಲ್ಲವೆ ಎಂದಿದ್ದಾರೆ.

| | |
|---|---|
| **ತಲ್ಲಿನೆರುಗು ವಾಡು ದೈವಂಬು ನೆರುಗುನು** | **ತಾಯಿಯನ್ನು ತಿಳಿದವನು ದೈವವನ್ನು ತಿಳಿಯುವನು** |
| **ಮನ್ನು ನೆರುಗು ವಾಡು ಮಿನ್ನು ನೆರುಗುನು** | **ಮಣ್ಣನ್ನು ತಿಳಿದವನು ಶೂನ್ಯವನು (ಆಕಾಶ) ತಿಳಿಯುವನು** |
| **ಮನ್ನು ಮಿನ್ನೆರಿಗಿನ ತನ್ನು ತಾನೆರುಗುನು** | **ಮಣ್ಣು ಶೂನ್ಯ ತಿಳಿದರೆ ತನ್ನನ್ನು ತಾನರಿಯುವನು** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (21)** |

**ಭಾವಾರ್ಥ :–** ಸಕಲ ಜೀವಿಗಳಿಗು ತಾಯಿತಂದೆಯರು ಬ್ರಹ್ಮವಿದ್ಯೆ ಪ್ರಕಾರ ಗೀತಾಶಾಸ್ತ್ರದಲ್ಲಿ ಹೇಳಿದಹಾಗೆ ಪ್ರಕೃತಿ ಪುರುಷರು. ಮನುಷ್ಯ ಬಾಲ್ಯದಲ್ಲಿ ಮೊದಲು ತಾಯಿಯನ್ನು ತಿಳಿದುಕೊಂಡ ನಂತರ ತಂದೆ ಹತ್ತಿರಕ್ಕೆ ಹೋದಂತೆ, ಸರ್ವ ಜೀವಿಗಳು ಮೊದಲು ಮಾತೆಯಾದ ಪ್ರಕೃತಿಯನ್ನು ಕುರಿತು ಪೂರ್ತಿಯಾಗಿ ತಿಳಿದುಕೊಂಡ ನಂತರ, ಆತ್ಮವನ್ನು ಕುರಿತು ಕೂಡ ತಿಳಿದುಕೊಳ್ಳುತ್ತಾರೆ. ತಾಯಿ ಹತ್ತಿರಕ್ಕೆ ಸೇರದೆ ಬಾಲ್ಯದಲ್ಲಿ ತಂದೆ ಹತ್ತಿರಕ್ಕೆ ಸೇರದಹಾಗೆ ಯಾವ ಜೀವಿಯಾಗಲಿ ಪ್ರಕೃತಿಯನ್ನು ತಿಳಿಯದ ಮೊದಲು ಪರಮಾತ್ಮನನ್ನು ಕುರಿತು ತಿಳಿಯಲಾರನು. ಆದ್ದರಿಂದ ತಾಯಿಯನ್ನು ತಿಳಿಯುವವನು ದೈವವನ್ನು ತಿಳಿಯುತ್ತಾನೆ ಎಂದಿದ್ದಾರೆ.

ಪ್ರಕೃತಿಯಲ್ಲಿನ ಪಂಚಭಾಗಗಳಲ್ಲಿ ಕೊನೆಯದು ಭೂಮಿ ಮೊದಲನೆಯದು ಆಕಾಶ. ಮೊದಲನೆಯದು ತಿಳಿಯದೆ ಕೊನೆಯದು ತಿಳಿಯುವುದಿಲ್ಲ. ಆದ್ದರಿಂದ ಕೊನೆಯದಾದ ಮಣ್ಣನ್ನು ತಿಳಿದವನು ಮೊದಲನೆಯದಾದ ಆಕಾಶವನ್ನು ತಿಳಿದಿರುತ್ತಾನೆ. ಆದ್ದರಿಂದ ಮಣ್ಣನ್ನು ತಿಳಿದವನು ಆಕಾಶವನ್ನು ತಿಳಿಯುವನು ಎಂದಿದ್ದಾರೆ. ಮಣ್ಣು ಆಕಾಶ ತಿಳಿದವನು ತನ್ನಲ್ಲಿನ ಆತ್ಮವನ್ನು ಕುರಿತು ತಪ್ಪದೆ ತಿಳಿಯುವನು. ಆದ್ದರಿಂದ ಮಣ್ಣು ಆಕಾಶ ತಿಳಿದವನು ತನ್ನನ್ನು ತಾನು ತಿಳಿಯುವನು ಎಂದಿದ್ದಾರೆ. ಈ ಪದ್ಯದಲ್ಲಿ ತಾಯಿ ಎಂದರೆ ಪ್ರಕೃತಿ ಎಂದು, ಮಣ್ಣು ಆಕಾಶ ಎಂದರೆ ಪ್ರಕೃತಿಯಲ್ಲಿನ ಭಾಗಗಳಾದ ಭೂಮಿ, ಆಕಾಶಗಳೆಂದು ತಿಳಿಯಬೇಕು.

| | |
|---|---|
| **ಹೇಮಕಾರ ವಿದ್ಯೆ ನೆರಿಗಿನ ವಾರೆಲ್ಲ** | **ಹೇಮಕಾರ ವಿದ್ಯೆ ಕಲಿತಂಥ ಜನರೆಲ್ಲ** |
| **ವೆತಲ ಬಡನಿಯಟ್ಲು ವಿದ್ಯಚೇತ** | **ವ್ಯಥೆ ಗೊಳದಿರುವ ಪರಿ ವಿದ್ಯೆಯಿಂದ** |
| **ತತ್ವಮೆರುಗು ವೆನುಕ ತನಕು ಚಿಂತೇಲರಾ?** | **ತತ್ತ್ವವರಿತ ಮೇಲೆ ತನಗೆ ಚಿಂತೆಯಾಕೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (22) |

**ಭಾವಾರ್ಥ :–** ಪ್ರಪಂಚ ವಸ್ತುಗಳಲ್ಲಿ ಎಲ್ಲದಕ್ಕಿಂತ ಬೆಲೆಯುಳ್ಳದ್ದು ಬಂಗಾರ.

ಬಂಗಾರವನ್ನು ಮಾಡುವ ವಿಧಾನ ತಿಳಿದವನು ಅದರಿಂದ ಹಣ ಆಶಿಸುತ್ತಾನೆ. ಆದ್ದರಿಂದ ಕಷ್ಟಗಳು ಪಡುವುದಿಲ್ಲ. ಆ ವಿಧವಾಗಿಯೇ ದೈವಮಾರ್ಗಗಳು ತಿಳಿಯುವುದರಲ್ಲಿ ಬ್ರಹ್ಮವಿದ್ಯೆಯೇ ದೊಡ್ಡದಾಗಿದೆ. ಎಲ್ಲ ವಿದ್ಯೆಗಳಿಗಿಂತ ದೊಡ್ಡದು ಮತ್ತು ಬೆಲೆಯುಳ್ಳದ್ದು ಬ್ರಹ್ಮವಿದ್ಯೆಯೇ. ಬ್ರಹ್ಮವಿದ್ಯೆಯನ್ನು ತಿಳಿದವನು ಜ್ಞಾನಾಗ್ನಿಯನ್ನಾಶಿಸಿ ಕರ್ಮಗಳ ನಾಶ ಮಾಡಿಕೊಂಡು ಯಾವ ಕರ್ಮಗಳನ್ನು ಅನುಭವಿಸುವುದಿಲ್ಲ. ಆದ್ದರಿಂದ ಬ್ರಹ್ಮವಿದ್ಯೆಗೆ ಹೇಮಕಾರವಿದ್ಯೆಯೆಂದು ಹೇಳಿ ಹೇಮಕಾರ ವಿದ್ಯೆಯನ್ನು ತಿಳಿದವನು ವ್ಯಥೆಗಳು ಬೀಳುವುದಿಲ್ಲ ಎಂದಿದ್ದಾರೆ.

ಆತ್ಮವನ್ನು ತಿಳಿದವನು ಕರ್ಮನಾಶನ ಮಾಡಬಲ್ಲ ಜ್ಞಾನಾಗ್ನಿಯನ್ನು ಹೊಂದಿದ್ದು ಕೊನೆಗೆ ಜನ್ಮರಾಹಿತ್ಯವನ್ನು ಹೊಂದುವನು. ಆದ್ದರಿಂದ ತತ್ತ್ವವನ್ನು ತಿಳಿಯುವುದರ ಹಿಂದೆ ಚಿಂತೆ ಏಕೆ ಎಂದಿದ್ದಾರೆ.

**ತಿಟ್ಟಿಕೊಟ್ಟಿ ರೇನಿ ತಿರುಗಿ ಮಾರಾಡಕ**
**ನೂರಕುನ್ನ ಚೂಡ ನುರ್ವಿಮೀದ**
**ವಾಡಗು ಪರಮಾತ್ಮ ವರ್ಣಿಂಪಶಕ್ಯಮಾ**
**ವಿಶ್ವದಾಭಿರಾಮ ವಿನುರ ವೇಮಾ.**

**ಬೈದು ಹೊಡೆದರೇನು ತಿರುಗಿ ಮಾತಾಡದೆ**
**ಸುಮ್ಮನಿದ್ದು ನೋಡಿದ ಭ್ರುಕುಟಿಯ ಮೇಲೆ**
**ಅವನಾಗುವನು ಪರಮಾತ್ಮ ವರ್ಣಿಸಲು ಸಾಧ್ಯವೇ**
**ವಿಶ್ವದಾಭಿರಾಮ ಕೇಳು ವೇಮಾ.** (23)

**ಭಾವಾರ್ಥ :–** ಪ್ರಪಂಚ ಬಾಹ್ಯ ಸ್ಪರ್ಶ ಶಬ್ದಾದಿಗಳಲ್ಲಿ ಮನಸ್ಸನ್ನಿರಿಸದೆ ಆತ್ಮನಲ್ಲಿ ಐಕ್ಯ ಮಾಡಿದವನು ಅಂತರ್ಮುಖ ಧ್ಯಾಸದಲ್ಲಿ ಲೀನವಾಗಿರುತ್ತಾನೆ. ಹೊರಗೆ ಏನು ನಡೆಯುವುದು ತಿಳಿಯುವುದಿಲ್ಲ. ಅಂತಹವನನ್ನು ಯಾರು ಏನೆಂದರೂ ತಿಳಿಯುವುದಿಲ್ಲ. ಆದ್ದರಿಂದ ಚಲಿಸದ ಸ್ಥಿತಿಯಲ್ಲಿ ಇರುತ್ತಾನೆ. ಅಂತಹವನನ್ನು ಕುರಿತು ಬೈದು ಹೊಡೆದರೇನು ತಿರುಗಿ ಮಾತನ್ನಾಡನು ಎಂದಿದ್ದಾರೆ. ಆತ್ಮನಲ್ಲಿ ಐಕ್ಯವಾದವನು ಕೊನೆಗೆ ಪರಮಾತ್ಮನಲ್ಲಿ ಸೇರಬಲ್ಲನು. ಪರಮಾತ್ಮನಲ್ಲಿ ಸೇರಿದವನನ್ನು ಇಲ್ಲಿದ್ದಾನೆಂದು ಗುರುತಿಸಲು ಅವಕಾಶವಿಲ್ಲ ಮತ್ತು ವಿವರಿಸಲು ಅವಕಾಶವಿಲ್ಲ. ಆದ್ದರಿಂದ ವರ್ಣಿಸಲು ಸಾಧ್ಯವಾ ಎಂದಿದ್ದಾರೆ.

**ಆಕು ಚಾಟುನುಂಡು ನನ್ನಿ ಲೋಕಂಬುಲು**
**ಕೊಮ್ಮಗಾನರಾದು ಬ್ರಹ್ಮಕೈನ**
**ಕೊಮ್ಮಗಾನಬಡಿನ ಕೊನಿಯಾಡ ವಚ್ಚುರಾ**
**ವಿಶ್ವದಾಭಿರಾಮ ವಿನುರ ವೇಮಾ.**

**ಎಲೆಯ ಮರೆಯೊಳಿರ್ಪ ಎಲ್ಲ ಲೋಕಂಗಳು**
**ರೆಂಬೆ ಕಂಡು ಬಾರದಾ ವಿಧಾತಗುಂ ಕಣಾ**
**ರೆಂಬೆ ಕಾಣಿಸದೊಡೆ, ಕೊಂಡಾಡಿ ಒಪ್ಪುದು**
**ವಿಶ್ವದಾಭಿರಾಮ ಕೇಳು ವೇಮಾ. (24)**

**ಭಾವಾರ್ಥ :–** ನಮ್ಮ ಶರೀರದಲ್ಲಿ ಕಣ್ಣಿಗೆ ಕಾಣಿಸದೆ ಶಿರೋಭಾಗದಲ್ಲಿ ನಾಲ್ಕು ಚಕ್ರಗಳಿವೆ. ಅವುಗಳ ಹೆಸರುಗಳು ಮೇಲಿನಿಂದ ಬ್ರಹ್ಮ, ಕಾಲ, ಕರ್ಮ, ಗುಣ ಚಕ್ರಗಳು. ಬ್ರಹ್ಮಚಕ್ರದ ಕೆಳಗೆ ಕಾಲಚಕ್ರವಿದೆ. ಕಾಲಚಕ್ರದ ಕೆಳಗೆ ಕರ್ಮಚಕ್ರವಿದೆ. ಕರ್ಮಚಕ್ರದ ಕೆಳಗೆ ಗುಣಚಕ್ರವಿದೆ. ಗುಣಚಕ್ರದಲ್ಲಿ ಮೂರು ಗುಣ ಭಾಗಗಳಿವೆ. ಆ ಭಾಗಗಳಲ್ಲಿ ಜೀವಿಯು ನಿವಾಸಿಸುತ್ತಿರುವನು. ಮೇಲಿನ ಭಾಗದಲ್ಲಿರುವ ಕರ್ಮಚಕ್ರದಿಂದ ಪ್ರಸರಿಸಲ್ಪಡುವ ಕರ್ಮ ಕಿರಣಗಳಿಗೆ ಗುಣಗಳು ವಿಜೃಂಭಿಸುತ್ತಿರುತ್ತವೆ. ಗುಣಗಳ ಮಧ್ಯದಲ್ಲಿರುವ ಜೀವಿಯು ಆ ಗುಣಗಳಿಗೆ ಒಳಗಾಗುತ್ತಿರುತ್ತಾನೆ.

ಗುಣಭಾಗಗಳನ್ನು ಲೋಕಗಳಾಗಿ ಬ್ರಹ್ಮವಿದ್ಯೆಯಲ್ಲಿ ವರ್ಣಿಸಿದ್ದಾರೆ. ಮುಲ್ಲೋಕಗಳಾದ ಮೂರು ಗುಣಗಳು ಕರ್ಮಚಕ್ರದ ಕೆಳಗೇ ಇವೆ. ಕರ್ಮವನ್ನನುಸರಿಸಿ ವಿಜೃಂಭಿಸುತ್ತಿವೆ. ಆದ್ದರಿಂದ ಕರ್ಮವನ್ನು ಎಲೆಯಾಗಿ ಹೋಲಿಸಿ, ಗುಣಗಳನ್ನು ಲೋಕಗಳಾಗಿ ಹೋಲಿಸಿ ಎಲೆಮರೆಯಲ್ಲಿ ಇರುವವೆಲ್ಲ ಲೋಕಗಳು ಎಂದಿದ್ದಾರೆ. ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳಿಗೆ ಮಧ್ಯ ಆಧಾರದಂತೆ ಬ್ರಹ್ಮನಾಡಿಯಲ್ಲಿ ಆತ್ಮ ಇದೆ. ಈ ನಾಲ್ಕು ಚಕ್ರಗಳಿಗೆ ಆತ್ಮ ಆಧಾರವಾಗಿ ಇದೆ. ಆತ್ಮಶಕ್ತಿಯಿಂದಲೇ ಎಲ್ಲ ಚಕ್ರಗಳು ತಿರುಗುತ್ತಿವೆ. ಕಣ್ಣಿಗೆ ಕಾಣಿಸದ ಬ್ರಹ್ಮನಾಡಿಯಲ್ಲಿನ ಆತ್ಮವನ್ನು ಕೊಂಬೆಯಾಗಿ ಹೋಲಿಸಿ ಅದನ್ನು ಆಧಾರ ಮಾಡಿಕೊಂಡ ಚಕ್ರಗಳನ್ನು ಎಲೆಗಳಾಗಿ ಹೋಲಿಸುವುದಾಗಿದೆ. ಕೊಂಬೆಯಾಗಿ ಹೋಲಿಸಿದ ಬ್ರಹ್ಮನಾಡಿ ಮಧ್ಯದಲ್ಲಿನ ಆತ್ಮ ಕಾಣಿಸುವುದಿಲ್ಲ. ಆದ್ದರಿಂದ ಕೊಂಬೆ ಕಾಣಿಸುವುದಿಲ್ಲ ಬ್ರಹ್ಮಗಾದರೂ ಎಂದಿದ್ದಾರೆ. ಕಾಣಿಸದ ಆತ್ಮವನ್ನು ಯೋಗದಿಂದ ಹೊಂದಿ

ದವನು ಕರ್ಮರಹಿತನಾಗಿ ಪರಮಾತ್ಮನಲ್ಲಿ ಐಕ್ಯವಾಗುತ್ತಾನೆ. ಅಂತಹವನು ಪ್ರಶಂಸನೀಯನು. ಆದ್ದರಿಂದ ಕೊಂಬೆ ಕಾಣಿಸಿದರೆ ಕೊಂಡಾಡಬಹುದು ಎಂದಿದ್ದಾರೆ.

| | |
|---|---|
| **ವಾಡು ವಾಡು ವಾಡು ವಾನಿಲೋಪಲ നുండు** | **ಅವನು ಅವನು ಅವನು ಅವನೊಳಗಿರುವ** |
| **ವಾಡು ವಾಡು ವಾಡು ವಾಡುಗಾಡು** | **ಅವನು ಅವನು ಅವನು ಅವನಲ್ಲ** |
| **ವಾರಿ ವಾನಿ ಗೂರ್ಚಿ ವಾಡೆಪೋ ಬ್ರಹ್ಮಂಬು** | **ಅವರ ಅವನ ಬೆರೆಯೆ ಅವನೆ ಹೋಗು ಬ್ರಹ್ಮ** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (25)** |

**ಭಾವಾರ್ಥ :–** ಶರೀರದಲ್ಲಿ ಗುಣಚಕ್ರದಲ್ಲಿ ಮೂರು ಭಾಗಗಳು ಇವೆ. 1. ತಾಮಸ 2. ರಾಜಸ 3. ಸಾತ್ತ್ವಿಕ ಈ ಗುಣ ಭಾಗಗಳಲ್ಲಿ ಜೀವಿಯು ನಿವಾಸಿಸುತ್ತಾ ಇರುತ್ತಾನೆ. ಯಾವ ಗುಣಭಾಗದಲ್ಲಿ ಹೆಚ್ಚು ಕಾಲ ಜೀವಿಯು ಇರುತ್ತಾನೋ ಆ ಗುಣವೊಂದರ ಹೆಸರೊಂದಿಗೆ ಅವನು ಕರೆಯಲ್ಪಡುತ್ತಾನೆ. ತಾಮಸನೆಂದು, ರಾಜಸನೆಂದು, ಸಾತ್ತ್ವಿಕನೆಂದು ಎನ್ನುವುದು ಸಹಜವಾಗಿ ಇದೆ. ಇವರು ಮುವ್ವರಿಗೂ ಅತೀತನಾಗಿ ಆತ್ಮ ಇದೆ. ಗುಣಚಕ್ರಕ್ಕೆ ಮಧ್ಯದಲ್ಲಿರುವ ಆತ್ಮ ಸರ್ವಜೀವಿಗಳಿಗು, ಗುಣಗಳಿಗು ಸಾಕ್ಷಿಯಾಗಿ ಇದೆ. ಮಧ್ಯದಲ್ಲಿರುವ ಆತ್ಮದೊಳಗೆ ಜೀವಾತ್ಮ ಸೇರಿದರೆ ಆತ್ಮದಲ್ಲೈಕ್ಯವಾಗುತ್ತದೆ. ಆಗ ತಾಮಸನೆಂದು, ರಾಜಸನೆಂದು, ಸಾತ್ತ್ವಿಕನೆಂದು ಕರೆಯಲ್ಪಡುವುದಿಲ್ಲ. ಗುಣಗಳಲ್ಲಿ ಇದ್ದಾಗಲೇ ಗುಣಸ್ಥನಾಗುತ್ತಾನೆ. ಗುಣಗಳಲ್ಲಿ ಇರುವಾಗಲೇ ಆತ್ಮದೊಂದಿಗೆ ಸಂಬಂಧ ಇಲ್ಲದವನಾಗಿ ಗುಣಗಳ ಹೆಸರುಗಳಿಂದ ಕರೆಯಲ್ಪಡುತ್ತಿದ್ದಾನೆ. ತಾಮಸನಾಗಲೀ, ರಾಜಸನಾಗಲೀ, ಸಾತ್ತ್ವಿಕನಾಗಲಿ ಆತ್ಮನಲ್ಲ. ಆತ್ಮ ಬೇರೆ ಜೀವಿಯು ಬೇರೆಯಾಗಿ ಇರುತ್ತಾನೆ. ಆದ್ದರಿಂದ ಅವನು (ತಾಮಸನು) ಅವನು (ರಾಜಸನು) ಅವನು (ಸಾತ್ತ್ವಿಕನು) ಅವನಲ್ಲ (ಆತ್ಮ) ಎಂದಿದ್ದಾರೆ.

ಸೂರ್ಯನು ಆಕಾಶದಲ್ಲಿದ್ದರೂ ಅದರ ಪ್ರಕಾಶವು ಪ್ರಪಂಚವೆಲ್ಲಾ ವ್ಯಾಪಿಸಿದಂತೆ, ಆತ್ಮ ಮೂರು ಗುಣಗಳಿಗೆ ಆಚೆ ಇದ್ದರೂ ಅದರ ಪ್ರಕಾಶ

(ಶಕ್ತಿ) ಮೂರು ಗುಣಭಾಗಗಳಲ್ಲೆ ವ್ಯಾಪಿಸಿರುತ್ತದೆ. ಯಾವ ಗುಣದಲ್ಲಿರುವ ಜೀವಿಯಾದರೂ ಆತ್ಮಶಕ್ತಿಯಲ್ಲಿ ಲೀನವಾಗಿರುವವನೇ ಆಗುವನು. ಆದ್ದರಿಂದ ಅವನು ಅವನು ಅವನು ಅವನೊಳಗೆ ಇರುವವನೆಂದಿದ್ದಾರೆ.

ಯಾವ ಜೀವಿಯಾದರೇ ಮೂರು ಗುಣಭಾಗಗಳನ್ನು ಬಿಟ್ಟು ಮಧ್ಯದಲ್ಲಿ ಸೇರಿಹೋಗುವನೋ ಅವನೇ ಆತ್ಮ ಆಗುವನು, ನಂತರ ಪರಮಾತ್ಮ ಆಗುವನು. ತಾಮಸ, ರಾಜಸ, ಸಾತ್ತ್ವಿಕನೆನ್ನುವ ಹೆಸರುಗಳನ್ನು ಬಿಟ್ಟು ಆತ್ಮ ಹೆಸರು ಹೊಂದಿದವನು ದೇವರಾಗುವನು ಆದ್ದರಿಂದ ಅವರ ಅವನ ಕುರಿತು ಅವನೇ ಬ್ರಹ್ಮ ಎಂದಿದ್ದಾರೆ.

| | |
|---|---|
| **ಮೊದಲ ಮಾನು ಯಗುನು ತುದ ಪಕ್ಷಿಯುನುಗಾದು** | **ಮೊದಲು ಮರವಾಗಿದೆ ತುದಿಗೆ ಪಕ್ಷಿಯು ಅಲ್ಲ** |
| **ನೋರುಲೇದು ಪಂಡ್ಲು ಯಾರು ಗಲವು** | **ಬಾಯಿ ಇಲ್ಲ ಹಲ್ಲು ಆರಿವೆ** |
| **ಜೀವಿ ಯೊಕಟಿ ಲೇದು ಜೀವುಲು ಜಂಪುರಾ** | **ಜೀವಿವೊಂದೆ ಇಲ್ಲ ಜೀವಿಗಳ ಕೊಲ್ಲುವುದು** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಮ ಕೇಳು ವೇಮಾ. (26)** |

**ಭಾವಾರ್ಥ :–** ಮರ ಎಷ್ಟೋ ವಿಶಾಲವಾಗಿ ಕೊಂಬೆಗಳು ವ್ಯಾಪಿಸಿರುವುದಾಗಿ ಎಲೆಗಳು, ಹೂಗಳು, ಕಾಯಿಗಳು ಇರುವುದಾಗಿ ಇರುತ್ತದೆ. ಕೊಂಬೆಗಳು, ಎಲೆಗಳು, ಹೂವು, ಕಾಯಿಗಳು ಎಲ್ಲವೂ ಗಿಡಕ್ಕೆ ಅಂಟಿಕೊಂಡಿರುವವೇ. ಪಕ್ಷಿ ಮರದ ಕೊಂಬೆ ಮೇಲೆ ಕುಳಿತುಕೊಂಡರೂ ಮರಕ್ಕೆ ಸಂಬಂಧವಿಲ್ಲ. ಪಕ್ಷಿ ಮರವನ್ನು ಬಿಟ್ಟು ಹೊರಟು ಹೋಗುತ್ತದೆ.

ಕರ್ಮ ಎನ್ನುವುದು ಒಂದು ವೃಕ್ಷದಂತೆ ಇದೆ. ಅದರಲ್ಲಿ ಎಷ್ಟೋ ವಿಧಗಳ ಪಾಪಪುಣ್ಯಗಳು ಇವೆ. ಎಲೆಗಳು, ಕೊಂಬೆಗಳು ಮರದಲ್ಲಿನ ಭಾಗಗಳಾದಂತೆ ವಿಧವಿಧಗಳ ಪಾಪಪುಣ್ಯಗಳು ಕರ್ಮದಲ್ಲಿನ ಭಾಗಗಳು. ಇರುವ ಪ್ರತಿ ಕರ್ಮವನ್ನು ಜೀವಿಯು ಅನುಭವಿಸಬೇಕಾಗಿರುತ್ತದೆ. ಯಾವೊಂದು ಕರ್ಮ ಕೂಡ ಅನುಭವಕ್ಕೆ ಬಾರದಂತೆ ಇರುವುದಿಲ್ಲ. ಅನುಭವಿಸದೆ ಹೋಗುವ ಕರ್ಮ ಇಲ್ಲ. ಆದ್ದರಿಂದ ಕರ್ಮವನ್ನು ಮರವಾಗಿ ಹೋಲಿಸಿ ಯಾವ

ಕರ್ಮವಾದರೂ ಗಿಡದಲ್ಲಿನ ಭಾಗವೇ ಹೊರತು ಸಂಬಂಧ ಇಲ್ಲದಿರುವುದು ಅಲ್ಲವೆಂದು ಕೊನೆಗೆ ಪಕ್ಷಿಯೂ ಅಲ್ಲ ಎಂದಿದ್ದಾರೆ.

ಕರ್ಮ, ಗುಣಚಕ್ರದಲ್ಲಿನ ಕಾಮ, ಕ್ರೋಧ, ಲೋಭ, ಮೋಹ, ಮಧ, ಮಾತ್ಸರ್ಯಗಳೆನ್ನುವ ಆರು ಗುಣಗಳನ್ನು ಪ್ರೇರೇಪಿಸಿ ಜೀವಿಯನ್ನು ಹಿಂಸಿಸುತ್ತಿರುತ್ತದೆ. ಕರ್ಮ ಕಾಣಿಸುವುದು ಅಲ್ಲ. ಆದರೂ ಗುಣಗಳ ಪ್ರಭಾವಗಳನ್ನು ಮಾತ್ರ ಎಲ್ಲರೂ ತಿಳಿದುಕೊಳ್ಳಬಹುದು. ಆದ್ದರಿಂದ ಕಾಣಿಸದ ಕರ್ಮವನ್ನು ಬಾಯಿಗೆ ಹೋಲಿಸಿ, ಆರು ಗುಣಗಳನ್ನು ದಂತಗಳಿಗೆ ಹೋಲಿಸಿ ಬಾಯಿ ಇಲ್ಲ ಹಲ್ಲು ಆರು ಇವೆ ಎಂದಿದ್ದಾರೆ.

ಕರ್ಮ ಸ್ವಯಂಶಕ್ತಿ ಅಲ್ಲ. ಆತ್ಮಚೈತನ್ಯದಿಂದಲೇ ಕೆಲಸ ಮಾಡುತ್ತಿರುತ್ತದೆ. ಎಲ್ಲ ಜೀವಿಗಳಲ್ಲಿರುವ ಕರ್ಮ ಆತ್ಮ ಚೈತನ್ಯದಿಂದಲೇ ಕೆಲಸ ಮಾಡುತ್ತಾ ಸಕಲ ಜೀವಿಗಳ ಸಾವು ಹುಟ್ಟುಗಳಿಗೆ ಕಾರಣವಾಗಿದೆ. ಸ್ವಯಂಶಕ್ತಿ ಇಲ್ಲ. ಆದ್ದರಿಂದ ಜೀವವೊಂದು ಇಲ್ಲ ಎಂದಿದ್ದಾರೆ. ಎಲ್ಲ ಜೀವಿಗಳ ಸಾವುಗಳಿಗು ಕಾರಣವಾದುದು ಕರ್ಮವೇ ಆದ್ದರಿಂದ ಜೀವಿಗಳನ್ನು ಸಾಯಿಸು ಎಂದಿದ್ದಾರೆ.

**ಉರ್ವಿವಾರಿನೆಲ್ಲ ನೊಕ್ಕ ಕಂಚಮು ಬೆಟ್ಟಿ**
**ಪೊತ್ತು ಗುಡಿಪಿ ಕುಲಮು ಪೊಲಿಯಜೇಸಿ**
**ತಲನು ಚೆಯ್ಯಿಪೆಟ್ಟಿ ತಗನಮ್ಮ ಜೆಪ್ಪರಾ**
**ವಿಶ್ವದಾಭಿರಾಮ ವಿನುರ ವೇಮಾ.**

**ಭೂಮಿಯ ಮಂದಿಗೆಲ್ಲ ಒಂದೆ ತಟ್ಟೆಯನ್ನಿಟ್ಟು**
**ಸಹ ಭೋಜನವ ನಡಿಸಿ ಕುಲವ ನಾಶಗೊಳಿಸಿ**
**ತಲೆಯ ಮೇಲ್ ಕೈಯಿಟ್ಟು, ನಂಬುವಂದದರಿ ಪೇಳ್**
**ವಿಶ್ವದಾಭಿರಾಮ ಕೇಳು ವೇಮಾ.** (27)

**ಭಾವಾರ್ಥ :–** ಪ್ರಪಂಚ ಜನರೆಲ್ಲರಿಗೂ ಶರೀರದಲ್ಲಿ ಇಂದ್ರಿಯ ಭಾಗಗಳು ಎಲ್ಲವು ಆತ್ಮಶಕ್ತಿಯಿಂದಲೇ ಕೆಲಸ ಮಾಡುತ್ತಿವೆ. ಪ್ರತಿ ಅವಯವಕ್ಕೂ ಶಕ್ತಿ ಅವಶ್ಯ. ಶಕ್ತಿ ಇಲ್ಲದ ಯಾವ ಅವಯವವು ಕೆಲಸ ಮಾಡುವುದಿಲ್ಲ. ಪ್ರಪಂಚ ಜೀವರಾಶಿಗಳೆಲ್ಲರಲ್ಲಿ ಒಂದೇ ಆತ್ಮ ನಿವಾಸವಾಗಿದ್ದು ಶಕ್ತಿ ಕೊಡುತ್ತಿದೆ. ಕಾದ ಕಬ್ಬಿಣದ ತುಣುಕುಗಳು ಯಾವಾದರೂ ಅವುಗಳಲ್ಲಿ ಒಳಗಿರುವ ಅಗ್ನಿ ಒಂದೇ

ಇದೆ. ಆ ವಿಧವಾಗಿ ಶರೀರಗಳು ಯಾವಾದರೂ ಅವುಗಳಲ್ಲಿರುವ ಆತ್ಮ ಒಂದೇ ಇದೆ. ಆದ್ದರಿಂದ ಜೀವರಾಶಿಗಳನ್ನೆಲ್ಲ ಒಂದು ಗಂಗಳ ಇಟ್ಟು ಎಂದಿದ್ದಾರೆ. ಊರಿನವರೆಂದರೆ ಪ್ರಪಂಚ ಜೀವರಾಶಿಗಳೆಂದು ಅರ್ಥ. ಜೀವರಾಶಿಗಳೆಲ್ಲವೂ ಒಂದೇ ಆತ್ಮಶಕ್ತಿಯನ್ನು ಬಳಸಿಕೊಳ್ಳುತ್ತಿವೆ ಆದ್ದರಿಂದ ಒಂದು ಗಂಗಳವನ್ನಿಟ್ಟು (ತಟ್ಟೆ) ಹೊತ್ತು ಕಳೆದು ಎಂದಿದ್ದಾರೆ.

ಒಂದೊಂದು ವಿಧದ ಕೆಲಸ ಮಾಡುವವರನ್ನು ಒಂದೊಂದು ವಿಧ ಕುಲವಾಗಿ ವರ್ಣಿಸುವುದು ಲೋಕ ಸಹಜವಾಗಿ ಇದೆ. ಯಾವ ವಿಧ ಕೆಲಸ ಮಾಡಿದರೆ ಆ ಕೆಲಸಕ್ಕೆ ಉಪಯೋಗಪಡುವ ಶಕ್ತಿ ಒಂದೇ. ಆದ್ದರಿಂದ ಕುಲವಿಲ್ಲವೆಂದು ಸರ್ವ ಮಾನವರು ಸಮಾನವೇಯೆಂದು ತಿಳಿದ ಹಿರಿಯರು ಹೇಳುತ್ತಿರುವರು. ಆದ್ದರಿಂದ ಕುಲ ಹೋಲಿಕೆ ಮಾಡಿ ಎಂದು ಮೇಲಿನ ಪದ್ಯದಲ್ಲಿ ಹೇಳಿದ್ದಾರೆ. ಸರ್ವ ಮಾನವರ ಶರೀರಗಳಿಗೆ ಉಪಯೋಗಪಡುವ ಶಕ್ತಿ ಶರೀರ ಮೇಲಿನ ಭಾಗವಾದ ತಲೆಯಲ್ಲೇ ನಿವಾಸವಾಗಿದೆ. ಅದನ್ನು ತಿಳಿಯಬೇಕು, ಸರ್ವಜೀವಿಗಳಿಗು ಒಂದೇ ಆಧಾರವಾಗಿ, ಎಲ್ಲದರಲ್ಲಿ ಸಮಾನವಾಗಿ ನಿವಾಸವಿರುವ ಯಾವ ಮಾತ್ರ ಬೇಧವಿಲ್ಲದ ಆತ್ಮವನ್ನು ಸೇರಬೇಕೆಂದು ತಿಳಿಸುತ್ತಾ, ಆ ಶಕ್ತಿ ತಲೆಯಲ್ಲೇ ಇದೆಯೆಂದು ತಿಳಿಯುವಂತೆ ತಲೆಯ ಮೇಲೆ ಕೈ ಇಟ್ಟು ತಕ್ಕ ನಂಬಿಕೆ ಹೇಳೋ ಎಂದು ವೇಮನ ಹೇಳಿದ್ದಾನೆ.

| | |
|---|---|
| **ಆಲಿವಂಕ ವಾರು ಆತ್ಮಬಂಧುವುಲ್ಯೆರಿ** | **ಸತಿಯ ಕಡೆಯ ಜನರು ಆತ್ಮಬಂಧುಗಳಾದ್ರು** |
| **ತಲ್ಲಿವಂಕ ವಾರು ತಗಿನ ಪಾಟಿ** | **ತಾಯಿ ಕಡೆಯ ಜನರು ತಮಗೆ ಸಮರು** |
| **ತಂಡ್ರಿವಂಕ ವಾರು ದಾಯಾದಿ ಪಗವಾರು** | **ತಂದೆಕಡೆಯ ಜನರು ದಾಯಾದಿ ಹಗೆಯವರು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (28)** |

**ಭಾವಾರ್ಥ :–** ನಮ್ಮ ಶರೀರದಲ್ಲಿನ ಮನಸ್ಸು ಎಷ್ಟೋ ವಿಷಯ ಸಂಕಲ್ಪಗಳು ಮಾಡುತ್ತಿರುತ್ತದೆ. ಮನೋಸಂಬಂಧವಾದ ವಿಷಯಸುಖಗಳೇ ಆನಂದವನ್ನು

ಉಂಟುಮಾಡುವವಾಗಿ ಅವುಗಳ ಮೇಲೆಯೇ, ಬಿಡದೆ ಅಂಟಿಕೊಂಡಿರುವವರು ಬಹಳ ಮಂದಿ ಇದ್ದಾರೆ. ಆದ್ದರಿಂದ ಮನಸ್ಸನ್ನು ಹೆಂಡತಿಗೆ ಹೋಲಿಸಿ, ಮನೋಸಂಬಂಧ ವಿಷಯಗಳನ್ನು ಪ್ರಿಯವಾದ ಬಂಧುಗಳಾಗಿ ಹೋಲಿಸಿ ಹೆಂಡತಿಕಡೆಯವರು ಆತ್ಮಬಂಧುಗಳೆಂದರು.

ಪಂಚಭೂತ ನಿರ್ಮಿತವಾದ ಶರೀರದ ಮೇಲೆಯೇ ಧ್ಯಾಸ ಹೊಂದಿ ಸುಂದರವಾಗಿ ಕಾಣಿಸುವಂತೆ ಅಲಂಕರಿಸಿಕೊಳ್ಳುತ್ತಾ ಎಷ್ಟೋ ಆಪ್ಯಾಯತೆಯಿಂದ ಶರೀರವೇ ತಾನಾಗಿ ತಿಳಿದು ಇರುವವರು ಇದ್ದಾರೆ. ಆದ್ದರಿಂದ ಪಂಚಭೂತ ಗಳಾದ ಪ್ರಕೃತಿಯನ್ನು ತಾಯಿಯಾಗಿ ಹೇಳಿ, ಅದರ ಸಂಬಂಧವಾದ ಶರೀರವನ್ನು ತಕ್ಕವರಾಗಿ ಹೇಳುತ್ತಾ ತಾಯಿಯಕಡೆಯವರು ತಕ್ಕವರು ಎಂದಿದ್ದಾರೆ.

ಸಕಲ ಜೀವಿಗಳಿಗು ತಾಯಿ ಪ್ರಕೃತಿಯಾದಾಗ, ತಂದೆ ಪರಮಾತ್ಮ ಎಂದು ತಿಳಿಸಿದ್ದೇವೆ. ಮಾನವನು ಸ್ಥೂಲಶರೀರ ಮತ್ತು ಅದರ ಅಂತರ್ಗತದಲ್ಲಿ ಇರುವ ಮನೋ ಧ್ಯಾಸಗಳಲ್ಲಿ ಇದ್ದು ಆತ್ಮಜ್ಞಾನ ಯಾವ ಮಾತ್ರ ತಿಳಿಯದೆ ಆತ್ಮ ಪರಮಾತ್ಮರ ಧ್ಯಾಸ ಪೂರ್ತಿಯಾಗಿ ಮರೆತವನಾಗಿ ಇದ್ದಾನೆ. ಆದ್ದರಿಂದ ಪರಮಾತ್ಮನನ್ನು ತಂದೆಯಾಗಿ ಹೇಳುತ್ತಾ ಪರಮಾತ್ಮ ಸಂಬಂಧ ವಿಷಯಗಳು ತಿಳಿಯದವರಿದ್ದಾರೆಂದು ವರ್ಣಿಸಿದ್ದಾರೆ. ಚಿಕ್ಕಂದಿನಿಂದ ಜೊತೆ ಇರುವವರನ್ನು ಮರೆತು ಮಧ್ಯದಲ್ಲಿ ಬಂದ ಹೆಂಡತಿಯೊಂದಿಗೆ ಹೆಚ್ಚಿನ ಸಂಬಂಧ ಇಟ್ಟು ಕೊಳ್ಳುವಂತೆ ಶಿಶುದಶೆಯಲ್ಲಿಂದ ಬೆರೆತಿರುವ ಆತ್ಮ ಪರಮಾತ್ಮರನ್ನು ನೆನೆಯದೆ ಮಧ್ಯದಲ್ಲಿ ಬಂದ ಮನೋ ಗುಣಗಳಲ್ಲಿ ಮಾನವನು ಸಿಲುಕಿಕೊಳ್ಳುತ್ತಿದ್ದಾನೆ. ತನಗೆ ಸರಿಹೋಗದ ದಾಯಾದಿಗಳೊಂದಿಗೆ ಸ್ನೇಹ ಮಾಡಿದವನನ್ನು ಸಹ ಶತ್ರುವಿನಂತೆ ನೋಡಿಕೊಂಡಹಾಗೆ, ಈ ಕಾಲದಲ್ಲಿ ಆತ್ಮ ಸಂಬಂಧವಾದ ಜ್ಞಾನ ಹೊಂದಿದವರನ್ನು, ತಿಳಿಯದ ಅಜ್ಞಾನಿಗಳು ಬುದ್ಧಿ ಇಲ್ಲದವರೊಂದಿಗೆ ಜಮಕಟ್ಟಿ ತಮಗಿಂತ ಕಡಿಮೆಯಾಗಿ, ಶತ್ರುತ್ವವಾಗಿ ನೋಡಿಕೊಳ್ಳುತ್ತಿದ್ದಾರೆ.

| | |
|---|---|
| **ಇಂಟಿಯಾಲ ವಿಡಚಿ ಇಲ ಜಾರಕಾಂತಲ** | **ಮನೆಯ ಸತಿಯ ತೊರೆದು ಮಹಿಯೊಳು ಜಾರೆಯರ** |
| **ವೆಂಟ ತಿರುಗುವಾಡು ವೆರ್ರಿವಾಡು** | **ಹಿಂದೆ ತಿರುಗೊ ನರನು ಮೂಢನವನು** |
| **ಪಂಟಚೇನು ವಿಡಚಿ ಪರಿಗೆ ಏರಿನಯಟ್ಲು** | **ಫಸಲು ಹೊಲವ ತೊರೆದು ಬೀಳು ಹೊಲ** |
| **ವಿಶ್ವದಾಭಿರಾಮ ವಿನುರ ವೇಮಾ.** | **ಆರಿಸಿದಂತೆ** |
| | **ವಿಶ್ವದಾಭಿರಾಮ ಕೇಳು ವೇಮಾ. (29)** |

**ಭಾವಾರ್ಥ :–** ಕೆಲವರಿಗೆ ಮನೆ ಹೆಂಡತಿಗಿಂತ ಹೊರಗಿನ ಸ್ತ್ರೀಯರು ಬಹಳ ಸುಂದರವಾಗಿ ಕಾಣಿಸುತ್ತಿರುತ್ತಾರೆ. ಹೆಂಡತಿ ಹೊರಗಿನ ಸ್ತ್ರೀಯರಿಗಿಂತ ಅಂದವಾಗಿದ್ದರೂ, ಪ್ರತಿದಿನ ಹತ್ತಿರವಾಗಿ ನೋಡಿನೋಡಿ ಮನೆ ಹೆಂಡತಿ ದೆವ್ವವಾದಳೆಂದಂತೆ ಅಂದ ಹೀನವಾಗಿ ತೋಚುತ್ತಿರುತ್ತದೆ. ಹೊರಗಿನ ಜಾರ ಸ್ತ್ರೀಯರು ಪುರುಷರನ್ನು ಆಕರ್ಷಿಸಬೇಕೆನ್ನುವ ಉದ್ದೇಶದಿಂದ ಅಲಂಕರಿಸಿ ಕೊಂಡು ಕಣ್ಣಿಗೆ ಇಂಪಾಗಿ ಇರುವಂತೆ ಕಾಣಿಸುತ್ತಿರುವರು. ಅವರ ಮೇಲಿನ ಆಡಂಭರಗಳಿಗೆ ಪುರುಷರು ಬುಟ್ಟಿಯಲ್ಲಿ ಬಿದ್ದುಹೋಗುತ್ತಿರುತ್ತಾರೆ.

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾ ತ್ಸ್ವನುಷ್ಠಿತಾತ್**
**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ**

ಭಗವದ್ಗೀತೆಯಲ್ಲಿ ಸ್ವಧರ್ಮ, ಪರಧರ್ಮವೆಂದು ಹೇಳಿದಂತೆ ಆತ್ಮ ಸಂಬಂಧವಾದವುಗಳೆಲ್ಲಾ ಸ್ವಧರ್ಮಗಳು, ಪ್ರಪಂಚಕ್ಕೆ ಸಂಬಂಧಿಸಿದ ಧರ್ಮ ಗಳೆಲ್ಲವೂ ಪರಧರ್ಮಗಳು. ಎಲ್ಲವೇಳೆಯಲ್ಲೂ ತನ್ನ ಶರೀರದಲ್ಲಿ ನಿವಾಸವಿರುವ ಆತ್ಮ ವಿಷಯಗಳನ್ನು ಬಿಟ್ಟು ಪ್ರಪಂಚ ಸುಖಗಳಿಗೆ ಮರಳಾದವರಿದ್ದಾರೆ. ಬೆಳಗ್ಗೆ ಎದ್ದಾಗಿನಿಂದ ಪ್ರಪಂಚ ವಿಷಯಗಳಲ್ಲಿ ಮುಳುಗಿದವರಿಗೆ ಕೊನೆಗೆ ಅವುಗಳಲ್ಲಿ ಬಾಧೆಗಳೇ ಹೊರತು ಶಾಂತಿ ಮಾತ್ರ ಲಭಿಸುವುದಿಲ್ಲ. ಪ್ರಪಂಚ ಸುಖಗಳಲ್ಲಿ ಮುಳುಗುವವರು, ತೀಟೆರೋಗಿ ನವೆಗೆ ಕೆರೆಯುವಾಗ ಸುಖವಾಗಿ ಇದ್ದು ನಂತರ ಉರಿ ಹೆಚ್ಚಾದಂತೆ ವಿಷಯಗಳಿಂದ ಕರ್ಮಗಳು ಉಂಟಾಗಿ ಆತ್ಮಶಾಂತಿ ಲಭಿಸದೆ ಕೊನೆದಶೆಯಲ್ಲಿ ರೋಗಗಳಿಗೆ ಎಷ್ಟು ಹಣವಾದರೂ ಖರ್ಚು ಮಾಡುತ್ತಾ

ಮೃತ್ಯುವಿಗೆ ಭಯಪಡುವ ಅವರನ್ನು ನೋಡಿ ಜ್ಞಾನಿಗಳು ಹುಚ್ಚರಂತೆ ಲೆಕ್ಕಿಸುತ್ತಾರೆ. ಆತ್ಮ ವಿಷಯಗಳನ್ನು ಬಿಟ್ಟು ಪ್ರಪಂಚ ವಿಷಯಗಳಲ್ಲಿ ತಿರುಗುವವರನ್ನು ಮನೆ ಹೆಂಡತಿ ಬಿಟ್ಟು ಜಾರಕಾಂತರ ಹಿಂದೆ ತಿರುಗುವವನು ಹುಚ್ಚನೆಂದಿದ್ದಾರೆ. ಪ್ರಪಂಚ ವಿಷಯಗಳಲ್ಲಿ ಸುಖವಿಲ್ಲ. ಆದ್ದರಿಂದ ಯಾವಾಗಲೂ ಶಾಂತಿಕೊಡುವ ಆತ್ಮಜ್ಞಾನವಿಲ್ಲದವರನ್ನು ಫಸಲು ಹೊಲ ಬಿಟ್ಟು ಬೀಳು ಹೊಲ ಆರಿಸಿದಂತೆ ಎಂದು ಹೇಳಿದ್ದಾರೆ.

| | |
|---|---|
| **ಚೆಪ್ಪುಲೋನಿ ರಾಯಿ ಚೆವಿಲೋನಿ ಜೋರೀಗ** | **ಕೆರದೊಳಗಿನ ಕಲ್ಲು ಕಿವಿಯೊಳಗೆ ತೊಣಚಿ** |
| **ಕಂಟಿಲೋನಿ ನಲುಸು ಕಾಲಿಮುಲ್ಲು** | **ಕಣ್ಣಿನಲ್ಲಿ ದೂಳು ಕಾಲಮುಳ್ಳು** |
| **ಇಂಟಿಲೋನಿ ಪೋರು ಇಂತಿಂತಗಾದಯಾ** | **ಗೃಹದೊಳಗಿನ ಕಲಹ ಅಷ್ಟಿಷ್ಟಲ್ಲವಯ್ಯ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (30) |

**ಭಾವಾರ್ಥ :-** ಮಾನವನ ಶರೀರದೊಳಗೆ ಜೀವಿಯು ನಿವಾಸವಿದ್ದಾನೆ. ಒಳಗಿರುವ ಜೀವಿಗೆ ಹೊರಗಿನ ಇಂದ್ರಿಯಗಳ ಮೂಲಕ ಪ್ರಪಂಚ ವಿಷಯಗಳು ತಿಳಿಯುತ್ತಿವೆ. ಇಂದ್ರಿಯಗಳು ಮನಸ್ಸುನಿಂದ ಪ್ರತಿ ವಿಷಯವನ್ನು ಜೀವಿಗೆ ಸೇರಿಸುತ್ತಿವೆ. ಆ ವಿಧವಾಗಿ ವಿಷಯಗಳು ಸೇರಿಸುವ ಇಂದ್ರಿಯ ಭಾಗಗಳು ಐದು ಮಾತ್ರ ಇವೆ. ಅವುಗಳನ್ನೇ ಜ್ಞಾನೇಂದ್ರಿಯಗಳು ಎನ್ನುತ್ತಿದ್ದೇವೆ. ಅವು 1. ಕಣ್ಣು 2. ಕಿವಿ 3. ಮೂಗು 4. ನಾಲಿಗೆ 5. ಚರ್ಮ.

ಪಂಚ ಜ್ಞಾನೇಂದ್ರಿಯಗಳಿಂದ ಬರುವ ವಿಷಯಗಳನ್ನು ಅನುಭವಿಸುತ್ತಾ ಜೀವಿಯು ಎಡಬಿಡದೆ ಕರ್ಮಗಳನ್ನು ಅನುಭವಿಸುತ್ತಾ ಜೇನಿನಲ್ಲಿ ಸಿಲುಕಿಕೊಂಡ ನೊಣದಂತೆ ಒದ್ದಾಡುತ್ತಿದ್ದಾನೆ. ಪಂಚೇಂದ್ರಿಯಗಳ ವಿಷಯಗಳು ಸುಖವನ್ನು ತೋರಿಸಿ ಕಷ್ಟವನ್ನುಂಟುಮಾಡುವವು. ಜೀವಾತ್ಮ ಪಂಚೇಂದ್ರಿಯ ವಿಷಯ ವಾಸನೆಗಳಿಗೆ ಒಳಗಾಗಿ ಕರ್ಮಗಳನ್ನು ಸಂಪಾದಿಸಿಕೊಳ್ಳುತ್ತಿದ್ದಾನೆ.

ಚರ್ಮ ಸ್ಪರ್ಶದಿಂದ ಉಂಟಾಗುವ ಕರ್ಮವನ್ನು ಚೆಪ್ಪಲಿಯಲ್ಲಿನ ಕಲ್ಲು ಎಂದಿದ್ದಾರೆ. ಕಿವಿ ಶಬ್ದ ವಿಷಯದಿಂದ ಉಂಟಾಗುವ ಕರ್ಮವನ್ನು

ಕಿವಿಯಲ್ಲಿನ ಗುಂಗಾಡಿ ಎಂದಿದ್ದಾರೆ. ಕಣ್ಣಿನ ದೃಶ್ಯ ವಿಷಯಗಳಿಂದ ಉಂಟಾಗುವ ಕರ್ಮವನ್ನು ಕಣ್ಣಿನಲ್ಲಿನ ಧೂಳು ಎಂದಿದ್ದಾರೆ. ಇಂದ್ರಿಯ ವಿಷಯಗಳು ಮನಸ್ಸಿನಿಂದಲೇ ಅನುಭವಕ್ಕೆ ಬರುತ್ತವೆ. ಆದ್ದರಿಂದ ಮನಸ್ಸನ್ನು ಮುಳ್ಳಿನಂತೆ ವರ್ಣಿಸಿದ್ದಾರೆ. ಶರೀರದಲ್ಲಿ ಎಲ್ಲ ಇಂದ್ರಿಯಗಳ ವಿಷಯಗಳು ಅನುಭವಕ್ಕೆ ಬರುತ್ತಿವೆ. ಆದ್ದರಿಂದ ಶರೀರವನ್ನು ಮನೆಯಾಗಿ ಹೇಳಿ ಅನುಭವಗಳನ್ನು ಕಲಹಕ್ಕೆ ಹೋಲಿಸಿ ಮನೆಯಲ್ಲಿನ ಕಲಹ ಅಷ್ಟಿಷ್ಟಲ್ಲ ಎಂದಿದ್ದಾರೆ.

| | |
|---|---|
| **ಅಂಚ ಘನಾಕ್ಷರ ಬಿಂದುವು** | **ಅಂಚೆ ಘನಾಕ್ಷರ ಬಿಂದು** |
| **ಪಂಚಾಕ್ಷರಿನಾದ ಮಂಡ್ರು ಪರಮ ಮುನೀಂದ್ರುಲ್** | **ಪಂಚಾಕ್ಷರ ನಾದವೆಂದು ಪರಮ ಮುನೀಂದ್ರರ** |
| **ಪ್ರಾಂಚಿತಮುಗ ನದಿ ತೆಲಿಸಿನ** | **ಮಿಂಚುವ ಅದನ್ನೇ ತಿಳಿದೊಡೆ** |
| **ಮಂಚಾಸನ ಮೆಕ್ಕುವಾಡು ಮಹಿಲೋ ವೇಮಾ.** | **ಮಂಚಾಸನವೇರುತಿಹನು ಮಹಿಯಲಿ ವೇಮಾ.** |

**(31)**

**ಭಾವಾರ್ಥ :–** ಕ್ಷರವೆಂದರೆ ನಾಶವಾಗುವುದು. ಅಕ್ಷರವೆಂದರೆ ನಾಶವಿಲ್ಲದ್ದು. ನಾಶವಿಲ್ಲದ ಒಂದು ಅಂಶ ನಮ್ಮ ಶರೀರದಲ್ಲಿ ಒಂದು ಕೇಂದ್ರದಲ್ಲಿ ಇದೆ. ಆ ಅಂಶವನ್ನೇ ಆತ್ಮ ಎನ್ನುವುದು ನಡೆದಿದೆ. ನಮ್ಮ ಶರಿರ ಶಿರೋಭಾಗದಲ್ಲಿ ಒಂದು ಬಿಂದುವಿನಹತ್ತಿರ ಕೇಂದ್ರೀಕೃತವಾದ ಆತ್ಮವನ್ನು ಅಂಚ ಘನಾಕ್ಷರ ಬಿಂದುವೆಂದಿದ್ದಾರೆ. ಆತ್ಮ ನಾಶವಿಲ್ಲದ್ದು ಆದ್ದರಿಂದ ಘನಾಕ್ಷರ ಎನ್ನುವ ಪದವನ್ನು ಉಪಯೋಗಿಸಿದ್ದಾರೆ.

ಆತ್ಮ ಶಿರಸ್ಸಿನಲ್ಲಿ ಕೇಂದ್ರೀಕೃತವಾಗಿ ಶರೀರ ಭಾಗಗಳೆಲ್ಲವುಗಳಿಗು ಅದರ ಶಕ್ತಿ ಪ್ರಸರಿಸುತ್ತಿದೆ. ಅದರ ಶಕ್ತಿಯಿಂದಲೇ ನಮ್ಮ ಶರೀರದಲ್ಲಿ ಶ್ವಾಸ ಕದಲುತ್ತಿದೆ. ಆ ಶ್ವಾಸದಲ್ಲಿ ಒಂದು ನಾದ ಉದ್ಭವಿಸುತ್ತಿದೆ. ಅದು “ಸೋಹಂ” ಸೋ–ಹಂ ನಲ್ಲಿ “ಓಂ” ಕಾರ ಶಬ್ದ ಮಿಳಿತವಾಗಿದೆ. ಸೋ ಅಂತ್ಯದಲ್ಲಿ ಓ, ಹಂ ಅಂತ್ಯದಲ್ಲಿ ಮ್ ಇರುವುದರಿಂದ ಓಂಕಾರ ಶ್ವಾಸದಲ್ಲಿರುವ ಸೂಕ್ಷ್ಮಶಬ್ದ. ಪಂಚಾಕ್ಷರಿ ನಾದವೆಂದು, ಓಂಕಾರ ಶಬ್ದವನ್ನೇ ತಿಳಿದವರನ್ನುತ್ತಿರುತ್ತಾರೆ. ಪಂಚಾಕ್ಷರಿ ಎಂದರೆ

ಮೇಲಿನ ಭಾವದೊಂದಿಗೇ ನೋಡದೆ ವಿವರವಾಗಿ ಅದನ್ನು ತಿಳಿದವನು ಮೋಕ್ಷ ಹೊಂದುವನು. ವಿವರ ತಿಳಿಯುವುದೇನೆಂದರೆ!

ಓಂ ಕಾರ ಶ್ವಾಸದಲ್ಲಿ ಮಿಳಿತವಾಗಿದೆಯೆಂದು ಆ ಶ್ವಾಸ ಆತ್ಮಶಕ್ತಿಯಿಂದ ಶರೀರದಲ್ಲಿ ಚಲಿಸುತ್ತಿದೆಯೆಂದು, ಆತ್ಮ ಶರೀರದಲ್ಲಿ ಸರ್ವಕ್ಕೂ ಕಾರಣವಾಗಿರುವುದೆಂದು ತಿಳಿಯಬೇಕು. ಈ ಆತ್ಮ ಪಂಚಭೂತಗಳಿಗೆ ನಾಶವಾಗದಿರುವುದಾಗಿ, ಪಂಚಭೂತಗಳ ನಿರ್ಮಾಣವಾದ ಶರೀರದಲ್ಲಿ ಅತೀತವಾಗಿ ಇದೆ. ಪಂಚ ಭೂತಗಳು ನಾಶವಾಗಬಲ್ಲವು. ಪಂಚಭೂತಗಳು ಶರೀರಗಳನ್ನು ನಶಿಸುವಂತೆ ಮಾಡಬಲ್ಲವು. ಶರೀರದಲ್ಲಿರುವ ಆತ್ಮವನ್ನು ಪಂಚ ಭೂತಗಳು ನಾಶ ಮಾಡಲಾರವು. ಆದ್ದರಿಂದ ಪಂಚಕ್ಕೆ ನಾಶವಾಗದ ಆತ್ಮವನ್ನು ಪಂಚಾಕ್ಷರಿ ಎಂದು ಮುನಿಗಳು ಹೇಳುತ್ತಾರೆ. ಅದರ ಶಕ್ತಿಯಿಂದ ಉದ್ಭವಿಸುವ ಓಂಕಾರವನ್ನು ಪಂಚಾಕ್ಷರಿ ನಾದವೆನ್ನುತ್ತಾರೆ. ಪ್ರಕೃತಿಯಿಂದ ನಾಶವಾಗದ ಆತ್ಮವನ್ನು ತಿಳಿದವನು ಮೋಕ್ಷ ಹೊಂದುವನು. ಆದ್ದರಿಂದ ಪ್ರಾಂಚಿತವಾಗಿ ನದಿ ತಿಳಿಸಿದ ಮಂಚಾಸನ ಮುಗಿಯುವವನು ಮಹಿಯಲ್ಲಿ ವೇಮಾ ಎಂದು ವೇಮನಯೋಗಿ ವಿವರಿಸಿದ್ದಾನೆ.

| | |
|---|---|
| **ಅಂಟಿಯಂಟಕುಂಡ ನಮಲುನಿ ತೆರಗುನ** | **ಅಂಟಿ ಅಂಟದಂತೆ ಸೂರ್ಯನ ತರಹ ತೆರನಾಗಿ** |
| **ಮಿಂಟಿ ಮಂಟಿ ನಡುಮ ಮೆಲಗುದಾ ನಿ** | **ಆಕಾಶ ನೆಲ ನಡುವೆ ಪಳಗುವವನು** |
| **ನೊಂಟಿ ಸ್ತಂಭಮಂದು ಜಂಟಿಂಚಿ ಚೂಚುನು** | **ಒಂಟಿ ಕಂಭದಲ್ಲಿ ಒಂದು ಗೂಡಿ ನೋಡುವವನು** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (32) |

**ಭಾವಾರ್ಥ :–** ಆಕಾಶದಿಂದ ಭೂಮಿಯವರೆಗು ಎಲ್ಲಾ ಅಣುಅಣುವಿನಲ್ಲೂ ವ್ಯಾಪಿಸಿದವನು ಪರಮಾತ್ಮ. ಆ ಪರಮಾತ್ಮವೊಂದರ ಅಂಶವೇ ಆತ್ಮವಾಗಿದ್ದು ಸರ್ವಜೀವರಾಶಿಗಳ ಶರೀರದಲ್ಲಿ ನಿವಾಸವಾಗಿದೆ. ಪರಮಾತ್ಮ ಅಂಶವಾದ ಆತ್ಮ ಶರೀರದಲ್ಲಿ ಶಿರೋಭಾಗದಲ್ಲಿ ಸ್ಥಾನ ಇರುವುದಾಗಿ ತನ್ನ ಶಕ್ತಿಯನ್ನು ಬ್ರಹ್ಮನಾಡಿಯಲ್ಲಿ ಆರು ಕೇಂದ್ರಗಳಿಂದ ಶರೀರವೆಲ್ಲವೂ ವ್ಯಾಪಿಸುವಂತೆ ಮಾಡುತ್ತಿದೆ. ಆಕಾಶದಿಂದ ಭೂಮಿವರೆಗು ಅಣುವಣುವಿನಲ್ಲಿ ಎಲ್ಲೆಡೆ

ವ್ಯಾಪಿಸಿರುವ ಪರಮಾತ್ಮ ಅಂಶ ಆತ್ಮವಾದ್ದರಿಂದ, ಆಕಾಶ, ಭೂಮಿ ಮಧ್ಯೆ ಪಳಗುವುದು ಎಂದು ಪದ್ಯದಲ್ಲಿ ಹೇಳಿದ್ದಾರೆ.

ಶರೀರದಲ್ಲಿ ಬ್ರಹ್ಮನಾಡಿ ಶಿರೋಭಾಗದಿಂದ ಗುದಸ್ಥಾನದವರೆಗು ವ್ಯಾಪಿಸಿದೆ. ಅದರಲ್ಲೇ ಆತ್ಮ ಒಟ್ಟು ಏಳು ಕೇಂದ್ರಗಳಾಗಿ ಇದೆ. ಬ್ರಹ್ಮನಾಡಿಯೇ ಶರೀರವೆಲ್ಲದಕ್ಕೂ ಆಧಾರ. ಆದ್ದರಿಂದ ಬ್ರಹ್ಮನಾಡಿಯನ್ನು ಒಂಟಿಸ್ಥಂಭವೆಂದಿದ್ದಾರೆ. ಬ್ರಹ್ಮನಾಡಿಯಲ್ಲಿರುವ ಆತ್ಮ ತನ್ನ ಕಿರಣಗಳನ್ನು ಗುಣಗಳ ಮೇಲೆ ಪ್ರಸಾರ ಮಾಡಿದರೂ, ಗುಣಗಳು ಬ್ರಹ್ಮನಾಡಿಯಿಂದಲೇ ಪಯಣಿಸಿದರೂ ಅವುಗಳಿಗೆ ಅತೀತವಾಗಿ ಇದೆ. ಅವುಗಳ ಬಂಧ ಆತ್ಮಕ್ಕೆ ಇಲ್ಲ. ಆದ್ದರಿಂದ ಅಂಟಿ ಅಂಟದಿರುವ ಅಮಲನು ತರಹ ಎಂದಿದ್ದಾರೆ. ಅಮಲನು ಎಂದರೆ ತನ್ನ ಕಿರಣಗಳನ್ನು ಅಶುದ್ಧದ ಮೇಲೆ ಬಿದ್ದರೂ ಯಾವ ಮಾತ್ರ ಮಲಿನ ಅಂಟದ ಸೂರ್ಯನೆಂದು ಅರ್ಥ. ಸೂರ್ಯನಹಾಗೆ ಆತ್ಮ ಶರೀರದಲ್ಲಿ ಶಿರೋಭಾಗದಿಂದ ತನ್ನ ಕಿರಣಗಳಿಂದ ಶರೀರವೆಲ್ಲವೂ ಪ್ರಕಾಶಿಸುವಂತೆ ಮಾಡುತ್ತಿದೆ. ಅಂತಹ ಆತ್ಮವನ್ನು ನಮ್ಮ ಶರೀರದಲ್ಲಿ ಬ್ರಹ್ಮನಾಡಿಯಲ್ಲೇ ತಿಳಿದುಕೊಳ್ಳಬೇಕು. ಆದ್ದರಿಂದ ಒಂಟಿಸ್ಥಂಭದಲ್ಲಿ  ಜೋಡಿಸಿ ನೋಡುತ್ತದೆಂದಿ ದ್ದಾರೆ.

**ಎಲುಕ ತೋಲು ತೆಚ್ಚಿ ಎಂದಾಕನುದಿಕಿನ**
**ನಲುಪು ನಲುಪೇ ಕಾನಿ ತೆಲುಪು ಕಾದು**
**ಕೊಯ್ಯ ಬೊಮ್ಮದೆಚ್ಚಿ ಕೊಟ್ಟಿನ ಗುಣಿಯೌನೆ**
**ವಿಶ್ವದಾಭಿರಾಮ ವಿನುರ ವೇಮಾ.**

**ಇಲಿಯ ತೊಗಲು ತಂದು ವರುಷ ಪೂರ್ತಿ**
**ಒಗೆದರು**
**ಕಪ್ಪು ಕಪ್ಪೇ ಹೊರತು ಬಿಳುಪಾಗದು**
**ಮರದ ಗೊಂಬೆ ತಂದು ಬಡಿದರೆ ನುಡಿವುದೇ**
**ವಿಶ್ವದಾಭಿರಾಮ ಕೇಳು ವೇಮಾ.** (33)

**ಭಾವಾರ್ಥ :–** ಪ್ರಪಂಚ ವಿಷಯಗಳನ್ನು ಪೂರ್ತಿಯಾಗಿ ತಿಳಿದವನಾಗಿ ಇವುಗಳಿಂದ ಕರ್ಮವೇ ಉಂಟಾಗುತ್ತದೆಂದು ತಿಳಿದು ವಿಷಯವಾಸನೆಗಳನ್ನು ಪೂರ್ತಿಯಾಗಿ  ಜಯಿಸಿದವನನ್ನು ಯಾವ ವಿಷಯವೂ ಚಲಿಸುವಂತೆ ಮಾಡುವುದಿಲ್ಲ. ಮನಸ್ಸು ಅಂತರಾತ್ಮ ಜ್ಞಾಪಕದಲ್ಲಿ ಮಿಳಿತವಾಗಿ ಬಾಹ್ಯ ವಿಷಯ

ಜ್ಞಾಪಕದಲ್ಲಿ ಇಲ್ಲದಿರುವಾಗ ಯಾವ ವಿಷಯವೂ ಜೀವಿಯನ್ನು ಸೇರುವುದಿಲ್ಲ. ಆದ್ದರಿಂದ ಹೊರಗಿನ ವಿಷಯ ಒಳಗಿರುವ ಜೀವಾತ್ಮಗೆ ತಿಳಿಯುವುದಿಲ್ಲ. ಯೋಗದಲ್ಲಿ ನಿಂತವನು ಹೊರಗಿನ ವಿಷಯಗಳ ಸಂಬಂಧ ಇಲ್ಲದವನಾಗಿ ಇರುತ್ತಾನೆ. ಅಂತಹವನನ್ನು ಆಕಾರವಿದ್ದು ಯಾವ ಗುಣವಿಲ್ಲದ ಗೊಂಬೆ ಯೊಂದಿಗೆ ಸಮಾನವಾಗಿ ಹೇಳಬಹುದು. ಆದ್ದರಿಂದ ಮೇಲಿನ ಪದ್ಯದಲ್ಲಿ ಕಟ್ಟಿಗೆ ಗೊಂಬೆ ತಂದು ಹೊಡೆದರೆ ನುಡಿಯದು ಎಂದಿದ್ದಾರೆ.

ಯೋಗಿಯಾದವರು ಆತ್ಮ ವಿಷಯ ಪೂರ್ತಿಯಾಗಿ ತಿಳಿದವನಾಗಿ ಇರುತ್ತಾನೆ. ಪ್ರಪಂಚ ವಿಷಯಗಳು ಆತನಿಗೆ ರುಚಿಸುವುದಿಲ್ಲ. ಯಾವ ಪ್ರಪಂಚ ವಿಷಯವು ಆತನನ್ನು ಅಜ್ಞಾನದಿಶೆಗೆ ಮರಳಿಸಲಾರವು. ದುಃಖಮಯಗಳಾದ ಪ್ರಪಂಚ ವಿಷಯಗಳು ಎಷ್ಟಾದರೂ ಅವನನ್ನು ಬದಲಾಯಿಸಲಾರವು. ಆದ್ದರಿಂದ ಇಲಿ ತೊಗಲು ತಂದು ಎಷ್ಟು ಹೊಗೆದರೂ ಬಿಳಿಯಾಗುವುದಿಲ್ಲ ಎಂದಿದ್ದಾರೆ. ನಿರ್ಣಯ ಬದಲಾಗದ ಸತ್ಯ ತಿಳಿದ ಯೋಗಿ ಬಣ್ಣ ಬದಲಾಗದ ಇಲಿತೊಗಲಿ ನೊಂದಿಗೆ ಸಮಾನವಾಗಿ ಹೇಳಿದ್ದಾರೆಂದು ತಿಳಿಯಬೇಕು.

| | |
|---|---|
| **ಅಲ್ಪಬುದ್ಧಿವಾನಿ ಕಧಿಕಾರಮಿಚ್ಚಿನ** | **ಅಲ್ಪಬುದ್ಧಿಯವನಿಗೆ ಅಧಿಕಾರಕೊಟ್ಟರೆ** |
| **ದೊಡ್ಡವಾರಿನೆಲ್ಲ ದೊಲಗ ಗೊಟ್ಟು** | **ದೊಡ್ಡವರನ್ನೆಲ್ಲ ಓಡಿಸುವನು** |
| **ಚೆಪ್ಪು ತಿನೆಡಿ ಕುಕ್ಕ ಚೆರುಕು ತೀಪೆರುಗುನಾ** | **ಕೆರವನ್ನು ತಿನ್ನುವ ನಾಯಿ ಕಬ್ಬಿನ ಸಿಹಿ ತಿಳಿಯುವುದೇ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (34)** |

**ಭಾವಾರ್ಥ :–** ನಮ್ಮ ಶರೀರದಲ್ಲಿನ ಮನಸ್ಸು, ಬುದ್ಧಿ, ಚಿತ್ತ ಅಂತರಂಗದಲ್ಲಿ ಕೆಲಸಗಳು ಮಾಡಿದಾಗ, ಬಾಹ್ಯದಲ್ಲಿ ಜ್ಞಾನ, ಕರ್ಮೇಂದ್ರಿಯಗಳು ಕೆಲಸ ಮಾಡಿದಾಗ ಕಾರ್ಯಗಳೆಲ್ಲವೂ ನಡೆಯುತ್ತಿವೆ. ಯಾವೊಂದು ಚಿಕ್ಕ ಹೊರಗಿನ ಕೆಲಸವಾದರೂ ಶರೀರದಲ್ಲಿನ 23 ಭಾಗಗಳು ಕೆಲಸ ಮಾಡಬೇಕಾಗಿರುತ್ತದೆ. ಅಹಮ್, ಜೀವಿಯು ಯಾವ ಕೆಲಸ ಮಾಡದವರಾಗಿ ಇದ್ದಾರೆ. ನಡೆದ

ಕೆಲಸದಲ್ಲಿನ ಕಷ್ಟಸುಖಗಳನ್ನು ಜೀವಾತ್ಮ ಅನುಭವಿಸುತ್ತಿರುವನು. ಅಹಂಕಾರ ಮಾತ್ರ ಯಾವ ಕೆಲಸ ಮಾಡದೆ ಉಳಿದ ಇಂದ್ರಿಯಗಳಿಂದ ನಡೆದ ಕೆಲಸಗಳೆಲ್ಲವುಗಳಿಗು ನೀನೇ ಕಾರಣವೆಂದು ಜೀವಿಗೆ ಬೋಧಿಸುತ್ತಿರುತ್ತದೆ. ಅಹಮ್‌ವೊಂದರ ಮಾತು ಕೇಳಿದ ಜೀವಿಯು ಇಂದ್ರಿಯ ಕಾರ್ಯಗಳ ಮರೆತು ಎಲ್ಲದಕ್ಕೂ ನಾನೇ ಕರ್ತನೆಂದುಕೊಳ್ಳುತ್ತಿರುವನು.

ಜೀವಾತ್ಮ ಅಹಮ್‌ಗೆ ಜಾಗಕೊಟ್ಟು, ಕೆಲಸ ಮಾಡುವ ಮುಖ್ಯವಾದ ಇಂದ್ರಿಯಗಳೆಲ್ಲವನ್ನೂ ವಿಸ್ಮರಿಸಿದೆ. ಆದ್ದರಿಂದ ಅಲ್ಪಬುದ್ಧಿಯವನಿಗಧಿಕಾರ ಕೊಟ್ಟರೆ ದೊಡ್ಡವರನ್ನೆಲ್ಲ ತೊಲಗಿಸುವನು ಎಂದಿದ್ದಾರೆ. ಅಲ್ಪಬುದ್ಧಿ ಅಹಂಕಾರ ವೆಂದು, ಅದಕ್ಕೆ ಅಧಿಕಾರ ಕೊಟ್ಟವನು ಜೀವಿಯೆಂದು, ತೊಲಗಿ ಸಲ್ಪಟ್ಟವರು ಮುಖ್ಯವಾದ ಮನೋಬುದ್ಧಿ ಮೊದಲಾದ ಇಂದ್ರಿಯಗಳೆಂದು ತಿಳಿಯಬೆಕು. ಚಿಕ್ಕ ವಯಸ್ಸಿನಿಂದ ಅಹಂಕಾರಕ್ಕೆ ಅಧಿಕಾರಕೊಟ್ಟು ನಾನೇ ಎನ್ನುವ ಭಾವವಿರುವ ಮಾನವನಿಗೆ ಮಾಡುವ ಕೆಲಸಗಳಲ್ಲಿ ಪಾಪಪುಣ್ಯಗಳೆನ್ನುವ ಕರ್ಮ ಅಂಟುತ್ತಿರುತ್ತದೆ. ಈ ವಿಷಯ ತಿಳಿದು ಈ ವಿಧವಾಗಿರುವ ಕರ್ಮಗಳೆಲ್ಲವೂ ಅನುಭವಿಸ ಬೇಕಾಗಿರುತ್ತದೆಂದು ತಿಳಿದು ಜ್ಞಾನವೆನ್ನುವುದನ್ನು ತಿಳಿಯಬೇಕೆನ್ನುವ ಸಂಕಲ್ಪ ಜೀವಿಗೆ ಒಂದು ವೇಳೆ ಉಂಟಾದರೂ, ಅಹಂಕಾರವೆನ್ನುವುದು ಜೀವಿಯ ಮಾತು ಕೇಳದೆ ಅದರ ಕೆಲಸ ಅದು ಮಾಡುತ್ತಾ ಜೀವಿಗೆ ಕರ್ಮ ಅಂಟಿಸುತ್ತಲೇ ಇರುತ್ತದೆ. ಅಜ್ಞಾನ ಕೆಲಸಕ್ಕೆ ಅಭ್ಯಾಸವಾದ ಅಹಮ್ ಜ್ಞಾನಮಾರ್ಗಕ್ಕೆ ಮರಳುವುದು ಕಷ್ಟ ಆದ್ದರಿಂದ ಚಪ್ಪಲಿ ತಿನ್ನುವ ನಾಯಿಗೆ ಕಬ್ಬಿನ ಸಿಹಿ ತಿಳಿಯುತ್ತದಾ ಎಂದಿದ್ದಾರೆ. ಕಬ್ಬಿನ ಸಿಹಿ ಎಂದಾಗ ಜ್ಞಾನವೊಂದರ ಬೆಲೆಯೆಂದು ತಿಳಿಯಬೇಕು. ಚಪ್ಪಲಿ ತಿನ್ನುವ ನಾಯಿ ಎಂದರೆ ಜೀವಿಗೆ ಅಸತ್ಯ ಬೋಧಿಸುವ ಅಹಮ್ ಎಂದು ತಿಳಿಯಬೇಕು.

**ಆರು ದೂಲಮುಲ ಕಾಧಾರಮ್ಮೆನಟ್ಟಿ**
**ಯೊಂಟಿಕಂಬ ಮಿಂಟಿಕೊನರ ನಿಲ್ಚಿ**
**ಇಂಟಿಕೊಕಡು ಕರ್ತ ಏಪಾರುಚುಂಡು**
**ವಿಶ್ವದಾಭಿರಾಮ ವಿನುರ ವೇಮಾ.**

**ಆರು ತೊಲೆಗಳಿಗೆ ಆಧಾರವಿರುವಂಥ**
**ಒಂಟಿ ಕಂಬದ ತುದಿ ಭದ್ರ ನಿಲಿಸಿ**
**ಮನೆಗೆ ಒಬ್ಬ ಕರ್ತ ಬೆಳಗುತಿರುವನಲ್ಲಿ**
**ವಿಶ್ವದಾಭಿರಾಮ ಕೇಳು ವೇಮಾ.** (35)

**ಭಾವಾರ್ಥ :–** ಪ್ರತಿ ಶರೀರದಲ್ಲಿಯೂ ಬ್ರಹ್ಮನಾಡಿ ಇದೆ ಬ್ರಹ್ಮನಾಡಿಯೇ ಶರೀರವೆಲ್ಲದಕ್ಕೂ ಆಧಾರವಾಗಿ ಇದೆ. ಆ ಬ್ರಹ್ಮನಾಡಿ ಒಟ್ಟು ಏಳು ಕೇಂದ್ರಗಳಾಗಿ ವಿಭಜಿಸಲ್ಪಟ್ಟಿದೆ. ಏಳನೆ ಕೇಂದ್ರದಲ್ಲಿ ಆತ್ಮ ನಿವಾಸವಾಗಿ ಇದೆ. ಆ ಏಳನೆ ಕೇಂದ್ರದಲ್ಲಿನ ಆತ್ಮ ತನ್ನ ಶಕ್ತಿಯನ್ನು ಉಳಿದ ಆರು ಕೇಂದ್ರಗಳಿಂದ ಪ್ರಸಾರ ಮಾಡುತ್ತಾ ಆ ಕೇಂದ್ರಗಳಿಂದ ಶರೀರ ಭಾಗಗಳನ್ನು ಕದಲಿಸುತ್ತಿದೆ. ಈ ವಿಧವಾಗಿ ಎಲ್ಲ ಶರೀರಗಳ ಬ್ರಹ್ಮನಾಡಿಗಳಲ್ಲಿ ಆತ್ಮ ಒಂದೇ ನಿವಾಸವಾಗಿ ಎಲ್ಲ ಜೀವರಾಶಿಗಳ ಶರೀರಗಳಿಗು ಶಕ್ತಿಯನ್ನು ಕೊಡುತ್ತಿದೆ.

ಪ್ರತಿ ಶರೀರಕ್ಕೂ ಆತ್ಮವೇ ಆಧಾರವಾಗಿ ಇದೆ. ಆದ್ದರಿಂದ ಮನೆಗೊಬ್ಬನು ಕರ್ತ ಏರ್ಪಾಟಾಗಿರುತ್ತಾನೆ ಎಂದಿದ್ದಾರೆ. ಮನೆಯೆಂದರೆ ಶರೀರವೆಂದು ಕರ್ತ ಎಂದರೆ ಆತ್ಮ ಎಂದು ತಿಳಿಯಬೇಕು. ಆತ್ಮ ಬ್ರಹ್ಮನಾಡಿ ಮೇಲೆ ಕೊನೆಯ ಏಳನೆ ಭಾಗದಲ್ಲಿ ಇದೆ. ಆದ್ದರಿಂದ ಒಂಟಿಕಂಬ ಮನೆಯ ತುದಿಯಲ್ಲಿ ನಿಂತಿದೆ ಎಂದಿದ್ದಾರೆ. ಒಂಟಿ ಸ್ಥಂಭವೆಂದರೆ ಬ್ರಹ್ಮನಾಡಿಯೆಂದು, ಮನೆಯ ತುದಿ ಎಂದರೆ ಬ್ರಹ್ಮನಾಡಿ ಮೇಲಿರುವ ಏಳನೆ ಕೇಂದ್ರವೆಂದು ತಿಳಿಯಬೇಕು. ಬ್ರಹ್ಮನಾಡಿ ಆರು ಕೇಂದ್ರಗಳಿಂದ ಶರೀರಭಾಗಗಳಿಗೆ ಶಕ್ತಿ ಪ್ರವಹಿಸುತ್ತಾ ಇದೆ. ಆದ್ದರಿಂದ ಆರು ದೂಲಗಳಿಗೆ ಆಧಾರವಾದ ಎಂದಿದ್ದಾರೆ.

| | |
|---|---|
| **ఆరు మూడుగట్టి యలమట జెందక** | **ಆರು ಮೂರು ಕಟ್ಟಿ ಅಳಲು ಹೊಂದದೆ** |
| **పోరి గుణము లడచి పూని మిగుల** | **ಹೆಣ್ಣು ಉಣವ ಮೆಟ್ಟಿ ಹೆಚ್ಚು ಧೃಡದಿ** |
| **తేరు శిఖరమెక్కి తెలివంట జూడర** | **ತೇರು ಶಿಖರವನ್ನೇರಿ ಜಾಣತನವಂತೆ ನೋಡ** |
| **విశ్వదాభిరామ వినురవేమా.** | **ವಿಶ್ವದಾಭಿರಾಮ ಕೇಳು ವೇಮಾ. (36)** |

**ಭಾವಾರ್ಥ :–** ನಮ್ಮ ಶರೀರ ನವರಂಧ್ರಗಳಿರುವುದಾಗಿ ಇದೆ. ಕಣ್ಣುಗಳು 2, ಮೂಗುಗಳು 2, ಬಾಯಿ 1, ಗುದ 1, ಗುಹ್ಯ 1, ಒಟ್ಟು ಒಂಭತ್ತು ರಂಧ್ರಗಳು ಇರುವ ಶರೀರದಲ್ಲಿ ಈ ಒಂಭತ್ತು ರಂಧ್ರಗಳ ಮೂಲಕ ಜೀವಿಗೆ ಎಷ್ಟೋ ವಿಷಯ ಸಂಘಟನೆಗಳು ಏರ್ಪಡುತ್ತಿವೆ. ಮುಖ್ಯವಾಗಿ ಜ್ಞಾನೇಂದ್ರಿಯ ಗಳಾದ ಕಣ್ಣು, ಮೂಗು, ಕಿವಿಗಳ ಆರು ರಂಧ್ರಗಳಿಂದ ಹೆಚ್ಚಿನ ವಿಷಯಗಳು, ಕರ್ಮೇಂದ್ರಿಯಗಳಾದ ಬಾಯಿ, ಗುದ, ಗುಹ್ಯಗಳಿಂದ ಕಡಿಮೆ ವಿಷಯಗಳು ಉಂಟಾಗುತ್ತಿವೆ. ಮನಸ್ಸು ವಿಷಯಗಳನ್ನು ಅಂಟದಂತಿದ್ದರೇ ಯಾವ ಗುಣಗಳು ವಿಜೃಂಭಿಸುವುದಿಲ್ಲ. ವಿಷಯಗಳನ್ನು ಅಡಗಿಸಿದರೆ, ಗುಣಗಳನ್ನು ಗೆಲ್ಲಬಹುದು. ಆದ್ದರಿಂದ ನವರಂಧ್ರಗಳ ವಿಷಯಗಳ ನಿರೋಧಿಸಬೇಕೆನ್ನುವ ಅರ್ಥವನ್ನು ಕೊಡುವಂತೆ ಆರು ಮೂರುಕಟ್ಟಿ ಎಂದಿದ್ದಾರೆ. ಆರು ಜ್ಞಾನೇಂದ್ರಿಯಗಳೆಂದು, ಮೂರು ಕರ್ಮೇಂದ್ರಿಯಗಳೆಂದು ತಿಳಿಯಬೇಕು.

ವಿಷಯಗಳ ಸಂಬಂಧ ಇಲ್ಲದಿರುವಾಗ ಗುಣಗಳು ಅಡಗಿ ಹೋಗುತ್ತವೆ. ಆಗ ಮನಸ್ಸು ಯಾವ ಗುಣ ವಿಷಯವಿಲ್ಲದಿರುವುದರಿಂದ ಬ್ರಹ್ಮನಾಡಿ ಕೊನೆಯ ಏಳನೆ ಭಾಗವಾದ ಸಹಸ್ರಾರದಲ್ಲಿ ಸೇರಿ ಅಲ್ಲಿನ ವಿಷಯವನ್ನು ತಿಳಿಸುತ್ತಿರುತ್ತದೆ. ಆಗ ನಮ್ಮ ಬುದ್ಧಿ ಆ ವಿಷಯವನ್ನು ಗ್ರಹಿಸುತ್ತದೆ. ಆದ್ದರಿಂದ ಗುಣಗಳನ್ನು ಅಡಗಿಸಿ ತೇರು ಶಿಖರವನ್ನೇರಿ ತಿಳುವಳಿಕೆಯಂತೆ ನೋಡಯಾ ಎಂದಿದ್ದಾರೆ. ತೇರು ಎಂದರೆ ಶರೀರ, ಶಿಖರವೆಂದರೆ ಶಿರೋಭಾಗವೆಂದು ತಿಳಿಯಬೇಕು.

**ಇಂಟಿಲೋನಿ ಕೋತಿ ಇರುವುಗಾನಕ ಲೇಕ**
**ತಿರುಗಬೋವು ವಾರು ತೀರಕುಂದ್ರು**
**ಕೋತಿನೊಕಟಿ ನಿಲ್ಪಿ ಕುದುರುಂಡಲೇರಯಾ**
**ವಿಶ್ವದಾಭಿರಾಮ ವಿನುರವೇಮಾ.**

**ಮನೆಯೊಳಗಿನ ಕೋತಿ ಇರುವು ತಿಳಿಯದೆ**
**ತಿರುಗುವರಿವರು ಸುಮ್ಮನಿರದೆ**
**ಕೋತಿಯೊಂದನು ನಿಲಿಸಿ ಕುದುರಲಾರರಯ್ಯ**
**ವಿಶ್ವದಾಭಿರಾಮ ಕೇಳುವೇಮಾ.** (37)

**ಭಾವಾರ್ಥ :–** ಕೆಲವರು ದೈವಭಕ್ತಿ ಇರುವವರು ಪುಣ್ಯಕ್ಷೇತ್ರಗಳಿಗೆ ಹೋಗುತ್ತಾ ದೈವದರ್ಶನ ಮಾಡುತ್ತಾ ಆತ್ಮಶಾಂತಿ ಬೇಕೆಂದು ಕೋರುವವರಿದ್ದಾರೆ. ಹಾಗೆ ಎಷ್ಟು ಕ್ಷೇತ್ರಗಳು ತಿರುಗಿದರೂ ಆತ್ಮಶಾಂತಿ ಸಿಗುವುದಿಲ್ಲ. ದೈವವು ತಿಳಿಯುವುದಿಲ್ಲ. ನಮ್ಮ ಶರೀರದಲ್ಲಿನ ವಿಷಯಜ್ಞಾಪಕ ಮಾಡುವ ಮನಸ್ಸನ್ನು ಸಾಧನೆಯಿಂದ ನಿಲ್ಲಿಸಿದಾಗ ಮಾತ್ರವೇ ಗುಣಗಳು ವಿಜೃಂಭಿಸದೆ ಆತ್ಮಶಾಂತಿ ಉಂಟಾಗುತ್ತದೆ. ನಮ್ಮಲ್ಲಿನ ಮನಸ್ಸು ಅನುಕ್ಷಣ ಯಾವುದೋ ಒಂದು ವಿಷಯವನ್ನು ತಂದಿಡುತ್ತಾ ಅನೇಕ ವಿಷಯಜ್ಞಾಪಕಗಳ ಮೇಲಕ್ಕೆ ಹರಡುತ್ತಿರುತ್ತದೆ. ಆದ್ದರಿಂದ ಮನಸ್ಸನ್ನು ಚಂಚಲವಾದ ಕೋತಿಯಾಗಿ ಹೋಲಿಸಿ ಶರೀರವನ್ನು ಮನೆಯಾಗಿ ಹೋಲಿಸಿ ಮನೆಯಲ್ಲಿನ ಕೋತಿ ಎಂದಿದ್ದಾರೆ.

ಮನಸ್ಸನ್ನು ಯಾವ ವಿಧವಾಗಿ ನಿಲ್ಲಿಸಬೇಕೆನ್ನುವ ಜ್ಞಾನ ತಿಳಿಯದೆ ಎಷ್ಟು ಕ್ಷೇತ್ರಗಳು ತಿರುಗಿದರೂ ಏನು ಪ್ರಯೋಜನವಿಲ್ಲ. ಆದ್ದರಿಂದ ಜ್ಞಾನವಿಲ್ಲದೆ ತಿರುಗಲು ಹೋದರೂ ತೀರದು ಎಂದಿದ್ದಾರೆ. ಜ್ಞಾನ ಇಲ್ಲದ್ದು ಕರ್ಮ ನಾಶ ಆಗುವುದಿಲ್ಲ. ಆದ್ದರಿಂದ ಕರ್ಮ ತೀರುವುದಿಲ್ಲವೆಂದು ಹೇಳುವುದಕ್ಕೆ ತೀರದೆ ಇರುತ್ತಾರೆ ಎಂದಿದ್ದಾರೆ. ಮನಸ್ಸನ್ನು ನಿಲ್ಲಿಸಿ ಯೋಗವೆನ್ನುವ ಸ್ಥಿತಿಯಲ್ಲಿ ಇರಲಾರರು. ಆದ್ದರಿಂದ ಕೋತಿ ಒಂದನ್ನು ನಿಲ್ಲಿಸಿ ಕುದುರುವುದಿಲ್ಲಯಾ ಎಂದಿದ್ದಾರೆ. ಮನೆ ಎಂದರೆ ಶರೀರವೆಂದು, ಇರುವು ಎಂದರೆ ಜ್ಞಾನವೆಂದು, ಕೋತಿ ಎಂದರೆ ಮನಸ್ಸೆಂದು ತಿಳಿಯಬೇಕು.

| | |
|---|---|
| **ಇಹಮುನಂದು ಸುಖಮು ನಿಂಪಾರಲೇದಟ** | **ಇಹದಲ್ಲಿ ಸುಖ ಇರದವನು** |
| **ಪರಮುನಂದು ಸುಖಮು ಬಡಯುಟೆಟ್ಲು** | **ಪರದಲ್ಲಿ ಸುಖ ಕೋರಿದರೆ** |
| **ಧನಮುಲೇಕ ಸುಖಮು ತನಕೆಟ್ಲು ಕಲುಗುರಾ** | **ಧನವಿಲ್ಲದೆ ಸುಖ ತನಗ್ಹೇಗೆ ಬರುವುದು** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (38) |

**ಭಾವಾರ್ಥ :–** ಪ್ರಪಂಚದಲ್ಲಿ ಎಷ್ಟು ಧನವಿದ್ದರೂ ಕೊನೆಗೆ ತೃಪ್ತಿ, ಸುಖ ಇರುವುದಿಲ್ಲ. ಸುಖವನ್ನುಕೊಡುತ್ತದೆಂದು ನಂಬಿದ ಹಣವೇ ಎಷ್ಟೋ ಸಮಸ್ಯೆಗಳ ಮಧ್ಯೆ ಸಿಲುಕಿಸಿ ಶಾಂತಿ ಇಲ್ಲದಂತೆ ಮಾಡುತ್ತದೆ. ಇಹದಲ್ಲಿ ಶಾಂತಿ ಹೊಂದಿದವನೇ ಪರವನ್ನು ಹೊಂದುವನು. ಇಹದಲ್ಲಿ ಜ್ಞಾನವಿಲ್ಲದೆ ಶಾಂತಿ ಇಲ್ಲ. ಸರ್ವದುಃಖಗಳಿಗು ಹಾನಿಕರವಾದುದು ಜ್ಞಾನವೆಂದು ಭಗವದ್ಗೀತೆಯಲ್ಲಿ ಹೇಳಿದಂತೆ ಜ್ಞಾನಧನ ಇಲ್ಲದವನು ಪ್ರಪಂಚದಲ್ಲಿ ಎಷ್ಟು ದೊಡ್ಡ ಧನಿಕನಾದರೂ ಸುಖವನ್ನು ಅನುಭವಿಸಲಾರನು. ಆದ್ದರಿಂದ ಧನವಿಲ್ಲದೆ ಸುಖ ತನಗೆ ಹೇಗೆ ಉಂಟಾಗುತ್ತದೆ ಎಂದಿದ್ದಾರೆ. ಇಲ್ಲಿ ಧನವೆಂದರೆ ಜ್ಞಾನಧನವೆಂದು ಅರ್ಥ ಮಾಡಿಕೊಳ್ಳಬೇಕು. ಜ್ಞಾನಧನವಿದ್ದರೆ ಇಹದಲ್ಲಿಯೂ ಪರದಲ್ಲಿಯೂ ಸುಖ ಹೊಂದಿದವನಾಗುತ್ತಾನೆಂದು ತಿಳಿಯಬೇಕು.

| | |
|---|---|
| **ಉಪಜಿಹ್ವಕು ಪ್ರಾಗ್ದಿಕ್ಕುನ** | **ಉಪಜಿಹ್ವೆಗೆ ಮೇಲ್ಭಾಗದಲ್ಲಿ** |
| **ತ್ರಿಪುಟಿಕಿ ಮಧ್ಯಂಬುನಂದು ದೀಪಮು ತಾನೈ** | **ತ್ರಿಪುಟಿಯ ಮಧ್ಯದಲ್ಲಿ ದೀಪವು ತಾನಾಗಿ** |
| **ಜಪಿಯುಂದು ರಾಮ ಮೆವಡಾ** | **ಜಪವಿಹುದು ರಾಮ ಅಂತಹ** |
| **ತಪಸಿನಿ ಗನುಗೊನ್ನ ವಾಡು ಧನ್ಯುಡು ವೇಮಾ** | **ತಪಸ್ವಿಯನ್ನು ಕಂಡುಕೊಂಡವನು ಧನ್ಯನು ವೇಮಾ.** (39) |

**ಭಾವಾರ್ಥ :–** ಶರೀರದಲ್ಲಿ ಶಿರೋಭಾಗದಲ್ಲಿ ಆತ್ಮ ನಿವಾಸವಾಗಿದೆ. ಶಿರಸ್ಸಿನಲ್ಲಿ ಮೂರು ಗುಣಗಳಿಗೆ ಮಧ್ಯದಲ್ಲಿ ಗುಣಚಕ್ರಕ್ಕೆ ಆಧಾರವಾಗಿರುವ ಬ್ರಹ್ಮನಾಡಿಯಲ್ಲಿ ಆತ್ಮ ನಿವಾಸವಾಗಿ ಇದೆ. ಸರ್ವಜೀವರಾಶಿಗಳ ಶರೀರದಲ್ಲಿ ಕೂಡ ಈ ವಿಧವಾಗಿಯೇ ಇದೆಯೆಂದು ತಿಳಿಯಬೇಕು. ಬಾಯಿಯಲ್ಲಿನ ಚಿಕ್ಕ ನಾಲಿಗೆಯನ್ನು ಎಲ್ಲರು ನೋಡಿರುತ್ತಾರೆ. ಅದನ್ನೇ ಉಪ ಜಿಹ್ವೆಯೆಂದು ಕೂಡ ಅನ್ನುತ್ತಾರೆ.

ಉಪಜಿಹ್ವೆಗೆ ಮೇಲ್ಭಾಗದಲ್ಲಿ ಮೂರು ಗುಣಗಳಿಗೆ ಮಧ್ಯದಲ್ಲಿ ಆತ್ಮ ಇದೆ. ಆದ್ದರಿಂದ ಆ ವಿಷಯ ತಿಳಿಯುವ ನಿಮಿತ್ತ ಉಪಜಿಹ್ವೆಗೆ ಪ್ರಾಗ್ದಿಕ್ಕಿನಲ್ಲಿ ತ್ರಿಪುಟಿಕೆ ಮಧ್ಯದಲ್ಲಿ ಎಂದಿದ್ದಾರೆ.

ಶರೀರದಲ್ಲಿ ಆತ್ಮ ಇರುವಾಗಲೇ ಜೀವಾತ್ಮ ಇರಬಲ್ಲನು. ಆತ್ಮ ಚೈತನ್ಯದಿಂದಲೇ ಶ್ವಾಸ ಆಡುತ್ತಿದೆ. ಆತ್ಮ ಇಲ್ಲದಿರುವಾಗ ಶ್ವಾಸ ಆಡುವುದಿಲ್ಲ. ಜೀವಾತ್ಮ ಶರೀರದಲ್ಲಿ ಇರಬೇಕೆಂದು ಎಷ್ಟು ಪ್ರಯತ್ನ ಮಾಡಿದರೂ ಆತ್ಮ ಹೋದ ಕೂಡಲೇ ಜೀವಾತ್ಮ ಕೂಡ ಹೋಗಬೇಕಾಗಿರುತ್ತದೆ. ಎಷ್ಟು ಜನ ಎಷ್ಟು ಆಸ್ಪತ್ರೆಗಳು ತಿರುಗಿದರೂ, ಎಷ್ಟು ಹಣ ಖರ್ಚು ಮಾಡಿದರೂ ಆತ್ಮ ಇರುವವರೆಗೇ ಜೀವಾತ್ಮ ಶರೀರದಲ್ಲಿ ಇರುತ್ತದೆ. ಶರೀರವೆಲ್ಲದಕ್ಕೂ ಬೆಳಕನ್ನುಕೊಟ್ಟು ಕದಲಿಸುವುದು ಆತ್ಮ. ಆದ್ದರಿಂದ ಅದನ್ನು ದೀಪವಾಗಿ ವೇಮನ ಹೋಲಿಸಿದ್ದಾನೆ. ಆತ್ಮ ಶರೀರದಲ್ಲಿರುವಾಗಲೇ ಶ್ವಾಸ ಚಲಿಸುತ್ತಿರುತ್ತದೆ. ಆತ್ಮ ಚೈತನ್ಯ ಬ್ರಹ್ಮನಾಡಿ ಕೇಂದ್ರಗಳ ಮೂಲಕ ಹೊರಗಿನ ನರಗಳಿಗೆ ಸೇರಿ ಅಲ್ಲಿಂದ ಶ್ವಾಸಕೋಶಗಳಿಗೆ ಹರಡಿ ಶ್ವಾಸಕೋಶಗಳನ್ನು ಕದಲಿಸುತ್ತಾ ಶ್ವಾಸ ಆಡುವಂತೆ ಮಾಡುತ್ತಿದೆ. ಶ್ವಾಸ ಶಬ್ದ ಉಶ್ಛ್ವಾಸದಲ್ಲೊಂದು ವಿಧ, ನಿಶ್ಛ್ವಾಸದಲ್ಲೊಂದು ವಿಧವಾಗಿ ಇದೆ. ಆದ್ದರಿಂದ "ರಾ" ಎಂದು "ಮ" ಎಂದು ಎರಡು ಶಬ್ದಗಳಾಗಿ ಇದೆಯೆಂದಿದ್ದಾರೆ. ಇದಕ್ಕೆ ಕಾರಣವಾದ ಆತ್ಮವನ್ನು ತಿಳಿದವನು ದೊಡ್ಡವನೆಂದು ಹೇಳುತ್ತಾ ತಪಸ್ವಿಯನ್ನು ಕಂಡುಕೊಂಡವನು ಧನ್ಯನು ವೇಮಾ! ಎಂದಿದ್ದಾರೆ.

ಶಿರೋಭಾಗದಲ್ಲಿ ಶಿರಸ್ಸು ಮಧ್ಯದಲ್ಲಿ ಇದ್ದು ಶರೀರ ಜೀವನಕ್ಕೆ ಶ್ವಾಸ ಕಾರಣವಾದ ಆತ್ಮವನ್ನು ತಿಳಿದವನು ಪರಮಾತ್ಮನನ್ನು ಸೇರಬಲ್ಲನೆನ್ನುವ ವಿವರವನ್ನು ಮೇಲಿನ ಪದ್ಯದಲ್ಲಿ ವೇಮನಯೋಗಿ ಹೊಂದಿಸಿದ್ದಾನೆ. ತ್ರಿಪುಟಿ ಎಂದರೆ ಮೂರು ಗುಣಭಾಗಗಳೆಂದು ತಿಳಿಯಬೇಕು. ಮಧ್ಯ ಎಂದರೆ ಗುಣಭಾಗಮಧ್ಯದಲ್ಲಿರುವ ಬ್ರಹ್ಮನಾಡಿ ಎಂದು ತಿಳಿಯಬೇಕು. ದೀಪವೆಂದರೆ ಆತ್ಮವೆಂದು, ರಾಮ ಎಂದು ಜಪಿಸುವ ತಪಸಿ ಎಂದರೆ ಸೋಹಂ ಶಬ್ದಕ್ಕೆ ಕಾರಣವಾದ ಆತ್ಮವೆಂದು ತಿಳಿಯಬೇಕು.

| | |
|---|---|
| **ಉಪ್ಪುಲೇನಿ ಕೂರ ಯೊಪ್ಪದು ರುಚುಲಕು** | **ಉಪ್ಪು ಇರದ ಪಲ್ಯ ಒಪ್ಪುವುದಿಲ್ಲ ರುಚಿಕರಿಗೆ** |
| **ಪಪ್ಪುಲೇನಿ ತಿಂಡಿ ಫಲಮು ಲೇದು** | **ಬೇಳೆ ಇರದ ತಿಂಡಿ ಫಲವೆ ಇಲ್ಲ** |
| **ಅಪ್ಪುಲೇನಿವಾಡೆ ಯಧಿಕ ಸಂಪನ್ನುಡು** | **ಸಾಲವಿಲ್ಲದವನು ಅಧಿಕ ಸಂಪನ್ನನು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (40)** |

**ಭಾವಾರ್ಥ :–** ಆತ್ಮಜ್ಞಾನವಿಲ್ಲದ ಜೀವನ ವಾಸನೆ ಇಲ್ಲದ ಹೂವಿನಂಥಾದ್ದು. ವಾಸನೆ ಇರುವಾಗಲೇ ಹೂವಿಗೆ ಬೆಲೆ ಇರುವಂತೆ, ಜ್ಞಾನವಿದ್ದಾಗಲೇ ಜೀವನಕ್ಕೆ ಬೆಲೆ ಸಾರ್ಥಕತೆ ಇದೆ. ಅಜ್ಞಾನ ವಿಷಯಗಳಲ್ಲಿ ಕಾಲ ಕಳೆಯುವವನು ಇದ್ದರೂ, ಇಲ್ಲದಿದ್ದರೂ ಬುದಜನರ ದೃಷ್ಟಿಯಲ್ಲಿ ಸಮಾನ. ಆದ್ದರಿಂದ ಉಪ್ಪು ಇಲ್ಲದ ಪಲ್ಯ ಒಪ್ಪುವುದಿಲ್ಲ ರುಚಿಗಳಿಗೆ ಎಂದಿದ್ದಾರೆ. ಉಪ್ಪಿಲ್ಲದ ಪಲ್ಯ ಎಂದರೆ ಜ್ಞಾನವಿಲ್ಲದ ಬದುಕೆಂದು ಅರ್ಥ. ಒಪ್ಪುವುದಿಲ್ಲ ರುಚಿಗಳಿಗೆ ಎಂದರೆ ಯಾವ ವಿಧವಾದ ಸಾರ್ಥಕವಿಲ್ಲದ್ದೆಂದು ಅರ್ಥ.

ಒಂದುವೇಳೆ ಜ್ಞಾನವಿದ್ದು ಆಚರಣೆ ಇಲ್ಲದಿರುವಾಗ ಫಲಿತವಿಲ್ಲ. ಆದ್ದರಿಂದ ಬೇಳೆ ಇಲ್ಲದ ಪಲ್ಯ ಫಲವಿಲ್ಲ ಎಂದಿದ್ದಾರೆ. ಬೇಳೆ ಪೋಷಕ ಪದಾರ್ಥಗಳನ್ನು ಕೊಡುವುದು. ಉಪ್ಪು ರುಚಿಯನ್ನು ಮಾತ್ರ ಕೊಡುವುದು. ಉಪ್ಪು ಬೇಳೆ ಇರುವಾಗ ರುಚಿ ಬಲವಿರುವ ತಿಂಡಿಯಾಗುತ್ತದೆ. ಆದ್ದರಿಂದ ಜ್ಞಾನ, ಆಚರಣೆ ಎರಡೂ ಇರಬೇಕು. ಆಚರಣೆ ಇದ್ದು ಜ್ಞಾನವಿಲ್ಲದಿದ್ದರೂ, ಜ್ಞಾನವಿದ್ದು ಆಚರಣೆ ಇಲ್ಲದಿದ್ದರೂ ರುಚಿಯಿಲ್ಲದ ಬಲವಾದ ಆಹಾರವಾಗಿಯೋ ಅಥವಾ ಬಲವಿಲ್ಲದೆ ರುಚಿ ಇರುವ ಪದಾರ್ಥವಾಗಿಯೇ ಜೀವನವಿರುತ್ತದೆ.

ಕರ್ಮ ಇರುವಾಗ ಕಷ್ಟಗಳು ಅನುಭವಿಸುತ್ತಿರಬೇಕು. ಜನ್ಮಗಳಿಗೆ, ಅನುಭವಗಳಿಗೆ ಮೂಲ ಕಾರಣವಾದ ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳುವವನು ಬಹಳ ಧನ್ಯನು. ಜ್ಞಾನ ಮತ್ತು ಆಚರಣೆ ಇರುವಾಗ ಆತ್ಮಶಕ್ತಿಯನ್ನು ಸಂಪಾದಿಸಿಕೊಂಡು ಕರ್ಮವನ್ನು ಸುಟ್ಟುಹಾಕುತ್ತಿರುತ್ತದೆ. ಕರ್ಮ ಸುಟ್ಟುಹೋದಾಗ ಶೇಷ ಇಲ್ಲದ ದಿನ ಜೀವಾತ್ಮ ಪರಮಾತ್ಮನಲ್ಲಿ ಐಕ್ಯವಾಗುತ್ತಾನೆ. ಆದ್ದರಿಂದ

ಕರ್ಮ ಎನ್ನುವ ಸಾಲ ಇಲ್ಲದವನು ಅಧಿಕಸಂಪನ್ನನೆಂದು ವೇಮನಯೋಗಿ ಹೇಳಿದ್ದಾನೆ. ಉಪ್ಪು ಬೇಳೆ ಮನೆಯಲ್ಲಿ ಇರುವಾಗ ಸಾಲಮಾಡದಂತೆ ಜ್ಞಾನ, ಸಾಧನೆ ಎರಡು ಇರುವಾಗ ಕರ್ಮ ಉಂಟಾಗುವುದಿಲ್ಲ. ಇರುವ ಕರ್ಮ ಕೂಡ ಸವೆದುಹೋಗುತ್ತದೆ. ಮೇಲಿನ ಪದ್ಯದಲ್ಲಿ ಉಪ್ಪೆಂದರೆ ಜ್ಞಾನವೆಂದು, ಬೇಳೆಯೆಂದು ಆಚರಣೆ ಎಂದು, ಸಾಲ ಎಂದರೆ ಕರ್ಮ ಎಂದು ತಿಳಿಯಬೇಕು.

| | |
|---|---|
| **ಕಟ್ಟೆಪೈನ ನುನ್ನ ಗಟ್ಟೆಕು ಘನಮೇಮಿ** | **ಕಾಷ್ಠದ ಮೇಲಿರುವ ಕಾಷ್ಠಕೆ ಘನವೇನು** |
| **ಚೆಟ್ಟುಪೈನ ಘನಮು ಚೇರಗಲಡೆ** | **ಮರದ ಮೇಲೆ ಇರಲು ಸೇರು ಘನತೆ** |
| **ಕಟ್ಟೆ ಚೆಟ್ಟು ರೆಂಡು ಗಲಸೆ ದೈವಂಬುಲೋ** | **ಕಾಷ್ಠ ಮರವು ಕೂಡಿ ಕಟಕಟಾ ದೈವವೇ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (41)** |

**ಭಾವಾರ್ಥ :–** ಕೆಳಗಿನ ಕಟ್ಟಿಗೆಗೆ ಎಷ್ಟು ಬೆಲೆ ಇದೆಯೋ ಮೇಲಿನ ಕಟ್ಟಿಗೆಗು ಕೂಡ ಅಷ್ಟೇ ಬೆಲೆ ಇರುತ್ತದೆ. ಕೆಳಗಿನ ಕಟ್ಟಿಗೆ ಜಡವಾದಂತೆ ಮೇಲಿನ ಕಟ್ಟಿಗೆ ಕೂಡ ಜಡವಾದುದು. ಶರೀರ ಜಡವಾದುದು ಸ್ವತಂತ್ರ ಇಲ್ಲದ್ದು. ಹಾಗೆಯೇ ಶರೀರವನ್ನು ಅಧಿಷ್ಟಿಸಿರುವ ಜೀವಾತ್ಮವೂ ಸಹ ಸ್ವತಂತ್ರತೆ ಇಲ್ಲದ್ದಾಗಿದೆ. ಶರೀರವನ್ನು ಅಧಿಷ್ಟಿಸಿರುವ ಜೀವಾತ್ಮವೊಂದರ ಹಿರೆತನ ಏನೂ ಇಲ್ಲ. ಆದ್ದರಿಂದ ಕಟ್ಟಿಗೆ ಮೇಲಿರುವ ಕಟ್ಟಿಗೆಗೆ ಘನವೇನು ಎಂದು ವೇಮನ ಅಂದಿದ್ದಾರೆ. ಕಟ್ಟೆ ಎಂದರೆ ಶರೀರ, ಮೇಲಿರುವ ಕಟ್ಟೆ ಎಂದರೆ ಶರೀರವನ್ನು ಅಧಿಷ್ಟಿಸಿದ ಜೀವಾತ್ಮ ಎಂದು ತಿಳಿಯಬೇಕು.

ಸರ್ವ ಕಟ್ಟಿಗೆಗಳಿಗು ಸಾರ ಗಿಡದಿಂದಲೇ ಲಭಿಸುತ್ತಿದೆ. ಹಾಗೆಯೇ ಸರ್ವ ಶರೀರಗಳಿಗು ಶಕ್ತಿಯನ್ನು ಕೊಡುವುದು ಆತ್ಮ. ಗಿಡದ ಮೇಲಿರುವ ಘನವನ್ನು ಸೇರುವನೇ ಎನ್ನುವುದು ಶರೀರಗಳಿಗೆ ಆಧಾರವಾದ ಆತ್ಮವನ್ನು ಸೇರುತ್ತಾನೆ ಎಂದು ಅರ್ಥ. ಜೀವಾತ್ಮ ಆತ್ಮವನ್ನು ಸೇರಿ ಸ್ವಲ್ಪ ಕಾಲ ಇರುವಾಗ ಕರ್ಮವೆಲ್ಲವೂ ನಾಶವಾಗಿ ಜೀವಾತ್ಮ, ಆತ್ಮಗಳು ಎರಡು ಪರಮಾತ್ಮನಲ್ಲಿ ಐಕ್ಯವಾಗಿ ಹೋಗುತ್ತವೆ. ಆದ್ದರಿಂದ ಕಟ್ಟಿಗೆ ಗಿಡ ಎರಡು ಬೆರೆತವು ದೈವದಲ್ಲಿ ಎಂದಿದ್ದಾರೆ.

ಶರೀರದಲ್ಲಿರುವ ಜೀವಾತ್ಮ, ಆತ್ಮವನ್ನು ತಿಳಿಯದೆ ಪ್ರಯೋಜನವಿಲ್ಲ. ಶರೀರಕ್ಕಿರುವ ಬೆಲೆಯೇ ಆತ್ಮವನ್ನು ಸೇರದ ಜೀವಾತ್ಮಗೆ ಇರುತ್ತದೆ. ಶರೀರಕ್ಕೆ ಆಧಾರವಾದ ಆತ್ಮವನ್ನು ಜೀವಾತ್ಮ ಸೇರಲೇಬೇಕು. ಹಾಗೆ ಜೀವಾತ್ಮ ಆತ್ಮಗಳು ಬೆರೆತಿರುವಾಗ ಒಂದು ದಿನಕ್ಕೆ ಪರಮಾತ್ಮ ಪ್ರಾಪ್ತಿ ಲಭಿಸುತ್ತದೆಂದು ವೇಮನ ಪದ್ಯವೊಂದರ ಸಾರಾಂಶವೆಂದು ತಿಳಿಯಬೇಕು.

**ಕಡಕ ನಖಿಲಮುಲಕು ನಡಿನಾಳಮಂದುನ್ನ**
**ವೇಗುಚುಕ್ಕ ವಂಟಿ ವೆಲುಗು ದಿಕ್ಕು**
**ವೆಲುಗು ಕನ್ನ ದಿಕ್ಕು ವೇರೆವ್ವರುನ್ನಾರು**
**ವಿಶ್ವದಾಭಿರಾಮ ವಿನುರವೇಮಾ.**

**ನನಗೆ ಯಾರು ದಿಕ್ಕು ನಾಡುವೆ ನಾಳದೊಳಗೆ**
**ಬೆಳ್ಳಿ ಚುಕ್ಕೆಯಂತೆ ಬೆಳಗುವ ದಿಕ್ಕು**
**ಬೆಳಕಿಗಿಂತ ದಿಕ್ಕು ಬೇರೆ ಇಲ್ಲವಯ್ಯ**
**ವಿಶ್ವದಾಭಿರಾಮ ಕೇಳು ವೇಮಾ. (42)**

**ಭಾವಾರ್ಥ :–** ಸರ್ವಜೀವಿಗಳ ಶರೀರಗಳಲ್ಲಿ ಬೆನ್ನು ಹರಿ (ಬೆನ್ನುಮೂಳೆ) ಯಲ್ಲಿರುವ ಬ್ರಹ್ಮನಾಡಿ ಎಲ್ಲ ನಾಡಿಗಳಿಗಿಂತ ಮುಖ್ಯವಾದುದು. ಅದರಲ್ಲೇ ಸಕಲ ಶರೀರಗಳನ್ನು ಕದಲಿಸುವಶಕ್ತಿ ಒಳಗೊಂಡಿದೆ. ಶರೀರದಲ್ಲಿನ ಪ್ರತಿ ಭಾಗವೊಂದರ ಕದಲಿಕೆ ಆತ್ಮಚೈತನ್ಯಶಕ್ತಿಯದ್ದೇ. ಗುಂಡಿಗೆ ಸ್ವತಃವಾಗಿ ಕದಲುವುದಿಲ್ಲ. ಹಾಗೆಯೇ ಶ್ವಾಸಕೋಶಗಳು ಸ್ವತಃವಾಗಿ ಕದಲಲಾರವು. ಉದರದಲ್ಲಿನ ಜೀರ್ಣಾಶಯ ಗೋಡೆಗಳಾಗಲಿ, ಗ್ರಂಥಿಗಳಲ್ಲಿ ರಸಸ್ಯಂದನವಾಗಲಿ ಆತ್ಮಶಕ್ತಿ ಇಲ್ಲದೇ ಸ್ವತಃವಾಗಿ ಉಂಟಾಗುವುದಿಲ್ಲ. ಈ ಪದ್ಧತಿ ಎಲ್ಲ ಶರೀರಗಳಲ್ಲಿ ಒಂದೇ ವಿಧವಾಗಿ ಇದೆ. ಆದ್ದರಿಂದ ಅಖಿಲಗಳಿಗೆ ನಡಿನಾಳದಲ್ಲಿರುವ ಬೆಳ್ಳಿ ಚುಕ್ಕೆಯಂತಹ ಬೆಳಕು ದಿಕ್ಕು ಎಂದಿದ್ದಾರೆ. ನಡಿನಾಳವೆಂದರೆ ಬ್ರಹ್ಮನಾಡಿಯಲ್ಲಿನ ಭಾಗವೆಂದು ಬೆಳ್ಳಿಚುಕ್ಕೆ ಎಂದರೆ ಬ್ರಹ್ಮನಾಡಿಯಲ್ಲಿನ ಆತ್ಮವೆಂದು ತಿಳಿಯಬೇಕು. ಆತ್ಮಚೈತನ್ಯಶಕ್ತಿ ಇಲ್ಲದೆ ಯಾವ ಶರೀರಭಾಗವು ಕೆಲಸ ಮಾಡುವುದಿಲ್ಲ. ಆದ್ದರಿಂದ ಬೆಳಕಿಗಿಂತ ದಿಕ್ಕು ಬೇರೆ ಯಾರಿದ್ದಾರೆ.

| | |
|---|---|
| **ಚಂದ್ರಸೂರ್ಯ ಗತುಲ ಜರ್ಚಿಂಚಿ ಲೇಗಮೆ** | **ಚಂದ್ರ ಸೂರ್ಯ ಗತಿಯ ಚರ್ಚಿಸಿ ವೇಗದಿಂ** |
| **ರಂಧ್ರಂಬುನನು ಜೊಚ್ಚಿ ರಂಗು ಮೀರ** | **ರಂಧ್ರದಲ್ಲಿ ಸೇರಿ ರಂಗು ಮಿಕ್ಕಿ** |
| **ಜಂದ್ರಶಾಲ ಜೇರಿ ಚೈತನ್ಯಮಂದರಾ** | **ಚಂದ್ರ ಶಾಲೆ ಸೇರಿ ಚೈತನ್ಯ ಹೊಂದಿರೊ** |
| **ವಿಶ್ವದಾಭಿರಾಮ ವಿನುರವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (43) |

**ಭಾವಾರ್ಥ :–** ಮಾನವ ಶರೀರದಲ್ಲಿ ಮೂರುಲಕ್ಷ ಐವತ್ತು ಸಾವಿರ ನಾಡಿಗಳಿರುವಂತೆ ಕೇಳಿಬರುತ್ತಿದೆ. ಅದರಲ್ಲಿ 72 ಸಾವಿರ ನಾಡಿಗಳು ಮುಖ್ಯವಾದವು. ಅವುಗಳಿಗಿಂತ ಮುಖ್ಯವಾದವು ಹತ್ತು ಮಾತ್ರ ಇವೆ. ಹತ್ತು ನಾಡಿಗಳಲ್ಲಿ ಪ್ರಧಾನವಾದವು ಮೂರುನಾಡಿಗಳು. ಅವು ಸೂರ್ಯ, ಚಂದ್ರ, ಬ್ರಹ್ಮನಾಡಿಗಳು. ಬ್ರಹ್ಮನಾಡಿಯಲ್ಲಿ ಆತ್ಮಶಕ್ತಿ ಮಿಳಿತವಾಗಿದ್ದು ತನ್ನ ಏಳು ಕೇಂದ್ರಗಳ ಮೂಲಕ ಸೂರ್ಯಚಂದ್ರನಾಡಿಗಳಿಂದ ಸಂಬಂಧಪಟ್ಟು ಆ ನಾಡಿಗಳ ಮೂಲಕ ಶ್ವಾಸಕೋಶಗಳನ್ನು ಕದಲಿಸುತ್ತಾ ಶ್ವಾಸ ಆಡುವಂತೆ ಮಾಡುತ್ತಿದೆ. ಮೂಗಿನ ರಂಧ್ರಗಳಲ್ಲಿ ಆಡುವ ಶ್ವಾಸಕ್ಕೆ ಸೂರ್ಯ, ಚಂದ್ರನಾಡಿಗಳಿಂದ ಬರುವ ಬ್ರಹ್ಮನಾಡಿಯಲ್ಲಿನ ಶಕ್ತಿಯೇ ಕಾರಣ.

ಬಲಮೂಗಿನ ರಂಧ್ರಗಳಲ್ಲಿ ಆಡುವ ಶ್ವಾಸವನ್ನು ಸೂರ್ಯನಾಡಿ ಎಂದು, ಎಡ ಮೂಗಿನ ರಂಧ್ರದಲ್ಲಿ ಆಡುವ ಶ್ವಾಸವನ್ನು ಚಂದ್ರನಾಡಿ ಎಂದು ಎನ್ನುವುದು ಪರಿಪಾಟವಾಗಿದೆ. ಮೂಗುರಂಧ್ರಗಳ ಶ್ವಾಸವನ್ನು ಆ ವಿಧವಾಗಿ ಕರೆಯಬಾರದು. ಶ್ವಾಸಕ್ಕೆ ಕಾರಣವಾದ ಬ್ರಹ್ಮನಾಡಿಗೆ ಎರಡುಕಡೆ ಇರುವ ನಾಡಿಗಳಿಗೆ ಆ ಹೆಸರುಗಳೆಂದು ಗ್ರಹಿಸಬೇಕು. ಈ ಎರಡು ನಾಡಿಗಳ ಮೇಲೆ ಮನಸ್ಸು ನಿವಾಸವಿರುತ್ತದೆ. ಬ್ರಹ್ಮನಾಡಿಗೆ ಬಲಗಡೆಗಿರುವ ಸೂರ್ಯನಾಡಿ ಮೇಲೆ ಮನಸ್ಸಿರುವಾಗ ಬಲ ಮೂಗಿನರಂಧ್ರದಲ್ಲಿ ಶ್ವಾಸ ಹೆಚ್ಚಾಗಿ ಬರುತ್ತಿರುತ್ತದೆ. ಆ ಸಮಯದಲ್ಲಿ ಎಡ ಮೂಗಿನ ರಂಧ್ರದಲ್ಲಿ ಕಡಿಮೆ ಬರುತ್ತಿರುತ್ತದೆ. ಹಾಗೆಯೇ ಎಡನಾಡಿಯಾದ ಚಂದ್ರನಾಡಿ ಮೇಲೆಗೆ ಮನಸ್ಸು ಹೋದಾಗ ಎಡ ಮೂಗಿನ ರಂಧ್ರದಲ್ಲಿ ಗಾಳಿ ಹೆಚ್ಚಾಗಿ ಬರುತ್ತಿರುತ್ತದೆ. ಇದೆಲ್ಲವೂ ಜಾಗ್ರತಾವಸ್ಥೆಯಲ್ಲೇ ನಡೆಯುತ್ತಿರುತ್ತದೆ.

ಮನಸ್ಸೊಂದರ ಸ್ಥಾನಗಳು ತಿಳಿದವನು ಅದನ್ನು ಮಧ್ಯನಾಡಿಯಲ್ಲಿ ಸೇರಿಸುವ ನೈಪುಣ್ಯವನ್ನು ಕೂಡ ತಿಳಿದವನಾಗುತ್ತಾನೆ. ಮನಸ್ಸು ಸೂರ್ಯ, ಚಂದ್ರನಾಡಿಗಳ ಮೇಲೆ ಇಲ್ಲದಂತೆ ಎಚ್ಚರದಿಂದ ಮಧ್ಯನಾಡಿಯೊಳಗೆ ಸೇರಿದಾಗ ಯೋಗವಾಗುತ್ತದೆ. ಆ ಸಮಯದಲ್ಲಿ ಆತ್ಮವೊಂದರ ಅನುಭೂತಿಯನ್ನು ಮನಸ್ಸು ಒದಗಿಸುತ್ತಿರುತ್ತದೆ. ಜೀವಿಯು ಆತ್ಮಾನುಭೂತಿಯನ್ನು ಅನುಭವಿಸುತ್ತಿರುತ್ತದೆ. ಆದ್ದರಿಂದ ರಂಧ್ರದಲ್ಲಿ ಹೊಕ್ಕು ಚಂದ್ರಶಾಲೆ ಸೇರಿ ಚೈತನ್ಯವಾಯಿತು ಎಂದಿದ್ದಾರೆ.

**ತೊಮ್ಮಿಮಾನುಲೋನಿ ತೋರಟ ಜೀವುಲನೆಲ್ಲ**
**ಮೊಲ್ಲ ಲೇಕ ಜಂಪು ಮುದಮು ತೋಡ**
**ನಗ್ಗಿಲೇನಿ ಮಂಟ ಯದಿಯೇಮಿ ಚೋದ್ಯಮೊ**
**ವಿಶ್ವದಾಭಿರಾಮ ವಿನುರವೇಮಾ. (44)**

**ಭಾವಾರ್ಥ :–** ನವರಂಧ್ರ ಶರೀರವಿರುವ ಜೀವಿಗಳೆಲ್ಲರನ್ನು ಕರ್ಮ ತನ್ನ ಅಧೀನದಲ್ಲಿಟ್ಟುಕೊಂಡು ಪಾಪಪುಣ್ಯಗಳೆನ್ನುವ ಕ್ರಮದಿಂದ ಕಷ್ಟ ಸುಖಗಳನ್ನು ಅನುಭವಿಸುವಂತೆ ಮಾಡುತ್ತಿದೆ. ಕರ್ಮ ಕಣ್ಣಿಗೆ ಕಾಣಿಸದೆ ಶರೀರಾಂತರ್ಗತ ದಲ್ಲಿಯೇ ಇದ್ದು ಗುಣಗಳನ್ನು ಪ್ರೇರೇಪಿಸಿ ಚಿತ್ತದಿಂದ ಕೆಲಸಗಳು ನಿರ್ಣಯಿಸುವಂತೆ ಮಾಡಿ ಕಾರ್ಯಗಳನ್ನು ಮಾಡುತ್ತಿರುತ್ತದೆ. ಮಾಡುತ್ತಿರುವ ಕಾರ್ಯಗಳಲ್ಲಿನ ಕಷ್ಟಸುಖಗಳ ಅನುಭೂತಿಗಳನ್ನು ಜೀವಿಯು ಅನುಭವಿ ಸುತ್ತಿರುತ್ತದೆ. ಈ ವಿಧಾನವೆಲ್ಲವೂ ಜೀವಿಗೆ ತಿಳಿಯದೆಯೇ ಒಂದು ಪದ್ಧತಿ ಪ್ರಕಾರ ನಡೆಯುತ್ತಿರುತ್ತದೆ. ಆದ್ದರಿಂದ ಕಷ್ಟಸುಖಗಳೆಲ್ಲವುಗಳಿಗೂ ತಾವೇ ಕಾರಣವೆಂದು ಮಾನವರು ಅಂದುಕೊಳ್ಳುತ್ತಿರುವರು.

ತಾವೇ ಮಾಡುತ್ತಿದ್ದೇವೆಂದು ಪ್ರೀತಿಯಿಂದ ಮಾಡಿದ ಕಾರ್ಯಗಳು ಕೂಡ ಆಯುಧಗಳ ಹಾಗೆ ಹಿಂಸಿಸುತ್ತವೆ. ಆದ್ದರಿಂದ ಆಯುಧಗಳಿಲ್ಲದೆ ಸಾಯಿಸುವ ಪರಿ ನೋಡ ಎಂದಿದ್ದಾರೆ. ನವರಂಧ್ರಗಳ ಶರೀರ ಹೊಂದಿದ್ದೇವೆ ಆದ್ದರಿಂದ ಟೊಳ್ಳುಮರದಲ್ಲಿನ ಜೀವಿಗಳೆಂದಿದ್ದಾರೆ. ಕರ್ಮ ಕಾಣಿಸದಂತೇ

ಆಲೋಚನೆಗಳನ್ನು ಅಗ್ನಿಯಿಂದ ಸುಟ್ಟುಹಾಕುತ್ತಿದೆ. ಆದ್ದರಿಂದ ಕರ್ಮವನ್ನು ಅಗ್ನಿ ಇಲ್ಲದ ಉರಿ ಎಂದು ವೇಮನ ಹೇಳಿದ್ದಾನೆ.

| | |
|---|---|
| **ತೋಲು ತಿತ್ತಿಲೋನ ದೊಲತ ಬುಟ್ಟಿನ ತಾನು** | **ಚರ್ಮ ಚೀಲದೊಳ್ ಆದಿಯಲಿ ಇಟ್ಟವನ** |
| **ವೆನುಕ ತೆಲಿಯವಲಯು ವಿವರಮರಸಿ** | **ಹುಡುಕಿ ತಿಳಿಯಬೇಕು ಮುಂದೆ ಮರತ** |
| **ವೆನುಕ ತೆಲಿಯಲೇಕ ವೆರ್ರಿಯ್ಯೆ ಚೆಡಿಪೋವು** | **ಹಿಂದೆ ತಿಳಿಯ ಬರದೆ ಹುಚ್ಚನಾಗಿ ಕೆಡುವ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (45)** |

**ಭಾವಾರ್ಥ :–** ಶರೀರದಲ್ಲಿ ಜೀವಿಯು ಜನ್ಮಿಸುತ್ತಿದ್ದಾನೆ. ಆದ್ದರಿಂದ ಶರೀರವನ್ನು ತೊಗಲು ಚೀಲ ಎಂದು ಹೇಳಿದ್ದಾರೆ. ಸೃಷ್ಠಿಪೂರ್ವ ಜೀವಿಗಳು ಇಲ್ಲ. ಇಲ್ಲದ ಜೀವಿಗಳು ಪರಮಾತ್ಮ ಸಂಕಲ್ಪದಿಂದ ಸೃಷ್ಠಿಸಲ್ಪಟ್ಟಿದ್ದಾರೆ. ಹುಟ್ಟಿದ ಜೀವಿಗಳು ಪ್ರಕೃತಿಯೊಂದಿಗೆ ಸಂಬಂಧಪಟ್ಟು ಪ್ರಕೃತಿ ಗುಣಗಳಲ್ಲಿ ಸಿಲುಕಿಕೊಂಡು ತಾವು ಜೀವಿಗಳು ಆಗುವುದಕ್ಕಿಂತ ಮೊದಲು ಹೇಗಿದ್ದೆವು? ಯಾರಾಗಿದ್ದೆವು? ಅಂದಿನ ಸ್ಥಿತಿ ಏನು? ಎಂದು ಯಾವಮಾತ್ರ ಯೋಚಿಸುತ್ತಿಲ್ಲ. ಹುಟ್ಟಿದವರು ಪ್ರಪಂಚ ಮಾಯೆಯಲ್ಲಿಯೇ ಸಿಲುಕಿಕೊಳ್ಳದೆ ಜೀವಾತ್ಮವಾಗಿ ಬದಲಾಗದೆ ಮೊದಲು ಯಾರಾಗಿದ್ದೆವೆಂದು ಹಿಂದಿನ ಸ್ಥಿತಿಯನ್ನು ವಿವರವಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಹಾಗೆ ತಿಳಿದುಕೊಳ್ಳುವುದಕ್ಕೆ ಆತ್ಮಜ್ಞಾನ ಅವಶ್ಯ. ಆತ್ಮಜ್ಞಾನ ಇಲ್ಲದ್ದು ಹಿಂದಿನ ಪರಮಾತ್ಮ ಸ್ಥಾನ ತಿಳಿಯುವುದಿಲ್ಲ.

ಜೀವಾತ್ಮವಾದ ತನ್ನ ಸ್ಥಿತಿಯನ್ನು ಕುರಿತು ಯಾವಮಾತ್ರ ಯೋಚಿಸದವರು ಪ್ರತಿನಿತ್ಯ ಪ್ರಪಂಚ ಕಾರ್ಯಗಳನ್ನೇ ಮಾಡುವವುಗಳಲ್ಲೇ ಲಗ್ನವಾಗಿ ಇದ್ದಾರೆ. ಸ್ವಲ್ಪಕಾಲವಿದ್ದು ಎಂದೋ ಒಂದು ದಿನ ಹೇಳದೆಯೇ ಮುಳುಗಿ ಹೋಗುವ ಜೀವನವೇ ದೊಡ್ಡದಾಗಿ ತಿಳಿದುಕೊಂಡು ತನ್ನನ್ನು ತಾನು ಯೋಚಿಸದೆ ಹಿಂದಿನ ತನ್ನ ಸ್ಥಿತಿಯನ್ನು ಕುರಿತು ಜ್ಞಾಪಕ ಮಾಡಿಕೊಳ್ಳದೆ ಕಾಲವನ್ನು ಪಶುಗಳ ಹಾಗೆ ಕಳೆಯುವ ಜೀವಿಗಳು ಜ್ಞಾನಿಗಳ ದೃಷ್ಟಿಯಲ್ಲಿ ಹುಚ್ಚರು. ಆದ್ದರಿಂದ ಹಿಂದೆ ತಿಳಿಯದೆ ಹುಚ್ಚರಾಗಿ ಕೆಟ್ಟುಹೋಗುವರೆಂದು ವೇಮಾರೆಡ್ಡಿ ಹೇಳಿದ್ದಾರೆ.

| | |
|---|---|
| ನಲುಗುರು ದೊಂಗಲಬಟ್ಟುಗ | ನಾಲ್ವರು ಕಳ್ಳರ ಹಿಡಿಯುಲು |
| ತಲ ಬಟ್ಟಗವಲಯುನು ನೊಕನಿ ದಗ ದಂಡಿಂಪನ್ | ತಲೆ ಹಿಡಿಯಬೇಕು ಒಬ್ಬನನ್ನು ದಂಡಿಸ |
| ವಲೆರಾ ಮುವ್ವರಿ ದೀರ್ಚುಮ | ಬೇಕು ಮೂವರ ಬಿಡಲು |
| ಇಲಲೋಪಲ ನೆರುಕ ಫಲಮೊಯಿದಿಯಗು ವೇಮಾ | ಇಳೆಯೋಳ್ ತಿಳಿದು ಫಲಹೊಂದು ವೇಮಾ. (46) |

**ಭಾವಾರ್ಥ :–** ನಮ್ಮ ಶರೀರದಲ್ಲಿ ಶಿರೋಭಾಗದಲ್ಲಿ ಇರುವ ಗುಣಚಕ್ರದಲ್ಲಿ ಮೂರು ಭಾಗಗಳು ಇವೆ. ಆ ಮೂರಕ್ಕೂ ಅತೀತವಾದ ಭಾಗ ಮೂರು ಗುಣಭಾಗಗಳಿಗೆ ಮಧ್ಯದಲ್ಲಿ ಇದೆ. ಮಧ್ಯದಲ್ಲಿರುವ ಭಾಗದಲ್ಲೇ ಶರೀರಕ್ಕೆ ಶಕ್ತಿಯನ್ನು ಕೊಡುವ ಆತ್ಮ ಇದೆ. ಯಾವ ಜೀವಿಯಾದರೂ ಮೂರು ಗುಣಭಾಗಗಳಿಗೆ ಅತೀತವಾದ ಮಧ್ಯದಲ್ಲಿರುವ ನಾಲ್ಕನೆ ಭಾಗದಲ್ಲಿನ ಆತ್ಮವನ್ನು ತಿಳಿಯದೇ ಮೂರು ಗುಣಗಳನ್ನು ಬಿಟ್ಟು ಆತ್ಮನಲ್ಲಿ ಐಕ್ಯವಾಗದೇ ಜನ್ಮರಾಹಿತ್ಯ ವಾದ ಮೋಕ್ಷವನ್ನು ಹೊಂದಲಾರನು.

ಮೂರು ಗುಣಭಾಗಗಳು ಮತ್ತು ಆಚೆ ಇರುವ ಆತ್ಮ ಭಾಗವಾದ ಬ್ರಹ್ಮನಾಡಿಯನ್ನು ತಿಳಿಯಬೇಕೆನ್ನುವ ಉದ್ದೇಶದಿಂದ ನಾಲ್ವರು ಕಳ್ಳರನ್ನು ಹಿಡಿಯಲು ತಲೆ ಹಿಡಿಯಬೇಕು ಎಂದಿದ್ದಾರೆ. ನಾಲ್ವರು ಕಳ್ಳರೆಂದರೆ ಒಟ್ಟು ನಾಲ್ಕು ಭಾಗಗಳೆಂದು, ಹಿಡಿಯಲು ಎಂದರೆ ತಿಳಿಯಬೇಕೆಂದು ಅರ್ಥ. ತಿಳಿದವನು ಮೂರು ಗುಣ ಭಾಗಗಳನ್ನು ಬಿಟ್ಟು ನಾಲ್ಕನೆ ಭಾಗವಾದ ಬ್ರಹ್ಮನಾಡಿಯಲ್ಲೇ ನಿಲ್ಲಬೇಕು. ಆದ್ದರಿಂದ ನೊಕನಿ ದಗ ದಂಡಿಂಪನ್ ವಲೆರಾ ಎಂದಿದ್ದಾರೆ. ಮೂರು ಗುಣಗಳನ್ನು ಪೂರ್ತಿ ಬಿಟ್ಟುಹಾಕು ಎನ್ನುವುದಕ್ಕೆ ಮೂವರ ತೀರಿಸು ಎಂದಿದ್ದಾರೆ. ಹಾಗೆ ಮಾಡುವುದರಿಂದ ಫಲಿತ ಆತ್ಮದರ್ಶನ. ಆದ್ದರಿಂದ ಇಳೆಯೊಳಗೆ ಫಲ ತಿಳಿದು ಐಕ್ಯವಾಗು ಎಂದು ವೇಮನಯೋಗಿ ಹೇಳಿದ್ದಾನೆ.

| | |
|---|---|
| ಅಯಿದು ವರ್ಣಗಳೆನ್ನುವ ಯಖಿಲಂಬು ತೆಲಿಸಿನ | ಐದು ವರ್ಣಗಳೆನ್ನುವ ಯಖಿಲವು ತಿಳಿದರೆ |
| ನಯಿದುನಂದು ಮುಕ್ತಿ ಯಮರಿಯುಂಡು | ಐದರಲ್ಲಿ ಮುಕ್ತಿ ಒಳಗೊಂಡಿರುತ್ತದೆ |
| ನಯಿದುಲೋನ ನುನ್ನ ಯತಡೆಪೋ ಯಖಿಲಮು | ಐದರಲ್ಲಿರುವ ಆತನೇ ಅಖಿಲವು |
| ವಿಶ್ವದಾಭಿರಾಮ ವಿನುರ ವೇಮಾ. | ವಿಶ್ವದಾಭಿರಾಮ ಕೇಳು ವೇಮಾ. (47) |

**ಭಾವಾರ್ಥ :–** ಪ್ರಕೃತಿಯಾದ ಪಂಚಭೂತಗಳಿಂದ ನಿರ್ಮಿಸಲ್ಪಟ್ಟಿರುವ ಶರೀರದಲ್ಲೇ ಅಖಿಲಜೀವರಾಶಿಗಳಿಗು ಅಧಿಪತಿಯಾದ ಆತ್ಮವನ್ನು ತಿಳಿಯಬೇಕು. ಪಂಚಭೂತ ನಿರ್ಮಾಣ ಶರೀರಕ್ಕೆ ಹೊರಗೆ ಎಷ್ಟು ಹುಡುಕಿದರೂ ಅಖಿಲ ಜೀವಿಗಳಿಗು ಕಾರಣವಾದವನು ತಿಳಿಯುವುದಿಲ್ಲ. ಪಂಚಭೂತಗಳಿಂದ ಪಂಚೀಕರಣ ಹೊಂದಿದ ಶರೀರದಲ್ಲಿ ಮೂಲ ಪುರುಷನಾದ ಆತ್ಮವನ್ನು ತಿಳಿದರೆ, ಶರೀರದ ಹೊರಗೆ ಪಂಚಭೂತಗಳಲ್ಲಿ ಮೂಲ ಪುರುಷನಾದ ಆತ್ಮವನ್ನು ತಿಳಿದರೆ, ಶರೀರದ ಹೊರಗೆ ಪಂಚಭೂತಗಳಲ್ಲಿ ಅಣುವಣುವಿನಲ್ಲಿ ವ್ಯಾಪಿಸಿರುವ ಪರಮಾತ್ಮವನ್ನು ತಿಳಿಯಬಹುದು. ಆದ್ದರಿಂದ ಐದು ವರ್ಣಗಳನ್ನೇ ಅಖಿಲಂಬು ತಿಳಿದ ಐದರಲ್ಲಿ ಮುಕ್ತಿ ಒಳಗೊಂಡಿರುತ್ತದೆ ಎಂದಿದ್ದಾರೆ.

ಶರೀರಾಂತರ್ಗತದಲ್ಲಿ ಸರ್ವಜೀವಿಗಳಿಗು ಕಾರಣವಾದ ಆತ್ಮವನ್ನು ತಿಳಿದರೆ, ಶರೀರದ ಹೊರಗಿರುವ ಐದು ಭಾಗಗಳಾದ ಪಂಚಭೂತಗಳಲ್ಲಿ ವ್ಯಾಪಿಸಿದವನು ತಿಳಿಯುವನು. ಹೊರಗೆ ಐದು ಭಾಗಗಳಲ್ಲಿ ಮಿಳಿತವಾಗಿರುವ ಪರಮಾತ್ಮವೇ ಸರ್ವಕ್ಕೂ ಕಾರಣ. ಆದ್ದರಿಂದ ಐದರಲ್ಲಿರುವ ಆತನೇ ಅಖಿಲವು ಎಂದಿದ್ದಾರೆ. ಐದು ವರ್ಣಗಳನ್ನು ಶರೀರವಾಗಿ ತಿಳಿಸಿ ಉಳಿದ ಐದು ಭಾಗಗಳನ್ನು ಶರೀರದ ಹೊರಗೆ ಪಂಚಭೂತಗಳಾಗಿ ತಿಳಿಯಬೇಕು. ಮಣಿಗಳ ಮಧ್ಯದಲ್ಲಿ ಕಾಣಿಸದೆ, ಮಣಿಗಳಿಗೆ ಆಧಾರವಾಗಿರುವ ದಾರ ಕಾಣಿಸದಹಾಗೆ, ಪಂಚಭೂತ ಗಳಲ್ಲೇ ಕಾಣಿಸದೆ ವ್ಯಾಪಿಸಿ ಇರುವವನು ಪರಮಾತ್ಮಯೆಂದು ತಿಳಿಯಬೇಕು.

**ಐದುನ್ನೈದು ನೆನ್ಮಿ ದಾರುನು ನೊಕ್ಕಟಿ**
**ಯೊಡಲೋನ ನುಂಡಿ ಯೋರಸಿಲ್ಲು**
**ನೊಡ ಯೊಕ್ಕಿ ತಿರುಗು ನೋಡಯತಡೆ ತತ್ವಂಬು**
**ವಿಶ್ವದಾಭಿರಾಮ ವಿನುರ ವೇಮಾ. (48)**

**ಭಾವಾರ್ಥ :–** ಶರೀರದಲ್ಲಿ ಇಪ್ಪತ್ತೈದು ಭಾಗಗಳಿವೆಯೆಂದು ಸಾಂಖ್ಯದ ಮೂಲಕ ತಿಳಿಯುತ್ತಿದೆ. ನಿರ್ದಿಷ್ಟವಾದ ಕೆಲಸವನ್ನು ಮಾಡುವ ಅವಯವವನ್ನು ಒಂದು

ಭಾಗವಾಗಿ ಗುರುತಿಸುತ್ತಿದ್ದೇವೆ. ಉದಾಹರಣೆಗೆ ಕಣ್ಣು ಒಂದು ಭಾಗವಾಗಿ ಇದೆ. ಕಣ್ಣು ನೋಡುವ ಕೆಲಸ ಹೊರತು ಬೇರೆ ಯಾವ ಕೆಲಸ ಮಾಡುವುದಿಲ್ಲ. ದೃಶ್ಯವನ್ನು ಗ್ರಹಿಸುವ ನಿರ್ದಿಷ್ಟ ಭಾಗವಾಗಿ ಇರುವುದರಿಂದ ಕಣ್ಣನ್ನು ಶರೀರದಲ್ಲಿ ಒಂದು ಭಾಗವಾಗಿ ಗುರುತಿಸಿದ್ದೇವೆ. ಹಾಗೆಯೇ ಕಿವಿ ಮುಂತಾದವೆಲ್ಲವೂ ಲೆಕ್ಕಿಸಲಾಗುತ್ತದೆ. ಜೀವಾತ್ಮ ಕೂಡ ಅನುಭೂತಿಗಳನ್ನು ಅನುಭವಿಸುವ ಕಾರ್ಯ ಮಾಡುತ್ತಿದ್ದಾನೆ. ಆದ್ದರಿಂದ ಜೀವಾತ್ಮ ಕೂಡಾ ಒಂದು ಭಾಗವಾಗಿ ಲೆಕ್ಕಿಸಲಾಗಿದೆ.

| | | | |
|---|---|---|---|
| **ಜ್ಞಾನೇಂದ್ರಿಯಗಳು** | = | **5** | |
| **ಕರ್ಮೇಂದ್ರಿಯಗಳು** | = | **5** | |
| **ವಾಯುಗಳು** | = | **5** | **ಒಟ್ಟು = 25** |
| **ತನ್ಮಾತ್ರಗಳು** | = | **5** | |
| **ಅಂತಃಕರಣಗಳು** | = | **5** | |

ಇಪ್ಪತ್ತೈದು ಇಂದ್ರಿಯ ಭಾಗಗಳ ಮೇಲೆ ಇಪ್ಪತ್ತಾರನೆ ಭಾಗವಾಗಿ ಇದ್ದು ಇಪ್ಪತ್ತೈದು ಇಂದ್ರಿಯಗಳಿಗೆ ಶಕ್ತಿ ಕೊಟ್ಟು ಕದಲಿಸುತ್ತಿರುವುದು ಆತ್ಮ. ಮೇಲಿನ ಪದ್ಯದಲ್ಲಿ ಐದುನೈದು ಇಪ್ಪತ್ತೈದು ಎಂದು ಒಟ್ಟು 25 ಬರುವಹಾಗೆ ತಿಳಿಸಿದ್ದಾರೆ. ಶರೀರವನ್ನು ಹಡಗಿಗೆ ಹೋಲಿಸಿ 25 ಭಾಗಗಳು ಶರೀರದಲ್ಲಿ ಇವೆಯೆಂದು ತಿಳಿಸುತ್ತಾ ಶರೀರದಲ್ಲಿ ಮೇಲಿನ ಶಿರೋಭಾಗದಲ್ಲಿ ಇದ್ದು ಶರೀರವನ್ನು ನಡೆಸುವವನು ಆತ್ಮ. ಆದ್ದರಿಂದ ಹಡಗನ್ನೇರಿ ತಿರುಗುವ ಹಡಗು ಆತನೇ ಎಂದು ವೇಮನ ಯೋಗಿ ಶರೀರ ರಹಸ್ಯವನ್ನು ಸುಲಭವಾಗಿ ತಿಳಿಸಿದ್ದಾನೆ.

| | |
|---|---|
| **ಒಕಟಿ ರೆಂಟ ಮೂಡ ಯೋಗೀಂದ್ರುನಿ ಗೂಡಿ** | **ಒಂದು, ಎರಡು, ಮೂರು ಯೋಗೀಂದ್ರನ ಕೂಡಿ** |
| **ಯುದಯ ಪರ್ವತಂಬು ಮೊದಲಿ ಗಿರುಲ** | **ಉದಯ ಪರ್ವತದಲಿ ಮೊದಲ ಗಿರಿಗಳ** |
| **ಕ್ರಮಮೆರಿಂಗಿ ಕಾಂಚು ಘನ ಪಟ್ಟನಂಬುಲ** | **ಕ್ರಮನ್ನರಿತು ಕಾಣ ಘನ ಪಟ್ಟಣವನು** |
| **ವೀರು ಡೊಕ್ಕಮೇಲು ವಿನುರ ವೇಮಾ.** | **ವೀರ ನೋರ್ವನಾಳುವ ಕೇಳು ವೇಮಾ. (49)** |

**ಭಾವಾರ್ಥ :–** ನಮ್ಮ ಶರೀರದಲ್ಲಿ ಮುಖ್ಯವಾದವು ಮೂರುನಾಡಿಗಳಿವೆ. ಒಂದು ಸೂರ್ಯನಾಡಿ, ಎರಡು ಚಂದ್ರನಾಡಿ, ಮೂರು ಬ್ರಹ್ಮನಾಡಿ. ಮುಖ್ಯವಾದ ಬ್ರಹ್ಮನಾಡಿಯಲ್ಲೇ ಅಸಲಾದ ಆತ್ಮ ನಿವಾಸವಾಗಿ ಇದೆ. ಆ ಬ್ರಹ್ಮನಾಡಿ ಏಳು ನಾಡೀಕೇಂದ್ರಗಳಾಗಿ ವಿಭಜಿಸಲ್ಪಟ್ಟಿದೆ. ಏಳನೆ ನಾಡೀಕೇಂದ್ರವಾದ ಮೆದುಳು ಭಾಗದಲ್ಲಿಯೇ ಆತ್ಮ ನಿವಾಸವಾಗಿ ಅಲ್ಲಿಂದ ತನ್ನ ಚೈತನ್ಯಶಕ್ತಿಯನ್ನು ಉಳಿದ ಆರು ನಾಡೀಕೇಂದ್ರಗಳ ಮೂಲಕ ಶರೀರವೆಲ್ಲದಕ್ಕೂ ವ್ಯಾಪಿಸುವಂತೆ ಮಾಡುತ್ತಿದೆ.

ಮೂರು ನಾಡಿಗಳ ವಿವರ ತಿಳಿದು ಅದರಲ್ಲಿರುವ ಆತ್ಮ ಕೂಡುವುದನ್ನು ಒಂದು ಎರಡು ಮೂಟೆ ಯೋಗೀಂದ್ರನ ಕೂಡಿ ಎಂದಿದ್ದಾರೆ. ಯೋಗೀಂದ್ರ ನೆಂದರೆ ಆತ್ಮಯೆಂದು ತಿಳಿಯಬೇಕು. ಏಳು ನಾಡೀಕೇಂದ್ರಗಳನ್ನು ಪರ್ವತಗಳಾಗಿ ಹೋಲಿಸಿ ಮೊದಲ ನಾಡೀಕೇಂದ್ರದಿಂದ ಕೊನೆಯ ನಾಡೀಕೇಂದ್ರದವರೆಗು ತಿಳಿಯಬೇಕೆನ್ನುತ್ತಾ ಉದಯ ಪರ್ವತದಲ್ಲಿ ಮೊದಲ ಗಿರಿಗಳ ಕ್ರಮವನ್ನರಿತು ಎಂದಿದ್ದಾರೆ. ಒಂದೊಂದು ನಾಡೀಕೇಂದ್ರದ ಸಾರಾಂಶ ತಿಳಿಯುವುದನ್ನು ಘನಪಟ್ಟಣವನ್ನು ವೀರನೊಬ್ಬನಾಳ್ವ ಎಂದಿದ್ದಾರೆ. ವೀರನೊಬ್ಬನು ಎಂದರೆ ಆತ್ಮ ಒಂದೇ ಎಂದು ಅರ್ಥ.

| | |
|---|---|
| **ಪ್ರೊದ್ದುಪೊಡುಚು ಚೋಟು ಪ್ರೊದ್ದುನಿಲುಚು ಚೋಟು** | **ಹೊತ್ತು ಮೂಡುವ ಸ್ಥಳ ಹೊತ್ತು ನಿಲ್ಲುವ ಸ್ಥಳ** |
| **ಪ್ರೊದ್ದುಗ್ರುಂಕು ಚೋಟು ಪೊಸಗ ಜೂಚಿ** | **ಹೊತ್ತು ಮುಳುಗುವ ಸ್ಥಳ ಹೊಂದಿ ನೋಡಿ** |
| **ಪ್ರೊದ್ದೆರಿಗಿನವಾಡು ಪೊಲುಪ್ಪೈನ ಯೋಗಿರಾ** | **ಹೊತ್ತನ್ನರಿತವನು ಉತ್ತಮವಾದ ಯೋಗಿ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (50) |

**ಭಾವಾರ್ಥ :–** ಹೊತ್ತು ಎಂದರೆ ಬೆಳಕು ಎಂದು ಎಲ್ಲರಿಗೂ ತಿಳಿಯುತ್ತದೆ. ಹಾಗೆಯೇ ನಮ್ಮ ಶರೀರದಲ್ಲಿ ಕೂಡ ಜ್ಞಪ್ತಿಯೆನ್ನುವ ಹೊತ್ತು ಇದೆ. ಜ್ಞಪ್ತಿ ಎಂದರೆ ಮನಸ್ಸೆಂದು ಮುಖ್ಯವಾಗಿ ತಿಳಿಯಬೇಕು. ನಿದ್ರಾವಸ್ಥೆಯಲ್ಲಿ ಜ್ಞಪ್ತಿ ಇಲ್ಲ, ಜಾಗ್ರತಾವಸ್ಥೆಯಲ್ಲಿ ಇದೆ. ಚೆನ್ನಾಗಿ ಆಲೋಚಿಸಿ ಜ್ಞಪ್ತಿ ಎಲ್ಲಿಂದ ಶರೀರದಲ್ಲಿ ಉಂಟಾಗುತ್ತಿದೆ? ಆ ಜ್ಞಪ್ತಿ ಶರೀರದಲ್ಲಿ ಹೇಗೆ ನಿದ್ರಾವಸ್ಥೆಯಲ್ಲಿ ಇಲ್ಲದಂತೆ

ಹೋಗುತ್ತಿದೆ? ಎಚ್ಚರದಲ್ಲಿ ಬಂದಿರುವ ಜ್ಞಪ್ತಿ ಜಾಗ್ರತೆಯಲ್ಲಿ ಹೇಗೆ ನಿಂತಿರುವುದು ತಿಳಿದವನು ಯೋಗಿ ಆಗುತ್ತಾನೆ. ಮನಸ್ಸಿಗೆ ಮತ್ತೊಂದು ಹೆಸರು ಜ್ಞಪ್ತಿ ಎನ್ನುತ್ತೇವೆ. ಮನಸ್ಸು ಜಾಗ್ರತಾವಸ್ಥೆಯಲ್ಲಿ ಸೂರ್ಯ ಚಂದ್ರ ನಾಡಿಗಳ ಮೇಲೆ ಇರುತ್ತದೆಂದು ತಿಳಿದುಕೊಂಡಿದ್ದೇವೆ. ನಿದ್ರಾವಸ್ಥೆಯಲ್ಲಿ ಬ್ರಹ್ಮನಾಡಿಯಲ್ಲಿ ಸೇರುತ್ತಿದೆ. ಬ್ರಹ್ಮನಾಡಿಯಿಂದ ಸೂರ್ಯ, ಚಂದ್ರನಾಡಿಗಳನ್ನು ಸೇರುವುದು, ಸೂರ್ಯ ಚಂದ್ರನಾಡಿಗಳಿಂದ ಬ್ರಹ್ಮನಾಡಿ ಸೇರುವುದೊಂದರ ವಿವರ ಮನಸ್ಸನ್ನು ಕುರಿತು ತಿಳಿದುಕೊಂಡ ನಂತರವೇ ತಿಳಿಯುತ್ತದೆ. ಮನಸ್ಸೊಂದರ ವಿವರಗಳನ್ನೆಲ್ಲಾ ತಿಳಿದವನು ನಿಜವಾದ ಯೋಗಿ ಆಗುತ್ತಾನೆ. ಆದ್ದರಿಂದ ಮೇಲಿನ ಪದ್ಯದಲ್ಲಿ ಮನಸ್ಸನ್ನು ಹೊತ್ತಿಗೆ ಹೋಲಿಸಿ ಹೊತ್ತು ಮೂಡುವ ಸ್ಥಳ ಹೊತ್ತು ನಿಲ್ಲುವ ಸ್ಥಳ ಹೊತ್ತು ಮುಳುಗುವ ಸ್ಥಳ ಎಂದು ಮನಸ್ಸು ಬದಲಾಗುವ, ಸೂರ್ಯ, ಚಂದ್ರ, ಬ್ರಹ್ಮನಾಡಿಗಳ ಕುರಿತು ತಿಳಿಸಿದ್ದಾರೆ. ಮೂರು ನಾಡಿಗಳನ್ನು ತಿಳಿದು ಮನಸ್ಸನ್ನು ತಿಳಿದವನು ಯೋಗಿ ಎನ್ನುತ್ತಾ ಹೊತ್ತನ್ನರಿತವನು ಉತ್ತಮ ಯೋಗಿ ಎಂದಿದ್ದಾರೆ.

| | |
|---|---|
| **ಆಶಚೇತ ಧನಮು ನಾರ್ಜಿಂಪಗಾನೇಲ** | **ಆಸೆಯಿಂದ ಧನವನ್ನು ಪಡೆಯುವುದೇಕೆ** |
| **ಮಟ್ಟಿಕ್ರಿಂದ ಬೆಟ್ಟಿ ಮರುವನೇಲ** | **ಮಣ್ಣಿನೊಳಗೆ ಊತು ಮರೆಯುವುದೇಕೆ** |
| **ಧನಮು ಪೋವು ವೆನುಕ ಧರ್ಮಂ ಬದೇಲರಾ** | **ಧನವು ಹೋಗುವುದರ ಹಿಂದೆ ಧರ್ಮ ಹೋದರೇತಕೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (51)** |

**ಭಾವಾರ್ಥ :–** ಕೆಲವರು ಜ್ಞಾನವನ್ನು ತಿಳಿದುಕೊಂಡು ಅದರಂತೆ ಆಚರಿಸದೆ ತಿಳಿದವರೆಂದು ತಿರುಗುತ್ತಿರುತ್ತಾರೆ. ಜ್ಞಾನ ಆಚರಣೆ ಇಲ್ಲದೆ ಏನೂ ಪ್ರಯೋಜನ ವಿಲ್ಲ. ಆಚರಣೆ ಇಲ್ಲದ ಜ್ಞಾನ ಉಪಯೋಗಪಡದ ಧನದೊಂದಿಗೆ ಸಮಾನ. ಕೆಲವರು ಆಸೆಯಿಂದ ಧನವನ್ನು ಸಂಪಾದಿಸಿ ಅವರು ತಿನ್ನದೆ, ಇನ್ನೊಬ್ಬರಿಗೆ ಇಡದೆ ಭೂಮಿಯಲ್ಲಿ ಬಚ್ಚಿಟ್ಟರೆ ಏನು ಪ್ರಯೋಜನ? ಹಾಗೆಯೇ ತಿಳಿಯಬೇಕೆನ್ನುವ ಕೋರಿಕೆಯಿಂದ ಜ್ಞಾನ ತಿಳಿದು ಆಚರಿಸದೆ, ಇತರರಿಗೆ ತಿಳಿಸಿ ಅವರನ್ನು ಆಚರಿಸುವಂತೆ ಮಾಡದಿದ್ದರೇ ಧರ್ಮ ಅಲ್ಲವೆಂದು ಮೇಲಿನ ಪದ್ಯದಲ್ಲಿನ ಭಾವ.

| | |
|---|---|
| **ಪೇದವಾನಿ ಬಾಧ ಪೆನುಭೂತಮ್ಮೆಯುಂಡು** | **ಬಡವನ ಬಾಧೆ ಪೆಡಂಭೂತವಾಗಿದ್ದು** |
| **ಜಾಡಲೇದು ಬಾಧ ಚೂಡವಶಮೇ** | **ಬಾಧೆ ಕಂಡು ಕಳೆಯೇ ಮಾರ್ಗವಿಲ್ಲ** |
| **ಕಲುಗು ವಾನಿ ಬಾಧ ಕನುಲ ಜೂಡಗಲೇಮಿ** | **ಉಳ್ಳ ಜನರ ಬಾಧೆ ಕಣ್ಣು ಸಹಿಸದಲ್ಲಿ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (52) |

**ಭಾವಾರ್ಥ :–** ಧನವು ಇಲ್ಲದವನು ಬಡವನು. ಹಾಗೆಯೇ ಜ್ಞಾನಧನ ಇಲ್ಲದವನು ನಿಜಕ್ಕೂ ಬಡವನು. ಧನವಿಲ್ಲದವನಿಗೆ ಪ್ರಪಂಚ ತೊದರೆಗಳು ಇದ್ದಂತೆ, ಜ್ಞಾನಧನ ಇಲ್ಲದವನಿಗೆ ಕರ್ಮಗಳಿಂದ ತೊಂದರೆಗಳಿರುತ್ತವೆ. ಕಣ್ಣಿಗೆ ಕಾಣಿಸದಿರುವುದು ಕರ್ಮ. ಆದ್ದರಿಂದ ಯಾವಾಗ ಯಾವ ಕರ್ಮ ಇದೆಯೋ ಯಾರಿಗೂ ತಿಳಿದಿಲ್ಲ. ಅನುಭವಿಸುವಾಗ ಮಾತ್ರ ಬಾಧೆ ತಿಳಿಯುತ್ತದೆ. ಕರ್ಮದಿಂದ ಉಂಟಾಗುವ ಬಾಧೆಯನ್ನು ಹೊರಗಿನವರು ನೋಡುತ್ತಿದ್ದಾರೆ. ಆದರೆ ಕರ್ಮ ಎದುರಿಗಿರುವವರಿಗೂ ಕೂಡಾ ತಿಳಿಯುವುದಿಲ್ಲ.

ಭೂತ ಕಾಣಿಸುವುದಿಲ್ಲ, ಕಾಣಿಸದೆಯೇ ಮನುಷ್ಯನನ್ನು ಹಿಂಸಿಸುತ್ತಿರುತ್ತದೆ. ಆದ್ದರಿಂದ ಕರ್ಮವನ್ನು ಪೆಡಂಭೂತವಾಗಿ ವರ್ಣಿಸಿದ್ದಾರೆ. ಹಿಂಸೆಗೆ ಕಾರಣವಾದ ಕರ್ಮವನ್ನು ನೋಡಲು ಕೈಲಾಗುವುದಿಲ್ಲ. ಆದ್ದರಿಂದ ಜಾಡಿಲ್ಲದ ಹಿಂಸೆ ಕಾಣಿಸುತ್ತದೆ ಎಂದಿದ್ದಾರೆ. ಪ್ರತಿ ಹಿಂಸೆಗು, ಕಷ್ಟಕ್ಕೂ, ನಷ್ಟಕ್ಕೂ ಹಾಗೆಯೇ ಮಾನವನ ಅನುಭವಕ್ಕೆ ಕರ್ಮ ಕಾರಣವಾಗಿ ಇದೆ. "ಜ್ಞಾನಾಗ್ನಿ ಸರ್ವ ಕರ್ಮಾಣಿ ಭಸ್ಮಸಾತ್" ಎನ್ನುವಂತೆ ಜ್ಞಾನವೆನ್ನುವ ಅಗ್ನಿಯಿಂದ ಸರ್ವ ಕರ್ಮಗಳು ನಾಶವಾಗುತ್ತವೆ. ಅದು ಇಲ್ಲದವನು ಪ್ರಪಂಚದಲ್ಲಿ ಎಷ್ಟು ಧನಿಕನಾದರೂ ಜ್ಞಾನಿಗಳ ಲೆಕ್ಕದಲ್ಲಿ ಬಡವರಿಗೆ ಸಮಾನ.

| | |
|---|---|
| **ಮೂಡು ಲೋಕಮುಲನು ಮೊನಸಿ ಯೊಕ್ಕಟಿ ಜೇಸಿ** | **ಮೂರು ಲೋಕಗಳನ್ನು ಮನವ ನೊಂದುಮಾಡಿ** |
| **ಯಾರು ತಾರಮುಲನಂಟ ಗೂರ್ಚಿ** | **ಆರು ಲೋಕಗಳನ್ನು ಹೊಂದಿಸಿಟ್ಟು** |
| **ಸ್ಥಿರಮುಗಾನೆ ಯುಂಡು ಶಿವಮೂರ್ತಿ** | **ಸ್ಥಿರವಾಗಿರುವಂಥ ಶಿವಮೂರ್ತಿಯೇ ಗುರುವು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (53) |

**ಭಾವಾರ್ಥ :–** ಜ್ಞಾನ ತಿಳಿದವನು ಆತ್ಮ ಸಾಧನೆ ಮಾಡುತ್ತಿರುತ್ತಾನೆ. ಸಾಧನೆಯಲ್ಲಿ ಮನಸ್ಸು, ಮೂರು ಗುಣಗಳ ವಿಷಯಗಳ ಜ್ಞಪ್ತಿ ಇಲ್ಲದಂತೆ ಹೋಗಿ ಗುಣಗಳಿಗೆ ಆಚೆ ಇರುವ ಆತ್ಮಜ್ಞಪ್ತಿಯಲ್ಲಿ ಲಗ್ನವಾಗಿರುತ್ತಾನೆ. ಮನಸ್ಸು ಮೂರು ಗುಣಗಳ ವಿಷಯಗಳನ್ನು ಬಿಡುತ್ತಿದೆ. ಆದ್ದರಿಂದ ಮೂರು ಲೋಕಗಳ ಬಿಟ್ಟು ಎಂದಿದ್ದಾರೆ. ಮೂರು ಗುಣಗಳಿಗೂ ಆಚೆ ಒಂದಾದ ಆತ್ಮ ಜ್ಞಪ್ತಿಯಲ್ಲಿ ಸೇರಿ ಇದೆ. ಆದ್ದರಿಂದ ಒಂದು ಮಾಡಿ ಎಂದಿದ್ದಾರೆ.

ಯೋಗದಲ್ಲಿ ಲಗ್ನವಾಗಿ ಇರುವಾಗ ಬ್ರಹ್ಮನಾಡಿಯಲ್ಲಿನ ಆರು ಕೇಂದ್ರಗಳು ಸ್ಥಂಭಿಸಿ ಹೋಗುತ್ತವೆ. ಏಳನೆ ಕೇಂದ್ರವಾದ ಶಿರೋಭಾಗದಲ್ಲೇ ಆತ್ಮ ನಿವಾಸವಾಗಿ ಇದೆ. ಆದ್ದರಿಂದ ಆ ಒಂದು ಸ್ಥಾನ ಚೈತನ್ಯವಾಗಿದ್ದು ಉಳಿದ ಆರು ಕೇಂದ್ರಗಳು ಕೆಲಸ ಮಾಡದೆ ನಿಂತುಹೋಗುತ್ತವೆ. ಆದ್ದರಿಂದ ಮೇಲಿನ ಪದ್ಯದಲ್ಲಿ ಆರು ತಾರಗಳ ನಂತರ ಕುಳಿತು ಎಂದಿದ್ದಾರೆ. ಶರೀರದಲ್ಲಿ ಆರು ಕೇಂದ್ರಗಳು ಕೆಲಸ ಮಾಡದಿರುವುದರಿಂದ ಅಂತಹ ಯೋಗಿ ಆತ್ಮಾನುಭೂತಿ ಯನ್ನು ಅನುಭವಿಸುತ್ತಾ ಏಕ ಸ್ಥಾಯಿಯಾಗಿ ಇರುತ್ತಾನೆ. ಅಂತಹ ಸಮಯದಲ್ಲಿ ಜೀವಾತ್ಮ, ಆತ್ಮವನ್ನು ಸೇರಿದೆ. ಆದ್ದರಿಂದ ಯೋಗಿಯನ್ನು ಶಿವಮೂರ್ತಿ ಎನ್ನಲಾಗಿದೆ.

| | |
|---|---|
| **ಅಂತರಂಗಮಂದು ನಪರಾಧಮುಲು ಚೇಸಿ** | **ಅಂತರಂಗದಲ್ಲಿ ಅಪರಾಧಗಳ ನೈಸಗಿ** |
| **ಮಂಚಿವಾನಿ ವಲೆನೆ ಮನುಜುಡುಂಡು** | **ಸಜ್ಜನನ ರೀತಿ ಮನುಜ ನಿರುವ** |
| **ಇತರು ಲೆರುಗಕುನ್ನ ನೀಶ್ವರುಂಡೆರುಗಡಾ** | **ಇತರರಿಯದಿರಲು ಈಶ್ವರ ನರಿಯನೇ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (54) |

**ಭಾವಾರ್ಥ :–** ಜೀವಿಯು ಶರೀರದಲ್ಲಿ ನಿವಾಸವಿದ್ದಾನೆ. ಗುಣಚಕ್ರದಲ್ಲಿ ಗುಣಗಳ ಮಧ್ಯದಲ್ಲಿ ನಿವಾಸವಿರುವ ಜೀವಿಯು ಯಾವುದೋ ಒಂದು ಗುಣದೊಂದಿಗೆ ಸಂಬಂಧಪಟ್ಟಿರುತ್ತಾನೆ. ಗುಣಗಳ ಪ್ರೇರಣೆಯಿಂದ ನಡೆಯುವ ಕೆಲಸಗಳೆಲ್ಲವುಗಳ ಅನುಭೂತಿಯನ್ನು, ಗುಣಗಳಲ್ಲಿ ಜೀವಿಯು ಅನುಭವಿಸುತ್ತಿದ್ದಾನೆ. ಗುಣಚಕ್ರಕ್ಕೆ

ಆಧಾರವಾಗಿ ಮಧ್ಯದಲ್ಲಿರುವ ಬ್ರಹ್ಮನಾಡಿಯಲ್ಲಿ ಆತ್ಮನಿವಾಸವಿದ್ದು ಗುಣಗಳಿಗೆ, ಜೀವಿಗೆ ಸಾಕ್ಷಿಯಾಗಿದೆ. ಯಾವಾಗ ಯಾವ ಗುಣ ವಿಜೃಂಭಿಸಿರುವುದು, ಯಾವಾಗ ಜೀವಾತ್ಮ ಯಾವ ಬಾಧೆ ಇಲ್ಲದೆ ಸುಖವನ್ನು ಅನುಭವಿಸುವುದು ನೋಡುತ್ತಾ ಸಾಕ್ಷಿಯಾಗಿ ಇದೆ. ಎಲ್ಲ ಗುಣಗಳು ಬ್ರಹ್ಮನಾಡಿಯಿಂದ ಪ್ರಯಾಣ ಮಾಡಬೇಕು. ಆದ್ದರಿಂದ ಬ್ರಹ್ಮನಾಡಿಯಲ್ಲಿನ ಆತ್ಮಕ್ಕೆ ತಿಳಿಯದೆ ಯಾವ ಕೆಲಸ ನಡೆಯುವುದಿಲ್ಲ. ಅಂತರಂಗದಲ್ಲಿ ಎಲ್ಲದಕ್ಕೂ ಆತ್ಮ ಸಾಕ್ಷಿಯಾಗಿ ಇದೆಯೆಂದು ತಿಳಿಯದ ಕೆಲವರು ಪ್ರಪಂಚದಲ್ಲಿ ಕೆಲವು ಕೆಟ್ಟ ಕೆಲಸಗಳು ಯಾರೂ ಇಲ್ಲದ ಕಡೆ, ಯಾರೂ ನೋಡದಿರುವಾಗ ರಹಸ್ಯವಾಗಿ ಮಾಡಿ ನಾವು ಮಾಡಿದ ಕೆಲಸಗಳು ಯಾರೂ ನೋಡಲಿಲ್ಲ ಎಂದುಕೊಳ್ಳುತ್ತಿದ್ದಾರೆ. ಮೇಲ್ನೋಟಕ್ಕೆ ಒಳ್ಳೆಯವರಂತೆ ಕಾಣಿಸುತ್ತಿದ್ದಾರೆ. ಬಾಹ್ಯವಾಗಿ ಯಾರು ನೋಡದಿದ್ದರೂ ಅಂತರಂಗದಲ್ಲಿ ಆತ್ಮ ಎಲ್ಲವನ್ನೂ ನೋಡುತ್ತಿದೆ. ಆದ್ದರಿಂದ ಮೇಲಿನ ಪದ್ಯದಲ್ಲಿ ಇತರರು ನೋಡದಿದ್ದರೂ ಈಶ್ವರನು ನೋಡುವುದಿಲ್ಲವಾ ಎಂದಿದ್ದಾರೆ.

**ಮುರಿಕಿ ಲೋನ ಬುಟ್ಟಿ ಮುರಿಕಿಲೋನ ಪೆರಿಗೆ**
**ಮುರಿಕಿ ತನವು ಕಿಂತ ಮುರಿಪೆ ಮೇಲ**
**ಮುರಿಕೆರುಂಗು ನತಡು ಮುರಿಕಿಲೋ ಬುಟ್ಟುನಾ?**
**ವಿಶ್ವದಾಭಿರಾಮ ವಿನುರ ವೇಮಾ.**

**ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲಿ ಬೆಳೆದು**
**ಕೆಸರು ತನವುಗಿಷ್ಟು ದರ್ಪಯೇಕೆ**
**ಕೆಸರನ್ನು ತಿಳಿಯುವವನು ಕೆಸರಿನಲ್ಲಿ**
**ಹುಟ್ಟುವನಾ?**
**ವಿಶ್ವದಾಭಿರಾಮ ಕೇಳು ವೇಮಾ.** (55)

**ಭಾವಾರ್ಥ :–** ಪ್ರತಿ ಜೀವರಾಶಿ ಕರ್ಮದಿಂದ ಜನ್ಮಿಸುತ್ತಿದೆ. ಕರ್ಮ ಕಾರಣ ದಿಂದಲೇ ಬೆಳೆಯುತ್ತಿದೆ. ಕರ್ಮದಿಂದಲೇ ಪ್ರತಿ ಕಷ್ಟಸುಖಗಳನ್ನು ಅನುಭವಿಸುತ್ತಿದೆ. ಆದರೆ ಯಾವ ಜೀವರಾಶಿ ಕರ್ಮ ಕಾರಣದಿಂದಲೇ ಪ್ರತಿ ಕಾರ್ಯ ನಡೆಯುತ್ತಿದೆಯೆಂದು ಯಾವಮಾತ್ರ ತಿಳಿಯದೆ ಅಜ್ಞಾನದಲ್ಲೇ ಕಾಲವನ್ನು ಕಳೆಯುತ್ತಿವೆ. ಪ್ರತಿ ಕೆಲಸಕ್ಕೂ ತಮ್ಮ ಸ್ವಂತ ಪ್ರಯತ್ನವೇ ಕಾರಣವೆಂದುಕೊಳ್ಳುವ ಜೀವಿಗಳು ತಮ್ಮ ಶರೀರವನ್ನು ಎಷ್ಟೋ ಇಷ್ಟವಾಗಿ ಇಟ್ಟುಕೊಂಡಿವೆ. ಕಾರಣ ತಿಳಿಯದ ಜೀವಿಗಳು ಒಬ್ಬೊಬ್ಬರಿಗೆ ಒಂದೊಂದು ವಿಧವಾದ ಶರೀರ

ಏಕಿದೆಯೆಂದು ಸ್ವಲ್ಪವಾದರೂ ಯೋಚಿಸದಂತೆ ಇದ್ದಾರೆ. ಒಂದುವೇಳೆ ಜ್ಞಾನ ತಿಳಿದು ಕರ್ಮ ರಹಸ್ಯ ತಿಳಿದ ಮಾನವನು ಪ್ರತಿಯೊಂದು ಕರ್ಮ ಸಂಭವವೇಯೆಂದು ಗ್ರಹಿಸುತ್ತಾನೆ. ಅಂತಹವನು ಕರ್ಮ ಯಾವವಿಧವಾಗಿ ತಗುಲಿಕೊಳ್ಳುತ್ತಿದೆಯೆಂದು ಗ್ರಹಿಸಿ ಅದರಿಂದ ಹೊರಬೀಳುತ್ತಾನೆ.

ಪ್ರತಿ ಜೀವಿ ಕರ್ಮಾಧೀನದಲ್ಲಿದ್ದು, ಕರ್ಮದಿಂದಲೇ ಹುಟ್ಟಿ, ಬೆಳೆದು, ಸಾಯುತ್ತಿವೆ. ಆದ್ದರಿಂದ ಕರ್ಮವನ್ನು ಕೆಸರಿಗೆ ಹೋಲಿಸಿ ಕೆಸರಿನಲ್ಲಿಯೇ ಹುಟ್ಟಿ ಕೆಸರಿನಲ್ಲಿಯೇ ಬೆಳೆದು ಕೆಸರಿನ ತನುವು ಎಂದಿದ್ದಾರೆ. ಕರ್ಮ ರಹಸ್ಯ ತಿಳಿದವನು ಕರ್ಮವನ್ನು ಜ್ಞಾನಾಗ್ನಿಯಿಂದ ಸುಟ್ಟುಹಾಕಿ, ಹುಟ್ಟದೆ ಪರಮಾತ್ಮನಲ್ಲಿ ಐಕ್ಯವಾಗುತ್ತಾನೆ. ಆದ್ದರಿಂದ ಕೆಸರು ತಿಳಿದವನು ಕೆಸರಲ್ಲಿ ಹುಟ್ಟುವನಾ ಎಂದಿದ್ದಾರೆ.

**ವಾಗುಲಡ್ಡು ಗಟ್ಟಿ ವಲ್ಲಕಾಡುಲು ದುನ್ನಿ**
**ಮುನ್ನು ನಡಚು ತ್ರೋವ ಮುಂಡ್ಲು ಗೊಟ್ಟಿ**
**ಪೈರು ಬೆಟ್ಟುನಟ್ಟಿ ಪಾಪುಲು ಗಲರೊಕೋ**
**ವಿಶ್ವದಾಭಿರಾಮ ವಿನುರ ವೇಮಾ.**

**ಕೆರೆಗಳಡ್ಡಗಟ್ಟಿ ಸ್ಮಶಾನವನ್ನುಳುಮೆ ಮಾಡಿ**
**ಮುಂದೆನಡೆಯುವ ಕಡೆ ಮುಳ್ಳನ್ನು ಹೊಡೆದು**
**ಬೆಳೆ ಬಿತ್ತುವಂತಹ ಪಾಪಿಗಳಿರುವರು**
**ವಿಶ್ವದಾಭಿರಾಮ ಕೇಳು ವೇಮಾ** (56)

**ಭಾವಾರ್ಥ :–** ನಮ್ಮ ಶರೀರದಲ್ಲಿ ಪ್ರವಾಹದಂತೆ ಆಲೋಚನೆಗಳು ಬರುತ್ತಲೇ ಇರುತ್ತವೆ. ಒಂದು ಆಲೋಚನೆ ಹಿಂದೆಯೇ ಮತ್ತೊಂದು ಯೋಚನೆ ಬರುತ್ತಾ ಎಡಬಿಡದೆ ಪ್ರವಾಹದಂತೆ ಇದೆ. ಆದ್ದರಿಂದ ಮನೋ ವಿಷಯಗಳನ್ನು ಹಳ್ಳಕ್ಕೆ ಹೋಲಿಸಿದ್ದಾರೆ. ಅಂತಹ ಮನೋ ವಿಷಯಗಳನ್ನು ಯೋಗಸಾಧನೆಪರನು ನಿಲ್ಲಿಸುತ್ತಾನೆ. ವಿಷಯಪ್ರವಾಹಕ್ಕೆ ಕಾರಣವಾದ ಮನಸ್ಸನ್ನು ನಿಗ್ರಹಿಸಿ ಯೋಚನೆಗಳು ಬಾರದಂತೆ ಮಾಡುತ್ತಾನೆ. ಆದ್ದರಿಂದ ಹಳ್ಳ ಅಡ್ಡ ಗಟ್ಟಿ ಎಂದಿದ್ದಾರೆ. ಸ್ಮಶಾನದಲ್ಲಿ ಯಾವಾಗಿನವೋ ಶವದ ಅಸ್ತಿಗಳು ಹೊರಬಿದ್ದು ಕಾಣಿಸುತ್ತಿರುತ್ತವೆ. ಹೊರಬಿದ್ದ ಎಲುಬುಗಳು ಶವಗಳನ್ನು ಗುರುತು ಮಾಡಿದಂತೆ, ಎಂದಿನ ವಿಷಯಗಳನ್ನೋ ಮನಸ್ಸು ಜ್ಞಾಪಕ ಮಾಡುತ್ತಿರುತ್ತದೆ. ಆದ್ದರಿಂದ ಮನಸ್ಸನ್ನು ರುಧ್ರಭೂಮಿಯಾಗಿ

(ಸ್ಮಶಾನವಾಗಿ) ವರ್ಣಿಸಿದ್ದಾರೆ. ಮನಸ್ಸಿಗೆ ಹಳೆ ವಿಷಯ ಜ್ಞಾಪಕ ಇಲ್ಲದಂತೆ ಯೋಗಿ ಮಾಡುತ್ತಿದ್ದಾನೆ. ಆದ್ದರಿಂದ ರುದ್ರಭೂಮಿ ಎಂದು ತಿಳಿಸಿದ್ದಾರೆ.

ಸಾಧಾರಣವಾಗಿ ಮನಸ್ಸು ಚಲಿಸುತ್ತಿರುತ್ತದೆ. ಮನಸ್ಸು ಚಲಿಸುವ ಮಾರ್ಗವನ್ನು ಯೋಗಿ ಮುಚ್ಚಿಹಾಕಿ ಚಲಿಸದಂತೆ ಮಾಡುತ್ತಿದ್ದಾನೆ. ಆದ್ದರಿಂದ ಮುಂದೆ ನಡೆಯುವ ದಾರಿಗೆ ಮುಳ್ಳು ಹೊಡೆದು ಎಂದಿದ್ದಾರೆ. ಮನಸ್ಸನ್ನು ಜಯಿಸಿ ಜ್ಞಾನವೆನ್ನುವ ಬೀಜಗಳನ್ನು ಶರೀರದಲ್ಲಿ ನಾಟಿ ಯೋಗವೆನ್ನುವ ಪೈರನ್ನು ಯೋಗಿ ಇಡುತ್ತಿದ್ದಾನೆ. ಕರ್ಮದಲ್ಲಿರುವ ವ್ಯಕ್ತಿ ಜ್ಞಾನದಿಂದ ಇಷ್ಟು ಕೆಲಸಗಳನ್ನು ಮಾಡಿ ಯೋಗಿಯಾಗಿ ಬದಲಾಗುತ್ತಿದ್ದಾನೆ. ಆದ್ದರಿಂದ ಪೈರು ನೆಡುವ ಪಾಪಿಗಳೆಂದಿದ್ದಾರೆ. ಮೇಲಿನ ಪದ್ಯದಲ್ಲಿ ಶರೀರವನ್ನು ಭೂಮಿಗೆ ಹೋಲಿಸಿ, ಮನಸ್ಸನ್ನು ಹಳ್ಳವಾಗಿ, ರುದ್ರಭೂಮಿಯಾಗಿ, ನಡೆಯುವ ದಾರಿಯಾಗಿ ವರ್ಣಿಸಿದ್ದಾರೆ. ಮನಸ್ಸನ್ನು ಜಯಿಸುವುದನ್ನು ಹಳ್ಳ ಅಡ್ಡ ಕಟ್ಟಿ, ಸ್ಮಶಾನಗಳನ್ನು ಉಳುಮೆ ಮಾಡಿ ಮುಂದೆ ನಡೆಯುವ ದಾರಿಗೆ ಮುಳ್ಳು ಹೊಡೆದು ಎಂದು ವರ್ಣಿಸಿದ್ದಾರೆಂದು ತಿಳಿಯಬೇಕು.

| | |
|---|---|
| **ಆಕಸಂಬು ಮೀದ ನಾಡು ದೊಮ್ಮರಿಪಾಪ** | **ಆಕಾಶದ ಮೇಲೆ ಅಂದು ದೊಮ್ಮರ ಹುಡುಗಿ** |
| **ಚೂಪುಲೊಕಟಿ ಗಾನಿ ಸುಖಮುಲೇದು** | **ನೋಟವೊಂದೆ ಹೊರತು ಸುಖವಿಲ್ಲ** |
| **ಆಕಸಮನು ವೀದಿ ಹಂಸನು ಜೂಡರಾ** | **ಆಕಾಶವೆಂಬ ಬೀದಿ ಹಂಸವನ್ನು ನೋಡಯಾ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (57) |

**ಭಾವಾರ್ಥ :–** ನಮ್ಮ ಶರೀರದಲ್ಲಿ ಶಿರೋಭಾಗದಲ್ಲಿ ಕಣ್ಣಿಗೆ ಕಾಣಿಸದ ಸ್ಥಳದಲ್ಲಿ ಆತ್ಮ ನಿವಾಸವಾಗಿ ಇದೆ. ಆತ್ಮವನ್ನು ದೊಮ್ಮರಿ ಹೆಣ್ಣಾಗಿ ಈ ಪದ್ಯದಲ್ಲಿ ಹೋಲಿಸಿದ್ದಾರೆ. ಮೇಲಿನ ಸ್ಥಾನದಲ್ಲಿದೆ ಆದ್ದರಿಂದ ದೊಮ್ಮರಾಟದವರು ಆಕಾಶದಲ್ಲಿ ಆಡುವವರು ಆದ್ದರಿಂದ ಆತ್ಮವನ್ನು ದೊಮ್ಮರಿ ಹೆಣ್ಣಾಗಿ ವರ್ಣಿಸುವುದಾಗಿದೆ. ಆತ್ಮ ಕಣ್ಣಿಗೆ ತಿಳಿಯದ ಮೇಲಿನ ಸ್ಥಾನದಲ್ಲಿ ನಿವಾಸವಿದೆ ಆದ್ದರಿಂದ ಆಕಾಶದ ಮೇಲೆ ಎನ್ನುವುದು ಸಹ ನಡೆದಿದೆ.

ಶಿರೋಭಾಗದಲ್ಲಿ ಬ್ರಹ್ಮನಾಡಿ ಏಳನೇ ಕೇಂದ್ರದಲ್ಲಿರುವ ಆತ್ಮ ಮೇಲಕ್ಕೆ ಮನೋಜ್ಞಾಪಕವನ್ನು ಕೇಂದ್ರೀಕರಿಸಬೇಕು. ಹಾಗೆ ಆತ್ಮಮೇಲೆ ಮನೋದೃಷ್ಟಿಯನ್ನು ಕೇಂದ್ರೀಕರಿಸಿದಾಗ ಆತ್ಮವನ್ನು ಅನುಭವಿಸುವುದು ನಡೆಯುತ್ತಿದೆ. ಆದ್ದರಿಂದ ನೋಟವೊಂದೇ ಹೊರತು ಸುಖವಿಲ್ಲ ಎಂದಿದ್ದಾರೆ. ಮೇಲಿನಭಾಗದಲ್ಲಿರುವ ಆತ್ಮ ತನ್ನ ಶಕ್ತಿಯಿಂದ ನರಗಳ ಮೂಲಕ ಶ್ವಾಸವನ್ನು ನಡೆಸುತ್ತಿದೆ. ಶ್ವಾಸಕ್ಕೆ ಆಧಾರವಾದ ಆತ್ಮವನ್ನು ನೋಡೆ ಎನ್ನುತ್ತಾ ಆಕಾಶವೆನ್ನುವ ಬೀದಿ ಹಂಸವನ್ನು ನೋಡಯಾ ಎಂದಿದ್ದಾರೆ.

| | |
|---|---|
| **ತನುವನೇಟಿ ಇಂಟ ತನ ಶತ್ರುಮಿತ್ರುಲ** | **ತನುವು ಎನ್ನುವ ಗೃಹದಿ ತನ್ನ ಶತ್ರು ಮಿತ್ರರ** |
| **ದೆಲಿಯಲೇನಿ ವಾನಿ ತೆಲಿವದೇಮಿ** | **ತಿಳಿಯ ದಿರುವ ನರನ ಅರಿವದೇಕೆ** |
| **ತೆಲಿಸಿನ ಮನಜುನಕು ದಿವ್ಯಾಮೃತಂಬುರಾ** | **ತಿಳಿದ ಮಾನವನಿಗೆ ದಿವ್ಯಾಮೃತವಹುದೈ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (58)** |

**ಭಾವಾರ್ಥ :–** ಶರೀರವೆನ್ನುವ ಮನೆಯಲ್ಲಿ ಜೀವಾತ್ಮ ನಿವಾಸಿಸುತ್ತಾ ಇದ್ದಾನೆ. ಹೊರಗಿನ ಪ್ರಪಂಚದಲ್ಲಿ ಮಿತ್ರು ಶತ್ರುಗಳಿದ್ದಂತೆ, ಶರೀರವೆನ್ನುವ ಮನೆಯಲ್ಲಿ ಸಹ ಮಿತ್ರರು ಮತ್ತು ಶತ್ರುಗಳು ಇದ್ದಾರೆ. ಶರೀರಗೃಹದಲ್ಲಿ ಮಿತ್ರ ಶತ್ರುಗಳನ್ನು ತಿಳಿಯದವನು ಅವರಿಂದ ಸುಖದುಃಖಗಳನ್ನು ಹೊಂದುತ್ತಲೇ ಇರುತ್ತಾನೆ. ಮಿತ್ರು ಶತ್ರುಗಳನ್ನು ತಿಳಿದುಕೊಂಡ ಜೀವಾತ್ಮ, ಅವರಿಂದ ಉಂಟಾಗುವ ಅನುಭವಗಳನ್ನು ತಿಳಿದುಕೊಂಡು ಅವರಿಂದ ಯಾವ ಅನುಭವ ಇಲ್ಲದಂತೆ ತಪ್ಪಿಸಿಕೊಳ್ಳುತ್ತಾನೆ.

ಶರೀರವೆನ್ನುವ ಮನೆಯಲ್ಲಿ ನಿವಾಸವಿರುವ ಜೀವಾತ್ಮಗೆ ಮೂರು ಗುಣಭಾಗಗಳಲ್ಲಿರುವ ಗುಣಗಳೇ ಮಿತ್ರ ಶತ್ರುಗಳಾಗಿ ಇವೆ. ಪಾಪವನ್ನು ಸಂಪಾದಿಸಿಕೊಡುವ 1. ಕಾಮ 2. ಕ್ರೋಧ 3. ಲೋಭ 4. ಮೋಹ 5. ಮದ 6. ಮಾತ್ಸರ್ಯಗಳೆನ್ನುವ ಆರು ಗುಣಗಳು ಜೀವಿಗೆ ಶತ್ರುಗಳೊಂದಿಗೆ ಸಮಾನ. ಹಾಗೆಯೇ ಈ ಗುಣಗಳಿಗೆ ವಿರುದ್ಧವಾದ ಪುಣ್ಯವನ್ನು ಸಂಪಾದಿಸಿಡುವ

1. ದಾನ 2. ದಯ 3. ಔದಾರ್ಯ 4. ವೈರಾಗ್ಯ 5. ವಿನಯ 6. ಪ್ರೇಮ ಎನ್ನುವ ಆರು ಗುಣಗಳು ಜೀವಿಗೆ ಮಿತ್ರರು. ಈ ಎರಡರಿಂದ ಪಾಪಪುಣ್ಯಗಳು ಜೀವಿಗೆ ಸಂಭವಿಸುತ್ತಿವೆ. ಅವುಗಳನ್ನು ಅನುಭವಿಸುವುದಕ್ಕೆ ಜೀವಿಯು ಜನ್ಮಗಳು ತಾಳಬೇಕಾಗಿರುತ್ತದೆ. ಜ್ಞಾನಿಯಾದವನು ಎರಡು ವಿಧಗಳ ಗುಣಗಳನ್ನು ತಿಳಿದವನಾಗಿ ಇವುಗಳಿಂದ ಜನ್ಮ ಬಂಧನವೇ ಉಂಟಾಗುತ್ತಿದೆಯೆಂದು ಅವುಗಳನ್ನು ಬಿಟ್ಟು ಜನ್ಮರಾಹಿತ್ಯವಾದ ನಿರ್ಗುಣಪದ ಹೊಂದುತ್ತಾನೆ. ಯಾರಾದರೇ ನಿರ್ಗುಣನಾಗುತ್ತಿದ್ದಾನೋ ಅವನು ಕರ್ಮರಹಿತನಾಗುತ್ತಾನೆ. ಯಾರು ಕರ್ಮ ರಹಿತನೋ ಅವನಿಗೆ ಮೃತ್ಯು ಇಲ್ಲ. ಮೃತವು ಇಲ್ಲದಂತಹ ಅಮೃತವೆನ್ನುವ ಸ್ಥಿತಿ ಲಭಿಸುತ್ತದೆ.

| | |
|---|---|
| **ಕಲ್ಲ ಗುರುಡು ಗಟ್ಟು ಕರ್ಮಚಯಂಬುಲು** | **ಸುಳ್ಳು ಗುರುವು ಗಳಿಪನೆಲ್ಲ ಕರ್ಮಂಗಳ** |
| **ಮಧ್ಯಗುರುಡು ಗಟ್ಟು ಮಂತ್ರಚಯಮು** | **ಮಧ್ಯ ಗುರುವುಗಳಿಪ ಮಂತ್ರ ಚಯವ** |
| **ಉತ್ತಮುಂಡು ಗಟ್ಟು ಯೋಗಸಾಮ್ರಾಜ್ಯಂಬು** | **ಉತ್ತಮ ಗುರುಗಳಿಪ ಯೋಗ ಸಾಮ್ರಾಜ್ಯವ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (59) |

**ಭಾವಾರ್ಥ :–** ಭೂಮಿ ಮೇಲೆ ಎಷ್ಟೋ ಮಹಾನುಭಾವರು ದೈವವನ್ನು ಕುರಿತು ಬೋಧನೆ ಮಾಡುತ್ತಿರುವರು. ಅಂತಹವರು ಗುರುಗಳಾಗಿ ಇರುವುದು ಎಲ್ಲರಿಗೂ ತಿಳಿದ ವಿಷಯವೇ. ಆ ಗುರುಗಳನ್ನು ಸಹಿತ ವೇಮನಯೋಗಿಯವರು ತೂಕ ಹಾಕಿ ಇಷ್ಟು ಭಾರವಿರುವ ಜ್ಞಾನವೇ ಇವರ ಹತ್ತಿರ ಇದೆಯೆಂದು ತಿಳಿಸಿದ್ದಾನೆ. ಕೆಲವರು ಗುರುಗಳು ಭಕ್ತರಿಗೆ ಕೆಲಸಗಳೊಂದಿಗೆ ಕೂಡಿಕೊಂಡ ಸಾಧನೆಗಳು ತಿಳಿಸುತ್ತಿರುತ್ತಾರೆ. ಪ್ರದಕ್ಷಿಣೆಗಳು, ಮರಕ್ಕೆ ಕಲ್ಲಿಗೆ ಹೋಗಿ ನಮಸ್ಕರಿಸಿ ಬರುವುದು, ಆಸನಗಳು ಯಾತ್ರೆಗಳು ಮುಂತಾದ ಶರೀರ ಕಾರ್ಯಗಳೊಂದಿಗೆ ಕೂಡಿಕೊಂಡ ಭಕ್ತಿಸಾಧನೆಗಳನ್ನೇ ತಿಳಿಸುತ್ತಿರುತ್ತಾರೆ. ಇಂತಹ ಶರೀರ ಕಾರ್ಯ ಸಾಧನೆಗಳು ಎಂದಿಗೂ ಆತ್ಮವನ್ನು ತಿಳಿಸುವುದಿಲ್ಲ. ದೈವವನ್ನು ತಿಳಿಯುವುದಕ್ಕೆ ಈ ಕೆಲಸಗಳು ಕೆಲಸಕ್ಕೆ ಬರುವುದಿಲ್ಲವೆಂದು ಗೀತೆಯಲ್ಲಿ ವಿಶ್ವರೂಪ ಸಂದರ್ಶನ

ಯೋಗದಲ್ಲಿ ಕೂಡ ತಿಳಿಸಿದ್ದಾರೆ. ಮನೋ ನಿಗ್ರಹಕ್ಕೆ ಕೆಲಸಕ್ಕೆಬಾರದ ಕೆಲಸಗಳಾಗಿ ಲೆಕ್ಕಿಸಿ ಶರೀರಕಾರ್ಯಗಳೊಂದಿಗೆ ಕೂಡಿಕೊಂಡ ಭಕ್ತಿಮಾರ್ಗಗಳನ್ನು ಬೋಧಿಸುವ ಗುರುಗಳನ್ನು ವೇಮನಯೋಗಿಯವರು ಸುಳ್ಳು ಗುರುಗಳೆನ್ನುತ್ತಿದ್ದಾನೆ.

ಕೆಲವರು ಗುರುಗಳು ಶಿಷ್ಯರಿಗೆ ಮಂತ್ರಗಳನ್ನು ಉಪದೇಶಿಸಿ ಮಂತ್ರದಲ್ಲಿ ಮನಸ್ಸನ್ನಿಡು ಎನ್ನುತ್ತಿದ್ದಾರೆ. ಇವರು ಶರೀರ ಕಾರ್ಯ ಭಕ್ತಿ ಕೆಲಸಗಳು ಬೋಧಿಸುವ ಗುರುಗಳಿಗಿಂತ ದೊಡ್ಡವರೆಂದು ವೇಮಾರೆಡ್ಡಿ ಹೇಳುತ್ತಿದ್ದಾರೆ. ಮಂತ್ರದಿಂದ ಮನಸ್ಸು ಹೊರಗಿನ ವಿಷಯಗಳ ಸಂಬಂಧ ಬಿಟ್ಟುಕೊಂಡು ಮಂತ್ರದ ಮೇಲೆಯೇ ಕೇಂದ್ರೀಕೃತವಾಗಿ ಇರುತ್ತದೆ. ಮಂತ್ರದಿಂದ ಕೂಡ ಆತ್ಮ ತಿಳಿಯುವುದಿಲ್ಲ. ಮಂತ್ರಸಾಧನೆಯಿಂದ ಮಂತ್ರ ಭಕ್ತಿ ಲಭಿಸುತ್ತದೆ ಆದರೆ ಆತ್ಮಶಕ್ತಿ ಲಭಿಸುವುದಿಲ್ಲ. ಯಾವ ಚಿಂತನೆ ಮನಸ್ಸಿಗೆ ಇಲ್ಲದಿರುವಾಗಲೇ ಆತ್ಮ ತಿಳಿಯುತ್ತದೆ. ಆದ್ದರಿಂದ ಮನಸ್ಸಿಗೆ ಮಂತ್ರವಿದ್ದಾಗ ಆತ್ಮ ತಿಳಿಯುವುದಿಲ್ಲ. ಕುರುಡುತನಕ್ಕಿಂತ ಮೆಳ್ಳೆಗಣ್ಣು ಮೇಲೆನ್ನುವಂತೆ ಕರ್ಮಚಯ ಬೋಧಿಸುವ ಗುರುವಿಗಿಂತ ಮಂತ್ರ ಹೇಳುವವನು ಮೇಲು. ಆದ್ದರಿಂದ ಮಧ್ಯ ಗುರುಡು ಗಟ್ಟು ಮಂತ್ರಚಯವೆಂದಿದ್ದಾರೆ.

ಜೀವಾತ್ಮ, ಆತ್ಮ ಸೇರುವಿಕೆಗೆ ಮುಖ್ಯವಾದುದು ಮನಸ್ಸೆಂದು ತಿಳಿದು, ಆ ಮನಸ್ಸಿಗೆ ಯಾವ ಧ್ಯಾಸ ಇಲ್ಲದಿರುವಾಗಲೇ ಆತ್ಮ ತಿಳಿಯುತ್ತದೆಂದು ತಿಳಿದ ಗುರುಗಳು ಶಿಷ್ಯರಿಗೆ ಎಲ್ಲ ವಿಷಯಗಳಿಂದ ಮನಸ್ಸನ್ನು ಮರಳಿಸಿಕೊಳ್ಳಿ ರೆಂದು, ಶಾರೀರಕವಾಗಿ, ಮಾನಸಿಕವಾಗಿ ಯಾವ ಕೆಲಸ ಇಲ್ಲದಿರುವಾಗಲೇ ಆತ್ಮ ತಿಳಿಯುತ್ತದೆಂದು ತಿಳಿಸುತ್ತಿದ್ದಾರೆ. ಇವರು ಉಳಿದ ಗುರುಗಳಿಗಿಂತ ಶ್ರೇಷ್ಠರು. ಆದ್ದರಿಂದ ಉತ್ತಮುಂಡು ಗಟ್ಟು ಯೋಗಸಾಮ್ರಾಜ್ಯ ವೆಂದಿದ್ದಾರೆ.

| | |
|---|---|
| **ಜೀವಿ ಪೋಕಮುಂದೆ ಜೀವ ವಸ್ತುವು ಲಿಚ್ಚಿ** | **ಜೀವಿ ಹೋಗುವ ಮುಂಚೆ ಜೀವ ವಸ್ತುಗಳನ್ನು ಕೊಟ್ಟು** |
| **ಜೀವಿ ನಿಲುವ ವಲಯು ಜೀವನಮುಗ** | **ಜೀವಿ ನಿಲ್ಲ ಬೇಕು ಜೀವನವಾಗಿಯು** |
| **ಜೀವಿ ತೊಲುಗು ವೆನುಕ ಜೀವವಸ್ತುವು ಲೇಲ** | **ಜೀವಿ ತೊಲಗುವ ಹಿಂದೆ ಜೀವವಸ್ತುವೇಕೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ** (60) |

**ಭಾವಾರ್ಥ :–** ಜೀವಾತ್ಮ ಶರೀರವನ್ನು ಬಿಟ್ಟು ಹೋಗುವುದಕ್ಕಿಂತ ಮೊದಲೇ ಜ್ಞಾನವನ್ನು ತಿಳಿದುಕೊಳ್ಳಬೇಕು. ಜ್ಞಾನ ತಿಳಿಯುವುದರ ಮೂಲಕ ಆತ್ಮಸಾಧನೆಯಿಂದ ಆತ್ಮಶಕ್ತಿ ಲಭಿಸುತ್ತದೆ. ಆತ್ಮಶಕ್ತಿಯಿಂದ ಕರ್ಮ ನಾಶವಾಗಿ ಹೋಗುತ್ತದೆ. ಕರ್ಮ ನಾಶವಾದ ಅದರ ಹಿಂದೆ ಸಾವು ಹುಟ್ಟುಗಳಿಗೆ ಕಾರಣವಾದ ಕರ್ಮ ಇಲ್ಲದಿರುವಾಗ ಜೀವಿಯು ಶಾಶ್ವತವಾದ ಮೋಕ್ಷವನ್ನು ಹೊಂದಿ ಸ್ಥಿರಸ್ಥಾಯಿ ಯಾಗಿ ನಾಶ ಇಲ್ಲದವನಾಗಿ ಇರುತ್ತಾನೆ.

ಜ್ಞಾನವನ್ನು ಜೀವ ವಸ್ತುವಾಗಿ ತಿಳಿಸುತ್ತಾ ಶರೀರ ಇರುವಾಗಲೇ ಅದನ್ನು ತಿಳಿಯಬೇಕೆಂದು, ಹಾಗೆ ತಿಳಿದವನು ಶಾಶ್ವತವಾಗಿ ಸಾವು ಹುಟ್ಟುಗಳು ಇಲ್ಲದ ಸ್ಥಿತಿಯನ್ನು ಹೊಂದುತ್ತಿದ್ದಾನೆನ್ನುತ್ತ ಜೀವಿ ನಿಲ್ಲಿಬೇಕು ಜೀವನವಾಗಿ ಎಂದಿದ್ದಾರೆ.

ಶರೀರವಿದ್ದಾಗ ಆತ್ಮಜ್ಞಾನವನ್ನು ಕುರಿತು ಯಾರೂ ತಿಳಿದುಕೊಳ್ಳುತ್ತಿಲ್ಲ. ಅಂತಹವರು ಮರಣಿಸಿದ ನಂತರ ಉಳಿದವರು ಅವರ ಶವಗಳ ಹತ್ತಿರ ಭಜನೆ ಮಾಡುವುದು, ಭಗವದ್ಗೀತೆ ಓದುವುದು, ಬೈಬಲ್ ಓದುವುದು ಮಾಡುತ್ತಿದ್ದಾರೆ. ದೈವ ವಿಷಯಗಳು ಶವಕ್ಕೆ ಕೇಳಿಸಿದರೇ ಏನು ಲಾಭ? ಜೀವಿ ಹೋಗುವುದಕ್ಕಿಂತ ಮೊದಲೇ ಜೀವವಸ್ತುಗಳಾದ ಜ್ಞಾನ ವಿಷಯಗಳು ತಿಳಿಸಿದ್ದರೆ ಎಷ್ಟೋ ಒಳ್ಳೆಯದಾಗುತ್ತಿತ್ತು. ಆದ್ದರಿಂದ ಜೀವಿ ತೊಲಗು ಹಿಂದೆ ಜೀವ ವಸ್ತುವುಗಳೇಗೆ ಎಂದು ವೇಮನ ಹೇಳಿದ್ದಾನೆ.

| | |
|---|---|
| **ಅನಗ ನನಗ ರಾಗ ಮತಿಶಯಿಲ್ಲುಚುನುಂಡು** | **ಹಾಡುತ್ತ ಹಾಡುತ್ತ ರಾಗವತಿಶಯಿಸು** |
| **ತಿನಗ ತಿನಗ ವೇಮು ತೀಯನುಂಡು** | **ತಿನುತ ತಿನುತ ಬೇವು ಸಿಹಿ ಇರುವುದು** |
| **ಸಾಧನಮುನ ಪನುಲು ಸಮಕೂರು ಧರಲೋನ** | **ಸಾಧನೆದಲಿ ಕಾರ್ಯ ಕೈಗೂಡು ಧರೆಯಲ್ಲಿ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (61)** |

**ಭಾವಾರ್ಥ :–** ಅಜ್ಞಾನದಲ್ಲಿ ಮುಳುಗಿರುವವರಿಗೆ ಜ್ಞಾನವಿಷಯಗಳು ಬಹಳ ಕಹಿಯಾಗಿ ಕಾಣಿಸುತ್ತಿರುತ್ತವೆ. ರೋಗವಿರುವವನಿಗೇ ಚಿಕಿತ್ಸೆ ಎನ್ನುವಂತೆ ಅಜ್ಞಾನಿಗೇ ಜ್ಞಾನ ಕೂಡ ಅವಶ್ಯ. ಜ್ಞಾನ ಅರ್ಥವಾಗದಿದ್ದರೂ ಬಲವಂತ ವಾಗಿಯಾದರೂ ಅದರ ಸಂಬಂಧ ಬೆಳಸಿಕೊಳ್ಳಬೇಕು. ಕಂಠ ಸರಿಯಾಗಿ ಇಲ್ಲದವನು ಬಲವಂತವಾಗಿ ಹಾಡುತ್ತಾ ಹಾಡುತ್ತಾ ಕಂಠಸ್ವರ ವೃದ್ಧಿಯಾಗಿ ರಾಗ ಅತಿಶಯಿಸಿದಂತೆ ಅಜ್ಞಾನಿ, ಜ್ಞಾನವನ್ನು ಬಲವಂತವಾಗಿ ತೆಗೆದುಕೊಂಡಾಗ ಸ್ವಲ್ಪ ಕಾಲಕ್ಕೆ ಜ್ಞಾನಿಯಾಗಿ ಬದಲಾಗುತ್ತಾನೆ. ಮೊದಲು ವಿಷವಾಗಿ ಕೊನೆಗೆ ಅಮೃತವಾಗಿದೆಯೆನ್ನುವಂತೆ ಜ್ಞಾನ ಮೊದಲು ಎಷ್ಟು ಕಹಿಯಾಗಿ ಕಾಣಿಸಿದರೂ, ಕೊನೆಗೆ ಬೆಲೆ ತಿಳಿದಾಗ ಬಹಳ ಮಾಧುರ್ಯವಾಗಿ ಇರುತ್ತದೆ. ಆದ್ದರಿಂದ ತಿನ್ನುತ್ತಾ ತಿನ್ನುತ್ತಾ ಬೇವು ಸಿಹಿಯಾಗಿರುತ್ತದೆ ಎಂದಿದ್ದಾರೆ. ಜ್ಞಾನಸಾಧನೆಯಿಂದ ಎಂತಹ ಜ್ಞಾನವನ್ನಾದರೂ ಹೊಂದಬಹುದು.

| | |
|---|---|
| **ಹೃದಯಮಂದುನುನ್ನ ಈಶುನಿ ದೆಲಿಯಕ** | **ಹೃದಯದಲ್ಲೆ ಇರುವ ಈಶನ ತಿಳಿಯದೆ** |
| **ಶಿಲಲಕೆಲ್ಲ ಮ್ರೊಕ್ಕು ಜೀವುಲಾರ** | **ಶಿಲೆಗಳಿಗೆಲ್ಲ ಮುಗಿವ ಜೀವಿಗಳಿರಾ** |
| **ಶಿಲಲನೇಮಿಯುಂಡು ಜೀವುಲಂದೇ ಕಾಕ** | **ಶಿಲೆಯ ಲೇನಿಹುದು ಜೀವಿಗಳಲ್ಲದೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (62) |

**ಭಾವಾರ್ಥ :–** ಹೃದಯವೆಂದರೆ ಗುಂಡಿಗೆ ಎಂದು ಬಹಳ ಜನವೊಂದರ ಭಾವ. ಹೃದಯವೆಂದರೆ ಗುಂಡಿಗೆಯಲ್ಲ. ಗುಂಡಿಗೆಯಲ್ಲಿ ಆತ್ಮ ನಿವಾಸವಿಲ್ಲ. ಆತ್ಮ ಬ್ರಹ್ಮನಾಡಿಯಲ್ಲಿ ನಿವಾಸವಿದೆ. ಆದ್ದರಿಂದ ಆತ್ಮ ನಿವಾಸವಾದ ಬ್ರಹ್ಮನಾಡಿಯನ್ನೇ ಹೃದಯ ಎನ್ನಬೇಕು. ಗುಂಡಿಗೆಗೆ ಸ್ವಯಂಶಕ್ತಿ ಇಲ್ಲ. ಬ್ರಹ್ಮನಾಡಿಯಿಂದ ಬರುವಶಕ್ತಿ ಗುಂಡಿಗೆಯನ್ನು ಕದಲಿಸುತ್ತಿದೆ. ಬ್ರಹ್ಮನಾಡಿಯಲ್ಲಿ ಸ್ವಯಂಶಕ್ತಿ ಒಳಗೊಂಡಿದೆ.

ಹೃದಯವೆಂದರೆ ಬ್ರಹ್ಮನಾಡಿಯೆಂದು, ಹೃದಯದಲ್ಲಿರುವ ಈಶನೆಂದರೆ ಬ್ರಹ್ಮನಾಡಿಯಲ್ಲಿನ ಆತ್ಮಯೆಂದು ತಿಳಿಯಬೇಕು. ಬ್ರಹ್ಮನಾಡಿ ಮತ್ತು ಅದರಲ್ಲಿನ

ಆತ್ಮ ಸಜೀವವಾದ ಶರೀರಗಳಲ್ಲೇ ಇರುತ್ತದೆ. ಜೀವವಿಲ್ಲದ ಕಲ್ಲಿನ ಶಿಲೆಗಳಲ್ಲಿ ಬ್ರಹ್ಮನಾಡಿಯಾಗಲಿ ಅದರಲ್ಲಿನ ಚೈತನ್ಯವಾಗಲಿ ಇರುವುದಿಲ್ಲ. ದೈವತ್ವವನ್ನು ತಿಳಿಯಬೇಕೆನ್ನುವವರು ಶಿಲೆಗಳಿಗೆ ಮುಗಿಯುತ್ತಿದ್ದರೆ ಏನು ಪ್ರಯೋಜನ ಇರುವುದಿಲ್ಲ. ಆತ್ಮ ಸಜೀವವಾದ ಶರೀರದಲ್ಲೇ ಇರುತ್ತದೆ. ಆದ್ದರಿಂದ ಜ್ಞಾನಿಗಳು ತಮ್ಮ ಶರೀರದಲ್ಲೇ ಹುಡುಕಿ ಆತ್ಮವನ್ನು ತಿಳಿಯಬೇಕು. ನಿಜವಾದ ದೇವಾಲಯ ಶರೀರವೆಂದು ಅದರಲ್ಲಿನ ದೇವರು ಆತ್ಮಯೆಂದು ತಿಳಿಯುವಂತೆ ಮೇಲಿನ ಪದ್ಯವನ್ನು ವೇಮಾರೆಡ್ಡಿಯವರು ಹೇಳಿದ್ದಾರೆ.

| | |
|---|---|
| **ಜನನ ಮರಣಮುಲಕು ಸರಿಸ್ವತಂತ್ರುಡು ಗಾಡು** | **ಜನನ ಮರಣಗಳಿಗೆ ಸ್ವತಂತ್ರನು ತಾನಲ್ಲ** |
| **ಮೊದಟ ಕರ್ತಗಾಡು ತುದನುಗಾಡು** | **ಮೊದಲು ಕರ್ತನಲ್ಲ ಕಡೆಗು ಅಲ್ಲ** |
| **ನಡುಮ ಕರ್ತನನುಟ ನಗುಬಾಟು ಕಾದೊಕೋ** | **ನಡುವೆ ಕರ್ತನೆನಲು ನಗೆ ಪಾಟ್ಲು ಅಲ್ಲವೇ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (63) |

**ಭಾವಾರ್ಥ :–** ಯಾವ ಮಾನವನು ತಿಳಿದು ಹುಟ್ಟಲಿಲ್ಲ. ತಿಳಿದು ಸಾಯುವುದೂ ಇಲ್ಲ. ತನಗೆ ತಿಳಿಯದೆಯೇ ಜನನ, ಹಾಗೆಯೇ ಮರಣ ಸಂಭವಿಸುತ್ತಿವೆ. ಪ್ರಾರಂಭವಾದ ಜನನ, ಅಂತ್ಯವಾದ ಮರಣದಲ್ಲೇ ಅಲ್ಲದೆ ಮಧ್ಯದಲ್ಲಿ ನಡೆಯುವ ಜೀವನವೆಲ್ಲಾ ಯಾವ ಸ್ವತಂತ್ರತೆ ಇಲ್ಲದವನಾಗಿ ಬದುಕುತ್ತಿದ್ದಾನೆ. ಪ್ರತಿ ಕೆಲಸ ಕರ್ಮ ಪ್ರೇರಣೆಯಿಂದಲೇ ನಡೆಯುತ್ತಿದೆ. ಆದರೂ ಕುರುಡು ಮಾನವನು ಕರ್ಮದಿಂದ, ಗುಣಗಳ ಪ್ರಭಾವದಿಂದ ಕೆಲಸಗಳು ನಡೆಯುತ್ತಿವೆಯೆಂದು ತನ್ನ ಪಾತ್ರ ಏನೂ ಇಲ್ಲವೆಂದು ತಿಳಿಯದವನು ಎಲ್ಲದಕ್ಕೂ ನಾನೇ ಕರ್ತನೆಂದು ಅಂದುಕೊಳ್ಳುತ್ತಿದ್ದಾನೆ. ಭಗವದ್ಗೀತೆ ಕರ್ಮಯೋಗ 27ನೇ ಶ್ಲೋಕ...

**ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ**
**ಅಹಂಕಾರ ವಿಮೂಢಾತ್ಮಾ ಕರ್ತಾಹ ಮಿತಿ ಮನ್ಯತೇ**

“ಪ್ರಕೃತಿಯಿಂದ ತಯಾರಾದ ಗುಣಗಳಿಂದ ನಡೆಯುವ ಸರ್ವ ಕೆಲಸಗಳಿಗು ತಾನೇ ಕರ್ತನೆಂದು ಅಹಂಕಾರ ಮಗ್ನನೆಂದುಕೊಳ್ಳುತ್ತಿರುವನು”. ಎಂದು ಗೀತೆ

ಹೇಳುತ್ತಿದೆ. ಹಾಗೆ ಅಹಂನಿಂದ ನಾನೇ ಕರ್ತನೆಂದುಕೊಳ್ಳುವುದರಿಂದ ನಡೆದ ಕೆಲಸಗಳಲ್ಲಿನ ಕರ್ಮ ಜೀವಿಗೆ ಅಂಟಿಕೊಳ್ಳುತ್ತಿದೆ. ಆ ಕರ್ಮ ಪುನಃ ಕಷ್ಟ ಸುಖಗಳು ಅನುಭವಿಸುವುದಕ್ಕೆ ಕಾರಣವಾಗುತ್ತಿದೆ. ಸಾವು ಹುಟ್ಟುಗಳ ಮಧ್ಯೆ ಭಾಗವಾದ ಜೀವನದಲ್ಲಿ ತಾನು ಕರ್ತನೆನ್ನುವುದು ಕಷ್ಟಗಳಿಗೇ ಹೊರತು ಬೇರೆಯಲ್ಲ. ಆದ್ದರಿಂದ ಮಧ್ಯದಲ್ಲಿ ಕರ್ತನೆನ್ನುವುದು ನಗೆಪಾಟ್ಲಲ್ಲವೇ ಎಂದು ವೇಮಾರೆಡ್ಡಿಯವರು ಹೇಳಿದ್ದಾರೆ.

| | |
|---|---|
| **ಗುರುಚರಣಮು ಬಟ್ಟ ಕುಕ್ಕಲು ಗರಚುನಾ!** | **ಗುರು ಚರಣವ ಹಿಡಿದರೆ ನಾಯಿ ಕಚ್ಚುವುದೆ!** |
| **ಗುರುಚರಣಮು ವಿಡುವ ಕುಕ್ಕಗರಚು** | **ಗುರು ಚರಣ ತೊರೆದರೆ ನಾಯಿ ಕಡೆಯುವುದು** |
| **ಕುಕ್ಕಕುನ್ನ ಗುಣಮು ಗುರುನಕು ಲೇದುರಾ** | **ನಾಯಿಗಿರುವ ಗುಣವು ಗುರುವಿಗಿಲ್ಲ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** **(64)** |

**ಭಾವಾರ್ಥ :–** ನಮ್ಮ ಶರೀರದಲ್ಲಿ ಬ್ರಹ್ಮನಾಡಿಯಲ್ಲಿ ಆತ್ಮ ನಿವಾಸವಾಗಿ ಇದೆಯೆಂದು ತಿಳಿದುಕೊಂಡಿದ್ದೇವೆ. ಆ ನಾಡಿಗೆ ಎರಡೂ ಕಡೆಯಿರುವ ಸೂರ್ಯ, ಚಂದ್ರನಾಡಿಗಳಲ್ಲಿ ಮನಸ್ಸು ಇದೆಯೆಂದು ಕೂಡ ತಿಳಿದುಕೊಂಡಿದ್ದೇವೆ. ಬ್ರಹ್ಮನಾಡಿಯಲ್ಲಿನ ಆತ್ಮಶಕ್ತಿ ಸೂರ್ಯ ಚಂದ್ರನಾಡಿಗಳ ಮೂಲಕ ಶ್ವಾಸಕೋಶಗಳನ್ನು ಕದಲಿಸುತ್ತಾ ಶ್ವಾಸ ಆಡುವಂತೆ ಮಾಡುತ್ತಿದೆ. ನಾವು ಜ್ಞಾನದ ಮೂಲಕ ಶ್ವಾಸ ಹೇಗೆ ಆಡುತ್ತಿದೆಯೆಂದು ವಿಮರ್ಶಿಸಿ ಶ್ವಾಸಗೆ ಕಾರಣವಾದ ಶಕ್ತಿಯನ್ನು ತಿಳಿದುಕೊಂಡರೆ ಸೂರ್ಯ ಚಂದ್ರ ನಾಡಿಗಳ ಮೇಲೆ ಇರುವ ಮನಸ್ಸು ಕೆಲಸಮಾಡದಂತೆ ನಿಂತುಹೋಗುತ್ತದೆ. ಸೂರ್ಯ ಚಂದ್ರನಾಡಿಗಳ ಮೇಲೆ ಕೆಲಸ ಮಾಡದ ಮನಸ್ಸು ಬ್ರಹ್ಮನಾಡಿಯಲ್ಲಿನ ಆತ್ಮನಲ್ಲಿ ಸೇರಿಹೋಗುತ್ತದೆ. ಮನಸ್ಸು ಕೆಲಸಮಾಡದಿರುವಾಗ ಶ್ವಾಸಕೂಡ ನಿಂತುಹೋಗುತ್ತದೆ.

ಗುರುವೆಂದರೆ ಆತ್ಮಯೆಂದು ತಿಳಿದು ಗುರುಚರಣಗಳಾಗಿ ಆತ್ಮಚೈತನ್ಯದಿಂದ ಕದಲುವ ಶ್ವಾಸ ಎಂದು ತಿಳಿಯಬೇಕು. ಮನುಷ್ಯನಿಗೆ ಪಾದಗಳು ಕೆಳಗೆ ಇರುವಂತೆ ಆತ್ಮವೊಂದರ ಕೊನೆಯ ಚಲನೆ ಶ್ವಾಸ ಆದ್ದರಿಂದ ಶ್ವಾಸವನ್ನು

ಗುರುಚರಣಗಳೆಂದಿದ್ದಾರೆ. ಶ್ವಾಸ ನಿಂತುಹೋದಾಗ ಮನೋ ವಿಷಯಗಳು ನಿಂತುಹೋಗುತ್ತವೆ ಆದ್ದರಿಂದ ಮನೋ ವಿಷಯಗಳನ್ನು ನಾಯಿಗಳಾಗಿ ಹೋಲಿಸಿ ಗುರುಚರಣಗಳು ಹಿಡಿದರೆ ನಾಯಿಗಳು ಕಚ್ಚುತ್ತವಾ ಎಂದಿದ್ದಾರೆ. ಶ್ವಾಸ ನಿಲ್ಲಿಸಿದಷ್ಟು ಸಮಯ ಮನಸ್ಸು ನಿಲ್ಲುತ್ತದೆ. ಮನೋ ಮಾರುತಗಳು ಅವಿನಾಭಾವ ಸಂಬಂಧ ಇರುವವು. ಶ್ವಾಸ ಆಡಿದ ಕೂಡಲೇ ಮನಸ್ಸು ಕೂಡ ಚಲಿಸುತ್ತದೆ. ಆದ್ದರಿಂದ ಗುರುಚರಣಗಳು ಬಿಟ್ಟರೆ ನಾಯಿ ಕಚ್ಚುತ್ತದೆ ಎಂದಿದ್ದಾರೆ.

ಮನಸ್ಸು ಚಲಿಸುವ ಸ್ವಭಾವ ಇರುವುದು. ಯಾವಾಗಲೂ ಇಂದ್ರಿಯ ವಿಷಯ ಜ್ಞಾಪಕ ಮಾಡುತ್ತಿರುತ್ತದೆ. ಮನಸ್ಸು ಪ್ರಪಂಚ ಸಂಬಂಧವಾದ ಜ್ಞಾಪಕಗಳಲ್ಲೇ ಲೀನವಾಗಿರುತ್ತದೆ. ಆತ್ಮ ಗುಣಗಳಿಗೆ, ಜೀವಿಗೆ ಸಾಕ್ಷಿಯಾಗಿ ಕದಲದಂತಿದೆ. ಆತ್ಮ ಬ್ರಹ್ಮನಾಡಿಯಲ್ಲಿ ಸ್ಥಿರಸ್ಥಾಯಿಯಾಗಿ ಇದೆ. ಮನಸ್ಸು, ಆತ್ಮಕ್ಕೆ ಎಷ್ಟೋ ವ್ಯತ್ಯಾಸ ಇದೆ. ಆದ್ದರಿಂದ ನಾಯಿಗಿರುವ ಗುಣವು ಗುರುವಿಗಿಲ್ಲ ಎಂದಿದ್ದಾರೆ.

ನಾಯಿಯೆಂದರೆ ಮನಸ್ಸೆಂದು, ನಾಯಿಗಳೆಂದರೆ ಮನೋ ವಿಷಯಗಳೆಂದು, ಗುರು ಚರಣಗಳೆಂದರೆ ಶ್ವಾಸ ಎಂದು, ಗುರುವೆಂದರೆ ಆತ್ಮ ಎಂದು ಮೇಲಿನ ಪದ್ಯದಲ್ಲಿ ಸಾರಾಂಶವನ್ನು ಒದಗಿಸಿದ್ದಾರೆಂದು ಗಮನಿಸಬೇಕು.

| | |
|---|---|
| **ವೆದಕಿ ಕಾನಲೇಡು ವೇದಾಂತ ವೇದ್ಯುನಿ** | **ಹುಡುಕಿ ಕಾಣಲಾರ ವೇದಾಂತ ವೇದ್ಯನ** |
| **ತತ್ವವೇತ್ತ ಲೇಡು ಧರಣಿಲೋನ** | **ತತ್ವಜ್ಞ ಇಲ್ಲ ಧರಣಿಯೊಳಗೆ** |
| **ಕಲಿಗೆನೇನಿ ಯತಡು ಕನಬೋಡು** | **ಉಂಟಾದರೆ ಆತನು ಕಾಣುವುದಿಲ್ಲ ಮತ್ತೆ ಬೇರೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (65) |

ಭಾವಾರ್ಥ :– ಭೂಮಿಮೇಲೆ ತತ್ತ್ವವನ್ನು (ಆತ್ಮವನ್ನು) ತಿಳಿದವರು ಬಹಳ ಅಪರೂಪ. ಒಂದು ವೇಳೆ ಯಾರಾದರೂ ಜ್ಞಾನ ಆರ್ಜಿಸಿ ಆತ್ಮವನ್ನು ತಿಳಿದರೇ, ಸ್ವಲ್ಪ ಕಾಲಕ್ಕೆ ಅವನ ಕರ್ಮವೆಲ್ಲವೂ ನಾಶವಾಗಿಹೋಗಿ ಶರೀರವನ್ನು ಬಿಟ್ಟು ಪರಮಾತ್ಮನೊಳಗೆ ಐಕ್ಯವಾಗುವನು. ಅಂತಹವನು ಪುನಃ ಹುಟ್ಟುವುದಿಲ್ಲ.

ಆದ್ದರಿಂದ ಆತನು ಕಾಣುವುದಿಲ್ಲ ಮತ್ತೆಲ್ಲೂ ಎಂದಿದ್ದಾರೆ. ವೇದಗಳೆಂದರೆ ಮೂರು ಗುಣಗಳೆಂದು ಗೀತೆಯಲ್ಲಿ ಸಾಂಖ್ಯಯೋಗದಲ್ಲಿ ತಿಳಿಸಿದ್ದಾರೆ. ಮೂರು ಗುಣಗಳನ್ನು ಜಯಿಸಿ, ಮೂರುಗುಣಗಳಾಚೆ ಹೋಗಿ ಅಲ್ಲಿರುವ ಆತ್ಮವನ್ನು ತಿಳಿದವನನ್ನು ವೇದಾಂತ ವೈದ್ಯನೆನ್ನುತ್ತಿದ್ದೇವೆ. ಅಂತಹವರು ಬಹಳ ಅಪರೂಪ ವಾಗಿ ಇದ್ದಾರೆ. ಆದ್ದರಿಂದ ಹುಡುಕಿ ಕಾಣಲಾರರು ವೇದಾಂತ ವೈದ್ಯನನ್ನು ಎಂದಿದ್ದಾರೆ.

| | |
|---|---|
| **ಸೊಮ್ಮುಯುನ್ನ ಚೋಟ ಶೋಧಿಂಪಗಲುಗುನು** | **ಸಿರಿಯು ಇರುವ ಸ್ಥಳದಿ ಶೋಧಿಸಲಾಗುವುದು** |
| **ಸೊಮ್ಮುಲೇನಿ ಚೋಟ ಶೋಧ ಏಲ** | **ಸಿರಿಯು ಇರದ ಸ್ಥಳದಿ ಶೋಧ ಯೇಕೆ** |
| **ಯಂಜನಮ್ಮು ಲೇಕ ನಾ ಸೊಮ್ಮು ತೆಲಿಯದು** | **ಅಂಜನವು ಇಲ್ಲದೆ ಆ ಸಿರಿಯು ಕಾಣದ್ಯೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (66)** |

**ಭಾವಾರ್ಥ :–** ಭೂಮಿಯಲ್ಲಿ ಬಚ್ಚಿಟ್ಟ ಧನವನ್ನು ಎಲ್ಲಿ ಬಚ್ಚಿಟ್ಟಿದ್ದರೆ ಅಲ್ಲಿಯೇ ಅಗೆದು ತೆಗೆಯಬೇಕು. ಬಚ್ಚಿಟ್ಟ ಸ್ಥಳ ತಿಳಿಯದೆ ಹೋದರೆ ಎಲ್ಲಿ ಶ್ರಮಪಟ್ಟು ಅಗೆದರೂ ಸ್ವತ್ತು ಲಭಿಸುವುದಿಲ್ಲ. ಸ್ವತ್ತು ಎಲ್ಲಿರುವುದು ತಿಳಿಯದವರು ಅಂಜನದಲ್ಲಿ ನೋಡಿ ಭೂಮಿಯಲ್ಲಿನ ಸ್ವತ್ತನ್ನು ತಿಳಿಯಬೇಕು. ಹಾಗೆಯೇ ಆತ್ಮಧನವನ್ನು ಶರೀರದಲ್ಲೇ ಹುಡುಕಬೇಕು. ಶರೀರದಲ್ಲಿ ಆತ್ಮಧನ ಎಲ್ಲಿರುವುದು ತಿಳಿಯಬೇ ಕೆಂದರೆ ಜ್ಞಾನವೆನ್ನುವ ಅಂಜನ ಅವಶ್ಯ. ಜ್ಞಾನಾಂಜನ ಇಲ್ಲದೆ ಆತ್ಮಧನ ಲಭಿಸುವುದಿಲ್ಲ. ಜ್ಞಾನಾಂಜನ ಇಲ್ಲದವರು ಆತ್ಮಧನವನ್ನು ಶರೀರದಲ್ಲಿ ಬಿಟ್ಟು ಹೊರಗೆ ಹುಡುಕುತ್ತಿದ್ದಾರೆ. ಶರೀರಕ್ಕೆ ಹೊರಗೆ ದೈವವನ್ನು ಎಷ್ಟು ಅನ್ವೇಷಣೆ ಮಾಡಿದರೂ ಎಂದಿಗೂ ದೇವರು ತಿಳಿಯುವುದಿಲ್ಲ.

| | |
|---|---|
| **ಸತಿಯಂದೆ ಪತಿಬುಟ್ಟೆನು** | **ಸತಿಯಲ್ಲೇ ಪತಿ ಹುಟ್ಟಿದ** |
| **ಸತಿಯುನು ಪತಿಯಂದೆ ಬುಟ್ಟೆ ಪರಮಾರ್ಥಮುಗ** | **ಪತಿಯು ಸತಿಯಲಿ ಹುಟ್ಟಿದ ಪರಮಾರ್ಥವಾ** |
| **ಸತಿ ಪತುಲನಗ ನೆವ್ವರು** | **ಸತಿ ಪತಿಗಳೆಂಬವರಾರು** |
| **ಮತಿಲೋ ದಲಪೋಸಿ ಜೂಡು ಮಹಿಲೋವೇಮಾ** | **ಮತಿಯಲಿ ತಲೆಹಾಕಿ ತಿಳಿಯೋ ಮಹಿಯಲಿ** |
| | **ವೇಮಾ. (67)** |

**ಭಾವಾರ್ಥ :–** ಸತಿ ಪತಿ ಎಂದರೆ ಒಬ್ಬರಿಗೊಬ್ಬರು ಅವಿನಾಭಾವ ಸಂಬಂಧ ಇರುವವರು. ಇವರಿಬ್ಬರ ಪಾತ್ರಗಳು ಪ್ರತಿಸಂಸಾರದಲ್ಲಿ ಮುಖ್ಯವಾಗಿ ಇರುತ್ತವೆ. ಮೊದಲು ಯಾವ ಪುರುಷನಾದರೂ ಒಬ್ಬ ಸ್ತ್ರೀಗೇ ಹುಟ್ಟಬೇಕು. ಹುಟ್ಟಿದ ಪುರುಷನು ಪುನಃ ಯಾವುದೋ ಒಬ್ಬ ಸ್ತ್ರೀಗೆ ಪತಿಯಾಗಿ ಬದಲಾಗುತ್ತಿದ್ದಾನೆ. ಪತಿಯಾಗಿ ಬದಲಾದ ಪುರುಷನಿಗೆ ಪುನಃ ಸಂತತಿಯಾಗಿ ಸ್ತ್ರೀ ಜನ್ಮಿಸುತ್ತಿದ್ದಾಳೆ. ಆದ್ದರಿಂದ ಸತಿಯಲ್ಲಿ ಹುಟ್ಟಿತು ಸತಿಯು ಪತಿಯಲ್ಲೆ ಹುಟ್ಟಿತು ಎಂದಿದ್ದಾರೆ. ಸ್ತ್ರೀಗೆ ಗಂಡನಾಗಿ ಬದಲಾಗುವ ಪುರುಷನನ್ನು ಪತಿ ಎಂದು, ಪುರುಷನಿಗೆ ಸತಿಯಾಗಿ ಬದಲಾಗುವ ಸ್ತ್ರೀಯನ್ನು ಸತಿ ಎಂದು ಸಂಬೋಧಿಸಿದ್ದಾರೆಂದು ತಿಳಿಯಬೇಕು.

ಮೇಲಿನ ವಿವರವೆಲ್ಲವೂ ಜ್ಞಾನ ಸಂಬಂಧವಾದುದೇಯೆಂದು ಗ್ರಹಿಸಬೇಕು. ಕರ್ಮ ಎನ್ನುವುದರಿಂದ ಕಾರ್ಯ ನಡೆಯುತ್ತಿದೆ. ಕರ್ಮದಲ್ಲೇ ಕಾರ್ಯ ಹುಟ್ಟುತ್ತಿದೆ. ಆದ್ದರಿಂದ ಕರ್ಮವನ್ನು ಸತಿಯಾಗಿ ಹೋಲಿಸಿ ಸತಿಯಲ್ಲಿ ಪತಿ ಹುಟ್ಟಿದನು ಎಂದಿದ್ದಾರೆ. ಕರ್ಮ, ಕಾರ್ಯದಿಂದ ಸಂಭವಿಸುತ್ತಿದೆ. ಪ್ರತಿ ಕೆಲಸದಲ್ಲೂ ಕಾಣಿಸದ ಕರ್ಮ ಸೇರುತ್ತಿದೆ. ಆದ್ದರಿಂದ ಸತಿಯನ್ನು ಪತಿಯಲ್ಲಿ ಹುಟ್ಟಿದಳೆಂದಿದ್ದಾರೆ. ಕರ್ಮದಿಂದ ಕಾರ್ಯ, ಕಾರ್ಯದಿಂದ ಕರ್ಮ ಅವಿನಾಭಾವ ಸಂಬಂಧವಾಗಿ ಇವೆ. ಆದ್ದರಿಂದ ಕರ್ಮ, ಕಾರ್ಯಗಳನ್ನು ಸತಿಪತಿಯಾಗಿ ಹೋಲಿಸಿ ವೇಮನಯೋಗಿ ಹೇಳಿದ್ದಾರೆ.

| | |
|---|---|
| **ದೊರಸಾನಿ ಎವ್ವತೆ ದೊರಕುಮಾರುಂಡೆವಡು** | **ದೊರಸಾನಿ ಯಾರೆ ದೊರೆಕುಮಾರನ್ಯಾರು** |
| **ಧರಣಿಯನಗ ನೇಮಿ ಕರಣಮೆವಡು** | **ಧರಣಿಯೆಂದರೆ ಏನು ಕರುಣನ್ಯಾರು** |
| **ದೀನಿ ಭಾವಮು ದೆಲಿಸಿ ಜ್ಞಾನಿ ಗಾವಲೆನಯಾ** | **ಇದರ ಭಾವ ತಿಳಿದು ಜ್ಞಾನಿ ಆಗಬೇಕಯಾ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳಯ ವೇಮಾ.** (68) |

**ಭಾವಾರ್ಥ :–** ದೊರೆ ದೊರಸಾನಿ ಎನ್ನುವುದು ಗಂಡ ಹೆಂತಿಯರಿಗೇ ಅನ್ವಯಿಸುತ್ತದೆ. ದೊರಸಾನಿ ಎಂದರೆ ಮಾಯೆ (ಪ್ರಕೃತಿ) ಎಂದು ಅರ್ಥ.

ದೊರೆ ಎಂದರೆ ಪ್ರಕೃತಿಗತೀತವಾದ, ಪ್ರಕೃತಿಯನ್ನು ಭರಿಸುತ್ತಿರುವ ಪರಮಾತ್ಮ ಎಂದು ತಿಳಿಯಬೇಕು. ದೊರೆ ಕುಮಾರನೆಂದರೆ ಪ್ರಕೃತಿ ಪುರುಷರಿಗೆ ಸಂಭವಿಸಿದ ಜೀವಾತ್ಮ ಎಂದು ತಿಳಿಯಬೇಕು. ಧರಣಿ ಅಳತೆ ಮಾಡುವವನು, ಭೂಮಿಗೆ ಹತ್ತಿರ ಸಂಬಂಧವಿರುವವನು ಕರಣ, ಧರಣಿ ಎಂದರೆ ಶರೀರವೆಂದು ತಿಳಿಯಬೇಕು. ಶರೀರ ಇಂದ್ರಿಯಗಳೊಂದಿಗೆ ಯಾವಾಗಲೂ ಸಂಬಂಧ ಹೊಂದಿದ ಮನಸ್ಸನ್ನು ಕರಣವಾಗಿ ತಿಳಿಯಬೇಕು. ಗುಪ್ತ ಪದಗಳ ಅವಿನಾಭಾವ ಸಂಬಂಧ ತಿಳಿದವನು ಜ್ಞಾನಿಯೇ ಎಂದು ವೇಮನ ಹೇಳಿದ್ದಾನೆ.

**ಒಕ ಸಂದುಲೋ ದೂರಿ ಒಕಸಂದುಲೋ ವಚ್ಚಿ**
**ಯೊಕ ಸಂದುಲೋ ದಾಗಿ ವೆರಪು ಚೂಪು**
**ವೆರಪು ಪುಟ್ಟಿನ ಚೋಟ ವಿವರಂಬು ಚೂಡರ**
**ವಿಶ್ವದಾಭಿರಾಮ ವಿನುರ ವೇಮಾ.**

**ಒಂದು ಸಂದಿಯೊಳಗೆ ತೂರಿ ಒಂದು**
**ಸಂದಿಯೊಳಗೆ ಬಂದು**
**ಒಂದು ಸಂದಿಯಲ್ಲಿ ಅವಿತು ಸರ್ವ ಸೃಷ್ಠಿ**
**ಸರ್ವವು ಹುಟ್ಟಿದ ಸ್ಥಳದಲ್ಲಿ ವಿವರವನ್ನು ನೋಡಾ**
**ವಿಶ್ವದಾಭಿರಾಮ ಕೇಳು ವೇಮಾ.** (69)

**ಭಾವಾರ್ಥ :–** ನಮ್ಮ ಶರೀರದಲ್ಲಿನ ಮನಸ್ಸು ಜಾಗ್ರತಾವಸ್ಥೆಯಲ್ಲಿ ಸೂರ್ಯ ಚಂದ್ರನಾಡಿಗಳ ಮೇಲೆ, ನಿದ್ರಾವಸ್ಥೆಯಲ್ಲಿ ಬ್ರಹ್ಮನಾಡಿಯಲ್ಲಿ ನಿವಾಸವಿರುತ್ತದೆ. ಜಾಗ್ರತೆ, ನಿದ್ರೆಯೇ ಅಲ್ಲದೆ ಮೂರನೆಯದು ಸ್ವಪ್ನಾವಸ್ಥೆ ಇದೆ. ಸ್ವಪ್ನಾವಸ್ಥೆಯಲ್ಲಿ ಕೂಡ ಮನಸ್ಸು ಬ್ರಹ್ಮನಾಡಿಯಲ್ಲೇ ಇರುತ್ತದೆ. ಜಾಗ್ರತಾವಸ್ಥೆಯಲ್ಲಿ ಮನಸ್ಸು, ಸೂರ್ಯ ಚಂದ್ರನಾಡಿಗಳ ಮೇಲೆ ಇದ್ದು ಹೊರಗಿನ ಜ್ಞಾನೇಂದ್ರಿಯಗಳು ಒದಗಿಸುವ ವಿಷಯಗಳನ್ನೋ ಅಥವಾ ಗತ ವಿಷಯಗಳನ್ನೋ ಜೀವಿಗೆ ತಿಳಿಸುತ್ತಿರುತ್ತದೆ. ಸ್ವಪ್ನಾವಸ್ಥೆಯಲ್ಲಿ ಹೊರಗಿನ ಇಂದ್ರಿಯಗಳ ವಿಷಯಗಳಾಗಲಿ, ಗತ ವಿಷಯಗಳ ಜ್ಞಾಪಕವಾಗಲಿ ಮನಸ್ಸಿಗೆ ಇರುವುದಿಲ್ಲ. ಸ್ವಪ್ನದಲ್ಲಿ ಎಷ್ಟೋ ದೃಶ್ಯಗಳು ಶಬ್ದಗಳು ಕಾಣಿಸಿದರೂ, ಕೇಳಿಸಿದರೂ ಅವೆಲ್ಲವೂ ಹೊರಗಿನ ಇಂದ್ರಿಯಗಳ ಮೂಲಕ ತಿಳಿದಿರುವವಲ್ಲ. ಬ್ರಹ್ಮನಾಡಿಯಲ್ಲಿ ಸರ್ವವೂ ಒಳಗೊಂಡಿದೆ. ಆ ಬ್ರಹ್ಮನಾಡಿಯಲ್ಲೇ ಕರ್ಮಕ್ಕೆ ಅನುಗುಣವಾಗಿ ಎಲ್ಲಾ ದೃಶ್ಯಗಳು ಕಾಣಿಸುತ್ತಿರುತ್ತವೆ. ಹೊರಗಿನಿಂದ ತಿಳಿಯದೆ ಹೋದರೂ ಅಂತರಂಗದಲ್ಲಿ,

ಹೊರಗಿನ ವಿಷಯಗಳ ಹಾಗೆಯೇ ಮನಸ್ಸಿಗೆ ತೋಚುತ್ತಿರುತ್ತದೆ. ಮನಸ್ಸಿಗೆ ತಿಳಿಯುತ್ತಿರುವ ವಿಷಯಗಳು ಜೀವಿಗೆ ಸೇರುತ್ತಿರುತ್ತವೆ. ಆದ್ದರಿಂದ ಸ್ವಪ್ನಾವಸ್ಥೆಯಲ್ಲಿನ ಕಷ್ಟ ಸುಖಗಳನ್ನು ಜೀವಿಯು ಅನುಭವಿಸುತ್ತಿರುವನು. ಹೊರಗಿನಿಂದ ಬಂದ, ಬ್ರಹ್ಮನಾಡಿಯಿಂದ ಬಂದ, ಮನಸ್ಸಿನಿಂದ ಬರುವ ವಿಷಯಗಳನ್ನು ಅನುಭವಿಸುವುದೇ ಜೀವಿಯೊಂದರ ವಿಧಿ. ಸ್ವಪ್ನಾವಸ್ಥೆಯಲ್ಲಿ ಬ್ರಹ್ಮನಾಡಿಯಲ್ಲಿ ಕಾಣಿಸಿದ ದೃಶ್ಯಗಳಿಗು ವಿಷಯಗಳಿಗು ಭಯ ಉಂಟಾಗುವುದು ಕೂಡ ನಡೆಯುತ್ತಿರುತ್ತದೆ. ಜೀವಿಯು ಸ್ವಪ್ನದಿಂದ ಹೊರಬಿದ್ದಾಗ ಮನಸ್ಸು ಸೂರ್ಯ ಚಂದ್ರನಾಡಿಗಳೊಳಗೆ ಬಂದು ಜಾಗ್ರತೆ ಹೊಂದುವನು. ಜಾಗ್ರತೆ ಹೊಂದಿದ ಜೀವಿಯು ಅನುಭವಿಸಿದ ವಿಷಯ ಹೊರಗೆ ಇಲ್ಲದಿದ್ದರೂ, ವಿಷಯ ಭಯ ಮಾತ್ರ ಸ್ವಲ್ಪ ಹೊತ್ತು ಬಿಡದಂತಿರುತ್ತದೆ. ಸ್ವಪ್ನವನ್ನು ಕೆಲವರು ಅಸತ್ಯವೆಂದು ಹೇಳುತ್ತಿರುತ್ತಾರೆ. ಸ್ವಪ್ನ ಅಸತ್ಯವಲ್ಲ ಸತ್ಯವಾದುದು. ಹೊರಗೆ ಇಲ್ಲದಷ್ಟು ಮಾತ್ರಕ್ಕೆ ಜೀವಿಯು ಅನುಭವಿಸಿದ ವಿಷಯಗಳು ಹೇಗೆ ಅಸತ್ಯವೆಂದು ಹೇಳಬಹುದು? ಸ್ವಪ್ನ ಅಸತ್ಯವಾದರೇ ಸ್ವಪ್ನದಲ್ಲಿ ಉಂಟಾದ ಭಯವು ಸಹ ಅಸತ್ಯ ಆಗಬೇಕಲ್ಲವೆ! ಹಾಗಲ್ಲದೆ ಜಾಗ್ರತೆಯಲ್ಲಿ ಕೂಡ ಸ್ವಲ್ಪ ಹೊತ್ತು ಸತ್ಯವಾಗಿ ಸ್ವಪ್ನಾನುಭೂತಿಯನ್ನು ಜೀವಿಯು ಅನುಭವಿಸುವಾಗ ಸ್ವಪ್ನ ಸತ್ಯವೇ ಆಗುತ್ತದೆ. ಬ್ರಹ್ಮನಾಡಿಯಲ್ಲಿ ಪಂಚತನ್ಮಾತ್ರಗಳಿಂದ ಮನಸ್ಸಿಗೆ ತಿಳಿದ ವಿಷಯವೇ ಸ್ವಪ್ನವೆಂದು ತಿಳಿಯದವರು, ಶರೀರಯಂತ್ರಾಂಗ ಪೂರ್ತಿ ತಿಳಿಯದವರು ಸ್ವಪ್ನ ಅಸತ್ಯವೆನ್ನುವುದು ನಡೆಯುತ್ತಿದೆ.

ಅಂತಹವರನ್ನು ಉದ್ದೇಶಿಸಿ ವೇಮನ ಮೇಲಿನ ಪದ್ಯ ಹೇಳಿದ್ದಾನೆ. ಮನಸ್ಸು ಜಾಗ್ರತೆಯಲ್ಲಿ ಸೂರ್ಯನಾಡಿಯನ್ನು ಬಿಟ್ಟು ಚಂದ್ರನಾಡಿಯೊಳಗೆ, ಚಂದ್ರನಾಡಿಯನ್ನು ಬಿಟ್ಟು ಸೂರ್ಯನಾಡಿಯೊಳಗೆ ಪ್ರವೇಶಿಸುತ್ತಿದೆ. ಆದ್ದರಿಂದ ಮೇಲಿನ ಪದ್ಯದಲ್ಲಿ ಒಂದು ಸಂದಿನಲ್ಲಿ ತೂರಿ ಮತ್ತೊಂದು ಸಂದಿನಲ್ಲಿ ಬಂದು ಎಂದಿದ್ದಾರೆ. ಸೂರ್ಯಚಂದ್ರನಾಡಿಗಳಲ್ಲಿ ಬದಲಾಗುತ್ತಿರುವ ಮನಸ್ಸು ನಿದ್ರಾವಸ್ಥೆಯಲ್ಲಿ ಬ್ರಹ್ಮನಾಡಿಯಲ್ಲಿ ಸೇರುತ್ತಿದೆ. ಆದ್ದರಿಂದ ಒಂದು ಸಂದಿನಲ್ಲಿ

ಅವಿತು ಎಂದಿದ್ದಾರೆ. ಬ್ರಹ್ಮನಾಡಿಯಲ್ಲೇ ಸ್ವಪ್ನಾವಸ್ಥೆ ಕೂಡ ಉಂಟಾಗುತ್ತಿದೆ. ಸ್ವಪ್ನಾವಸ್ಥೆಯಲ್ಲಿ ಮನಸ್ಸು ಭಯ ತೋರಿಸುತ್ತಿದೆ. ಆದ್ದರಿಂದ ಒಂದು ಸಂದಿಯಲ್ಲಿ ಅವಿತು ಸರ್ವವೂ ತೋರಿಸುತ್ತಿದೆ ಎಂದಿದ್ದಾರೆ. ಭಯ ಹೊರಗಿನಿಂದ ಉಂಟಾಗದೆ ಬ್ರಹ್ಮನಾಡಿಯಲ್ಲೇ ಉಂಟಾಗುತ್ತಿದೆ. ಆ ಬ್ರಹ್ಮನಾಡಿಯಲ್ಲಿ ಏನಿದೆಯೋ ತಿಳಿದರೆ ಸರ್ವವೂ ತಿಳಿದವನಾಗುತ್ತಾನೆ. ಆದ್ದರಿಂದ ಸರ್ವವು ಹುಟ್ಟಿದ ಕಡೆ ವಿವರವಾಗಿ ನೋಡಯಾ ಎಂದು ವೇಮನಯೋಗಿಯವರು ಹೇಳಿದ್ದಾರೆ.

**ಮೇಡಿಪಂಡು ಜೂಡ ಮೇಲಿಮ್ಮೆಯುಂಡುನು**
**ಪೊಟ್ಟವಿಪ್ಪಿ ಚೂಡ ಪುರುಗುಲುಂಡು**
**ಪಿರಿಕಿವಾನಿ ಮದಿನಿ ಬಿಂಕ ಮೀಲಾಗುರಾ**
**ವಿಶ್ವದಾಭಿರಾಮ ವಿನುರ ವೇಮಾ.**

**ಹತ್ತಿ ಹಣ್ಣು ನೋಡಲು ಮೇಲ್ಮೈ ಬಹು ಅಂದ**
**ಹೊಟ್ಟೆ ಬಿಚ್ಚಿ ನೋಡಲು ಹುಳುಗಳಿರುವವು**
**ಅಂಜುಬುರುಕನ ಮನದ ಬಿಂಕ ಉಳಿವುದೊ**
**ವಿಶ್ವದಾಭಿರಾಮ ಕೇಳು ವೇಮಾ.** (70)

**ಭಾವಾರ್ಥ :–** ಅಂದವಾಗಿ ಅಲಂಕರಿಸಲ್ಪಟ್ಟು ಬಣ್ಣಗಳು ಬಳಿದಿರುವ ಗೋರೀಗಳು (ಸಮಾಧಿಗಳು) ಕಣ್ಣಿಗೆ ಎಷ್ಟೋ ಪ್ರೀತಿಯಾಗಿ ಕಾಣಿಸುತ್ತವೆ. ಆದರೆ ಅವುಗಳೊಳಗೆ ದುರ್ಗಂಧಪೂರಿತವಾದ ಶವ ಇರುತ್ತದೆ. ಒಳಗೆ ಅನೇಕ ವಿಧವಾದ ಆಸ್ತಿಗಳು ಭಯಂಕರವಾಗಿ ಕಾಣಿಸುವ ಗೋರಿ ಹೊರಕ್ಕೆ ಎಷ್ಟೋ ಅಂದವಾಗಿ ಕಾಣಿಸುವಂತೆ, ಕಪಟ ಸನ್ಯಾಸಿಗಳ ಅಂತರ್ಗತವು ಕೂಡ ಹಾಗೆಯೇ ಇರುತ್ತದೆ. ಬಾಹ್ಯಕ್ಕೆ ರುದ್ರಾಕ್ಷಮಾಲೆ, ಕಾವಿವಸ್ತ್ರಗಳು, ವಿಭೂತಿರೇಖೆಗಳು ಮುಂತಾದ ವೇಷ ಭೂಷಣಗಳು ಧರಿಸಿದ ಕಪಟಸನ್ಯಾಸಿಗಳು ಹೊರಗೆ ಎಷ್ಟೋ ದೊಡ್ಡ ಜ್ಞಾನಿಗಳಾಗಿ ಕಾಣಿಸಿದರೂ ಅವರ ಅಂತರಂಗ ಅನೇಕ ವಿಧಗಳಾದ ಗುಣಗಳೊಂದಿಗೆ ತುಂಬಿರುತ್ತದೆ. ಗುಣಗಳೊಂದಿಗೆ ಸಂಬಂಧವಿದ್ದು ಅವುಗಳ ಕರ್ಮ ಅಂಟದ ವಿಧಾನ ಅವರಿಗೆ ತಿಳಿದಿಲ್ಲ.

ಹತ್ತಿಹಣ್ಣು ನೋಡುವುದಕ್ಕೆ ಕಾಷಾಯ(ಕಾವಿ)ಬಣ್ಣದಲ್ಲಿಯೇ ಎಷ್ಟೋ ಅಂದವಾಗಿ ಕಾಣಿಸುತ್ತಿರುತ್ತದೆ. ಅದರ ಹೊಟ್ಟೆ ಬಿಚ್ಚಿದರೇ ಹುಳುಗಳಿರುವಂತೆ

ಕಪಟ ಸನ್ಯಾಸಿಗಳು ಕೂಡ ಮೇಲೆ ಬೆಳಕು ಒಳಗೆ ಕೊಳಕು ಎನ್ನುವಂತೆ ಇರುತ್ತಾರೆ. ಧೈರ್ಯವೆನ್ನುವ ಜ್ಞಾನ ಇಲ್ಲದದಿನ ಹೇಡಿತನವೆಂಬ ಅಜ್ಞಾನ ಹೋಗುವುದಿಲ್ಲ. ಅಜ್ಞಾನ ಇದ್ದಾಗ ಜೀವಿಯು ವಿಷಯಕರ್ಮಗಳಲ್ಲಿ ಸಿಲುಕಿಕೊಳ್ಳುತ್ತಿದ್ದಾನೆ. ಜ್ಞಾನವಿರುವಾಗ ವೇಷ ಹಾಕಬೇಕಾದ ಕೆಲಸವಿಲ್ಲವೆಂದು, ಅಂತರಂಗ ಶುಭ್ರವಾಗಿ ಇದ್ದರೇ ಸಾಕೆಂದು ಮೇಲಿನ ಪದ್ಯದಲ್ಲಿ ವೇಮನ ತಿಳಿಸಿದ್ದಾನೆ.

| | |
|---|---|
| **వేరు పురుగు చేరి వృక్షంబు చెరచును** | **ಬೇರು ಹುಳವು ಸೇರಿ ವೃಕ್ಷವನ್ನು ಕೊರೆಯುತ್ತದೆ** |
| **చీడ పురుగు చేరి చెట్టు చెరచు** | **ಜೀಡಿ ಹುಳವು ಸೇರಿ ಗಿಡವ ಕೆಡಿಸುತ್ತದೆ** |
| **కుత్సితుండు చేరి గుణవంతు చెరచురా** | **ಕುತ್ಸಿತನು ಸೇರಿ ಗುಣವಂತನ ಕೆಡಿಸಿದ** |
| **విశ్వదాభిరామ వినుర వేమా.** | **ವಿಶ್ವದಾಭಿರಾಮ ಕೇಳು ವೇಮಾ. (71)** |

**ಭಾವಾರ್ಥ :–** ಈ ಪದ್ಯದಲ್ಲಿ ಬೇರುಹುಳ, ಜೀಡಿಹುಳ, ಕುತ್ಸಿತ (ಕೆಡಕು) ಒಂದು ವರ್ಗಕ್ಕೆ ಸೇರಿಸಿ ಇವರಿಂದ ವೃಕ್ಷವು, ಗಿಡ, ಗುಣವಂತನು ಕೆಟ್ಟುಹೋಗುತ್ತಿದ್ದಾರೆನ್ನುತ್ತಿದ್ದಾನೆ. ಇದರಲ್ಲಿ ಬೇರು ಹುಳವನ್ನು, ಜೀಡಿ ಹುಳವನ್ನು ಉದಾಹರಣೆಯಾಗಿ ತೋರಿಸುತ್ತಾ ವೃಕ್ಷ, ಗಿಡ ಕೆಟ್ಟುಹೋಗುತ್ತವೆಂದು ಹಾಗೆಯೇ ಕುತ್ಸಿತನಿಂದ ಗುಣವಂತನು ಕೆಟ್ಟುಹೋಗುವನೆಂದಿದ್ದಾರೆ. ಇಲ್ಲಿ ಆಲೋಚಿಸಿ ನೋಡಿದರೆ ಹುಳಕ್ಕೆ ಶತ್ರು ಗಿಡಗಳೆಂದು, ವೃಕ್ಷಜಾತಿಗೆ ಶತ್ರು ಹುಳವೆಂದು ತಿಳಿಯುತ್ತಿದೆ. ಹಾಗೆಯೇ ಕುತ್ಸಿತನಿಗೆ ಗುಣವಂತರು, ಗುಣವಂತನಿಗೆ ಕುತ್ಸಿತನು ಶತ್ರುವೆನ್ನುವ ಮಾತು. ಧನ ಇರುವವನನ್ನು ಧನವಂತನೆಂದು, ಬಲ ಇರುವವನನ್ನು ಬಲವಂತನೆನ್ನುವುದು ಸಹಜವಾಗಿ ಎಲ್ಲರಿಗೂ ತಿಳಿದ ವಿಷಯವೇ. ಹಾಗೆಯೇ ಗುಣಗಳು ಇರುವವನನ್ನು ಗುಣವಂತನೆನ್ನುವುದು ಕೂಡ ಸಹಜವೇ. ಪ್ರಪಂಚದಲ್ಲಿ ಧನವಂತರನ್ನು, ಬಲವಂತರನ್ನು, ಗುಣವಂತರನ್ನು ಸುಲಭವಾಗಿ ಗುರುತಿಸಬಹುದು. ಹಾಗೆಯೇ ವೃಕ್ಷಗಳನ್ನು, ಗಿಡಗಳನ್ನು ಕೂಡ ಸುಲಭವಾಗಿ ಗುರುತಿಸಬಲ್ಲೆವು. ಆದರೆ ಕಾಣಿಸದ ಬೇರು ಹುಳವನ್ನು, ಜೀಡಿ ಹುಳವನ್ನು ಸುಲಭವಾಗಿ ಗುರುತಿಸಲಾರೆವು. ಹಾಗೆಯೇ ಕುತ್ಸಿತನನ್ನು ಕೂಡ ಸುಲಭವಾಗಿ

ಗುರುತಿಸಲಾರೆವು. ಅಗೆದು ನೋಡಿದರೆ ಬೇರು ಹುಳವನ್ನು, ಭೂತ ಕನ್ನಡಿಯಿಂದ ಜೀಡಿ ಹುಳವನ್ನು ಗಮನಿಸಿದಂತೇ ಶೋಧಿಸಿ ನೋಡಿದರೆ ಕುತ್ಸಿತನನ್ನು ಕೂಡ ತಿಳಿದುಕೊಳ್ಳಬಹುದು.

ಆಕಾರದಲ್ಲಿ ಹುಳಗಳು, ಮರಗಳು ಬೇರೆಬೇರೆಯಾಗಿ ಇರುವುದರಿಂದ ಇವು ಹುಳಗಳೆಂದು, ಇವು ಮರಗಳೆಂದು ಗುರುತಿಸಬಹುದು. ಆದರೆ ಆಕಾರದಲ್ಲಿ ಒಂದೇ ರೂಪವಾಗಿ ಇರುವ ಮನುಷ್ಯರಲ್ಲಿ ಕುತ್ಸಿತರನ್ನು ಗುರುತಿಸುವುದು ಕಷ್ಟಕರವಾಗಿ ಇರುತ್ತದೆ. ಶಾಖೋಪಶಾಖೆಗಳಾದ ವೃಕ್ಷವೊಂದರ ಕೊಂಬೆ ಗಳೆಲ್ಲವನ್ನೂ ಒಣಗಿ ಹೋಗುವಂತೆ ಬೇರು ಹುಳ ಮಾಡಿದಹಾಗೆ, ಹಸಿರು ಎಲೆಗಳೊಂದಿಗೆ ಅಂದವಾಗಿ ಇರುವ ಮರವೊಂದರ ಎಲೆಗಳೆಲ್ಲವೂ ಹೋಗಿ ಬಾಡಿಹೋಗುವಂತೆ ಜೀಡಿ ಹುಳ ಮಾಡಿದಂತೆ, ಗುಣ ಸಮೃದ್ಧಿಯಾಗಿರುವ ಗುಣವಂತನೊಂದರ ಗುಣಪ್ರಭಾವಗಳೆಲ್ಲವೂ ಹೋಗಿ ಗುಣಹೀನನಾಗುವಂತೆ ಕುತ್ಸಿತನು ಮಾಡುವನು. ಗುಣವಂತನನ್ನು ಕೆಡಿಸುವವನು ಕುತ್ಸಿತನೆಂದರೇ ಸ್ವಲ್ಪ ವಿವರವಾಗಿ ತಿಳಿದುಕೊಳ್ಳೋಣ. ಕುತ್ಸಿತನೆಂದರೆ ಕೆಡಿಸುವವನೆಂದು ಅರ್ಥ. ಆದರೆ ಬಹಳ ಮಂದಿ ಭಾವನೆಯಲ್ಲಿ ಕೆಡಕು ಮಾಡುವವನೆಂದು ಇದೆ. ಕೆಡಿಸುವುದಕ್ಕೆ, ಕೆಡಕು ಮಾಡುವುದಕ್ಕೆ ಬಹಳ ವ್ಯತ್ಯಾಸ ಇದೆ. ಕೆಡಿಸು, ಕೆಡಕಿಗೆ ಇರುವ ವ್ಯತ್ಯಾಸ ಗಮನಿಸಬೇಕು. ಕೆಡಿಸುವುದು ಎಂದರೆ ಇಲ್ಲದಂತೆ ಮಾಡುವು ದೆಂದು, ಕೆಡಕು ಮಾಡುವುದೆಂದರೆ ವಿರುದ್ಧ ಮಾಡುವುದೆಂದು ತಿಳಿಯಬೇಕು. ಗುಣವಂತನ ಗುಣಗಳು ಇಲ್ಲದಂತೆ ಮಾಡುವವನು ಕುತ್ಸಿತನು. ಬೇರು ಹುಳ ವೃಕ್ಷವನ್ನು ನಾಶ ಮಾಡಿದಂತೆ, ಗುಣಗಳು ಹೊಂದಿ ಅವುಗಳಿಂದ ಕರ್ಮಉಂಟಾಗುವ ವಿಧಾನವನ್ನು ಮಾಸಿಹೋಗುವಂತೆ ಮಾಡುವವನು ಗುರುವು. ಗುಣವಂತನನ್ನು ಕೆಡಿಸುವವನು ಕುತ್ಸಿತನೆಂದರೆ ಗುರುವೆಂದೇ ಅರ್ಥ. ಗುರುವು ಗುಣವಂತರಿಗೆ ಶತ್ರುವಿನಂತಹವನು ಆದ್ದರಿಂದ ಗುಣಬಲ ಇರುವವರು ಗುರುಗಳನ್ನು ಶತ್ರು ಸಮಾನರಾಗಿ ನೋಡುತ್ತಿರುತ್ತಾರೆ. ಗುಣಬಲ ಇಲ್ಲದವರಿಗೆ ಗುರುವು ಮಿತ್ರನಹಾಗೆ ಕಾಣಿಸುತ್ತಿರುವನು. ಇಲ್ಲಿ ವೃಕ್ಷಕ್ಕೆ ಬೇರು ಹುಳವನ್ನು

ಹೇಳಿದಹಾಗೆ ಗುಣವಂತನಿಗೆ ಗುರುವು ಕುತ್ಸಿತನೆಂದು ಅರ್ಥಬರುವಂತೆ ವೇಮನ ಹೇಳಿದ್ದಾನೆ.

| | |
|---|---|
| **ಲಂಜ ಲಂಜ ಯಂಡ್ರು ಲೌಕಿಕ ಧರ್ಮಾನ** | **ಸೂಳೆ ಸೂಳೆ ಎನ್ನುವರು ಲೌಕಿಕ ಧರ್ಮದಲಿ** |
| **ಲಂಜಗಾನಿ ದೆವರು ರಾಜ್ಯಮಂದು** | **ಸೂಳೆ ಆಗದಿರುವರ್ಯಾರು ರಾಜ್ಯದಲ್ಲಿ** |
| **ಲಂಜಕೊಡುಕು ಬ್ರಹ್ಮರಾತೆಟ್ಲ ರಾಸೆರ** | **ಸೂಳೆ ಮಗ ಬ್ರಹ್ಮ ಬರಹವನ್ನು ಹೇಗೆ ಬರೆದನೊ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (72) |

**ಭಾವಾರ್ಥ :–** ಪ್ರಪಂಚ ರೀತಿಯಲ್ಲಿ ಸೂಳೆ ಎಂದರೆ ಪರಪುರುಷನೊಂದಿಗೆ ಸೇರುವುದೆಂದು ಅರ್ಥ. ಪರಪುರುಷನೊಂದಿಗೆ ಸಂಬಂಧ ಇಟ್ಟುಕೊಳ್ಳುವುದು ಸ್ತ್ರೀ (ಸೂಳೆ) ಇದು ಲೌಕಿಕ ಧರ್ಮದ ಪ್ರಕಾರ ಹೇಳಲ್ಪಡುವುದು. ಈ ವಿಧವಾಗಿಯೇ ಜ್ಞಾನ ಧರ್ಮದ ಪ್ರಕಾರ ನೋಡಿದರೆ ಪ್ರಪಂಚದಲ್ಲಿ ಸೂಳೆ (ಸ್ತ್ರೀ) ಆಗದವರು ಯಾರೂ ಇಲ್ಲ. ಅಂದರೆ ಪ್ರಕೃತಿಯಲ್ಲಿ ಶರೀರಗಳು ಧರಿಸಿ ಹುಟ್ಟಿದ ಗಂಡಸರು, ಹೆಂಗಸರು ಎಲ್ಲರು ಸ್ತ್ರೀಯರೆಂದೇ ತಿಳಿಯಬೇಕು. ಪರಮಾತ್ಮ ಒಬ್ಬನೇ ಪುರುಷನು. ಪರಮಾತ್ಮಗಿಂತ ಬೇರೆಯಾದ ಪ್ರಕೃತಿಯೆಲ್ಲವೂ ಸ್ತ್ರೀಯೆಂದು ತಿಳಿಯಬೇಕು. ಆಕಾರ ಹೊಂದಿದ ಪ್ರತಿಯೊಬ್ಬರು ಪ್ರಕೃತಿಯಲ್ಲಿ ಇರುವವರೇ. ಪ್ರಕೃತಿಯಲ್ಲಿಂದ ಪರಮಾತ್ಮನೊಳಗೆ ಬೆರೆಯಬೇಕಾದವರು ಆದ್ದರಿಂದ ಜೀವಿಗಳೆಲ್ಲರನ್ನು ಸ್ತ್ರೀಯರಾಗಿ ಹೇಳಲ್ಪಡುತ್ತಿದೆ. ಆದ್ದರಿಂದ ಸೂಳೆಯಾಗ ದವರ್ಯಾರು ರಾಜ್ಯದಲ್ಲಿ ಎಂದಿದ್ದಾರೆ. ಇಲ್ಲಿ ಪರಮಾತ್ಮ ಪುರುಷನಾದರೇ ಅವನೊಂದಿಗೆ ಬೆರೆಯುವ ಜೀವಿಗಳು ಸ್ತ್ರೀಯರೆಂದು ಅರ್ಥಮಾಡಿಕೊಳ್ಳಬೇಕು. ಆತ್ಮ ಪ್ರತಿ ಜೀವರಾಶಿಗು ವಾಸ್ತವವಾಗಿ ಪತಿ. ಆತ್ಮಗಿಂತ ಬೇರೆಯಾಗಿ ಇರುವ ಪರವಾಗಿರುವವನು ಪರಮಾತ್ಮ, ಪರಮಾತ್ಮದೊಂದಿಗೆ ಬೆರೆಯಬೇ ಕೆಂದುಕೊಳ್ಳುವವರು ವ್ಯಭಿಚಾರಿಗಳೇ ಅಲ್ಲವೆ! ಆದ್ದರಿಂದ ಜೀವಿಗಳನ್ನು ಸೂಳೆ ಎನ್ನುವ ಪದದೊಂದಿಗೆ ವೇಮನ ಸೂಚಿಸಿದ್ದಾನೆ.

ಸರ್ವ ಜೀವರಾಶಿಗಳನ್ನು ಹುಟ್ಟಿಸುವ ಕರ್ಮ ಮತ್ತು ಅದಕ್ಕೆ ಸಂಬಂಧಿಸಿದ ಗುಣಗಳು, ಶರೀರ ಎಲ್ಲವೂ ಪ್ರಕೃತಿಯೊಳಗಿನವೇ. ರೂಪ ಹೊಂದಿದ ಪ್ರತಿಯೊಂದೂ ಪ್ರಕೃತಿಯೇ. ಆಕಾರ ಹೊಂದಿದ ತ್ರಿಮೂರ್ತಿಯರಲ್ಲಿನ ಬ್ರಹ್ಮ ಕೂಡಾ ಪ್ರಕೃತಿಯಲ್ಲಿನವನೇ. ಅವನನ್ನು ಹುಟ್ಟಿಸುವುದಕ್ಕೆ ಕೂಡಾ ಕಾರಣವಾದ ಕರ್ಮ ಪ್ರಕೃತಿಯಲ್ಲೇ ಇರುವಾಗ ಅದಕ್ಕೆ ಹುಟ್ಟಿದ ಬ್ರಹ್ಮ ಜೀವಿಗಳಿಗೆ ಕರ್ಮ ಬರೆದಿದ್ದಾನೆಂದರೇ ನಂಬುವಂತಹ ಮಾತಲ್ಲ. ಆದ್ದರಿಂದ ಮೇಲಿನ ಪದ್ಯದಲ್ಲಿ ಸೂಳೆ ಮಗ ಬ್ರಹ್ಮ ಬರಹವನ್ನು ಹೇಗೆ ಬರೆದಿದ್ದಾನೆ ಎಂದಿದ್ದಾರೆ. ಅಂದರೆ ಬ್ರಹ್ಮ ಬರಹ ಬರೆಯುವುದು ಅಸತ್ಯವೆಂದು ತಿಳಿಯಬೇಕು. ಪ್ರತಿಯೊಂದು ನಡೆಯುವುದಾಗಲಿ, ಹುಟ್ಟುವುದಾಗಲಿ ಕರ್ಮದಿಂದ ನಡೆಯುತ್ತಿದೆ. ಆದ್ದರಿಂದ ಬ್ರಹ್ಮನು ಸಹ ಕರ್ಮಾಧೀನನೇ. ಬ್ರಹ್ಮ ಕರ್ಮಾತೀತನಲ್ಲ.

| | |
|---|---|
| **ಜಾತುಲಂದು ಮಿಗುಲಜಾತಿ ಏದೆಕ್ಕುವೋ** | **ಜಾತಿಯೊಳಗೆ ಉಳಿದ ಜಾತಿ ಯಾವುದೆಚ್ಚು** |
| **ಎರುಕ ಲೇಕ ತಿರುಗ ನೇಮಿ ಫಲಮೊ** | **ಎಚ್ಚರವಿಲ್ಲದೆ ತಿರುಗಿದರೇನು ಫಲ** |
| **ಎರುಕ ಗಲುಗು ವಾಡೆ ಹೆಚ್ಚಿನ ಕುಲಜುಂಡು** | **ಎಚ್ಚರವಿರುವವನೆ ಹೆಚ್ಚಾದ ಕುಲಜನು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (73) |

**ಭಾವಾರ್ಥ :–** "ಚಾತುರ್ವರ್ಣ್ಯಂ ಮಯಾ ಸೃಷ್ಟಂ" ಎಂದು ಗೀತಾಚಾರ್ಯನ ವಾಕ್ಯದ ಪ್ರಕಾರ ಭೂಮಿಮೇಲೆ ನಾಲ್ಕೇ ನಾಲ್ಕು ಜಾತಿಗಳಿವೆ. ಆ ನಾಲ್ಕು ಜಾತಿಗಳಲ್ಲಿ ಬಹಳ ಹೆಚ್ಚಾಗಿರುವ ಜಾತಿ ಎಚ್ಚರ ಹೊಂದಿದ ಜಾತಿ. '(ಎರುಕ)' ಎಂದರೆ ತಿಳಿಯುವುದೆಂದು ಅರ್ಥ. ಆತ್ಮವನ್ನು ತಿಳಿಯುವುದನ್ನು 'ಎಚ್ಚರ' ಎನ್ನುತ್ತಿದ್ದಾರೆ. ಭೂಮಿ ಮೇಲೆ ಜನ್ಮಿಸಿದ ನಂತರ ತನ್ನಲ್ಲಿನ ಆತ್ಮ ಯಾವುದೋ ತಿಳಿಯದೆ, ಕಾಲಕಳೆಯುವವನ ಜನ್ಮ ವೃಥಾ ಎಂದು ಹೇಳಬಹುದು. ಆದ್ದರಿಂದಲೇ ಈ ಪದ್ಯದಲ್ಲಿ ಎಚ್ಚರವಿಲ್ಲದೆ ತಿರುಗಿ ಏನು ಫಲ ಎಂದಿದ್ದಾರೆ. ಪ್ರಪಂಚದಲ್ಲಿನ ನಾಲ್ಕು ಜಾತಿಗಳಲ್ಲಿ ತಾಮಸ ಜಾತಿ ಬಹಳ ನೀಚವಾದುದು, ರಾಜಸ ಜಾತಿ ಮಧ್ಯಮವಾದುದು. ಸಾತ್ತ್ವಿಕ ಜಾತಿ ಉತ್ತಮವಾದುದೆಂದು ತಿಳಿಯಬೇಕು. ಈ ಮೂರು ಜಾತಿಗಳಿಗಿಂತ ಉತ್ತಮೋತ್ತಮವಾದುದು ಯೋಗಿಗಳ

ಜಾತಿ ಇಲ್ಲವೆ ಎಚ್ಚರ ಜಾತಿ ಎನ್ನುತ್ತಾರೆ. ಯೋಗ ಇರುವವನೇ ನಿಜವಾದ ಹೆಚ್ಚಿನ ಜಾತಿಯವನಾದ್ದರಿಂದ ಎಚ್ಚರ ಇರುವವನೇ ಹೆಚ್ಚಿನ ಕುಲದವನೆಂದು ವೇಮನ ಹೇಳಿದ್ದಾನೆ. ಭೂಮಿಮೇಲೆ ಕುಲಗಳು ನಿಜವಾಗಿ ಕುಲಗಳು ಅಲ್ಲವೆಂದು, ಅವು ದೇಶ, ಪ್ರಾಂತ ವಿಭಜನೆಯಿಂದ ಮತ್ತು ವೃತ್ತಿ ಕೆಲಸಗಳಿಂದ ಅನೇಕ ಗುರುತಿಸುವ ಕುಲಗಳಿವೆಯೆಂದು, ಒಂದು ಪ್ರಾಂತದಲ್ಲಿನ ಅಥವಾ ಒಂದು ದೇಶದಲ್ಲಿನ ಕುಲಗಳು ಬೇರೆ ಪ್ರಾಂತದಲ್ಲಾಗಲೀ ಬೇರೆ ದೇಶದಲ್ಲಾಗಲಿ ಇಲ್ಲವೆಂದು, ಆದ್ದರಿಂದ ಅವುಗಳನ್ನು ಮಾನವ ಸೃಷ್ಠಿಯಾದ ಕುಲಗಳೆಂದು ಅವು ದೇವರು ಹುಟ್ಟಿಸಿರುವವು ಅಲ್ಲವೆಂದು ತಿಳಿಯಬೇಕು. ದೇವರು ಸೃಷ್ಠಿಸಿದ ನಾಲ್ಕು ಕುಲಗಳು ಒಂದು ಪ್ರಾಂತ, ಒಂದು ದೇಶವಲ್ಲದೆ ಯಾವತ್ ಪ್ರಪಂಚವೆಲ್ಲವೂ ವೃತ್ತಿ ಕೆಲಸಗಳ ಭೇದಗಳು ಇಲ್ಲದಂತೆ ಇವೆ. ದೈವನಿರ್ಮಿತವಾದ ತಾಮಸ, ರಾಜಸ, ಸಾತ್ತ್ವಿಕ ಯೋಗ ಕುಲಗಳು ಮನುಷ್ಯರಲ್ಲೇ ಅಲ್ಲದೆ ಸಕಲ ಜೀವಿಗಳಲ್ಲಿ ಇವೆ. ಭೂಮಿಮೇಲೆ ಪ್ರಜೆಗಳಿಗೆ ದೇವರಿಂದ ನಿರ್ಮಿತವಾದ ತಮ್ಮ ಕುಲಯಾವುದೋ ತಮಗೇ ತಿಳಿದಿಲ್ಲ. ಇಂದಿನಿಂದಾದರೂ ನಾಲ್ಕರಲ್ಲಿ ನಿನ್ನ ಕುಲಯಾವುದೋ ತಿಳಿದುಕೊಂಡು ಒಂದು ವೇಳೇ ನೀನು ಕಡಿಮೆ ಕುಲದವನಾದರೆ ಹೆಚ್ಚು ಕುಲದವನಾಗುವುದಕ್ಕೆ ಪ್ರಯತ್ನಿಸು.

| | |
|---|---|
| **ಕುಲಮು ಗಲುಗು ವಾರು ಗೋತ್ರಂಬು ಗಲವಾಡು** | **ಕುಲವನುಳ್ಳ ಮನುಜ ಗೋತ್ರವುಳ್ಳವನು** |
| **ವಿದ್ಯಚೇತ ವಿರ್ರವೀಗು ವಾರು** | **ವಿದ್ಯೆಯಿಂದ ಗರ್ವ ಪಡುವವರು** |
| **ಪಸಿಡಿ ಕಲ್ಗು ವಾನಿ ಬಾನಿಸ ಕೊಡುಕುಲು** | **ಹೇಮವಂತನ ಗುಲಾಮಸುತರು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (74)** |

**ಭಾವಾರ್ಥ :–** ತಾಮಸ, ರಾಜಸ, ಸಾತ್ತ್ವಿಕ, ಯೋಗ ಎನ್ನುವ ನಾಲ್ಕು ಕುಲಗಳಿರುವವರಾಗಲಿ, 108 ಗೋತ್ರಗಳು ಇರುವವರಾಗಲಿ, 64 ವಿದ್ಯೆಗಳು ತಿಳಿದವರಾಗಲಿ ಭೂಮಿಮೇಲೆ ಒಬ್ಬನಿಗೆ ಗುಲಾಮರಾಗಿ ಇದ್ದಾರೆ. ಪ್ರಪಂಚ ವೆಲ್ಲವೂ ಆವರಿಸಿ, ಹೆಸರು ರೂಪ ಇಲ್ಲದವನಾದ ಪರಮಾತ್ಮನಿಂದ ಎಲ್ಲಾ ಜೀವರಾಶಿಗಳು, ಮಾನವರೆಲ್ಲರೂ ಹುಟ್ಟಿದ್ದಾರೆ. ಸರ್ವರಿಗೂ ತಂದೆಯಾದವನಿಗೆ

ಎಲ್ಲರೂ ಕುಮಾರರೇ. ಒಬ್ಬನ ಆದೇಶಕ್ಕೊಳಗಾಗಿ ಅವನು ಹೇಳುವಂತೆ ಆಡುವವರು ಅವನಿಗೆ ಗುಲಾಮ ಎಂದು ಹೇಳುತ್ತೇವೆ. ಕರ್ಮ ಎನ್ನುವ ಹಗ್ಗವನ್ನು ಸೂತ್ರವಾಗಿ ಮಾಡಿಕೊಂಡು ಪ್ರಪಂಚದಲ್ಲಿ ಶಾಸಿಸಿ, ಆಡಿಸುವವನು ಪರಮಾತ್ಮ. ಪರಮಾತ್ಮನಿಗೆ ಅಧೀನವಾಗಿದ್ದು ವಿಧಿಯಿಂದ ತಪ್ಪದೆ ಇಷ್ಟವಿದ್ದರೂ ಇಲ್ಲದಿದ್ದರೂ ಆಡಬೇ ಕಾಗಿರುವವರು ಮಾನವರು. ಆದ್ದರಿಂದ ಮನುಷ್ಯರನ್ನು ಗುಲಾಮರೆಂದು ಮೇಲಿನ ಪದ್ಯದಲ್ಲಿ ಹೇಳಿದ್ದಾನೆ. ಎಲ್ಲರಿಗೂ ಪರಮಾತ್ಮ ತಂದೆಯಾದ್ದರಿಂದ ಎಲ್ಲರೂ ಆತನಿಗೆ ಗುಲಾಮ ಕುಮಾರರೇ ಎಂದಿದ್ದಾರೆ. ಪ್ರಪಂಚದಲ್ಲಿ ಎಲ್ಲದಕ್ಕಿಂತ ಬೆಲೆಯುಳ್ಳದ್ದು ಬಂಗಾರ ಆದ್ದರಿಂದ ಎಲ್ಲರಿಗಿಂತ ದೊಡ್ಡವನಾದ ಪರಮಾತ್ಮನನ್ನು ಹೇಮವಂತನು ಎಂದಿದ್ದಾರೆ. ಎಷ್ಟೋ ಪರಿಶೋಧನೆಗಳನ್ನು ಮಾಡಿ, 64 ವಿದ್ಯೆಗಳನ್ನು ಕಲಿತು, ಎಷ್ಟೋ ಹೊಸ ವಿಧಾನಗಳು ಕಂಡುಹಿಡಿದವನಾಗಲಿ, ಬಿಡಲ್ಪಟ್ಟು 108 ಗೋತ್ರಗಳು ಇರುವ ವರಾಗಲಿ, ನಾಲ್ಕು ಕುಲಗಳು ಇರುವವರಾಗಲಿ ಕರ್ಮ ತಂತ್ರರಾಗಿ ಬದುಕಬೇ ಕಾಗಿದೆಯೆಂದು ತಿಳಿಯಬೇಕು.

ಗೋತ್ರಗಳು ಎಂದರೆ ಬಿಡುವಂತಹವುಗಳು ಎಂದು ತಿಳಿಯಬೇಕು. ಒಂದೇ ಕುಲದಲ್ಲಿ ಅನೇಕ ಗೋತ್ರಗಳಿರುವವರು ಇರುವುದು ಎಲ್ಲರಿಗೂ ತಿಳಿದ ವಿಷಯವೇ. ಬಿಡುವಂತಹವು ವಿಷಯಗಳೆಂದು ಬ್ರಹ್ಮವಿದ್ಯಾ ಶಾಸ್ತ್ರ ಬೋಧಿಸುತ್ತಿದೆ. ಶಾಸ್ತ್ರ ರೀತಿಯಲ್ಲಿ ಒಂದೊಂದು ಗುಣವನ್ನು 9 ಭಾಗಗಳಾಗಿ ವಿಭಜಿಸಿ ಒಟ್ಟು 12 ಗುಣಗಳನ್ನು 108 ಭಾಗಗಳಾಗಿ ಗುರುತಿಸಿದ್ದಾರೆ. ಒಂದೊಂದು ಬಿಡಿ ಭಾಗಕ್ಕೆ ಒಂದೊಂದು ವಸ್ತುವನ್ನು ಗುರುತಿಗಾಗಿ ಇಟ್ಟಿದ್ದಾರೆ. ಒಂದು ಜಾತಿಯವರು ತಪ್ಪದೆ ಕನಿಷ್ಟ ಒಂದು ಗುಣವನ್ನಾದರೂ ಬಿಡಬೇಕೆಂದು, ಆ ಬಿಡಬೇಕಾದ ಗುಣಯಾವುದೋ ಹೊರಗಿನವರಿಗೆ ತಿಳಿಯುವಂತೆ ಆ ವಸ್ತು ಅವರ ಗೋತ್ರ ಎನ್ನುತ್ತಿದ್ದರು. ಹೀಗೆ 108 ಗುಣಭಾಗಗಳಿಗೆ 108 ವಸ್ತುಗಳು ಗೋತ್ರಗಳಾಗಿ ಏರ್ಪಟ್ಟಿವೆ. ಪೂರ್ವದಲ್ಲಿ ಇಂತಹ ವಸ್ತು ಇಂತಹ ಗುಣಕ್ಕೆ ಗುರುತುಯೆಂದು ಎಲ್ಲರಿಗೂ ತಿಳಿದಿರುತ್ತಿತ್ತು. ಕಾಲಕ್ರಮದಲ್ಲಿ ಯಾವ ವಸ್ತು ಯಾವ ಗುಣಕ್ಕೆ

ಗುರುತೋ ತಿಳಿಯದಂತೆ ಹೋಗಿದೆ. ಅಸಲಿಗೆ ಗೋತ್ರಗಳನ್ನೇ ಮರೆತುಹೋಗುವ ಕಾಲ ಆಸನ್ನವಾಗಿದೆಯೆಂದು ಹೇಳಬಹುದು. ಗೋತ್ರಗಳ ಸಂಪ್ರದಾಯಗಳು ಹಿರಿಯರಿಗೇ ತಿಳಿಯದಂತೆ ಹೋಗಿದೆ. ಆದ್ದರಿಂದ ಮುಂಬರುವ ಪೀಳಿಗೆಗೆ ತಿಳಿಯುತ್ತದೆಂದುಕೊಳ್ಳುವುದು ಆಶಿಸಲಾರದ ವಿಷಯ. ಪ್ರಸ್ತುತ ಪರಿಸ್ಥಿತಿಯಲ್ಲಿ ಯಾರದು ಯಾವ ಕುಲವೋ ಯಾರಿಗೂ ತಿಳಿದಿಲ್ಲ. ಯಾರದು ಯಾವ ಗೋತ್ರವೋ ಅಂದರೆ ಯಾವ ವಿಷಯದ್ದೋ ತಿಳಿದಿಲ್ಲ. ಇಂತಹ ಪರಿಸ್ಥಿತಿಯಿಂದ ಹೊರಬಿದ್ದು ನಮ್ಮದು ಯಾವ ಕುಲವೋ, ಯಾವಗೋತ್ರವೋ ತಿಳಿದುಕೊಳ್ಳಬೇಕೆಂದು ಕೋರುತ್ತಿದ್ದೇವೆ.

| | |
|---|---|
| **కాపు బలిమయున్న కరణాన కదిబల్మి** | **ಒಕ್ಕಲರಿಗೆ ಬಲವಿರೆ ಕರಣಿಕಗೆ ಬಲವು** |
| **కరణము బలిమెల్ల కాపు బలిమి** | **ಕರಣಿಕನ ಬಲವೆ ಒಕ್ಕಲ ಬಲವು** |
| **కాపు సంతసంబు కరణము సంతోష** | **ಒಕ್ಕಲ ಸಂತಸ ಕರಣಿಕಗೆ ಸಂತಸ** |
| **మరసి చూడ లోకమందు వేమా** | **ಅರೆತು ನೋಡ ಲೋಕದಲ್ಲಿ ವೇಮಾ (75)** |

**ಭಾವಾರ್ಥ :–** ಪ್ರತಿ ಜೀವರಾಶಿ ಶರೀರವನ್ನು ಧರಿಸಿ ಹುಟ್ಟುವುದು ಎಲ್ಲರಿಗೂ ತಿಳಿದ ವಿಷಯವೇ. ಜ್ಞಾನ ರೀತಿಯಲ್ಲಿ ವಿಶದವಾಗಿ ತಿಳಿದುಕೊಂಡರೇ ಜೀವಿಯೊಬ್ಬನೇ ಶರೀರವನ್ನು ಧರಿಸಿ ಹುಟ್ಟುತ್ತಿದ್ದಾನಾ! ಎಂದು ಯೋಚಿಸಿದರೆ ಜೀವನೊಬ್ಬನೇ ಅಲ್ಲದೆ ಅವನೊಂದಿಗೆ ಮತ್ತೊಬ್ಬನು ಸಹ ಅದೇ ಶರೀರವನ್ನು ಧರಿಸಿ ಹುಟ್ಟುತ್ತಿದ್ದಾನೆ. ಇದರ ಪ್ರಕಾರ ಒಂದೇ ಶರೀರದಲ್ಲಿ ಇಬ್ಬರು ಜನ್ಮಿಸುತ್ತಿದ್ದಾರೆಂದು ತಿಳಿಯುತ್ತಿದೆ. ಹುಟ್ಟಿದಾಗಿನಿಂದ ಮರಣಿಸುವವರೆಗು ಶರೀರದಲ್ಲಿ ಇಬ್ಬರಿದ್ದಾರೆ. ಅವರಲ್ಲಿ ಒಬ್ಬನು ಜೀವಾತ್ಮ, ಎರಡನೆಯವನು ಆತ್ಮ. ಜೀವಾತ್ಮ, ಆತ್ಮ ಆಧಾರದಿಂದ ಜೀವಿತ ಕಾಲವನ್ನು ಕಳೆಯುತ್ತಿದೆ. ಬದುಕುವುದಕ್ಕೆ ಬೇಕಾದ ಆಧಾರವೆಲ್ಲವೂ ಆತ್ಮನಿಂದಲೇ ಜೀವಾತ್ಮನಿಗೆ ಲಭ್ಯವಾಗುತ್ತಿದೆ. ಜೀವಿತ ಕಾಲದಲ್ಲಿ ಶರೀರವೆಲ್ಲವೂ ಕದಲಿಸುವುದಕ್ಕೆ, ಎಲ್ಲಾ ಅವಯವಗಳಿಗು ಶಕ್ತಿಯನ್ನು ಕೊಡುವುದಕ್ಕೆ ಅದರಿಂದ ಜೀವಿಯು ಕಾಲಕಳೆಯುವುದಕ್ಕೆ ಆತ್ಮವೇ ಆಧಾರವಾಗಿ ಇದೆ. ಜೀವಿಯು ಶರೀರದಲ್ಲಿ ಇರಬೇಕೆಂದರೆ

ಆತ್ಮಶರೀರದಲ್ಲಿ ಇರಬೇಕಾಗಿದ್ದೇ! ಜೀವಿಯು ಇಲ್ಲದ ಶರೀರದಲ್ಲಿ ಆತ್ಮ ಇರುವುದಕ್ಕೆ ಅವಕಾಶವಿಲ್ಲ. ಜೀವಾತ್ಮ ಇಲ್ಲದ ಕಡೆ ಆತ್ಮ ಇರುವುದಿಲ್ಲ ಆದ್ದರಿಂದ ಆತ್ಮಕ್ಕೆ ಜೀವಾತ್ಮ ಆಧಾರವಾಗಿದೆಯೆಂದು ಹೇಳಬಹುದು. ಹೀಗೆ ಒಂದು ಆತ್ಮದ ಮೇಲೆ ಮತ್ತೊಂದು ಆತ್ಮ ಆಧಾರಪಟ್ಟಿರುವುದರಿಂದ ಇವುಗಳ ಸಂಬಂಧ ಅವಿನಾಭಾವ ಸಂಬಂಧವೆಂದು ಹೇಳಬಹುದು.

ಒಂದು ಊರಿನಲ್ಲಿ ಒಕ್ಕಲಿಗನ ಬೆಳೆಯಮೇಲೆ ಆಧಾರಪಟ್ಟು ಕರಣ, ಕರಣ ಬರಹದಮೇಲೆ ಆಧಾರಪಟ್ಟು ಒಕ್ಕಲಿಗನು ಬದುಕಿದಂತೆ, ಒಂದು ಶರೀರದಲ್ಲಿ ಜೀವಾತ್ಮ ಮೇಲೆ ಆಧಾರಪಟ್ಟು ಆತ್ಮ, ಆತ್ಮದ ಮೇಲೆ ಆಧಾರಪಟ್ಟು ಜೀವಾತ್ಮ ಇವೆ. ಆದ್ದರಿಂದಲೇ ಮೇಲಿನ ಪದ್ಯದಲ್ಲಿ ಒಕ್ಕಲಿಗನ ಬಲವಿರೆ ಕರಣಿಕಗೆ ಬಲವು ಕರಣಿಕನ ಬಲವೆ ಒಕ್ಕಲಿಗನ ಬಲವು ಎಂದು ವೇಮನ ಹೇಳಿದ್ದಾರೆ. ಅಷ್ಟೇ ಅಲ್ಲದೆ ಒಕ್ಕಲಿಗನ ಸಂತೋಷವೆ ಕರಣಿಕನ ಸಂತೋಷ ಎಂದಿದ್ದಾನೆ. ಜೀವಾತ್ಮ ಜ್ಞಾನ ತಿಳಿದು ಮೋಕ್ಷವನ್ನು ಹೊಂದಿದರೇ ಅದಕ್ಕೆ ಜೊತೆಯಾಗಿರುವ ಆತ್ಮವೂ ಸಹ ಆಧಾರವಿಲ್ಲದೆ ಹುಟ್ಟದಂತೆ ಹೋಗುತ್ತದೆ. ಆದ್ದರಿಂದ ಜೀವಾತ್ಮಕ್ಕೆ ಉಂಟಾದರೆ ಆತ್ಮಕ್ಕೂ ಸಹ ಒಳ್ಳೆಯದೇ ಆದ್ದರಿಂದ ಕಾಪು ಸಂತಸಂಬು ಕರಣಮು ಸಂತೋಷ ಅರಸಿ ನೋಡ ಎಂದಿದ್ದಾರೆ. ಪದ್ಯದಲ್ಲಿ ವೇಮನ ಜೀವಾತ್ಮನನ್ನು ಒಕ್ಕಲಿಗನಾಗಿ, ಆತ್ಮವನ್ನು ಕರಣವಾಗಿ, ಸಂತೋಷವನ್ನು ಮುಕ್ತಿಯಾಗಿ ವರ್ಣಿಸಿ ಹೇಳಿದ್ದಾನೆಂದು ತಿಳಿಯಬೇಕು.

| | |
|---|---|
| **ಕನಿಯು ಗಾನಲೇಡು ಕದಿಲಿಂಪಡಾ ನೋರು** | **ಕಂಡು ಕಾಣದಿರುವ ಕದಲಿಸನು ಬಾಯಿ** |
| **ವಿನಿಯು ವಿನಗಲೇಡು ವಿಸ್ಮಯಮುನ** | **ಕೇಳಿ ಕೇಳದಿಹನು ವಿಸ್ಮಯದಲ್ಲಿ** |
| **ಸಂಪದ ಗಲವಾನಿ ಸನ್ನಿ ಪಾತಕಮಿದಿ** | **ಸಂಪದ ವಿರುವವನ ಸನ್ನಿಪಾತ ಕವಿದು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (76) |

**ಭಾವಾರ್ಥ :–** ಭಗವದ್ಗೀತೆಯಲ್ಲಿ ಭಗವಂತನು ಹೇಳಿದ ಎರಡು ಯೋಗಗಳಲ್ಲಿ ಒಂದು ಬ್ರಹ್ಮಯೋಗವಾದಾಗ, ಎರಡನೆಯದು ಕರ್ಮಯೋಗ. ಎರಡರಲ್ಲಿ

ಒಂದಾದ ಬ್ರಹ್ಮಯೋಗವನ್ನು ಆತ್ಮ ಸಂಯಮ ಯೋಗವೆಂದು ಕೂಡ ಕರೆಯುತ್ತಾರೆ. ಬ್ರಹ್ಮಯೋಗವೆನ್ನುವ ಈ ಪದ್ಧತಿಯಲ್ಲಿ ಜೀವಾತ್ಮ ಆತ್ಮನಲ್ಲಿ ಐಕ್ಯವಾಗಿದ್ದು ಜ್ಞಾನೇಂದ್ರಿಯಗಳಾದ ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮ ಸಂಬಂಧಹೊಂದಿ ಅವುಗಳ ವಿಷಯಸುಖಗಳನ್ನು ಅನುಭವಿಸುವುದನ್ನು ವಿಷಯ ಭೋಗ ಎನ್ನುತ್ತೇವೆ. ಹಾಗಲ್ಲದೆ ಅವುಗಳ ಸಂಬಂಧ ಏನೂ ಇಲ್ಲದಂತೆ ಇರುವುದನ್ನು ಬ್ರಹ್ಮಯೋಗ ಎನ್ನುತ್ತೇವೆ. ಬ್ರಹ್ಮಯೋಗದಲ್ಲಿ ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮ ಐದು ಕೆಲಸಮಾಡುತ್ತಾ ಅವು ತಿಳಿಸುವ ಸಮಾಚಾರವನ್ನು ಜೀವಿಯವರೆಗು ಸೇರಿಸುವ ಮನಸ್ಸು ಇಲ್ಲದಂತಿರುವುದರಿಂದ ಮಾತುಗಳು ಕೇಳಿಸುತ್ತಿದ್ದರೂ ಜೀವಿಯು ಕೇಳುವುದಿಲ್ಲ. ಹಾಗೆಯೇ ಕಣ್ಣಿಗೆ ದೃಶ್ಯ ಕಾಣಿಸುತ್ತಿದ್ದರೂ ಜೀವಿಯು ನೋಡಲಾರನು. ವಿಷಯ ತನಗೆ ಸೇರದಂತಿರುವುದರಿಂದ ಬುದ್ಧಿಯೋಚಿಸುವುದಿಲ್ಲ. ಬುದ್ಧಿ ಯೋಚಿಸುವುದಿಲ್ಲ ಆದ್ದರಿಂದ ಯಾವ ವಿಷಯವನ್ನು ಹೊರಗೆ ಕರ್ಮೇಂದ್ರಿಯಗಳಿಗೆ ಕಳುಹಿಸುವುದಿಲ್ಲ. ಆದ್ದರಿಂದ ಬಾಯಿ ಕದಲಿಸಲಾರನು, ಕೈಗಳು ಅಲ್ಲಾಡಿಸಲಾರನು. ಸನ್ನಿಪಾತ ಜ್ವರ ಬಂದಾಗ ಮೂರ್ಚಸ್ಥಿತಿಹೊಂದಿ ಕೇಳಲಾರನು, ಮಾತನಾಡಲಾರನು. ಹಾಗೆಯೇ ಬ್ರಹ್ಮಯೋಗ ಹೊಂದಿದವನು ಕೇಳಲಾರನು, ಮಾತನಾಡಲಾರನು. ಜ್ಞಾನ ಸಂಪತ್ತು ಇರುವವನು ಬ್ರಹ್ಮಯೋಗಿಯಾಗಿ ಬದಲಾಗಿ ಕದಲದೆ ಚಲಿಸದೆ ಇರುತ್ತಾನೆ. ಆದ್ದರಿಂದ ಸಂಪತ್ತು ಇರುವವನ ಸನ್ನಿಪಾತವಿದು ಎಂದು ವೇಮನ ಬ್ರಹ್ಮಯೋಗಿಯನ್ನು ಕುರಿತು ಹೇಳಿದ್ದಾನೆ. ಹಾಗೆಯೇ ಬ್ರಹ್ಮಯೋಗಿ ಕಿವಿಗೆ ಶಬ್ದ ಕೇಳಿಸಿದರೂ ಒಳಗೆ ತಾನು ಕೇಳಲಾರನು ಆದ್ದರಿಂದ ಕಂಡೂ ಕಾಣಲಾರನು, ಕೇಳಿಯೂ ಕೇಳಲಾರನೆಂದು ಹೇಳಿದ್ದಾರೆ.

| | |
|---|---|
| **ಉಸುರು ಲೇನಿತಿತ್ತಿ ಇಸುಮಂತ ಊದಿನ** | **ಶ್ವಾಸವಿರದ ಚೀಲ ಕಿಂಚಿತ್ತು ಊದಲು** |
| **ಪಂಚಲೋಹಮುಲುನು ಭಸ್ಮಮೌನು** | **ಪಂಚಲೋಹಗಳು ಭಸ್ಮವಾಗುವವು** |
| **ಪೆದ್ದಲುಸುರು ಮಂಟೆ ಪೆನುಮಂಟ ಲೆಗಯವಾ** | **ಹಿರಿಯರುಸಿರು ಕಾಡ್ಗಿಚ್ಚು ಏಳದೇ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (77) |

**ಭಾವಾರ್ಥ :–** ಉಸಿರು ಎಂದರೆ ಗಾಳಿ, ಉಸಿರು ಇಲ್ಲದ ಚೀಲವನ್ನು ಕೊಲಿಮೆ ಹತ್ತಿರ ಊದಿದರೆ ಬಂಗಾರ, ಬೆಳ್ಳಿ, ರಾಗಿ, ಇತ್ತಾಳೆ, ಕಂಚಿನಲೋಹಗಳು ಕೂಡ ಕರಗಿ ಕೊನೆಗೆ ಭಸ್ಮಗಳಾಗುತ್ತವೆ. ಪ್ರಾಣವಿಲ್ಲದ ಚೀಲವನ್ನು ಊದಿದರೇ ಕಠಿಣವಾದ ಲೋಹಗಳು ಕೂಡ ಕರಗಿ ಭಸ್ಮವಾಗುವ ಅಗ್ನಿ ಏರ್ಪಡುತ್ತಿದೆ. ಪ್ರಾಣವಿರುವ ಅಂದರೆ ಗಾಳಿಯಿರುವ ಯೋಗಿಗಳು ತಮ್ಮಲ್ಲಿನ ಪ್ರಾಣವನ್ನು ಸ್ಥಗಿತಗೊಳಿಸಿ ಊದಿದರೇ ಅದು ಬ್ರಹ್ಮಯೋಗವಾಗಿ ಶರೀರದಲ್ಲಿ ಯೋಗಾಗ್ನಿ ಎನ್ನುವ ಜ್ಞಾನಾಗ್ನಿ ವಿಜೃಂಭಿಸಿ ಕಪಾಳದಲ್ಲಿನ ಕರ್ಮಚಕ್ರದಲ್ಲಿರುವ ಕರ್ಮವನ್ನು ಸುಡುವುದಕ್ಕೆ ಪ್ರಾರಂಭಿಸುತ್ತದೆ. ಪ್ರಾಣವಿಲ್ಲದ ಚೀಲವನ್ನು ಊದಿದರೇ ಕೊಲಿಮೆಯಲ್ಲಿ ಏರ್ಪಡುವುದು ಸಾಧಾರಣ ಅಗ್ನಿ. ಅದೇ ಪ್ರಾಣವಿರುವ ಚೀಲವಾದ ಶರೀರದೊಳಗೆ ಯೋಗಿಗಳಾದವರು ಗಾಳಿ ಊದಿದರೇ ಕಾಡ್ಗಿಚ್ಚು ಎಂದು ಹೆಸರುವಾಸಿಯಾದ ಜ್ಞಾನಾಗ್ನಿ ಹುಟ್ಟುತ್ತದೆಂದು ವೇಮನ ತಿಳಿಸುತ್ತಾ ಯೋಗಿಗಳನ್ನು ಹಿರಿಯರು ಎಂದಿದ್ದಾನೆ.

**ತನ ಗುಣಮು ತನಕುನುಂಡಗ**
**ನೆನಯಂಗಾ ನೊರುನಿ ಗುಣಮುನೆಂಚುನು ಮದಿಲೋ**
**ತನ ಗುಣಮು ತಾನು ದೆಲಿಯಕ**
**ಬರುನಿಂದಂ ಜೇಯುವಾಡು ಭ್ರಷ್ಟುಡು ವೇಮಾ**

**ತನ್ನ ಗುಣವು ತನಗಿರುವಾಗ**
**ಘನದಿಂ ಪರರ ಗುಣಗಳ ಪರಿಕಿಸುವ ಮನದೊಳ್**
**ತನ್ನ ಗುಣವ ತಾ ಅರಿಯದೆ**
**ಪರನಿಂದೆ ಮಾಡುವ ನರನು ಭ್ರಷ್ಟನು ವೇಮಾ (78)**

**ಭಾವಾರ್ಥ :–** ಗೀತೆಯಲ್ಲಿ ಹೇಳಿದಹಾಗೆ ಸ್ವಧರ್ಮ, ಪರಧರ್ಮವೆಂದು ಎರಡು ಧರ್ಮಗಳು ಇವೆ. ಸ್ವಧರ್ಮವೆಂದರೆ ತನ್ನ ಆತ್ಮ ಧರ್ಮವೆಂದು, ಪರಧರ್ಮ ವೆಂದರೆ ಪ್ರಕೃತಿ ಧರ್ಮವೆಂದು ಅರ್ಥವಿದೆ. ಮಾನವನು ಹುಟ್ಟಿದಾಗಿನಿಂದ ಮೊದಲು ತನ್ನದಾದ ಪರಮಾತ್ಮ ಧರ್ಮವನ್ನು ಬಿಟ್ಟು ಪ್ರಕೃತಿ ಧರ್ಮವನ್ನು ಆಚರಿಸುತ್ತಿದ್ದಾನೆ. ತನ್ನ ಧರ್ಮ ತಾನು ತಿಳಿಯದೆ ಹೋಗುವುದಲ್ಲದೆ, ಪರಧರ್ಮವನ್ನು ಆಚರಿಸುತ್ತಾ ಅದರಲ್ಲಿನ ಅನುಭವಗಳಲ್ಲಿ ತೃಪ್ತಿ ಇಲ್ಲದೆ

ಪರಧರ್ಮದಲ್ಲಿನ ಮಾಯೆಯಲ್ಲಿ ಸಿಲುಕಿಕೊಂಡು ಅನೇಕ ಆಸೆಗಳ ಮಯವಾಗಿಹೋಗಿ ತೃಪ್ತಿ ಇಲ್ಲದ ಜೀವನ ಕಳೆಯುತ್ತಾ ತನಗಿಂತ ಪರನಾಗಿರುವ ಪರಮಾತ್ಮನನ್ನು ನಿಂದಿಸಲು ಶುರುಮಾಡುತ್ತಿರುವರು. ತನಗೆ ದೇವರು ಅನ್ಯಾಯ ಮಾಡಿದ್ದಾನೆಂದು, ಎಷ್ಟು ಹಣ ಇದ್ದರೂ ದೇವರು ತನಗೆ ಸರಿಯಾಗಿ ಹಣ ಕೊಡಲಿಲ್ಲವೆಂದು ಪರನನ್ನು ಎಂದರೆ ಪರಮಾತ್ಮನನ್ನು ನಿಂದಿಸುತ್ತಿರುವರು. ಅಂತಹವನು ನಿಜವಾಗಿ ಅಜ್ಞಾನಿ ಎಂದು ಹೇಳಬಹುದು. ಎಷ್ಟೋ ಆನಂದಮಯವಾದ ಸ್ವಧರ್ಮ ತಿಳಿಯದೆ ಪರಧರ್ಮವಾದ ಪ್ರಕೃತಿ ಧರ್ಮದಲ್ಲಿ ಎಲ್ಲಾ ಇದ್ದರೂ ತೃಪ್ತಿ ಇಲ್ಲದೆ ದೇವರನ್ನು ಸಹಿತ ನಿಂದಿಸುವವರು ನಿಜವಾಗಿ ಜ್ಞಾನಭ್ರಷ್ಟರು. ಆದ್ದರಿಂದಲೇ ತನ್ನ ಗುಣ ತನಗಿರುವಾಗ ಪರರ ಗುಣಗಳ ಪರಿಕಿಸುವ ಮನದೊಳ್ ಎಂದು ಪರಧರ್ಮಪರನನ್ನು ತಿಳಿಸುತ್ತಾ ತನ್ನ ಗುಣವು ತಾನು ತಿಳಿಯದೆ ಎಂದು ಸ್ವಧರ್ಮವನ್ನು ತಿಳಿಯದವನನ್ನು ಕುರಿತು ಹೇಳಿದ್ದಾರೆ. ಪರಮಾತ್ಮನನ್ನೇ ನಿಂದಿಸುವ ಪರಧರ್ಮಪರರು ಕೆಟ್ಟವರೆಂದು, ಪರನನ್ನು ನಿಂದಿಸುವವನು ಭ್ರಷ್ಟನು ಎಂದು ವೇಮನ ಹೇಳಿದ್ದಾನೆ.

| | |
|---|---|
| **ನೀವಾಡಿನ ನೇನಾಡುದು** | **ನೀನಾಡಿದರೆ ನಾನಾಡುವೆ** |
| **ನೀವುಂಡಿನ ನೇನುನುಂಡು ನಿರ್ವಿಣ್ಣುಡನ್ನೆ** | **ನೀನಿದ್ದರೆ ನಾನಿಹೆ ನಿಷ್ಕಳಂಕನಾಗಿ** |
| **ನೀವು ದಲಂಚಿನ ದಲಪುದು** | **ನೀನು ತಿಳಿದಂತೆ ತಿಳಿವೆನು** |
| **ನೀವು ನಗಿನ ನೇನು ನಗುದು ನಿಜಮುಗ ವೇಮಾ** | **ನೀನಕ್ಕರೆ ನಾನಗುವೆನು ನಿಜವಿದು ವೇಮಾ.** |

**(79)**

**ಭಾವಾರ್ಥ :–** ಸಿನಿಮಾ ಪ್ರೊಜೆಕ್ಟರ್‌ನಲ್ಲಿ ಫಿಲ್ಮ್‌ನಲ್ಲಿನ ಗೊಂಬೆಯಂತೆ ಮನುಷ್ಯನ ಕರ್ಮ ಅವನ ಶರೀರದಲ್ಲಿ ಕರ್ಮಚಕ್ರದಲ್ಲಿ ನೆಲೆ ಇರುತ್ತದೆ. ಪ್ರೊಜಕ್ಟರ್ ತಿರುಗುತ್ತಿದ್ದಂತೆ ಫಿಲ್ಮು ಕೂಡ ತಿರುಗಿ ಅದರಲ್ಲಿನ ಗೊಂಬೆಗಳು ಬದಲಾಗಿ ಅನೇಕ ವಿಧ ಸಂಘಟನೆಗಳು ಪರದೆಮೇಲೆ ಬೀಳುವಂತೆ, ಕಾಲಚಕ್ರ ತಿರುಗುತ್ತಿದ್ದಂತೆ ಕರ್ಮ ಚಕ್ರ ಕೂಡ ತಿರುಗುತ್ತಾ ಅದರಲ್ಲಿನ ಸಂಘಟನೆಗಳು ಬದಲಾಗುತ್ತಾ ಮನುಷ್ಯನ ಮೇಲೆ ಪ್ರತಿಬಿಂಬಿಸುತ್ತಿರುತ್ತದೆ. ಫಿಲ್ಮಿನಲ್ಲಿ ನಗುವ ದೃಶ್ಯಬಂದರೆ

ಅದು ಪರದೆ ಮೇಲೆ ಕೂಡ ನಕ್ಕಿದಂತೆ ಕಾಣಿಸುತ್ತದೆ. ಅದೇ ವಿಧವಾಗಿ ನಡೆಯುತ್ತಿರುವ ಕಾಲದಲ್ಲಿ ಮಾನವನ ಕರ್ಮಚಕ್ರದಲ್ಲಿ ನಗುವ ಸಂಘಟನೆ ಇರುವಂತಾದರೇ ಅದು ಆ ಸಮಯದಲ್ಲಿ ಆ ಮನುಷ್ಯನನ್ನು ನಗುವಂತೆ ಮಾಡುತ್ತದೆ. ಕರ್ಮದಲ್ಲಿ ಏನೂ ಇಲ್ಲದೆ ಇದ್ದ ಆ ಸಮಯದಲ್ಲಿ ಮನುಷ್ಯ ಕೂಡ ಏನೂ ಮಾಡದೆ ಸುಮ್ಮನಿರುತ್ತಾನೆ. ಹಾಗೆಯೇ ಕರ್ಮ ಆಚರಣೆಯಲ್ಲಿ ಮಾತನಾಡುವುದಿದ್ದರೇ ಆ ಮನುಷ್ಯ ಮಾತನಾಡುವನು. ಇದೇ ವಿಧವಾಗಿ ಎಲ್ಲವೂ ಕರ್ಮದಲ್ಲಿ ನಿಕ್ಷಿಪ್ತವಾಗಿ ಇರುತ್ತವೆ. ಕಾಲಭ್ರಮಣದಲ್ಲಿ ಕರ್ಮ ಆಚರಣೆಗೆ ಬರುವುದರಿಂದ ಅಲ್ಲಿ ಏನು ಇದ್ದರೇ ಅದೇ ಇಲ್ಲಿ ನಡೆಯುತ್ತದೆ. ಆದ್ದರಿಂದ ಮನುಷ್ಯನಿಗಿಂತ ಭಿನ್ನವಾಗಿರುವ ಕರ್ಮವನ್ನು ನೀನೆಂದು ಜೀವಿಯಾದ ತನಗೆ ನಾನೆಂದು ಹೇಳುತ್ತಾ ನೀನು ಏನು ಮಾಡಿದರೆ ಮೇಲೆ ನಾನು ಅದನ್ನು ಮಾಡಬೇಕಾಗಿದೆಯೆಂದು ತಿಳಿಯುವಂತೆ ನೀನಾಡಿದರೆ ನಾನಾಡುವೆನು, ನೀನು ನಕ್ಕರೆ ನಾನು ನಗುವೆನು ನಿಜವಾಗಿಯು ಎಂದು ವೇಮನ ಹೇಳಿದ್ದಾನೆ.

| | |
|---|---|
| **ನಿನ್ನು ಜೂಚುಚುಂಡ ನಿಂಡುನು ತತ್ವಂಬು** | **ನಿನ್ನ ನೋಡುತಿರೆ ತುಂಬುವುದು ತತ್ವವು** |
| **ತನ್ನು ಜೂಚುಚುಂಡ ತಗುಲು ಮಾಯ** | **ತನ್ನ ನೋಡುತ್ತಿದ್ದರೆ ತಗುಲುವುದು ಮಾಯೆ** |
| **ನಿನ್ನು ನೆರಿಗಿನಪುಡೆ ತನ್ನು ದಾ ನೆರುಗುನು** | **ನಿನ್ನನ್ನು ಅರಿತಾಗಲೆ ತನ್ನನ್ನು ತಾನು ಅರಿವನು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (80)** |

**ಭಾವಾರ್ಥ :–** ಪ್ರತಿ ಮನುಷ್ಯನಲ್ಲಿಯೂ ಕರ್ಮ ಕಪಾಳದಲ್ಲಿರುವ ಕರ್ಮಚಕ್ರದಲ್ಲಿ ನಿಕ್ಷಿಪ್ತವಾಗಿದೆ. ಅದು ಆಡಿಸಿದಂತೆ ಮನುಷ್ಯ ಆಡಬೇಕಾಗಿದೆ. ಅದರ ಪ್ರಕ್ರಿಯೆಗಳೇ ಮನುಷ್ಯನ ಬಗ್ಗೆ ಹೊರಗೆ ಕ್ರಿಯೆಗಳಾಗಿ ನಡೆಯುತ್ತಿವೆ. ಪ್ರತಿ ಕೆಲಸಕ್ಕೂ ಕರ್ಮ ಕಾರಣವಾಗಿ ಇದೆಯೆಂದು ತಿಳಿದು, ನಡೆಯುವ ಪ್ರತಿ ಕೆಲಸದಲ್ಲಿಯೂ ತಾನು ಕರ್ತನು ಅಲ್ಲವೆಂದು ತಿಳಿದು ಕರ್ಮರೀತಿಯಲ್ಲಿ ಕೆಲಸಗಳು ಮಾಡುವವನಿಗೆ ಅದು ಯೋಗವಾಗಿ ಅವನಲ್ಲಿ ಜ್ಞಾನಾಗ್ನಿ ತುಂಬಿಕೊಂಡು ಕರ್ಮವನ್ನು ಸುಡುವುದಕ್ಕೆ ಪ್ರಾರಂಭಮಾಡುತ್ತದೆ. ಇದನ್ನೇ ಇರುವ ಎರಡು ಯೋಗಗಳಲ್ಲಿ ಒಂದಾದ ಕರ್ಮಯೋಗವೆನ್ನುತ್ತಾರೆ. ಕರ್ಮವೊಂದರ ಅವಗಾಹನೆ ಇಲ್ಲದೆ

ಹೋದವನು ತನ್ನ ಶರೀರದ ಮೂಲಕ ನಡೆಯುವ ಕೆಲಸಗಳೆಲ್ಲವುಗಳಿಗು ತಾನೇ ಕಾರಣವೆಂದುಕೊಳ್ಳುತ್ತಿರುವನು. ಅಂತಹವನಿಗೆ ಜ್ಞಾನಾಗ್ನಿ ಸ್ವಲ್ಪವೂ ಲಭಿಸುವುದಿಲ್ಲ. ಅಷ್ಟೇ ಅಲ್ಲದೆ ಅವನು ತನ್ನ ವಿಧಾನ ತಿಳಿಯದೆ ಮಾಯೆಯಲ್ಲಿ ಮುಳುಗಿರುತ್ತಾನೆ. ಆ ವಿಧವಾಗಿ ಮಾಯೆಯಲ್ಲಿ ಸಿಲುಕಿದವನು ತನ್ನನ್ನು ತಾನು ತಿಳಿಯಲಾರನು. ಕರ್ಮ ವಿಧಾನ ತಿಳಿದವನು ಮಾಯೆಯಿಂದ ಬಿಡುಗಡೆಯಾಗಿ ತನ್ನನ್ನು ತಾನು ತಿಳಿಯಬಲ್ಲನು. ಈ ಸಾರಾಂಶವನ್ನೇ ಮೇಲಿನ ಪದ್ಯದಲ್ಲಿ ಮಿಳಿತಮಾಡಿ ನಿನ್ನನ್ನು ಎಂದು ಕರ್ಮವನ್ನು ಸಂಭೋಧಿಸುತ್ತಾ, ಆತ್ಮವನ್ನು ಸಮೀಪಿಸುವ ಜ್ಞಾನಾಗ್ನಿಯನ್ನು ತತ್ತ್ವವೆಂದು, ಆತ್ಮವನ್ನು, ಜೀವಾತ್ಮ ತಿಳಿಯುವುದನ್ನು ತನ್ನನ್ನು ತಾನರಿತು ಎಂದಿದ್ದಾರೆ.

| | |
|---|---|
| **ಗಾಲಿ ಗಾಲಿ ಗಲಿಸೆ ಗಗನಂಬು ಗಗನಂಬು** | **ಗಾಳಿ ಗಾಳಿ ಬೆರೆತು ಗಗನದಲಿ ಗಗನದಲಿ** |
| **ಮನ್ನು ಮನ್ನು ಗಲಿಸೆ ಮಂಟ ಮಂಟ** | **ಮಣ್ಣು ಮಣ್ಣು ಬೆರೆತು ಉರಿ ಉರಿ** |
| **ನೀರು ನೀಟ ಗಲಿಸೆ ನಿರ್ಮಲಂಬೈ ಯುಂಡೆ** | **ನೀರು ನೀರು ಬೆರೆತು ನಿರ್ಮಲವಾಗಿಹುದು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (81) |

**ಭಾವಾರ್ಥ :–** ಪ್ರಪಂಚದಲ್ಲಿ ಎಷ್ಟೋ ಜನ್ಮಗಳು ತೆಗೆದುಕೊಳ್ಳುತ್ತಿರುವ ಜೀವಿಯು ಅನೇಕ ಜನ್ಮಗಳಲ್ಲಿ ಅನೇಕ ಶರೀರಗಳು ಧರಿಸಿ ಜೀವನ ಸಾಗಿಸುತ್ತಿವೆ. ಎಲ್ಲಿ ಯಾವ ಶರೀರ ಧರಿಸಿದರೂ, ಅದು ಪಂಚಭೂತ ನಿರ್ಮಿವಾದುದಾಗಿ ಇರುತ್ತದೆ. ಪಂಚಭೂತಗಳೆಂದರೆ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ. ಈ ಐದು ಧಾತುಗಳಿಂದಲೇ ತಯಾರಾಗಿರುವುದು ಶರೀರ. ಪ್ರತಿ ಶರೀರದಲ್ಲಿಯೂ ಈ ಐದು ಭಾಗಗಳಿರುತ್ತವೆ. ಮಾನವನು ಮರಣಿಸಿದಾಗ ಒಂದು ಶರೀರವನ್ನು ಬಿಟ್ಟ ಕ್ಷಣಕಾಲದಲ್ಲಿಯೇ ಮತ್ತೊಂದು ಶರೀರವನ್ನು ಧರಿಸುವುದು ನಡೆಯುತ್ತಿದೆ. ಆದ್ದರಿಂದ ಜೀವಿಗೆ ಶರೀರ ಬದಲಾವಣೆ ಇದೆ ಆದರೆ ಪಂಚಭೂತಗಳೊಂದಿಗೆ ಸಂಬಂಧ ಕೂಡ ಯಾವಾಗಲೂ ಇದೆಯೆಂದು ತಿಳಿಯುತ್ತಿದೆ. ಹೀಗೆ ಶರೀರ ಧರಿಸಿದ ಪ್ರತಿ ಜೀವಿಗು ಸ್ವಲ್ಪ ಗಾಳಿ, ಸ್ವಲ್ಪ ನೀರು, ಸ್ವಲ್ಪ ಭೂಮಿ, ಸ್ವಲ್ಪ ಅಗ್ನಿ, ಸ್ವಲ್ಪ ಆಕಾಶ ಶಾಶ್ವತವಾಗಿ ನಿರ್ಣಯಿಸಲ್ಪಟ್ಟಿದೆ. ಅವು ಜೀವಿಯೊಂದಿಗೆ

ಸಂಬಂಧವನ್ನು ಬಿಟ್ಟು ಹೋಗುವುದು ಒಂದು ನಾಶದಲ್ಲಿ ಮಾತ್ರ. ಮರಣದಲ್ಲಿ ಹಳೆ ಶರೀರ ಬಿಟ್ಟರೂ, ಕೂಡಲೇ ಬರುವ ಜನ್ಮದಲ್ಲಿ ಹೊಸ ಶರೀರ ಬರುವು ದರಿಂದ ಪಂಚಭೂತಗಳ ಸಂಬಂಧ ತಪ್ಪಲಿಲ್ಲ. ಜೀವಿಯು ಪೂರ್ತಿಯಾಗಿ ನಾಶವಾಗಿ ಮರುಜನ್ಮ ಇಲ್ಲದಂತೆ ಹೋದಾಗ ಮಾತ್ರವೇ ಅಲ್ಲಿಯವರೆಗಿರುವ ಪಂಚಭೂತಗಳ ಸಂಬಂಧ ಇಲ್ಲದಂತೆ ಹೋಗುತ್ತದೆ.

ಅಲ್ಲಿಯವರೆಗು ತನಗೋಸ್ಕರವೇ ನಿರ್ಣಯಿಸಲ್ಪಟ್ಟ ಗಾಳಿ, ಅಗ್ನಿ, ನೀರು, ಭೂಮಿ ಆಕಾಶಗಳು ಜೀವಿಯ ಮೋಕ್ಷದಿಂದ ಇಲ್ಲದಂತೆ ಹೋಗುತ್ತಿವೆ. ಅವು ಎಲ್ಲಿಗೆ ಹೋಗುತ್ತಿವೆಯೆಂದರೆ ವಿಶಾಲವಾಗಿ ವ್ಯಾಪಿಸಿರುವ ಹೊರಗಿನ ಗಾಳಿಯೊಳಗೆ ಶರೀರದಲ್ಲಿ ವ್ಯಾಪಿಸಿರುವ ಗಾಳಿ ಹೋಗಿ ಬೆರೆತು ಹೋಗುತ್ತಿದೆ. ಹಾಗೆಯೇ ಹೊರಗಿನ ಅಗ್ನಿಯೊಳಗೆ ಅಗ್ನಿ, ನೀರಿನೊಳಗೆ ನೀರು, ಭೂಮಿಯೊಳಗೆ ಭೂಮಿ, ಆಕಾಶದೊಳಗೆ ಆಕಾಶ ಬೆರೆತುಹೋಗುತ್ತಿದೆ. ಜೀವಿಯು ಮಾತ್ರ ಪಂಚಭೂತಗಳಿಗೆ ಅತೀತವಾಗಿರುವ ಪರಮಾತ್ಮನೊಳಗೇ ಐಕ್ಯವಾಗಿ ಹೋಗುತ್ತಿದ್ದಾನೆ. ಆದ್ದರಿಂದ ಜೀವಿಯನ್ನು ನಿರ್ಮಲಂಬೈಯುಂಡೆ ಎಂದು ವರ್ಣಿಸುತ್ತಾ, ಪಂಚಭೂತಗಳಲ್ಲಿನ ಐದನ್ನು ಗಾಳಿ ಗಾಳಿ ಬೆರೆಯಿತು, ಗಗನದಲಿ ಗಗನದಲಿ, ಮಣ್ಣು ಮಣ್ಣು ಬೆರೆಯಿತು, ಉರಿ ಉರಿ, ನೀರು ನೀರಲ್ಲಿ ಬೆರೆಯಿತು ಎಂದು ವೇಮನ ಹೇಳಿದ್ದಾನೆ.

| | |
|---|---|
| **ತಾಗಿ ತಾಗಿ ಧರಣಿಪೈ ಬಡುದಾ ಕ** | **ಕುಡಿದು ಕುಡಿದು ಧರಣಿ ಮೇಲೆ ಬೀಳುವವರೆಗು** |
| **ತಾಗನೇನಿ ತನ್ನು ತಾನು ತೆಲಿಯು** | **ಕುಡಿದರೇ ತನ್ನನ್ನು ತಾನು ತಿಳಿವನು** |
| **ತಾಗಲೇನಿ ವಾಡೆ ತಾಗುಬೋ ತರಯಂಗ** | **ಕುಡಿಯಲಾರದ ಕುಡುಕನಾಗುವುದೆ ಒಳಿತು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (82)** |

**ಭಾವಾರ್ಥ :–** ಪ್ರಪಂಚದಲ್ಲಿ ಮಾನವನು ಜ್ಞಾನವನ್ನು ತಿಳಿಯದೆ ಹೆಚ್ಚಿನ ಕಾಲವನ್ನು ಪ್ರಪಂಚದಲ್ಲೇ ವಿನಿಯೋಗಿಸುತ್ತಿದ್ದಾನೆ. ಹಾಗಲ್ಲದೆ ಪ್ರಪಂಚ ವಿಷಯಗಳಲ್ಲಿ ಶಾಶ್ವತ ಶಾಂತಿ ಇಲ್ಲವೆಂದು ತಿಳಿದವರಾಗಿ ಕೆಲವರು ಜ್ಞಾನವನ್ನು

ಕೂಡ ತಿಳಿದುಕೊಳ್ಳುತ್ತಿದ್ದಾರೆ. ಜ್ಞಾನಿಗಳು ಅನೇಕ ಸ್ಥಾನಗಳಲ್ಲಿದ್ದು ಜ್ಞಾನದಲ್ಲಿ ಅನೇಕ ವರ್ಗಗಳಾಗಿ ವಿಭಜಿಸಲ್ಪಟ್ಟಿದ್ದಾರೆ. ಸ್ವಚ್ಛವಾದ ಆತ್ಮಜ್ಞಾನವನ್ನು ತಿಳಿಯುವವರು ಹೊರತು, ಉಳಿದವರೆಲ್ಲರೂ ತನ್ನಲ್ಲಿರುವ ತನ್ನೊಂದರ ಆತ್ಮವನ್ನು ತಿಳಿಯಲಾರರು. ಅಂತಹ ಆತ್ಮ ಜಿಜ್ಞಾಸೆಪರನು ಆತ್ಮವನ್ನು ತಿಳಿಯುವವರೆಗು ತನ್ನ ಪ್ರಯತ್ನವನ್ನು ಬಿಡುವುದಿಲ್ಲ. ಆತ್ಮವನ್ನು ತಿಳಿಯುವವರೆಗು ಆತ್ಮಜ್ಞಾನವನ್ನು ಆಸ್ವಾದಿಸುತ್ತಲೇ ಇರುತ್ತಾನೆ. ಕೊನೆಗೆ ತನ್ನಲ್ಲಿನ ಮನೋಧ್ಯಾಸವನ್ನು ತನ್ನ ಆತ್ಮದ ಮೇಲೆ ಸೇರಿಸಿದ ದಿನ ಮನೋಧ್ಯಾಸ ಹೊರಗಿನ ಪ್ರಪಂಚದ ಮೇಲೆ ಇಲ್ಲದಂತೆ ಹೋಗುತ್ತಿದೆ ಆದ್ದರಿಂದ ಅವನು ಚೇಷ್ಟೆಗಳಿಲ್ಲದವನಾಗಿ ಕದಲದೆ ಚಲಿಸದೆ ಸ್ಥಂಭಿಸಿ ಇರುತ್ತಾನೆ. ಅಂತಹವನನ್ನು ನೋಡಿದವನು ನಿರ್ಜೀವಿಯಾದಂತಾಗಲಿ, ಮೂರ್ಛೆಹೋದಂತಾಗಲಿ ಕಾಣಿಸುವನು. ಇಂತಹವನು ಬಹಳ ಸಲ ಜ್ಞಾನವನ್ನು ತಿಳಿದುಕೊಳ್ಳುತ್ತಿದ್ದಾನೆ. ಆದ್ದರಿಂದ ವೇಮನ ತನ್ನ ಪದ್ಯದಲ್ಲಿ ಜ್ಞಾನಾಮೃತವನ್ನು ಕುಡಿದು ಕುಡಿದು ಎಂದು ವರ್ಣಿಸಿದ್ದಾನೆ. ಆತ್ಮವನ್ನು ತಿಳಿದ ಬ್ರಹ್ಮಯೋಗಿ ಹೊರಗಿನ ಸ್ಥಿತಿಯನ್ನು ಕಳೆದುಕೊಂಡು ಅಂತರಂಗ ಸ್ಥಿತಿಯಲ್ಲಿದ್ದು ಯಾವುದನ್ನು ಗ್ರಹಿಸಲಾರದವನು ಆದ್ದರಿಂದ ಅಂತಹವನು ಆತ್ಮಾನುಭವವನ್ನು ಹೊಂದುವವರೆಗು ಅದರ ಜ್ಞಾನವನ್ನು ತಿಳಿಯುತ್ತಿರುವನು. ಆದ್ದರಿಂದ ಧರಣಿಮೇಲೆ ಬೀಳುವವರೆಗು ಕುಡಿಯುವನು ಎಂದು ಹೇಳಿದ್ದಾನೆ. ಹೊರಗಿನ ವಿಷಯ ತಿಳಿಯದ ಸ್ಥಿತಿವರೆಗು ಜ್ಞಾನ ತಿಳಿದವನು ತನ್ನ ಆತ್ಮವನ್ನು ತಾನು ತಿಳಿಯುವನು ಆದ್ದರಿಂದ ತನ್ನನ್ನು ತಾನು ತಿಳಿ ಎಂದಿದ್ದಾನೆ.

ಜ್ಞಾನವನ್ನು ತಿಳಿದುಕೊಂಡು, ತಿಳಿದುಕೊಂಡು ಪೂರ್ತಿ ಆತ್ಮವನ್ನು ಹೊಂದಿದವನು ಜೀವಾತ್ಮವಲ್ಲದೆ ಆತ್ಮವೇ ಆಗುವನು. ಜೀವಾತ್ಮ ಆತ್ಮನೊಳಗೆ ಬೆರೆತುಹೋದಾಗ ಜೀವಾತ್ಮ ಎನ್ನುವವನು ಆತ್ಮದೊಂದಿಗೆ ಭೇದ ಇಲ್ಲದಂತಿರುವನು ಆದ್ದರಿಂದ ಆ ಸ್ಥಿತಿಯನ್ನು ಆತ್ಮದೊಂದಿಗೆ ಕೂಡಿದವನು ಆತ್ಮವೇ ತಾನಾಗಿರುವವನೆಂದು ಅನ್ನುತ್ತಾರೆ. ಅವನು ಜ್ಞಾನಾನುಭವ ಇರುವವನು ಆದ್ದರಿಂದ ಅವನನ್ನು ಕುಡುಕನು ಎಂದು ಕೂಡ ಅನ್ನಬಹುದು.

ಮತ್ತನ್ನು ಬೇಕೆಂದು ಕೋರಿಕೊಳ್ಳುವವನು, ಕುಡಿಯುವವನು ಜೀವಿಯು. ಮತ್ತೇತಾನಾದವನು ಆತ್ಮ. ಗಾಢ ನಿದ್ರೆ ಮಾಡುವವನನ್ನು ನಿದ್ರೆಪೋತು ಎನ್ನುತ್ತೇವೆ. ಹೆಚ್ಚಿನ ಮತ್ತಿನ ಪಾನೀಯವನ್ನು ಕುಡಿಯುವವನನ್ನು ಕುಡುಕನು ಎನ್ನುತ್ತೇವೆ. ಜೀವಾತ್ಮ ಕುಡಿಯುವವನಾದಾಗ, ಕುಡಿಯಬೇಕಾದ ಅವಶ್ಯ ಇಲ್ಲದವನು ಅಥವಾ ಕುಡಿಯಲಾರದವನು ಆತ್ಮ. ಆತ್ಮವನ್ನು ಕುಡಿಯಲಾರದವನೆಂದು ಏಕೆ ಹೇಳುತ್ತಿದ್ದೇವೆಂದರೆ ತಾನೇ ಮತ್ತಾಗಿ ಇರುವಾಗ ತನಗೆ ಕುಡಿಯುವ ಅವಶ್ಯವೇನಿದೆ. ಕುಡಿಯುವ ಅವಶ್ಯವಿರುವವನು, ಕುಡಿಯುವವನು ಜೀವಿಯೆಂದಿದ್ದೇವಲ್ಲವೆ! ಹಾಗೆಯೇ ಯಾವಾಗಲೂ ಮತ್ತಿನಿಂದಿದ್ದು ಕುಡಿಯಬೇಕಾದ ಅವಶ್ಯವಿಲ್ಲದ, ಕುಡಿಯಲಾರದ ಆತ್ಮವನ್ನು ಕುಡುಕನು ಎಂದಿದ್ದಾರೆ. ಆತ್ಮ ಯಾವಾಗಲೂ ಮತ್ತುಹೊಂದಿದ ಕುಡುಕನು ಆದಾಗ, ಜೀವಾತ್ಮ ಆಗಾಗ ಕುಡಿದು ತಾನು ಕುಡುಕನು ಆಗುತ್ತಿದ್ದಾನೆ. ಹಾಗೆ ಕುಡಿದು ಕುಡಿದು ಆಗಾಗ ಕುಡುಕನು ಆಗುವುದಕ್ಕಿಂತ ಕುಡಿಯಲಾರದ ಕುಡುಕನು ಆಗುವುದು ಇನ್ನೂ ಒಳ್ಳೆಯದು.

| | |
|---|---|
| **ಮನ್ನುನು ತಿನಮಂಟೇ ಮಂಡೇರು ಜನುಲಾರ** | **ಮಣ್ಣು ತಿನ್ನಿರೆನಲು ಉರಿದೇಳುವ ಜನರೆ** |
| **ಮಟ್ಟಿಲೋನ ಮೇಲು ಮರುವನೇಲ** | **ಮಣ್ಣೊಳಿರುವ ಮೇಲು ಮರೆವರೇಕೆ** |
| **ನೀಳ್ಳಲೋನಿ ಮೇಲು ನಿಖಿಲಮ್ಮೆ ಯುಂಡುರಾ** | **ನೀರೊಳಗಿನ ಮೇಲು ನಿಖಿಲವಗಿ ಉಂಟು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (83) |

**ಭಾವಾರ್ಥ :–** ಪ್ರಪಂಚದಲ್ಲಿ ಮನುಷ್ಯರು ಹೆಚ್ಚಿನ ಭಾಗ ಬೆಳಗ್ಗೆ ಎದ್ದಾಗಿನಿಂದ ಪುನಃ ಮಲಗುವವರೆಗು ಪ್ರಪಂಚ ವಿಷಯಗಳಲ್ಲಿಯೇ ಮುಳುಗಿ, ಪರಮಾತ್ಮ ಜ್ಞಾನಕ್ಕೆ ಬಹಳ ದೂರವಾಗಿ ಇದ್ದಾರೆ. ಅಂತಹವರು ಪರಮಾತ್ಮ ಜ್ಞಾನವೆಂದರೇ ಅಸೂಯದಿಂದಿದ್ದು ಯಾರಾದರೂ ಜ್ಞಾನವನ್ನು ತಿಳಿಸಿದರೇ ಇದು ನಮಗೆ ಅವಶ್ಯವಿಲ್ಲವೆಂದು ಬೇಸರಗೊಳ್ಳುತ್ತಾರೆ. ಜ್ಞಾನ ತಿಳಿದುಕೊಂಡರೆ ಸರ್ವ ದುಃಖಗಳು ತೊಲಗುತ್ತವೆಂದು ಅವರಿಗೆ ತಿಳಿದಿಲ್ಲ. ಸರ್ವ ದುಃಖಗಳಿಗು ಹಾನಿಕರವಾದ ಜ್ಞಾನದಿಂದ ನಮಗೆ ಎಷ್ಟೋ ಒಳ್ಳೆಯದಾಗುತ್ತದೆಂದು ತಮ್ಮ

ಕರ್ಮವೆಲ್ಲಾ ನಾಶವಾಗುತ್ತದೆಂದು ಮುಂಬರುವ ಕರ್ಮದಿಂದ ತಪ್ಪಿಸಿಕೊಳ್ಳುವ ಅವಕಾಶವಿದೆಯೆಂದು ಗ್ರಹಿಸಲಾರದೆ ಹೋಗುತ್ತಿ ದ್ದಾರೆ.

ಮಣ್ಣನ್ನು ಅಗೆಯುತ್ತಾ ಹೋದರೇ ಸ್ವಲ್ಪ ಆಳಕ್ಕೆ ಹೋದ ನಂತರ ಮಣ್ಣಿನ ಅಡಿಯಲ್ಲಿ ಅಡಗಿರುವ ನೀರು ಕಾಣಿಸುತ್ತದೆ. ನಮಗೆ ತಿಳಿದಷ್ಟು ಮಟ್ಟಿಗೆ ಮಣ್ಣಿನ ಆಳದಲ್ಲಿ ಅಡಗಿರುವುದು ನೀರು. ಹಾಗೆಯೇ ಜ್ಞಾನದಲ್ಲಿ ಆಳಕ್ಕೆ ಹೋದರೇ ಜ್ಞಾನದಲ್ಲಿ ಕೊನೆಯಲ್ಲಿ ಅಡಗಿರುವುದು ಪರಮಾತ್ಮ. ಜ್ಞಾನವನ್ನು ಕೊನೆಯವರೆಗು ತಿಳಿದುಕೊಳ್ಳುತ್ತಾ ಹೋದವನಿಗೆ ಕೊನೆಗೆ ಪರಮಾತ್ಮಪ್ರಾಪ್ತಿ ಉಂಟಾಗಿ ಮೋಕ್ಷ ಹೊಂದುವನು. ದುಃಖ ನಿರ್ಮೂಲನೆ ಮಾಡಿ ಮೋಕ್ಷ ಹೊಂದಿಸುವ ಜ್ಞಾನವನ್ನು ತಿಳಿದುಕೊಳ್ಳಿರೆಂದರೆ ಕೆಲವರಿಗೆ ಹಿಡಿಸುವುದಿಲ್ಲ. ಆದ್ದರಿಂದ ವೇಮನಯೋಗಿ ಜ್ಞಾನವನ್ನು ಮಣ್ಣಿಗೆ ಹೋಲಿಸಿ, ಮೋಕ್ಷವನ್ನು ದೊಡ್ಡದಾಗಿ ವರ್ಣಿಸಿ ಮಣ್ಣನ್ನು ತಿನ್ನೆಂದರೆ ಉರಿದುಬೀಳುತ್ತಾರೆ ಜನರು, ಮಣ್ಣಿನಲ್ಲಿನ ಮೇಲನ್ನು ಮರೆಯುವುದೇಕೆ ಎಂದಿದ್ದಾರೆ. ಜ್ಞಾನದಿಂದ ಲಭಿಸುವ ಪರಮಾತ್ಮ ಪ್ರಪಂಚವೆಲ್ಲಾ ವ್ಯಾಪಿಸಿದ್ದಾನೆ ಆದ್ದರಿಂದ ಪರಮಾತ್ಮನನ್ನು ನೀರಾಗಿ ವರ್ಣಿಸಿ ನೀರಿನಲ್ಲಿನ ಮೇಲು ನಿಖಿಲವಾಗಿರುತ್ತದೆ ಎಂದಿದ್ದಾರೆ. ಜೀವಿಯು ಪರಮಾತ್ಮನಲ್ಲಿ ಬೆರೆತು ಪರಮಾತ್ಮವಾಗಿ ಬದಲಾಗಿ ಎಲ್ಲೆಡೆ ವ್ಯಾಪಿಸಿ ಹೋಗುವುದೇ ನೀರಿನಲ್ಲಿನ ಮೇಲು ಎಂದಿದ್ದಾನೆ. ಭೂಮಿಮೇಲೆ ಮಣ್ಣಿನೊಳಗೆ ಹೋದರೆ ನೀರು, ಸಮುದ್ರದ ಮೇಲೆ ನೀರಿನೊಳಗೆ ಹೋದರೇ ಮಣ್ಣು ಲಭ್ಯವಾದಂತೆ ಜ್ಞಾನವನ್ನು ವಿವರಿಸಿಕೊಂಡು ನೋಡಿದರೆ ಪರಮಾತ್ಮ, ಪರಮಾತ್ಮನನ್ನು ವಿವರಿಸಿಕೊಂಡು ನೋಡಿದರೆ ಜ್ಞಾನ ಕಾಣಿಸುತ್ತಿವೆ. ಆದ್ದರಿಂದಲೇ ವೇಮನಯೋಗಿ ಮಣ್ಣನ್ನು, ನೀರನ್ನು ಪ್ರತ್ಯೇಕಿಸಿ ಹೇಳಿದ್ದಾನೆಂದು ತಿಳಿಯಬೇಕು.

| | |
|---|---|
| **జీవ మేడనుండు భావమెక్కడ నుండు** | **ಜೀವವದು ಎಲ್ಲಿಹುದು ಭಾವವದು ಎಲ್ಲಿಹುದು** |
| **కాపురంబు ఏడ గదిపియుండు** | **ನೆಲೆಸಿ ಅವುಗಳಲ್ಲಿ ಬೆರೆತು ಇಹವು** |
| **తనరుచున్న రెంటి స్థలమేల తెలియరు** | **ಬೆಳಗುತಿರುವ ಅದರ ಸ್ಥಳವೇಕೆ ಕಾಣರೊ** |
| **విశ్వదాభిరామ వినుర వేమా.** | **ವಿಶ್ವದಾಭಿರಾಮ ಕೇಳು ವೇಮಾ. (84)** |

**ಭಾವಾರ್ಥ :–** ಶರೀರದಲ್ಲಿ ಜೀವಿಯು ಇದ್ದಾನೆಂದು ಅವನು ಮರಣದಲ್ಲಿ ಶರೀರವನ್ನು ಬಿಟ್ಟು ಹೋಗುತ್ತಿದ್ದಾನೆಂದು ಎಲ್ಲರಿಗೂ ತಿಳಿದ ವಿಷಯವೇ. ಕಾಲಿನಿಂದ ತಲೆವರೆಗಿರುವ ಶರೀರದಲ್ಲಿ ಜೀವಿಯು ಎಲ್ಲಿದ್ದಾನೆನ್ನುವ ವಿಷಯ ಬಹಳ ಜನರಿಗೆ ತಿಳಿಯದಂತೆ ಹೋಗಿದೆ. ಭಗವದ್ಗೀತಾ ಶಾಸ್ತ್ರದ ಪ್ರಕಾರ ನೋಡಿದರೆ ಜೀವಿಯು ಶರೀರದಲ್ಲಿ ತಲೆಯಲ್ಲಿದ್ದಾನೆಂದು ತಿಳಿಯುತ್ತಿದೆ. ಅಷ್ಟೇ ಅಲ್ಲದೆ ತಲೆಯಲ್ಲಿ ಗುಣಗಳಿವೆಯೆಂದು, ಅವುಗಳಲ್ಲಿ ಜೀವಿಯು ಇದ್ದಾನೆಂದು ಕೂಡ ಹೇಳಲ್ಪಟ್ಟಿದೆ. ಇನ್ನೂ ವಿವರಿಸಿಕೊಂಡು ನೋಡಿದರೆ ನಮ್ಮ ಶರೀರದಲ್ಲಿನ ಹಣೆಯಭಾಗದಲ್ಲಿ ಶಿರಸ್ಸಿನಲ್ಲಿ ನಾಲ್ಕು ಚಕ್ರಗಳು ಕ್ರಮವಾಗಿ ಮೇಲಿಂದ ಕೆಳಕ್ಕೆ ಇವೆ. ಮೇಲಿನಿಂದ ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳು ಇವೆ. ಅವುಗಳಲ್ಲಿ ಎಲ್ಲವುಗಳಿಗಿಂತ ಕೆಳಗಿರುವ ಗುಣಚಕ್ರದಲ್ಲಿ ಗುಣಗಳಿವೆ. ಅವುಗಳಿಂದಲೇ ಮಾನವನಿಗೆ ಅನೇಕ ಭಾವನೆಗಳು ಉಂಟಾಗುತ್ತಿವೆ. ಗುಣಚಕ್ರ ಮೂರು ಕೊಠಡಿ ಗಳಾಗಿ ವಿಭಜಿಸಲ್ಪಟ್ಟಿದೆ. ಆ ಮೂರು ಕೊಠಡಿಗಳಲ್ಲಿ ಜೀವಿಯು ಯಾವುದೋ ಒಂದು ಕೊಠಡಿಯಲ್ಲಿ ನಿವಾಸಿಸುತ್ತಿದ್ದಾನೆ. ಒಂದೊಂದು ಸಮಯದಲ್ಲಿ ಒಂದೊಂದು ಕೊಠಡಿಯಲ್ಲಿರುತ್ತಾ ಅದರಲ್ಲಿನ ಭಾವನೆಗಳು ಹೊಂದುತ್ತಿದ್ದಾನೆ. ವಾಸ್ತವವಾಗಿ ಗುಣಭಾವನೆಗಳು, ಜೀವಿಯು ಒಂದೇ ಸ್ಥಳದಲ್ಲಿ ಇದ್ದಾರೆಂದು ತಿಳಿಯುತ್ತಿದೆ. ಈ ವಿವರ ಎಲ್ಲರಿಗೂ ತಿಳಿದಿಲ್ಲ. ಆದ್ದರಿಂದ ವೇಮನಯೋಗಿ ಜೀವಭಾವವೆಲ್ಲಿದೆ ಎಂದು ಎರಡು ಸೇರಿ ಸಂಸಾರ ಮಾಡುವ ಸ್ಥಳ ಯಾವುದೆಂದು ಅವುಗಳೆರಡರ ಸ್ಥಳ ಏಕೆ ತಿಳಿಯರೆಂದು ಕೇಳಿದ್ದಾನೆ. ಆದ್ದರಿಂದ ಇಂದಿಗಾದರೂ ನಾವು ಶರೀರದಲ್ಲಿ ಎಲ್ಲಿದ್ದೇವೋ, ನಮ್ಮ ಗುಣಗಳೆಲ್ಲಿವೆಯೋ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸೋಣ.

| | |
|---|---|
| **ದೇವುಡನಗ ವೇರೆ ದೇಶಮಂದುನ್ನಾಡೆ** | **ದೈವವೆಂದರೆ ಬೇರೆ ದೇಶದಲ್ಲಿರುವನೆ** |
| **ದೇಹಿತೋಡ ಎಪುಡು ದೇಹಮಂದೆ** | **ದೇಹಿ ಜೊತೆ ಎಂದಿಗೂ ದೇಹದೊಳಗೆ** |
| **ವಾಹನಮುಲು ನೆಕ್ಕಿ ವಡಿ ದೋಲುಚುನ್ನಾಡು** | **ವಾಹನವನ್ನೇರಿ ಓಡಿಸುತ್ತಿದ್ದಾನೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (85)** |

**ಭಾವಾರ್ಥ :–** ದೇವರು ದೇಹದಲ್ಲೇ ಇರುವಾಗ ಅದು ತಿಳಿಯದ ಪ್ರಜೆಗಳು ದೇವರು ಬೇರೇ ಸ್ಥಳಗಳಲ್ಲಿ ಇದ್ದಾನೆಂದು ದೇಶ ದೇಶಗಳು ತೀರ್ಥಯಾತ್ರೆಗಳು ಮಾಡುತ್ತಿರುವರು. ದೇವರು ದೇಹದಲ್ಲಿ ಜೀವಾತ್ಮದೊಂದಿಗೆ ಯಾವಾಗಲೂ ದೇಹದಲ್ಲೇ ಇದ್ದಾನೆ. ಜೀವಿಯು ದೇಹವೆನ್ನುವ ರಥದಲ್ಲಿ ಕುಳಿತುಕೊಂಡು ಬಂದು ಹೋಗುವ ದೃಶ್ಯಗಳನ್ನು ನೋಡುತ್ತಿರುವಾಗ, ದೇಹರಥವನ್ನು ದೇವರೇ ನಡೆಸುತ್ತಿದ್ದಾನೆ. ದೇಹ ಕದಲುವುದಕ್ಕೆ ದೇವರೇ ಕಾರಣವಾಗಿರುವಾಗ ಜೀವಿಯು ದೇಹವನ್ನು ಸ್ವಲ್ಪವಾದರೂ ನಡೆಸದೆ ಅನುಭವಗಳನ್ನು ಮಾತ್ರ ಅನುಭವಿಸುತ್ತಿರುವನು. ಆದ್ದರಿಂದ ದೇವರು ಎಲ್ಲೋ ಇದ್ದಾನೆಂದು ಭ್ರಮಪಡಬೇಡವೆಂದು, ಶರೀರದಲ್ಲೇ ನಿನ್ನೊಂದಿಗೇ ಇದ್ದಾನೆಂದು ವೇಮನ ತಿಳಿಸುತ್ತಿದ್ದಾನೆ. ಆದ್ದರಿಂದ ದೇವರನ್ನು ಹೊರಗೆ ಹುಡುಕದೆ ಒಳಗೆ ಶರೀರದಲ್ಲೇ ಹುಡುಕಬೇಕೆಂದು ಕೋರುತ್ತಿದ್ದೇವೆ.

| | |
|---|---|
| **ವಾಕ್ಕುಯಂದು ಗುರ್ವು ವಾಕ್ತತ್ವಮುನು ಗುರ್ವು** | **ವಾಕ್‌ನಲ್ಲಿ ಗುರುವು ವಾಕ್ ತತ್ತ್ವದೊಳ್ ಗುರುವು** |
| **ಚೀಕಟಿಲೋ ಗುರ್ವು ಚಿಕ್ಕಿಯುಂಡು** | **ಕತ್ತಲಲ್ಲಿ ಗುರುವು ಸಿಕ್ಕಿಹನು** |
| **ನಖಿಲಮುನಕು ಗುರುವು ಯಾಧಾರಮ್ಮೆಯುಂಡು** | **ಅಖಿಲಕೆಲ್ಲ ಗುರುವೆ ಆಧಾರವಾಗಿಹನು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (86) |

**ಭಾವಾರ್ಥ :–** ಮನುಷ್ಯನ ಬಾಯಿ ಮೂಲಕ ಹೊರಬೀಳುವುದು ವಾಕ್ಕು. ಎಷ್ಟೋ ಜನ ಭೂಮಿಮೇಲೆ ಮಾತನಾಡುತ್ತಿದ್ದಾರೆ. ಎಲ್ಲರ ಮಾತುಗಳಲ್ಲಿ ವಾಕ್ತತ್ವವು ಎಂದರೆ ಮಾತುಗಳ ಚಮತ್ಕಾರ ಇರುವುದಿಲ್ಲ. ಕೆಲವರು ಮಾತ್ರ ಚುರುಕಾಗಿ, ಬುದ್ಧಿವಂತಿಕೆಯಿಂದ ಮಾತನಾಡಬಲ್ಲರು. ಅಷ್ಟೇಅಲ್ಲದೆ ಅಸಲು ಮಾತನಾಡದವರು ಸಹ ಇದ್ದಾರೆ. ಇದೆಲ್ಲವನ್ನೂ ವಿವರಿಸಿ ನೋಡಿದರೆ ಒಬ್ಬನ ಬಾಯಿಮುಖಾಂತರ ಮಾತು ಬರುವುದಕ್ಕೆ ಅವನ ಶರೀರದಲ್ಲಿನ ಪಾತ್ರಧಾರಿಯಾಗಿ ಆಡುತ್ತಿರುವ ಆತ್ಮವೇ ಕಾರಣ. ಮಾನವನ ಶರೀರದಲ್ಲಿ ಪ್ರಾರಬ್ಧಕರ್ಮ ನಿಕ್ಷಿಪ್ತವಾಗಿದ್ದು, ಅದರ ಸುಖದುಃಖಗಳನ್ನು ಜೀವಿಯು ಅನುಭವಿಸಬೇಕಾಗಿದೆ. ಅನುಭವಿಸುವುದಕ್ಕೆ ಶರೀರ ಕದಲಬೇಕು. ಮಾತನಾಡಬೇಕು. ಶರೀರ ಎಷ್ಟೋ

ಕೆಲಸಗಳು ಮಾಡುವುದಕ್ಕೆ, ಎಷ್ಟೋ ಮಾತುಗಳು ಮಾತನಾಡುವುದಕ್ಕೆ ಕಾರಣ ಕರ್ಮ ಆದಾಗ, ಅದರ ಪ್ರಕಾರ ಆತ್ಮ ತನ್ನ ಶರೀರವನ್ನು ಕದಲಿಸುತ್ತಾ ಪಾತ್ರಧಾರಿಯಾಗಿ ಇದೆ. ಒಂದು ಶರೀರದಲ್ಲಿ ಮಾತು ಬರುವುದಕ್ಕಾಗಲಿ, ಮತ್ತೊಂದು ಶರೀರದಲ್ಲಿ ಮಾತಿನ ಚಮತ್ಕಾರಕ್ಕಾಗಲಿ ಆತ್ಮವೇ ಆಡಬೇಕಾಗಿದೆ. ಮಾತುಗಳಲ್ಲಿ ಮಾತನಾಡುತ್ತಾ ಸಿಲುಕಿಕೊಂಡಿರುವುದು ಆತ್ಮ. ಹಾಗೆಯೇ ಮಾತುಗಳ ಚಮತ್ಕಾರದಲ್ಲಿ ಕೂಡ ಸಿಲುಕಿಕೊಂಡಿರುವುದು ಆತ್ಮವೇ. ಶರೀರದಲ್ಲಿ ಜೋಡಿಪಕ್ಷಿಗಳ ಹಾಗೆ ನಿವಾಸವಿರುವವು ಆತ್ಮ, ಜೀವಾತ್ಮಗಳು. ಅದರಲ್ಲಿ ಜೀವಾತ್ಮ ತಲೆಭಾಗದಲ್ಲಿ ಯಾವ ಕೆಲಸ ಮಾಡದೆ ಮನಸ್ಸಿನಿಂದ ಬಂದಿರುವ ಅನುಭವವನ್ನು ಮಾತ್ರ ಅನುಭವಿಸುತ್ತಿರುವಾಗ ಆತ್ಮ ಮಾತ್ರ ಎಲ್ಲಾ ಕೆಲಸಗಳು ಮಾಡುತ್ತಾ ಅಹರ್ನಿಶೆಗಳು ಎಲ್ಲದರಲ್ಲೂ ತಗುಲಿಕೊಂಡು ಇದೆ. ಆದ್ದರಿಂದ ವಾಕ್ಕುದಲ್ಲಿ ಗುರುವು, ವಾಕ್ತತ್ವದಲ್ಲಿ ಗುರುವು ಎಂದಿದ್ದಾರೆ. ಶರೀರದಲ್ಲಿ ಗುರುವು ಆತ್ಮವಾದಾಗ ಶಿಷ್ಯನು ಜೀವಾತ್ಮ ಎಂದು ತಿಳಿಯಬೇಕು. ಗುರುವು ಎಂದರೆ ಆತ್ಮ ಶರೀರವೆಲ್ಲಾ ವ್ಯಾಪಿಸಿ ಎಲ್ಲ ತಿಳಿಯುವವನಾಗಿ ಇದ್ದಾನೆ. ಶಿಷ್ಯನು ಎಂದರೆ ಜೀವಾತ್ಮ ಶರೀರದಲ್ಲಿ ಒಂದು ಕಡೆಯಿದ್ದು ಏನೂ ತಿಳಿಯದವನಾಗಿ ಇರುತ್ತಾನೆ. ಶರೀರದಲ್ಲಿ ಗುರುತ್ವಾಕರ್ಷಣೆ ಶಕ್ತಿಯಾಗಿ ಇದ್ದು ಜ್ಞಾನೇಂದ್ರಯಗಳನ್ನು ಕೆಲಸಮಾಡಿಸುವವನು ಆದ್ದರಿಂದ ಆತ್ಮವನ್ನು ಶರೀರದಲ್ಲಿ ಗುರುವಾಗಿ ಹೇಳುವುದಾಗಿದೆ. ಕಣ್ಣು ಮುಚ್ಚಿದರೇ ಕಾಣಿಸುವ ಕತ್ತಲಲ್ಲಿ ಕೂಡ ಇರುವವನು ಗುರುವು. ಆತ್ಮ ಶರೀರವೆಲ್ಲಾ ವ್ಯಾಪಿಸಿದೆ. ಆದ್ದರಿಂದ ಕಣ್ಣು ಮುಚ್ಚಿದರೆ ಕಾಣಿಸುವ ಕತ್ತಲಲ್ಲಿ ಕೂಡ ಆತ್ಮವೇ ಇದೆ. ಆದ್ದರಿಂದಲೇ ಕತ್ತಲಲ್ಲಿ ಗುರುವುಸಿಲುಕಿದ್ದಾನೆ ಎಂದಿದ್ದಾರೆ. ಸಕಲ ಶರೀರಗಳಲ್ಲಿ ಆತ್ಮ ಇರುತ್ತಾ ಶರೀರವನ್ನು ಆಡಿಸುತ್ತಿದೆ. ಶರೀರವೆಲ್ಲದಕ್ಕೂ ಆಧಾರವಾಗಿರುವುದು ಆತ್ಮ ಆದ್ದರಿಂದ ಅಖಿಲಕ್ಕೂ ಗುರುವು ಆಧಾರವಾಗಿರುವನು ಎಂದು ಪದ್ಯದಲ್ಲಿ ಹೇಳಿದ್ದಾರೆ. ಈ ಪದ್ಯದಲ್ಲಿ ಶರೀರವೆಲ್ಲಾ ವ್ಯಾಪಿಸಿರುವ ಆತ್ಮವೇ ಶರೀರದಲ್ಲಿನ ಎಲ್ಲದಕ್ಕೂ ಆಧಾರವಾಗಿದೆಯೆಂದು ತಿಳಿಸುವುದಾಗಿದೆ.

| | |
|---|---|
| **ಕರ್ಮಾಕರ್ಮಾಮು ಲೊಕ್ಕಟಿ** | **ಕರ್ಮಾ ಕರ್ಮಗಳೊಂದೆ** |
| **ಕರ್ಮ ವಿನೋದುನಕು ದತ್ತ್ವಘನುನಕು ತೆಲಿಯನ್** | **ಕರ್ಮ ವಿನೋದನಿಗೆ ತತ್ತ್ವಜ್ಞನಿಗೆ ತಿಳಿಯುವುದೈ** |
| **ಧರ್ಮಾಧರ್ಮಮು ಲೇಪಡ** | **ಧರ್ಮಾ ಧರ್ಮವು ಸಿದ್ಧಿಸೆ** |
| **ನಿರ್ಮಲಮತಿ ದೆಲುಪವಲಯು ನಿಜಮುಗ ವೇಮಾ** | **ನಿರ್ಮಲಮತಿ ತಿಳಿಸಬೇಕು ಇಳೆಯುಳ್ ವೇಮಾ** (87) |

**ಭಾವಾರ್ಥ :–** ಕರ್ಮ ಎಂದರೆ ಕಾರ್ಯದ ಹಿಂದೆ ಅಡಗಿ ಆ ಕಾರ್ಯಕ್ಕೆ ಕಾರಣ ವಾಗಿರುವುದು. ಅಕರ್ಮ ಎಂದರೆ ಕಾರ್ಯವಿಲ್ಲದ್ದು, ಕಾರ್ಯಕ್ಕೆ ಕಾರಣ ಅಲ್ಲದಿರುವುದು. ತತ್ವವನ್ನು ಎಂದರೆ ಆತ್ಮವನ್ನು ತಿಳಿದವನಿಗೆ ಆ ಸಮಯದಲ್ಲಿ ಕಾರ್ಯ ಮಾಡುವುದಾಗಲೀ, ಕರ್ಮಬರುವುದಾಗಲೀ ಇಲ್ಲ. ಆ ವಿಷಯ ಅವನಿಗೆ ತಿಳಿಯುತ್ತದೆ. ಹಾಗೆಯೇ ಕರ್ಮವನ್ನು ತಿಳಿದ ಕರ್ಮಯೋಗಿ ಕಾರ್ಯ ಮಾಡುತ್ತಿದ್ದರೂ ಕರ್ಮ ಬಾರದ ವಿವರ ಅವನಿಗೆ ತಿಳಿದಿರುತ್ತದೆ. ಆದ್ದರಿಂದಲೇ ಈ ಪದ್ಯದಲ್ಲಿ ಕರ್ಮ ವಿನೋದನಿಗೆ ಅಂದರೆ ಕರ್ಮ ತಿಳಿದ ಕರ್ಮಯೋಗಿಗೆ ಮತ್ತು ತತ್ತ್ವ ಘನನಿಗೆ ಎಂದರೆ ಆತ್ಮಯೋಗಿಗೆ ಕರ್ಮಾಕರ್ಮಗಳು ತಿಳಿಯುತ್ತ ವೆಂದಿದ್ದಾರೆ.

ಧರ್ಮಗಳ್ಯಾವುವು, ಅಧರ್ಮಗಳ್ಯಾವುವು ಎನ್ನುವ ವಿಷಯ ಜ್ಞಾನ ತಿಳಿದವನಿಗೇ ತಿಳಿಯುತ್ತದೆ. ಜ್ಞಾನ ತಿಳಿದವನೇ ನಿರ್ಮಲವಾದ ಎಂದರೆ ಕಲ್ಮಷವಿಲ್ಲದ ಮತಿ ಹೊಂದಿರುವನು. ಆದ್ದರಿಂದ ಸಂಪೂರ್ಣಜ್ಞಾನಿಗೆ ಧರ್ಮಾಧರ್ಮಗಳು, ಕರ್ಮ ವಿನೋದನಿಗೆ ಕರ್ಮಗಳು, ತತ್ತ್ವಘನನಿಗೆ ಅಕರ್ಮಗಳು ತಿಳಿಯುತ್ತವೆ ಎಂದು ಹೇಳಿದ್ದಾರೆ.

| | |
|---|---|
| **ಅಮ್ಮಸುಮೀ ಯಾಲನಗಾ** | **ಅಮ್ಮ ಕಣಾಭಾರ್ಯೆಯೆನೆ** |
| **ನಮ್ಮನಗಾ ನಾಲು ಸುಮ್ಮಿ ಯಾ ಇದ್ದರಿನಿನ್** | **ಅಮ್ಮ ಭಾರ್ಯೆಕಾಣು ಆ ಈರ್ವರಿಗುಂ** |
| **ಇಮ್ಮಹಿಲೋ ಪರಮಾತ್ಮುನಿ** | **ಈ ಮಹಿಯಲಿ ಪರಮಾತ್ಮನ** |
| **ನೆಮ್ಮದಿಲೋ ತೆಲಿಯ ದಾ ನೆ ನೇರ್ಪರಿ ವೇಮಾ.** | **ನೆಮ್ಮದಿಯಿಂದರಿಯುವವನೆ ನಿಪುಣನು ವೇಮಾ.** (88) |

**ಭಾವಾರ್ಥ :–** ಅಮ್ಮ, ಹೆಂಡತಿ ಎನ್ನುವ ಪದಗಳು ನಮಗೇನು ಹೊಸವಲ್ಲ. ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರಿಗು ಮೊದಲು ಅಮ್ಮ ಇದ್ದಾಳೆ ನಂತರ ಹೆಂಡತಿ ಇದ್ದಾಳೆ. ಅಮ್ಮನಿಗು, ಹೆಂಡತಿಗು ಎಷ್ಟೋ ವ್ಯತ್ಯಾಸವಿದೆ ಎನ್ನುವ ವಿಷಯ ಎಲ್ಲರಿಗೂ ತಿಳಿದಿರುವುದೇ. ಆದರೆ ಇಲ್ಲಿ ನಮಗೆ ಅರ್ಥವಾಗದ ವಿಷಯವೇನೋ ಇದೆ. ಈ ಪದ್ಯದಲ್ಲಿ ಹೆಂಡತಿ ಎಂದರೆ ಅಮ್ಮ ಸುಮಾ ಎನ್ನುತ್ತಾ ಅಮ್ಮ ಎಂದರೆ ಹೆಂಡತಿ ಸುಮೀ ಎನ್ನುವುದು ಸಹ ನಡೆದಿದೆ. ಅಮ್ಮ ಎಂದರೇ ಹೆಂಡತಿಯೆಂದು ಹೆಂಡತಿ ಎಂದರೇ ಅಮ್ಮ ಎಂದು ಸ್ವಲ್ಪವೂ ಸಹ ವ್ಯತ್ಯಾಸ ಇಲ್ಲದಂತೆ ಹೇಳುವುದು ಬಹಳ ವಿಚಿತ್ರ ಅಲ್ಲವೆ! ಈ ಇಬ್ಬರನ್ನೇ ಅಲ್ಲದೆ ಪರಮಾತ್ಮನನ್ನು ಸಹ ತಿಳಿದವನು ತಾನೇ ನಿಪುಣ ಎಂದಿದ್ದಾರೆ. ಬುದ್ಧಿವಂತನಾದವನು ಅವನ ದೃಷ್ಠಿಯಲ್ಲಿ ಅಮ್ಮ, ಹೆಂಡತಿ ಇಬ್ಬರೂ ಹೇಗೆ ಒಂದಾಗಿದ್ದಾರೋ ನೋಡೋಣವಾ!

ಪ್ರಪಂಚದಲ್ಲಿ ಸ್ತ್ರೀ, ಪುರುಷ ಎನ್ನುವ ಎರಡೇ ಜಾತಿಗಳು ಇವೆ. ಆ ಜಾತಿಗಳು ಪ್ರಪಂಚ ಹುಟ್ಟುವಿಕೆಯಲ್ಲಿಯೇ ಪರಮಾತ್ಮ ತಯಾರು ಮಾಡಿದ್ದಾನೆ. ಜ್ಞಾನ ಪರವಾಗಿ ಪರಮಾತ್ಮ ಪುರುಷನೆಂದು, ಬಿಡಿಬಿಡಿಯಾಗಿ ಪಂಚಭೂತಗಳಾಗಿ ಇರುವ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವ ಐದು ಭಾಗಗಳನ್ನು ಸೇರಿಸಿ ಪ್ರಕೃತಿಯೆಂದು ಆ ಪ್ರಕೃತಿಯನ್ನು ಸ್ತ್ರೀಯೆಂದು ಕರೆಯುವುದು ನಡೆದಿದೆ. ಸಮಸ್ತ ಜೀವರಾಶಿಗಳಿಗೆ ಪ್ರಕೃತಿ ಶರೀರವನ್ನು ತಯಾರು ಮಾಡಿ ಆಕಾರ ಕೊಡುವುದರಿಂದ ಸಮಸ್ತ ಜೀವರಾಶಿಗಳಿಗು ಪ್ರಕೃತಿ ತಾಯಿ ಎಂದು, ಶರೀರಗಳಲ್ಲಿ ಚೈತನ್ಯ ಕೊಟ್ಟಿರುವ ಪರಮಾತ್ಮ ಎಲ್ಲರಿಗೂ ತಂದೆ ಎಂದು ಕೂಡ ಭಗವದ್ಗೀತೆ ಯಲ್ಲಿ ಹೇಳಲಾಗಿದೆ. ಇದರ ಪ್ರಕಾರ ಪ್ರಕೃತಿ ಎಲ್ಲರಿಗೂ ಅಮ್ಮ ಎಂದು ತಿಳಿಯುತ್ತಿದೆ. ಪ್ರಕೃತಿ, ಪುರುಷನು ಎನ್ನುವವರಿದ್ದಾರೆನ್ನುವ ನಿಮಿತ್ತ ಅವರಿಬ್ಬರ ಗುರುತಿಗಾಗಿ ಲಿಂಗ ಹೊಂದಿದ ಪುರುಷನನ್ನು, ಯೋನಿ ಹೊಂದಿದ ಸ್ತ್ರೀ ಆಕಾರವನ್ನು ಪರಮಾತ್ಮ ಭೂಮಿಮೇಲೆ ಹುಟ್ಟಿಸಿದ್ದಾನೆ. ಪ್ರಾಣಿಗಳಲ್ಲಾಗಲೀ, ಮನುಷ್ಯರಲ್ಲಾಗಲೀ ಈ ಎರಡು ಜಾತಿಗಳಿರುವಂತೇ ಸೃಷ್ಠಿಸಿದ್ದಾನೆ. ಪ್ರಕೃತಿ

ಪುರುಷರಿಂದಲೇ ಸರ್ವರು ಹುಟ್ಟುತ್ತಿದ್ದಾರೆನ್ನುವ ಜ್ಞಾನ ತಿಳಿಯುವಂತೆ ಸ್ತ್ರೀ ಪುರುಷ ಸಂಗಮದಿಂದ ಸಂತತಿ ಉಂಟಾಗುವಂತೆ ಕೂಡ ದೇವರು ತಯಾರಿಸಿದ್ದಾನೆ. ಪರಮಾತ್ಮ ಜ್ಞಾನ ತಿಳಿದು ನೋಡಿದರೇ ಪ್ರಕೃತಿ ತಾಯಿಯಾಗಿ ಇದೆ. ಜ್ಞಾನ ತಿಳಿಯದಿದ್ದರೂ ಸ್ತ್ರೀ ತಾಯಿಯಾಗಿ ಇದೆ. ಹಾಗೆಯೇ ಜ್ಞಾನದ ಪ್ರಕಾರ ಪುರುಷನಿಗೆ ಪ್ರಕೃತಿ ಹೆಂಡತಿಯಾಗಿ ಇದೆ. ಜ್ಞಾನ ತಿಳಿಯದಿದ್ದರೂ ಪುರುಷ ಅಕೃತಿ ಹೊಂದಿದವನಿಗೆ ಸ್ತ್ರೀ ಆಕೃತಿ ಹೊಂದಿರುವುದು ಹೆಂಡತಿಯಾಗಿ ಇದೆ. ಎಲ್ಲಿ ನೋಡಿದರೂ ಆಕೃತಿಯನ್ನು ಕೊಟ್ಟು ಹುಟ್ಟಿಸುವುದರಲ್ಲಿ ಪ್ರಕೃತಿ ತಾಯಿಯಾಗಿದ್ದು ಅವನಿಗೆ ಗುಣಗಳು ಮುಂತಾದವುಗಳನ್ನುಕೊಟ್ಟು ತನ್ನೊಂದಿಗೆ ಜೀವಿಗಳನ್ನು ಯಾವಾಗಲೂ ಸಂಗಮಿಸಿ ಇರುವಂತೆ, ಪರಮಾತ್ಮ ಧ್ಯಾಸಕ್ಕೆ ಹೋಗದಂತೆ ಮಾಡುತ್ತಿದೆ. ಆದ್ದರಿಂದ ಮರಣಿಸುವವರೆಗು ಹೆಂಡತಿಯಾಗಿ ಇದೆ. ಹುಟ್ಟಿಸುವುದರಲ್ಲಿ ತಾಯಿ, ಜೀವಿಸುವುದರಲ್ಲಿ ಹೆಂಡತಿಯಾಗಿ ಪ್ರಕೃತಿ ಇದೆ. ಆದ್ದರಿಂದ ಅಮ್ಮ ಎಂದರೆ ಹೆಂಡತಿ ಸುಮಾ ಎಂದು ಒಂದು ವಿಧವಾಗಿ ಹೇಳುತ್ತಿದ್ದಾರೆ. ಜೀವನವೆಲ್ಲಾ ತನ್ನ ಗುಣಗಳೊಂದಿಗೆ ಸಂಗಮಿಸುವಂತೆ ಮಾಡಿದ ಪ್ರಕೃತಿಯೇ ಮರುಜನ್ಮಕ್ಕೆ ಶರೀರವನ್ನು ತಯಾರು ಮಾಡಿ ಹುಟ್ಟುವಿಕೆಯನ್ನು ಕೊಡುತ್ತಿದೆ. ಆದ್ದರಿಂದ ಅಮ್ಮ ಸುಮಾ ಹೆಂಡತಿಯೆಂದರೆ ಎಂದು ಹೇಳಿದ್ದಾರೆ. ಅಮ್ಮ, ಹೆಂಡತಿ ಆದ ಪ್ರಕೃತಿಯನ್ನು ತಿಳಿದವನು ಎಲ್ಲದಕ್ಕು ಅಧಿಪತಿಯಾದ ಪರಮಾತ್ಮನನ್ನು ತಿಳಿದುಕೊಳ್ಳಲು ಪ್ರಯತ್ನಿಸುವನು. ಅಂತಹವನೇ ಬುದ್ಧಿವಂತನು ಎಂದಿದ್ದಾರೆ. ಬುದ್ಧಿವಂತನು ಎಂದರೆ ಜ್ಞಾನವನ್ನು ಕಲಿತವನೆಂದು ಅರ್ಥ. ಆದ್ದರಿಂದ ಪ್ರಕೃತಿ, ಪುರುಷರ ಜ್ಞಾನ ತಿಳಿಯುವವನು ನಿಜವಾದ ಬುದ್ಧಿವಂತನಾಗುತ್ತಾನೆ.

**ಎರುಕ ಮಾಲು ಜೀವಿಯೆಂತ ಕಾಲಂಬುಂಡಿ**
**ಚಚ್ಚಿ ಪುಟ್ಟುಚುಂಡು ಸಹಜಮುಗನು**
**ಎರುಕ ಮರಚು ಚೋಟ ನೆರುಗುಟ**
**ವಿಶ್ವದಾಭಿರಾಮ ವಿನುರ ವೇಮಾ.**

**ಎಚ್ಚರ ನಿದ್ರೆಯಲಿ ಜೀವಿ ಎಷ್ಟು ಕಾಲವಿದ್ದರೂ**
**ಸತ್ತು ಹುಟ್ಟುತ್ತಿರುವುದು ಸಹಜವಾಗಿಯು**
**ಬ್ರಹ್ಮಂಬು ಎಚ್ಚರ ಮರೆಯುವ ಕಡೆ ತಿಳಿಯುವುದು**
**ಬ್ರಹ್ಮವು**
**ವಿಶ್ವದಾಭಿರಾಮ ಕೇಳು ವೇಮಾ. (89)**

**ಭಾವಾರ್ಥ :–** ನಿದ್ರ ಎಚ್ಚರಗಳೆನ್ನುವವು ಎಲ್ಲರಿಗೂ ತಿಳಿದಿದೆ ನಿದ್ರೆಯಲ್ಲಿ ಏನು ತಿಳಿಯದಂತೆ ಹೋಗುತ್ತಿದೆ. ಎಚ್ಚರದಲ್ಲಿ ಎಲ್ಲ ವಿಷಯಗಳು ತಿಳಿಯುತ್ತಿವೆ. ಎಚ್ಚರವನ್ನು ಜ್ಞಾಪಕ ಎಂದು ಸಹ ಅನ್ನಬಹುದು. ಪ್ರಪಂಚವನ್ನು ತಿಳಿಯುವುದನ್ನು ಎಚ್ಚರ ಎನ್ನುತ್ತಿದ್ದೇವೆ. ಎಲ್ಲವನ್ನು ತಿಳಿಯುವಂತೆ ಮಾಡುವ ಶರೀರದಲ್ಲಿನ ಎಚ್ಚರದ ಮೇಲೆ ಯಾರಿಗೂ ಧ್ಯಾಸ ಇಲ್ಲದಂತೆ ಪ್ರಪಂಚದಲ್ಲಿನ ಹೊರಗಿನ ವಿಷಯಗಳ ಮೇಲೆಯೇ ಪೂರ್ತಿ ಧ್ಯಾಸ ಇದೆ. ಶರೀರದಲ್ಲಿನ ನಿದ್ರೆ ಕತ್ತಲಿನಂತಹದು. ಮನುಷ್ಯನಿಗೆ ಏನೂ ತಿಳಿಯದಂತೆ ಮಾಡುತ್ತಿದೆ. ಹಾಗೆಯೇ ಶರೀರದಲ್ಲಿನ ಎಚ್ಚರ ಬೆಳಕಿನಂತಹುದು. ಮನುಷ್ಯನಿಗೆ ಎಲ್ಲವೂ ತಿಳಿಯುವಂತೆ ಇಂದ್ರಿಯಗಳಿಗೆಲ್ಲಾ ಬೆಳಕನ್ನು ಕೊಡುತ್ತಿದೆ. ಪ್ರತಿ ದಿನ ಶರೀರದಲ್ಲಿ ಉಪಯೋಗಪಡುವ ಎಚ್ಚರವನ್ನು ತಿಳಿಯದವರೆಗು ಮನುಷ್ಯ ಸಹಜವಾಗಿ ಸಾಯುತ್ತಾ ಹುಟ್ಟುತ್ತಿರುವನು.

ನಿದ್ರೆ, ಎಚ್ಚರ ರೂಪದಲ್ಲಿ ಪ್ರತಿ ಮನುಷ್ಯನ ಶರೀರದಲ್ಲಿರುವ ಎಚ್ಚರ, ಮರೆವುಗಳನ್ನು ಮನುಷ್ಯ ತಿಳಿಯದಂತಿದ್ದಾನೆ. ಪ್ರತಿ ದಿನ ಪ್ರತಿ ಮನುಷ್ಯ ಹೊಂದುವವು ಎರಡೇ ಎರಡು ಇವೆ. ಅವೇ ಎಚ್ಚರ, ಮರೆವು ಅಥವಾ ಜಾಗ್ರತೆ, ನಿದ್ರೆ. ಪ್ರಪಂಚದಲ್ಲಿ ಎಷ್ಟು ಬುದ್ಧಿವಂತನಾದರೂ ತಾನು ನಿದ್ರೆಯೊಳಗೆ ಹೋಗುವ ಸಮಯವನ್ನು ಗುರುತಿಸಲಾರನು. ಹಾಗೆಯೇ ತಾನು ಹೇಗೆ ಎಚ್ಚರದೊಳಗೆ ಬಂದಿರುವುದು ಗುರುತಿಸಲಾರನು. ನಿದ್ರೆಯೊಳಗೆ ತಾನು ಹೇಗೆ ಜಾರಿಕೊಳ್ಳುತ್ತಿದ್ದಾನೋ ತಿಳಿದವನಾಗಲಿ, ಹಾಗೆಯೇ ಎಚ್ಚರದೊಳಗೆ ಹೇಗೆ ಬಂದು ಎಚ್ಚರವನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದಾನೋ ತಿಳಿದವನಾಗಲಿ ಇಬ್ಬರು ಜ್ಞಾನ ತಿಳಿದ ಯೋಗಿಗಳೇ ಆಗುತ್ತಾರೆ. ಆದ್ದರಿಂದ ಒಂದು ಪದ್ಯದಲ್ಲಿ ವೇಮನಯೋಗಿ ನಿದ್ರೆಯನ್ನು ತಿಳಿದವನು ನಿಜಯೋಗಿ ಎಂದಿದ್ದಾನೆ. ಹಾಗೆಯೇ ಎಚ್ಚರ ತಿಳಿದವನು ಯೋಗಿ ಎಂದು ಕೂಡ ಹೇಳಿದ್ದಾನೆ. ಹಾಗೆಯೇ ಎಚ್ಚರ ಹೊಂದುವ ಜಗವನ್ನಾಗಲಿ, ಮರುವು ಹೊಂದುವ ಜಾಗವನ್ನಾಗಲಿ ತಿಳಿದವನು ನಿಜವಾಗಿ ದೈವವನ್ನು ತಿಳಿದವನಾಗುತ್ತಾನೆಂದು ಇಬ್ಬರನ್ನು ಉದ್ದೇಶಿಸಿ ಎಚ್ಚರ

ಮರೆವು ತಿಳಿದವನು ಬ್ರಹ್ಮಂಬು ಎಂದಿದ್ದಾನೆ. ಹಾಗೆಯೇ ಎಚ್ಚರವನ್ನು, ಮರೆವನ್ನು ತಿಳಿಯದವನು ಸಾಯುತ್ತಾ ಹುಟ್ಟುತ್ತಿರುವನೆಂದು ತಿಳಿಸುತ್ತಾ ಎಚ್ಚರ ತಿಳಿದ ಜೀವಿ ಎಷ್ಟು ಕಾಲವಾದರೂ ಸತ್ತು ಹುಟ್ಟುತ್ತಿರುವನು ಸಹಜವಾಗಿ ಎಂದಿದ್ದಾನೆ.

| | |
|---|---|
| **ಬ್ರಹ್ಮಗುಡ್ಡು ಯನೆಡಿ ಪಟ್ಟಣಂಬುಲೋಪಲ** | **ಬ್ರಹ್ಮ ಅಂಡವೆನ್ನುವ ಆ ಪುರದ ಒಳಗೆ** |
| **ಬ್ರಹ್ಮ ಮೆರುಗ ಲೇನಿ ಬಾಪಡೇಲ** | **ಬ್ರಹ್ಮವರಿಯದಂಥ ದ್ವಿಜನು ಏಕೆ** |
| **ತನ ಮನಂಬು ತೆಲಿಯ ದಾ ನೇಪೋ ಬ್ರಹ್ಮಂಬು** | **ತನ್ನ ಮನದೊಳರಿಯೆ ತಾನೆ ಆ ಬ್ರಹ್ಮವೈ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (90) |

**ಭಾವಾರ್ಥ :–** ನಿವಾಸಿಸುವುದು ಪಟ್ಟಣ ಎನ್ನುತ್ತೇವೆ. ತನ್ನೊಂದಿಗೆ ಎಷ್ಟೋ ಜನ ನಿವಾಸಿಸುವ ಪಟ್ಟಣದಲ್ಲಿ ಮುಖ್ಯವಾದವನನ್ನು ಗುರುತಿಸಲಾರದೆ ಹೋದರೇ ಅವನು ಆ ಊರಲ್ಲಿದ್ದರೂ ಇಲ್ಲದಿದ್ದರೂ ಒಂದೇ. ಹಾಗೆಯೇ ಬ್ರಾಹ್ಮಣಕುಲದಲ್ಲಿ ಹುಟ್ಟಿದ ಬ್ರಾಹ್ಮಣನು ಅದೇ ಕುಲವೊಂದರ ಹಿರಿಯನನ್ನು ಕುರಿತು ತಿಳಿಯದೆ ಹೋದರೆ ಅವನು ಬ್ರಾಹ್ಮಣನೇ ಅಲ್ಲ ಎನ್ನುತ್ತಾರೆ. ಅಂತಹವನು ಆ ಕುಲದವನೇ ಅಲ್ಲ ಎನ್ನಬಹುದು. ಆ ವಿಧವಾಗಿಯೇ ಪ್ರತಿ ಜೀವಿ ಶರೀರವೆನ್ನುವ ಪಟ್ಟಣದಲ್ಲಿ ನಿವಾಸಿಸುತ್ತಿದ್ದಾನೆ. ಆ ಜೀವಿಯೊಂದಿಗೆ ಶರೀರವೆನ್ನುವ ಪಟ್ಟಣದಲ್ಲಿ ಎಷ್ಟೋಜನ ಇದ್ದಾರೆ. ಆ ಶರೀರ ಪಟ್ಟಣವನ್ನೇ ಈ ಪದ್ಯದಲ್ಲಿ ಬ್ರಹ್ಮಅಂಡ ಪಟ್ಟಣವೆಂದು ಹೆಸರು ಇಟ್ಟಿದ್ದಾರೆ. ಬ್ರಹ್ಮಜ್ಞಾನ ತಿಳಿದವನನ್ನು ಬ್ರಾಹ್ಮಣನು ಎನ್ನುತ್ತಾರೆ. ಬ್ರಹ್ಮಗುಡ್ಡು ಪಟ್ಟಣದಲ್ಲಿ ಬ್ರಹ್ಮಯೆನ್ನುವ ದೇವರಿದ್ದಾನೆ. ಶರೀರದಲ್ಲಿ ಆತ್ಮಜ್ಞಾನ ತಿಳಿಯದವನು ಬ್ರಹ್ಮಜ್ಞಾನಿಯೇ ಅಲ್ಲ. ಅಂದರೆ ಬ್ರಾಹ್ಮಣನೇ ಅಲ್ಲ. ಶರೀರದಲ್ಲಿರುವ ಬ್ರಹ್ಮನನ್ನು ತಿಳಿಯಬೇಕೆಂದರೇ ಅದೇ ಶರೀರದಲ್ಲಿನ ಮನಸ್ಸು ಎನ್ನವುದನ್ನು ತಿಳಿಯಬೇಕು. ಶರೀರದಲ್ಲಿ ತನ್ನೊಂದಿಗೆ ನಿವಾಸಿಸುವ ಎಷ್ಟೋ ಜನರಲ್ಲಿ ಮನಸ್ಸು ಎನ್ನುವುದನ್ನು ತಿಳಿದರೇ, ಬ್ರಹ್ಮ ಎನ್ನುವವನ್ಯಾರೋ ಸುಲಭವಾಗಿ ತಿಳಿಯುತ್ತದೆ. ಮನಸ್ಸು ತಿಳಿದರೇ, ತನ್ನಹಾಗೆ ಇರುವ ಆತ್ಮವೇ ಶರೀರದಲ್ಲಿನ ದೇವರೆಂದು ತಿಳಿಯುತ್ತದೆ. ಆದ್ದರಿಂದ ತನ್ನ ಮನಸ್ಸನ್ನು ತಿಳಿದರೆ ಬ್ರಹ್ಮ ತಿಳಿಯುತ್ತದೆ ಎಂದಿದ್ದಾರೆ. ಆತ್ಮಶಕ್ತಿಯಿಂದ ಆವರಿಸಲ್ಪಟ್ಟು ಆ ಶಕ್ತಿಯೇ ಶರೀರ ಪರಿಧಿಯಾಗಿ ಇರುವುದು

ಆದ್ದರಿಂದ, ಶರೀರವನ್ನು ಬ್ರಹ್ಮಅಂಡ ಎಂದಿದ್ದಾರೆ. ಬ್ರಹ್ಮಜ್ಞಾನವನ್ನು ತಿಳಿದವನನ್ನೇ ಬ್ರಾಹ್ಮಣ ಎಂದಿದ್ದಾರೆ.

**ಗುರುವು ಚೆಪ್ಪು ವಿದ್ಯ ಗುರುನಕು ತೆಲುಸುನು**
**ಗುರುವು ಚೆಪ್ಪು ವಿದ್ಯ ಗುರುವು ಎರುಗು**
**ಗುರುವು ಮಹಿಮ ಪರಮ ಗುರುವುನಕು ದೆಲುಸುನು**
**ವಿಶ್ವದಾಭಿರಾಮ ವಿನುರ ವೇಮಾ.**

**ಗುರುವು ಹೇಳೋ ವಿದ್ಯೆ ಗುರುವಿಗೆ ತಿಳಿವುದು**
**ಗುರುವು ಹೇಳೋ ವಿದ್ಯೆ ಗುರುವು ಅರಿವ**
**ಗುರುವ ಮಹಿಮೆ ಪರಮ ಗುರುವಿಗೆ ತಿಳಿವನು**
**ವಿಶ್ವದಾಭಿರಾಮ ಕೇಳು ವೇಮಾ. (91)**

**ಭಾವಾರ್ಥ :–** ಗುರುವು ಶಿಷ್ಯರೆನ್ನುವವರನ್ನು ಹೊರಗಿನ ಪ್ರಪಂಚದಲ್ಲಿ ನೋಡುತ್ತಲೇ ಇರುತ್ತೇವೆ. ಆದರೆ ಶಾಸ್ತ್ರಬದ್ಧವಾಗಿ ಗುರುವು ಹೇಳುವ ವಾಕ್ಯಗಳು ಯಾರೂ ಹೇಳದಿರುವವಾಗಿ, ಎಲ್ಲಿಯೂ ಓದದಿರುವವವಾಗಿ ಇರಬಾರದೆನ್ನುವುದು ನಿಯಮ. ಗುರುವು ಯಾವಾಗಾದರೂ ಎಂಜಲು ವಿದ್ಯೆಯನ್ನು ಬೋಧಿಸುವುದಿಲ್ಲ. ಒಂದು ವೇಳೆ ಹಾಗೆ ಕೇಳಿರುವವಾಗಲಿ, ಓದಿರುವವಾಗಲಿ ಹೇಳಿದವನು ಕೇವಲ ಬೋಧಕನೇ ಹೊರತು ಗುರುವು ಅಲ್ಲ. ನಿಯಮದ ಪ್ರಕಾರ ಹೇಳಬೇಕೆಂದರೇ ಕೇಳದವನು, ಓದದವನು ಗುರುವಾದರೇ ಅವನು ಹೇಗೆ ಹೇಳಬಲ್ಲನೆಂದು ಪ್ರಶ್ನೆ ಬರಬಹುದು. ಶ್ರುತಿಯಿಂದಲ್ಲದೇ ಸ್ಮೃತಿಯಿಂದ ಹೇಳುವವನು ಗುರುವು. ಮೇಲ್ನೋಟಕ್ಕೆ ಗುರುವಾಗಿ ಒಬ್ಬ ವ್ಯಕ್ತಿ ಕಾಣಿಸುತ್ತಿದ್ದರೂ ಒಳಗೆ ಅವನ ಸ್ಮೃತಿ ಪಥದಲ್ಲಿ ಹುಟ್ಟಿದ ವಿಷಯಗಳು ಹೇಳುವವನು ನಿಜವಾಗಿಯೂ ಗುರುವು. ಅವು ನೇರವಾಗಿ ಆತ್ಮನಿಂದ ಹೊರಟು ಬರುವವೇ ಹೊರತು ಜೀವಾತ್ಮ ಹೇಳುವವು ಅಲ್ಲ. ಆ ಶರೀರದಲ್ಲಿನ ಜೀವಾತ್ಮನಿಗೆ ಕೂಡ ಅವು ಹೊಸದಾಗಿ ಕೇಳಿದಂತೇ ಇರುತ್ತದೆ. ಆದ್ದರಿಂದ ಶರೀರದಲ್ಲಿಯೇ ಗುರುವು ಆತ್ಮವಾಗಿ ಇದ್ದಾನೆಂದು ಹೇಳಬಹುದು. ಆತ್ಮ ತಿಳಿಸುವ ವಿದ್ಯೆ ಆತ್ಮಕ್ಕೇ ತಿಳಿದಿದೆ, ಜೀವಾತ್ಮಕ್ಕೆ ತಿಳಿದಿಲ್ಲ ಆದ್ದರಿಂದ ಗುರುವು ಹೇಳುವ ವಿದ್ಯೆ ಗುರುವಿಗೆ ತಿಳಿದಿದೆ ಎಂದಿದ್ದಾರೆ. ಆತ್ಮ ತಿಳಿಸಿದ ವಿದ್ಯೆ ನಂತರ ಎಷ್ಟು ಕಾಲಕ್ಕಾದರೂ ಅತ್ಮಕ್ಕೇ ತಿಳಿದಿರುತ್ತದೆ. ಆದ್ದರಿಂದ ಗುರುವು ಹೇಳುವ ವಿದ್ಯೆ ಗುರುವು ಅರಿತಿರುತ್ತಾನೆ ಎಂದಿದ್ದಾರೆ. ಆತ್ಮಕ್ಕಿರುವ ಮಹಿಮೆ ಪರಮಾತ್ಮನಿಗೇ ತಿಳಿದಿದೆ ಜೀವಾತ್ಮಗೆ

ಯಾವ ಮಾತ್ರ ತಿಳಿದಿಲ್ಲ. ಆತ್ಮ ಗುರುವು ಆದಾಗ ಪರಮಾತ್ಮ ಪರಮ ಗುರುವಾಗಿ ಶರೀರದಲ್ಲಿ ಇದ್ದಾನೆ. ಆದ್ದರಿಂದ ಗುರುವು ಮಹಿಮೆ ಪರಮ ಗುರುವಿಗೆ ತಿಳಿದಿದೆ ಎಂದಿದ್ದಾರೆಂದು ತಿಳಿದುಕೊಳ್ಳಬೇಕು.

| | |
|---|---|
| **ವಿತ್ತುಲೇನಿ ಯಟ್ಟಿ ವೃಕ್ಷಮೊಕಟಿ ಬುಟ್ಟೆ** | **ಬೀಜವಿಲ್ಲದಂಥ ವೃಕ್ಷವೊಂದು ಹುಟ್ಟಿ** |
| **ಫಲಮು ಪುವ್ವು ಮೊಗಡ ಪ್ರತಿಲೇದು** | **ಫಲವು ಹೂವು ಮೊದಲ ಪ್ರತಿಭೆಯಿಲ್ಲ** |
| **ಸ್ವಾದುಲೇದು ಚೂಡ ಸಾಪಾಟುನಕು ಲೆಸ್ಸ** | **ಸ್ವಾದವಿಲ್ಲ ನೋಡ ಸೇವಿಸಲು ಒಳಿತು** |
| **ದೀನಿ ಭಾವಮೇಮಿ ತೆಲ್ಪು ವೇಮಾ.** | **ಇದರ ಭವವೇನು ತಿಳಿಸು ವೇಮಾ. (92)** |

**ಭಾವಾರ್ಥ :–** ಭೂಮಿಮೇಲೆ ಹುಟ್ಟುವ ಪ್ರತಿಯೊಂದಕ್ಕೂ ಒಂದು ಬೀಜ ಇದ್ದೇ ಇರುತ್ತದೆ. ಎಲ್ಲದಕ್ಕೂ ಕರ್ಮ ಮೂಲವಾಗಿ ಇದೆ. ಕರ್ಮವಿಲ್ಲದ್ದು ಯಾವುದೂ ಇಲ್ಲ. ಕರ್ಮದಿಂದಲೇ ಎಲ್ಲ ಹುಟ್ಟುತ್ತಿವೆ ಮತ್ತು ಎಲ್ಲ ನಡೆಯುತ್ತಿವೆ. ಆದ್ದರಿಂದ ಕರ್ಮ ಮೂಲ ಮಿದಮ್ ಜಗತ್ ಎಂದಿದ್ದೇವೆ. ಕರ್ಮ ಮೂಲದಿಂದ ಏರ್ಪಡುವ ಪ್ರತಿಯೊಂದಕ್ಕು ಒಂದು ಆಕಾರ, ರುಚಿ, ವಾಸನೆ, ಬಣ್ಣ ಮುಂತಾದವುಗಳು ಇರುತ್ತವೆ. ಹಾಗೆ ಕರ್ಮದಿಂದ ಏರ್ಪಟ್ಟಿರುವ, ಜೀವವಿರುವ, ಜೀವವಿಲ್ಲದವುಗಳೆಲ್ಲವನ್ನೂ ಸೇರಿಸಿ ಪ್ರಕೃತಿ ಎಂದಿದ್ದಾರೆ. ಹೀಗೆ ಪ್ರಕೃತಿಯಲ್ಲಿನ ಅವುಗಳೆಲ್ಲವುಗಳಿಗು ಕರ್ಮ ಬೀಜದಂತೆ ಇರುವಾಗ ಅದಕ್ಕೆ ಅಂದರೆ ಪ್ರಕೃತಿಗೆ ವಿರುದ್ಧವಾಗಿರುವ ಪರಮಾತ್ಮ ಜ್ಞಾನಕ್ಕೆ ಮಾತ್ರ ಮೂಲ ಇಲ್ಲ. ಅದು ಕರ್ಮಕ್ಕೆ ಹುಟ್ಟುವುದು ಅಲ್ಲ. ಮರಕ್ಕೆ ಫಲ, ಹೂವು, ಎಲೆಗಳಿರುವಂತೆ ಜ್ಞಾನಕ್ಕೆ ಆಕಾರವೇ ಇಲ್ಲ. ಫಲಕ್ಕೆ ಕಾರಣವಾಗಿರುವ ಹೂವಾಗಲಿ, ಹೂವಿಗೆ ಕಾರಣವಾಗಿರುವ ವಾಸನೆಯಾಗಲಿ ಜ್ಞಾನಕ್ಕೆ ಇಲ್ಲ. ಆದ್ದರಿಂದಲೇ ಮೇಲಿನ ಪದ್ಯದಲ್ಲಿ ಬ್ರಹ್ಮಜ್ಞಾನವನ್ನು ಉದ್ದೇಶಿಸಿ ಬೀಜವಿಲ್ಲದಂತಹ ವೃಕ್ಷವೊಂದು ಹುಟ್ಟಿತು ಎಂದಿದ್ದಾರೆ. ಜ್ಞಾನಕ್ಕೆ ಅಂದ, ಆಕಾರ, ರುಚಿ, ವಾಸನೆ ಇಲ್ಲ ಆದ್ದರಿಂದ ಫಲ, ಹೂವು, ಪತ್ರಿ ಇಲ್ಲ ಸ್ವಾದ ಇಲ್ಲ ಎಂದಿದ್ದಾರೆ. ಸ್ವಾದ ಎಂದರೆ ವಾಸನೆ ಎಂದು ತಿಳಿಯಬೇಕು. ಜ್ಞಾನವನ್ನು ಯಾರಾದರೂ ತಿಳಿದುಕೊಂಡು ಆಚರಿಸಿ ಅದರ ಶಕ್ತಿಯನ್ನು ಹೊಂದಬಹುದು. ಅಂದರೆ ಯಾರಾದರೂ ಜ್ಞಾನಾನುಭವ ಹೊಂದಿ

ಜ್ಞಾನವನ್ನು ತನ್ನಲ್ಲಿ ಜೀರ್ಣಿಸಿಕೊಳ್ಳಬಹುದು. ಆದ್ದರಿಂದಲೇ ಮೇಲಿನ ಪದ್ಯದಲ್ಲಿ ನೋಡಿ ತಿನ್ನಲು ಒಳಿತು ಎಂದಿದ್ದಾರೆ. ಜ್ಞಾನವನ್ನು ಯಾರಾದರೂ ತಿನ್ನಬಹುದು ಎಂದರೆ ಹೊಂದಬಹುದು. ತಿಳಿದುಕೊಳ್ಳಬೇಕೆಂದುಕೊಳ್ಳುವವರಿಗೆ ಎಷ್ಟಾದರೂ ಲಭಿಸುತ್ತದೆ. ಆದ್ದರಿಂದ ತಿನ್ನಲು ಒಳಿತು ಎಂದಿದ್ದಾರೆ.

**ತಾತ ಗನ್ನ ತಲ್ಲಿ ತಮ ತಂಡ್ರಿನಿ ಗನು ತಲ್ಲಿ**
**ತನ್ನು ಗನ್ನ ತಲ್ಲಿ ತಲ್ಲಿ ತಲ್ಲಿ**
**ತಲ್ಲಿ ಶೂದ್ರುರಾಲು ತಾನೆಟ್ಲು ಬಾಪಡೋ**
**ವಿಶ್ವದಾಭಿರಾಮ ವಿನುರ ವೇಮಾ.**

**ತಾತನ ಹೆತ್ತ ತಾಯಿ ತನ್ನ ತಂದೆಯ ಹೆತ್ತ ತಾಯಿ**
**ತನ್ನ ಹೆತ್ತ ತಾಯಿ ತಾಯಿ ತಾಯಿ**
**ತಾಯಿ ಶೂದ್ರಳು ತಾನ್ಹೇಗೆ ಬ್ರಾಹ್ಮಣ**
**ವಿಶ್ವದಾಭಿರಾಮ ಕೇಳು ವೇಮಾ.** (93)

**ಭಾವಾರ್ಥ :–** ನಮ್ಮ ಶರೀರದಲ್ಲಿ ನಾವೇ ನಿವಾಸಮಾಡುತ್ತಿದ್ದೇವೆ. ಈದಿನ ಹೊರಗಿನ ಪ್ರಪಂಚದಲ್ಲಿ ಲಗ್ನವಾಗಿ ಹೋದ ಪ್ರತಿ ಮನುಷ್ಯ ತನ್ನ ಶರೀರದಲ್ಲಿನ ಎಷ್ಟೋ ಭಾಗಗಳಲ್ಲಿ ತಾನೂ ಸಹ ಒಂದು ಚಿಕ್ಕ ಭಾಗವಾಗಿದ್ದು ನಿವಾಸಿಸುತ್ತಾ, ಒಟ್ಟು ಶರೀರವೆಲ್ಲಾ ತಾನೇಯೆಂದು ಭಾವಿಸಿ ತಪ್ಪಾಗಿ ಅರ್ಥೈಸಿಕೊಂಡಿದ್ದಾನೆ. ತಾನು ಸ್ವಲ್ಪವಾಗಿದ್ದು ಎಷ್ಟೋ ಅಂದುಕೊಳ್ಳುವುದು ಬಹಳ ತಪ್ಪಲ್ಲವೆ! ಅದರಿಂದ ಎಷ್ಟೋ ಅನರ್ಥ ನಡೆಯುತ್ತಿದ್ದರೂ ತಿಳಿಯದವನಾಗಿ ಮನುಷ್ಯ ಜೀವನವನ್ನು ಸಾಗಿಸುತ್ತಿದ್ದಾನೆ. ಮನುಷ್ಯ ತನ್ನ ಶರೀರದಲ್ಲಿ ಎಷ್ಟು ಚಿಕ್ಕ ಭಾಗವಾಗಿ ಎಲ್ಲಿ ನಿವಾಸಿಸುತ್ತಿದ್ದಾನೋ ಸ್ವಲ್ಪ ಆಲೋಚಿಸಿ ನೋಡಿದಂತಾದರೇ ಮನುಷ್ಯನ ಶರೀರದಲ್ಲಿ ದೇಹ ಕನಿಷ್ಟ ಏಳು ಗೇಣುಗಳಿದ್ದರೆ ತಲೆ ಮಾತ್ರ ಒಂದು ಗೇಣು ಉದ್ದ ಮಾತ್ರ ಇರುತ್ತದೆ. ಗೇಣು ಎಂದರೆ ಮೂರು ನಾಬೊಟ್ಟುಗಳಿರುತ್ತವೆ. ತನ್ನ ಕೈ ನಾಲ್ಕು ಬೆರಳುಗಳ ಅಗಲವನ್ನು ನಾಬೊಟ್ಟು ಎನ್ನುತ್ತಿದ್ದೇವೆ. ಮುಖದಲ್ಲಿರುವ ಮೂರು ನಾಬೊಟ್ಟುಗಳಲ್ಲಿ ಕೆಳಗಿನವು ಎರಡು ಹೋದಾಗ ಮೇಲಿನ ನಾಬೊಟ್ಟು ಸ್ಥಳದಲ್ಲಿ ಹಣೆಯ ಭಾಗದಲ್ಲಿ ಶಿರಸ್ಸಿನಲ್ಲಿ ನಾಲ್ಕು ಚಕ್ರಗಳು ಇವೆ. ಅದರಲ್ಲಿ ಕೆಳಗಿನ ಕಿರುಬೆರಳಿಗೆ ಸಮಾನವಾಗಿರುವ ಸ್ಥಳದಲ್ಲಿ ಕೆಳಗಿನ ಚಕ್ರವಾದ ಗುಣಚಕ್ರ ಇದೆ. ಅದು ಮೂರು ಭಾಗಗಳಾಗಿದೆ. ಆ ಮೂರು

ಭಾಗಗಳಲ್ಲಿ ತಾನು (ಜೀವಿಯು) ಒಂದು ಭಾಗದಲ್ಲಿ ಮಾತ್ರ ಇದ್ದಾನೆ. ಸುಮಾರು ಮೂರು ಅಂಗುಲಗಳ ಗುಣಚಕ್ರದಲ್ಲಿ ಒಂದು ಅಂಗುಲ ಭಾಗವಾದ ಒಂದು ಭಾಗದಲ್ಲಿ ಮಾತ್ರ ಜೀವಿಯು ಇದ್ದಾನೆ. ಅದೂ ಅಂಗುಲವೆಲ್ಲವೂ ಇಲ್ಲ. ಅಂಗುಲವನ್ನು 108 ಭಾಗಗಳಾಗಿ ವಿಭಜಿಸಿದರೇ ಒಂದು ಭಾಗದಲ್ಲಿ ಎಷ್ಟು ಸ್ಥಳವಿರುತ್ತದೋ ಅಷ್ಟು ವಿಸ್ತೀರ್ಣ ಮಾತ್ರ ಜೀವಿಯು ಇದ್ದಾನೆ. ಆದ್ದರಿಂದಲೇ ಕೆಲವರು ಮಾತುಗಳ ಸಂದರ್ಭದಲ್ಲಿ ಮತ್ತೊಬ್ಬನನ್ನು ಕುರಿತು ಮಾತನಾಡುತ್ತಾ ನೀನು ಇರುವೆಯಷ್ಟಿಲ್ಲ ಎನ್ನುತ್ತಿರುತ್ತಾರೆ. ಹಾಗೆಯೇ ನೀನು ರವೆಯಷ್ಟು ಇಲ್ಲ ಎಂದು ಕೂಡ ಅನ್ನುತ್ತಿರುತ್ತಾರೆ. ಈ ಮಾತು ನಮ್ಮ ಬಾಯಿಂದ ಬರುತ್ತಿದ್ದರೂ ಅನ್ನುವವನಾಗಲೀ, ಕೇಳುವವನಾಗಲೀ ಶರೀರದಲ್ಲಿ ತಾನೆಷ್ಟು ಪರಿಮಾಣದಲ್ಲಿ ಇದ್ದೇವೆಂದು ಯೋಚಿಸಲಿಲ್ಲ. ಮನುಷ್ಯ ಶರೀರದಲ್ಲಿ ನಿವಾಸಿಸುತ್ತಾ ನಾನು ಮನುಷ್ಯನು ಎಂದುಕೊಳ್ಳುವ ಜೀವಾತ್ಮ, ಶರೀರವೆಲ್ಲವೂ ನಾನೇ ಎಂದುಕೊಳ್ಳುವ ಜೀವಾತ್ಮ ಶರೀರದಲ್ಲಿ ಎಷ್ಟು ಚಿಕ್ಕವನೋ ಗ್ರಹಿಸಿದ್ದೀರಾ! ಈ ಅಳತೆಯು ಶರೀರವೊಂದರ ಉದ್ದದಲ್ಲಿ ಮಾತ್ರವೇ. ಶರೀರದಲ್ಲಿ ಅಗಲವನ್ನು ಪರಿಗಣನೆಯೊಳಗೆ ತೆಗೆದು ಕೊಳ್ಳಲಿಲ್ಲ. ಗಣಿತದ ಪ್ರಕಾರ ಶರೀರ ಉದ್ದ ಅಂಗುಲಗಳಲ್ಲಿ ಸುಮಾರು 8 ಗೇಣುಗಳು.

**ಒಂದು ಗೇಣಿಗೆ ಮೂರು ನಾಬೊಟ್ಟುಗಳ ಪ್ರಕಾರ = 8x 3=24 ನಾಬೊಟ್ಟುಗಳು.**

**ಒಂದು ನಾಬೊಟ್ಟಿಗೆ ನಾಲ್ಕು ಬೆರಳುಗಳ ಪ್ರಕಾರ = 24x4=96 ಬೆರಳುಗಳು.**

**ಒಂದು ಬೆರಳಿಗೆ ಸುಮಾರು ಮೂರು ಅಂಗುಲಗಳ ಪ್ರಕಾರ =96x3=288 ಅಂಗುಲಗಳು.**

**ಒಂದು ಅಂಗುಲಕ್ಕೆ 108 ಭಾಗಗಳ ಪ್ರಕಾರ = 288+108=31104 ಭಾಗಗಳು.**

ಶರೀರ ಉದ್ದದಲ್ಲಿ ಕೇವಲ 31,104 ರಷ್ಟು ಎಷ್ಟು ಇರುತ್ತದೋ ಅಷ್ಟು ಪರಿಮಾಣ ಮಾತ್ರವಿರುವ ಜೀವಾತ್ಮ ಶರೀರವೆಲ್ಲಾ ನಾನೆಂದುಕೊಳ್ಳುವುದು

ತಪ್ಪಲ್ಲವೆ! ಸ್ವಲ್ಪ ಆಲೋಚಿಸಿದರೆ ಜೀವಿಯು ಶರೀರದಲ್ಲಿ ಶಿರಸ್ಸಿನಲ್ಲಿ ಬಹು ಸ್ವಲ್ಪ ಸ್ಥಳದಲ್ಲಿ ಗುಣಚಕ್ರದಲ್ಲಿ ನಿವಾಸಿಸುತ್ತಿದ್ದಾನೆಂದು ತಿಳಿಯುತ್ತಿದೆ. ಜೀವಿಯಿರುವ ಗುಣಚಕ್ರವನ್ನು ವಿವರಿಸಿ ನೋಡಿಕೊಂಡರೆ ತಾಮಸ, ರಾಜಸ, ಸಾತ್ತ್ವಿಕವೆನ್ನುವ ಮೂರು ಭಾಗಗಳಾಗಿ ಗುಣಚಕ್ರ ಇದೆ. ಈ ಮೂರು ಭಾಗಗಳು ಪ್ರಕೃತಿ ಜನಿತವಾಗಿರುವವೆಂದು ಗೀತೆಯಲ್ಲಿ ಕೂಡ ಹೇಳಲ್ಪಟ್ಟಿವೆ. ಪ್ರಕೃತಿಯನ್ನು ತಾಯಿಯೆಂದು ಕೂಡ ಅದೇ ಗೀತೆಯಲ್ಲಿ ಹೇಳಿದ್ದಾನೆ. ಪ್ರಕೃತಿಯಲ್ಲಿನ ಭಾಗಗಳಾಗಿ ಇರುವ ಗುಣಗಳನ್ನು ಕೂಡ ತಾಯಿಯೆಂದೇ ಹೇಳಬಹುದು. ಗುಣಗಳನ್ನು ಕೂಡ ಪ್ರಕೃತಿ ಅಥವಾ ಮಾಯೆ ಎನ್ನುತ್ತಿದ್ದೇವೆ. ಆದ್ದರಿಂದ ಅವುಗಳನ್ನು ಸಹ ತಾಯಿ ಎನ್ನುವ ಹೆಸರಿನೊಂದಿಗೆ ಉಚ್ಛರಿಸುತ್ತಿದ್ದೇವೆ. ಆದ್ದರಿಂದಲೇ ಈ ಪದ್ಯದಲ್ಲಿ ಸಾತ್ತ್ವಿಕವನ್ನು, ರಾಜಸವನ್ನು, ತಾಮಸವನ್ನು ಬೇರೆಬೇರೆಯಾಗಿ ತಾಯಿ, ತಾಯಿ, ತಾಯಿ ಎಂದು ಮೂರು ಸಲ ಉಚ್ಛರಿಸಿ ಹೇಳಿದ್ದಾರೆ. ತಾನಾಗಲಿ, ತನ್ನ ತಂದೆಯಾಗಲಿ, ತನ್ನ ತಾತನಾಗಲಿ ಎಲ್ಲರೂ ಮೂರು ಗುಣಗಳಲ್ಲಿಯೇ ಸಿಲುಕಿಕೊಂಡು ಇದ್ದಾರೆ ಆದ್ದರಿಂದ ತಾತ ಹೆತ್ತ ತಾಯಿ, ತಮ್ಮ ತಂದೆಯನ್ನು ಹೆತ್ತ ತಾಯಿ, ತನ್ನನ್ನು ಹೆತ್ತ ತಾಯಿ ಎಂದು ವಿವರವಾಗಿ ಹೇಳಿದ್ದಾರೆ. ಮೂರು ಗುಣಗಳು ಬೇರೆ, ಬ್ರಹ್ಮಜ್ಞಾನ ಬೇರೆ. ಗುಣಗಳು ಶೂದ್ರತ್ವವನ್ನು ಹೊಂದಿವೆ, ಬ್ರಹ್ಮಜ್ಞಾನ ಬ್ರಾಹ್ಮಣತ್ವ ಹೊಂದಿರುವುದು. ಆದ್ದರಿಂದ ತಾಯಿ, ತಾಯಿ, ತಾಯಿ ಶೂದ್ರಳು ಎಂದಿದ್ದಾರೆ. ಮೂರು ಗುಣಗಳು ಬಿಡದವನು ಎಂದಿಗೂ ಶೂದ್ರನೇ. ಗುಣಗಳನ್ನು ಬಿಟ್ಟು ಅವುಗಳಿಗೆ ಅತೀತನಾಗಿ ಬ್ರಹ್ಮಜ್ಞಾನ ಹೊಂದಿರುವವನು ಬ್ರಾಹ್ಮಣನು. ಹಾಗಲ್ಲದೆ ಗುಣಗಳಿಗೆ ಅತೀತ ನಾಗದೇ ಅವುಗಳಲ್ಲೇ ಸಿಲುಕೊಂಡಿರುವವನು ಬ್ರಾಹ್ಮಣನು ಹೇಗಾಗುತ್ತಾನೆ. ಆದ್ದರಿಂದ ಗುಣಗಳಲ್ಲೇ ಹುಟ್ಟಿ ಬೆಳೆಯುವವನನ್ನು ಕುರಿತು ತಾಯಿ ಶೂದ್ರಳು ತಾನು ಹೇಗೆ ಬ್ರಾಹ್ಮಣನೋ ಎಂದು ಮೇಲಿನ ಪದ್ಯದಲ್ಲಿ ಹೇಳಿದ್ದಾರೆ.

**ಪುಟ್ಟುವಾರು ಲೆವರು ಪುಟ್ಟುಕುಂದರೆವರು**
**ಪುಟ್ಟಿ ಪುಟ್ಟನಟ್ಟಿ ಪುರುಷುಲೆವರು**
**ಪುಟ್ಟಿ ಪುಟ್ಟನಿಯಟು ಚೋಧಿಂಚಿ ಜೂಡರಾ**
**ವಿಶ್ವದಾಭಿರಾಮ ವಿನುರ ವೇಮಾ.**

**ಹುಟ್ಟುವವರು ಯಾರು ಹುಟ್ಟದವರ್ಯಾರು**
**ಹುಟ್ಟಿ ಹುಟ್ಟದಂತಿರುವ ಪುರುಷರ್ಯಾರು**
**ಹುಟ್ಟಿ ಹುಟ್ಟದಂತಿರುವವನ ಭೇದಿಸಿ ನೋಡಯಾ**
**ವಿಶ್ವದಾಭಿರಾಮ ಕೇಳು ವೇಮಾ.** (94)

**ಭಾವಾರ್ಥ :–** ಪ್ರಪಂಚದಲ್ಲಿ ಅಂಡಜ, ಪಿಂಡಜ, ಉದ್ಭಿಜಗಳೆನ್ನುವ ಜೀವರಾಶಿಗಳೆಷ್ಟೋ ಹುಟ್ಟುತ್ತಿವೆ. ಅವುಗಳಲ್ಲಿ ಜೀವಿಯು, ಆತ್ಮ ಎರಡು ಹುಟ್ಟುತ್ತಿವೆ. ಪ್ರಪಂಚದಲ್ಲಿ ಪಾಪಪುಣ್ಯ ಕರ್ಮಗಳನ್ನು ಸಂಪಾದಿಸಿಕೊಂಡ ಪ್ರತಿ ಜೀವಿ ಹುಟ್ಟಬೇಕಾಗಿದೆ. ಹುಟ್ಟಿದ ಪ್ರತಿ ಜೀವಿಯೊಂದಿಗೆ ಆತ್ಮ ಜೊತೆಯಾಗಿ ಇರಬೇಕಾಗಿದೆ. ಹೀಗೆ ಹುಟ್ಟುವವರು ಜೀವಾತ್ಮ ಆತ್ಮ ಎಂದು ತಿಳಿಯುತ್ತಿದೆ. ಈ ಪದ್ಯದಲ್ಲಿ ಮೊದಲು ಈ ವಿಷಯವನ್ನೇ ಪ್ರಸ್ತಾಪಿಸುತ್ತಾ ಹುಟ್ಟುವವರ್ಯಾರು ಎಂದಿದ್ದಾರೆ. ನಂತರ ಹುಟ್ಟದವರ್ಯಾರು ಎಂದು ಸಹ ಅಂದಿದ್ದಾರೆ. ಹುಟ್ಟದವರ್ಯಾರೆಂದು ವಿಚಾರಿಸಿ ನೋಡಿದರೆ ಕರ್ಮ ಶೇಷ ಇಲ್ಲದಂತೆ ಮುಗಿದುಹೋದವರು, ಸಾವು ಹುಟ್ಟುಗಳು ಇಲ್ಲದ ಪರಮಾತ್ಮನಲ್ಲಿ ಐಕ್ಯವಾಗಿ ಹೋಗಿ ಪರಮಾತ್ಮವಾಗಿ ಇರುತ್ತಾರೆ. ಪರಮಾತ್ಮ ಹುಟ್ಟದವನೆಂದು ತಿಳಿಯಬೇಕು. ಪರಮಾತ್ಮ ಅವಶ್ಯವಿದ್ದಾಗ ಹುಟ್ಟುವವನು. ಹುಟ್ಟುವಿಕೆಯೇ ಇಲ್ಲದ ಪರಮಾತ್ಮ ಪ್ರಪಂಚವೆಲ್ಲಾ ವಿಶಾಲವಾಗಿ ವ್ಯಾಪಿಸಿದ್ದು ಕರ್ಮಾಧೀನದಲ್ಲಿ ಇಲ್ಲದವನಾಗಿದ್ದು ಹುಟ್ಟದವನಾದರೂ, ತನಗೆ ಅವಶ್ಯವಿದ್ದಾಗ ಹುಟ್ಟಿ ಶರೀರದೊಂದಿಗೆ ಇರಬಲ್ಲನು. ಅದೇ ಸಮಯದಲ್ಲಿ ಎಲ್ಲೆಡೆ ವ್ಯಾಪಿಸಿ ಇರಬಲ್ಲನು. ಎಲ್ಲೆಡೆ ವ್ಯಾಪಿಸಿದ್ದು ಒಂದು ಶರೀರದಲ್ಲಿ ಕೂಡ ಜನ್ಮ ತೆಗೆದುಕೊಳ್ಳುವವನು ಪರಮಾತ್ಮ ಆದ್ದರಿಂದ ಆತನನ್ನು ಉದ್ದೇಶಿಸಿ ಹುಟ್ಟಿ ಹುಟ್ಟದವರು ಎಂದಿದ್ದಾರೆ. ಆಕಾರದೊಂದಿಗೆ ಭಗವಂತನಾಗಿ ಹುಟ್ಟಿದ ಪರಮಾತ್ಮನನ್ನು, ಮುಖ್ಯವಾಗಿ ತಿಳಿಯಬೇಕು. ಆದ್ದರಿಂದಲೇ ಹುಟ್ಟಿ ಹುಟ್ಟದ ಕಡೆ ಶೋಧಿಸಿ ನೋಡಿರೋ ಎಂದಿದ್ದಾರೆ. ಮನುಷ್ಯ ಯೋಗಸಾಧನೆಗಳ ಮೂಲಕ ಹುಟ್ಟದ ಪರಮಾತ್ಮನನ್ನಾದರೂ ತಿಳಿಯಬೇಕು ಅಥವಾ ಭಕ್ತಿ ಮೂಲಕ ಭಗವಂತನನ್ನಾದರೂ ತಿಳಿಯಬೇಕೆಂದು ಮೇಲಿನ ಪದ್ಯವೊಂದರ ಸಾರಾಂಶ.

| | |
|---|---|
| **ಪಂಚಾಕ್ಷರಿ ಬೀಜಂಬುಲ** | **ಪಂಚಾಕ್ಷರಿ ಬೀಜಗಳ ವಿವರ** |
| **ನಂಚಿತಮುಗ ನೆರುಗು ನಾತಡಖಿಲಜ್ಞುಂಡೈ** | **ಸ್ಪಷ್ಟವಾಗಿ ತಿಳಿದವನೆ ಅಖಿಲಜ್ಞನಾಗಿ** |
| **ವಂಚನ ಮೆರುಗಕ ಕುವಲಯ** | **ವಂಚನೆ ತಿಳಿಯದೆ ಕರ್ಮಯೋಗಿಯಾಗಿ** |
| **ಸಂಚಾರಮು ಚೇಯು ನತಡು ಶಂಭುಡು ವೇಮಾ** | **ಸಂಚಾರ ಮಾಡುವಾತನು ಶಂಭುವು ವೇಮಾ.** |

**(95)**

**ಭಾವಾರ್ಥ :–** ಪಂಚಾಕ್ಷರಿ ಎಂದರೆ ಓಂ ನಂಃಶಿವಾಯ ಎನ್ನುವ ಆರು ಅಕ್ಷರಗಳೆಂದು ಎಲ್ಲರಿಗೂ ತಿಳಿದಿದೆ ಆರು ಅಕ್ಷರಗಳನ್ನು ಐದಕ್ಷರಗಳ ಹೆಸರಿನೊಂದಿಗೆ ಪಂಚಾಕ್ಷರಿ ಎನ್ನುವುದೇನೆಂದು ಬಹಳ ಜನರಿಗೆ ಪ್ರಶ್ನೆ ಬರಬಲ್ಲದು. ಅಕ್ಷರ ಎಂದರೆ ನಾಶವಿಲ್ಲದ್ದೆಂದು ಒಂದು ಅರ್ಥ. ಹಾಗೆಯೇ ಭಾಷೆಯಲ್ಲಿನ ಒಂದು ನಿಯಮಿತ ಗುರುತು ಎಂದು ಕೂಡ ಅರ್ಥವಿದೆ. ಭಾಷೆಯಲ್ಲಿನ ಗುರುತುಗಳಾದರೇ ಆರು ಇವೆ. ನಾಶವಿಲ್ಲದ್ದು ಎನ್ನುವ ಅರ್ಥದಿಂದಾದರೆ ಒಂದೇ ಇದೆ. ಓಂ ನಮಃಶಿವಾಯ ಎನ್ನುವ ಪದದಲ್ಲಿ ಐದು ಕ್ಷರಗಳು ಇವೆ ಒಂದು ಅಕ್ಷರವು ಇದೆ. ಕ್ಷರ ಎಂದರೆ ನಾಶನ ಇರುವವೆಂದು ಅರ್ಥ. ಹಾಗೆಯೇ ಅಕ್ಷರ ಎಂದರೆ ನಾಶ ಇಲ್ಲದ್ದೆಂದು ಅರ್ಥವಿದೆ. ಐದು ಕ್ಷರಗಳಿಗೆ ನಾಶವಾಗದ್ದು ಒಂದು ಇದೆ. ಅದನ್ನೇ ಅಕ್ಷರ ಎನ್ನುತ್ತಿದ್ದೇವೆ. ಪಂಚಾಕ್ಷರಿ ಯಲ್ಲಿ ಒಂದು ಅಕ್ಷರ, ಐದು ಕ್ಷರಗಳು ಇವೆ. ಅವುಗಳನ್ನೇ ಓಂ ನಮಃಶಿವಾಯ ಎನ್ನುತ್ತಿದ್ದೇವೆ. ವಾಸ್ತವವಾಗಿ ಜಗತಿಯಲ್ಲಿ ಐದು ನಾಶವಿರುವವು ಇವೆ. ಅವೇ ಆಕಾಶ, ಗಾಳಿ, ಅಗ್ನಿ, ನೀರು ಭೂಮಿ. ಅವುಗಳನ್ನೇ ಪಂಚಭೂತಗಳೆಂದು ಕೂಡ ಅನ್ನುತ್ತಾರೆ. ಈ ಪಂಚಭೂತಗಳು ಜಗತಿಯಲ್ಲಿ ಎಲ್ಲವನ್ನು ಬದಲಾವಣೆ ಮಾಡುತ್ತಾ ಕೊನೆಗೆ ನಾಶ ಮಾಡಬಲ್ಲವು. ಪಂಚಭೂತಗಳಿಗೆ ಬದಲಾವಣೆ ಆಗದಿರುವುದು ಅವುಗಳಿಗೆ ನಾಶವಾಗದಿರುವುದು ಒಂದೇ ಒಂದು ಆತ್ಮ ಇದೆ. ಅದುವೇ ಅಕ್ಷರ. ಕ್ಷರಗಳಾದ ಪಂಚಭೂಗಳಿಗೆ ಅಕ್ಷರವಾದ ಆತ್ಮಕ್ಕೆ ನಿಯಮಿತ ಗುರುತುಗಳನ್ನು ಇಟ್ಟಿದ್ದಾರೆ. ಅವುಗಳನ್ನೇ ಬೀಜಗಳೆಂದಿದ್ದಾರೆ. ಅವುಗಳ ವಿವರದೊಳಗೆ ಹೋದರೇ ಆಕಾಶಕ್ಕೆ 'ನ' ಎನ್ನುವ ಗುರುತು, ಗಾಳಿಗೆ

'ಮಃ' ಎನ್ನುವ ಗುರುತು ಕೊಟ್ಟಿದ್ದಾರೆ. ಹಾಗೆಯೇ ಅಗ್ನಿಗೆ 'ಶಿ' ಎಂದೂ, ನೀರಿಗೆ 'ವಾ' ಎಂದೂ ಭೂಮಿಗೆ 'ಯ' ಎಂದೂ ಗುರುತುಗಳನ್ನಿಟ್ಟು ಅಕ್ಷರವಾದ ಆತ್ಮಕ್ಕೆ 'ಓಂ' ನ್ನು ಮೊದಲು ಇಟ್ಟು ನಾಶವಾಗುವ ಉಳಿದವುಗಳನ್ನು ನಂತರ ಇಡುವುದರಲ್ಲಿ ಒಟ್ಟು 'ಓಂ ನಮಃಶಿವಾಯ' ಎನ್ನುವ ವಾಕ್ಯ ತಯಾರಾಗಿದೆ. ಈ ವಾಕ್ಯ 'ಓಂ' ಎನ್ನುವ ಒಂದು ಪದವಾಗಿಯು, 'ನಮಃ' ಎನ್ನುವ ಎರಡನೆಯ ಪದವಾಗಿಯು, 'ಶಿವಾಯ' ಎನ್ನುವ ಮೂರನೆ ಪದವಾಗಿಯೂ ಇದೆ. ನಾಶವಾಗದ 'ಓಂ' ಒಂದು ಪದವಾಗಿಯು, ಕೈಗೆ ಸಿಗದ ಆಕಾಶ, ಗಾಳಿ 'ನಮಃ' ಎನ್ನುವ ಪದವಾಗಿಯು, ಕೈಗೆ ಸಿಗುವ ಅಗ್ನಿ, ನೀರು, ಭೂಮಿ ಒಂದು ಪದವಾಗಿಯು ವಿಭಜಿಸಿ 'ಓಂ ನಮಃಶಿವಾಯ' ಎಂದಿದ್ದಾರೆ. 'ಓಂ ನಮಃಶಿವಾಯ' ಎನ್ನುವ ಪಂಚಾಕ್ಷರೀ ಬೀಜಗಳ ವಿವರ ವಿಶದವಾಗಿ ತಿಳಿದವನಾಗಿ ಪಂಚಭೂತಗಳಿಂದ ಏನು ನಡೆಯುತ್ತಿದೆಯೆಂದು ಮತ್ತು ಆತ್ಮದಿಂದ ಏನು ನಡೆಯುತ್ತಿದೆಯೆಂದು ತಿಳಿದವನು ಪ್ರಪಂಚ ಕಾರ್ಯಗಳಲ್ಲಿನ ಕರ್ಮವನ್ನು ಅಂಟದೆ, ಕರ್ಮದಲ್ಲಿ ಸಿಲುಕಿಕೊಳ್ಳದೆ ಪ್ರಪಂಚ ಕಾರ್ಯಗಳು ಕರ್ಮಯೋಗದ ಪ್ರಕಾರ ಮಾಡುತ್ತಿರುತ್ತಾನೆ. ಪಂಚಾಕ್ಷರಿ ವಿವರ ತಿಳಿದು, ಹಾಗೆಯೇ ಪಂಚಭೂತಗಳ ವಿವರ ತಿಳಿದು ಭೂಮಂಡಲದಲ್ಲಿ ಸಂಚರಿಸುವವನು ನಿಜವಾಗಿಯೂ ಶಂಭುನೊಂದಿಗೆ ಸಮಾನವಾಗಿ ಕರ್ಮ ಅಂಟದವನಾಗಿ ಇರುತ್ತಾನೆ. ಆದ್ದರಿಂದಲೇ ಮೇಲಿನ ಪದ್ಯದಲ್ಲಿ ಅಜ್ಞುಂಡನಾಗಿ ವಂಚನೆ ಅರಿಯದೆ ಕುವಲಯ ಸಂಚಾರ ಮಾಡುವಾತನು ಶಂಭುವು ವೇಮಾ ಎಂದಿದ್ದಾರೆ.

| | |
|---|---|
| **ರೂಪು ಪೇರು ರೆಂಡು ರೂಢಿತೋ ಗಲಿಗಿನ** | **ರೂಪ ಹೆಸರು ಎರಡು ರೂಢಿಯಲ್ಲಿದ್ದು** |
| **ಪೇರು ರೂಪು ಕ್ರಿಯನು ಪೆನಸಿಯುಂಡು** | **ಹೆಸರು ರೂಪ ಕ್ರಿಯೆಯನ್ನು ಬೆಸೆದಿರುವುದು** |
| **ನಾಮ ರೂಪಮುಲನು ನಾಶನಮೊಂದುಟ ಮೇಲು** | **ನಾಮ ರೂಪಗಳನ್ನು ನಾಶವೊಂದುವುದು ಮೇಲು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳುವೇಮಾ.** (96) |

**ಭಾವಾರ್ಥ :–** ಪ್ರಪಂಚದಲ್ಲಿ ಯಾವುದಾದರೂ ಒಂದು ರೂಪವಿದೆಯೆಂದರೇ ಅದಕ್ಕೆ ತಪ್ಪದೆ ಹೆಸರು ಇರುತ್ತದೆ. ಹಾಗೆಯೇ ಒಂದಕ್ಕೆ ಹೆಸರಿದೆಯೆಂದರೇ ಅದಕ್ಕೆ ತಪ್ಪದೆ ರೂಪವಿರುತ್ತದೆ. ಹೀಗೆ ಯಾವುದಾದರಾಗಲಿ ರೂಪವಿದ್ದರೇ ಹೆಸರು, ಹೆಸರಿದ್ದರೇ ರೂಪ ತಪ್ಪದೆ ಹೊಂದಿವೆ. ವಸ್ತುಗಳಿಗೇ ಅಲ್ಲದೆ, ಮನುಷ್ಯರಿಗಾಗಲಿ, ದೇವತೆಗಳಿಗಾಗಲಿ ಎಲ್ಲರಿಗೂ ಆಕಾರಗಳು ಹೆಸರುಗಳು ಇವೆ. ಕೊನೆಗೆ ಆತ್ಮ, ಜೀವಾತ್ಮಗಳೆನ್ನುವವುಗಳಿಗೆ ಕೂಡ ರೂಪಗಳು ಇವೆ. ಹಾಗೆಯೇ ಆತ್ಮಯೆಂದು, ಜೀವಾತ್ಮಯೆಂದು ಹೆಸರುಗಳು ಇವೆ. ಹೀಗೆ ರೂಪ, ಹೆಸರು ಹೊಂದಿದ ಎಲ್ಲವೂ ಯಾವುದೋ ಒಂದು ಕೆಲಸವನ್ನು ಹೊಂದಿರುತ್ತವೆ. ಪ್ರಪಂಚದಲ್ಲಿ ಹೆಸರು ಹೊಂದಿದ ಎಲ್ಲವುಗಳಿಗು, ಹಾಗೆಯೇ ರೂಪಹೊಂದಿದ ಎಲ್ಲವುಗಳಿಗು ತಪ್ಪದೆ ಕ್ರಿಯೆ ಮುಡಿಹಾಕಲ್ಪಟ್ಟಿದೆ. ಹೆಸರಿಲ್ಲದ ಪರಮಾತ್ಮನಿಗೆ ಮಾತ್ರ ಯಾವ ಕೆಲಸ ಇಲ್ಲವೆಂದು ತಿಳಿಯಬೇಕು. ಒಬ್ಬ ಪುರುಷೋತ್ತಮನಾದ ಅಥವಾ ಪರಮಾತ್ಮನಾದವನಿಗೆ ಹೊರತು ಪ್ರಪಂಚದಲ್ಲಿ ಎಲ್ಲರಿಗೂ ರೂಪ, ನಾಮ, ಕ್ರಿಯೆಗಳು ತಪ್ಪುವುದಿಲ್ಲ. ರೂಪ ನಾಮ ಕ್ರಿಯೆಗಳ ಮೂಲಕ ಜೀವವಿಲ್ಲದವುಗಳಿಗೆ ಹೊರತು ಜೀವವಿರುವವುಗಳಿಗೆ ಕರ್ಮ ಏರ್ಪಟ್ಟು ಅದರ ಫಲಿತವಾಗಿ ಎಷ್ಟೋ ರೂಪ ನಾಮ ಕ್ರಿಯೆಗಳಿಗೆ ಗುರಿಯಾಗಬೇಕಾಗಿದೆ. ಆದ್ದರಿಂದ ಮೇಲಿನ ಪದ್ಯದಲ್ಲಿ ರೂಪ ಹೆಸರು ಕ್ರಿಯೆಗಳನ್ನು ಬಿಟ್ಟು ಇರು ಎಂದಿದ್ದಾರೆ. ಯಾವ ರೂಪವಾಗಲಿ, ಯಾವ ನಾಮವಾಗಲಿ ಹೊಂದಬಾರ ದೆಂದರೇ ರೂಪ, ನಾಮ, ಕ್ರಿಯೆಗಳು ಇಲ್ಲದ ಪರಮಾತ್ಮನನ್ನೇ ಆರಾಧಿಸಬೇಕು. ಹಾಗೆ ಆರಾಧಿಸುವುದಕ್ಕೇ ಬ್ರಹ್ಮಯೋಗ (ಜ್ಞಾನಯೋಗ) ಅಥವಾ ಕರ್ಮಯೋಗ (ರಾಜಯೋಗ) ಅಥವಾ ಭಕ್ತಿ ಯೋಗಗಳೆನ್ನುವವುಗಳನ್ನು ಆಶ್ರಯಿಸಬೇ ಕಾಗಿರುತ್ತದೆ. ಈ ವಿಷಯವಾಗಿ ನಾಮರೂಪಗಳನ್ನು ನಾಶಹೊಂದುವುದು ಮೇಲೆಂದು ಕೂಡ ಈ ಪದ್ಯದಲ್ಲಿ ಹೇಳಿದ್ದಾರೆ. ಮುಖ್ಯವಾಗಿ ನಾಮ ರೂಪ ಕ್ರಿಯೆ ರಹಿತನು ಆಗಬೇಕೆಂದರೇ ನೀನು ನಾಮ, ರೂಪ, ಕ್ರಿಯಾ ರಹಿತನಾದ ಪುರುಷರಲ್ಲಿ ಉತ್ತಮನಾದ ಪುರುಷೋತ್ತಮನನ್ನು, ಆತ್ಮಗಿಂತ ಪರವಾಗಿ ಇರುವ (ಬೇರೆ ಯಾಗಿರುವ) ಪರಮಾತ್ಮನನ್ನು ಆರಾಧಿಸಬೇಕು.

| | |
|---|---|
| **చెట్టునందు బుట్టి చెలరేగు కాయలు** | **ವೃಕ್ಷದಲ್ಲಿ ಹುಟ್ಟಿ ಸಿಡಿದೇಳುವ ಕಾಯಿಗಳು** |
| **దనరు కాంతి తోడ దవిలి పండు** | **ಅಗ್ನಿ ಕಾಂತಿಯೊಡನೆ ಪ್ರಕಾಶ ಹಣ್ಣು** |
| **పండు దినుచు కాయ వర్ణము తెలియుడి** | **ಹಣ್ಣು ತಿನ್ನುತ್ತಾ ಕಾಯಿ ವರ್ಣವನು ತಿಳಿಯಿರಿ** |
| **విశ్వదాభిరామ వినుర వేమా.** | **ವಿಶ್ವದಾಭಿರಾಮ ಕೇಳು ವೇಮಾ. (97)** |

**ಭಾವಾರ್ಥ :–** ಭಗವದ್ಗೀತೆಯಲ್ಲಿ ಶರೀರವನ್ನು ಅಶ್ವರ್ಥವೃಕ್ಷವಾಗಿ ವರ್ಣಿಸಿದ್ದಾರೆ. ಮಾನವ ಶರೀರವೆನ್ನುವ ವೃಕ್ಷದಲ್ಲಿ ಕರ್ಮಗಳ ಫಲಗಳು ಅನೇಕವಾಗಿ ಹುಟ್ಟುತ್ತಿರುತ್ತವೆ. ಶರೀರದಲ್ಲಿ ಅನೇಕ ವಿಧ ಕರ್ಮಗಳ ಕಾಯಿಗಳೊಂದಿಗೆ ಜ್ಞಾನ ಎನ್ನುವ ಕಾಯಿಕೂಡ ಹುಟ್ಟುತ್ತದೆ. ಜ್ಞಾನವೆನ್ನುವ ಫಲ, ಕರ್ಮ ಫಲಗಳಿಗೆ ವಿರುದ್ಧವಾದುದಾಗಿ ಇರುತ್ತದೆ. ಜ್ಞಾನಫಲ ಅಗ್ನಿಯಂಥದ್ದು. ಕರ್ಮಫಲಗಳು ಕಟ್ಟಿಗೆಯಂತಹವು. ಸಹಜವಾಗಿ ಎಲ್ಲರೂ ಕರ್ಮ ಫಲಗಳನ್ನೇ ತಿನ್ನುತ್ತಾ ಕಾಲ ಕಳೆಯುತ್ತಿರುವರು. ಅಂದರೆ ಕರ್ಮಗಳನ್ನಾಚರಿಸುತ್ತಾ ಕಾಲ ಕಳೆಯುತ್ತಿರುವರು. ಬಹಳ ಜನ ಜ್ಞಾನಫಲವನ್ನು ಮುಟ್ಟುವುದಿಲ್ಲ. ಅದರ ಬೆಲೆಯೇ ಬಹಳ ಜನರಿಗೆ ತಿಳಿದಿಲ್ಲ. ಮಾನವರಲ್ಲಿ ಅಪರೂಪವಾಗಿ ಯಾರೋ ಒಬ್ಬನು ಜ್ಞಾನಫಲ ವೊಂದರ ರುಚಿ ನೋಡಲು ಶುರು ಮಾಡುತ್ತಾನೆ. ಹಾಗೆ ಜ್ಞಾನ ತಿಳಿಯುತ್ತಿದ್ದಂತೆ ಅದರ ಬೆಲೆ ತಿಳಿಯಲು ಶುರುಮಾಡುತ್ತಾನೆ. ಹಾಗೆ ಬೆಲೆ ತಿಳಿದವನು ಜ್ಞಾನಮಾರ್ಗವನ್ನು ಬಿಡುವುದಿಲ್ಲ. ಈ ಪದ್ಯದಲ್ಲಿ ಮನುಷ್ಯ ಶರೀರದಲ್ಲೇ ಕರ್ಮಗಳಿವೆಯೆಂದು, ಅವು ವಿಜೃಂಭಿಸಿ ಅನುಭವಿಸುವಂತೆ ಮಾಡುತ್ತಿವೆಯೆನ್ನುವ ವಿಷಯವನ್ನು ತಿಳಿಸುತ್ತಾ ಮರದಲ್ಲಿ ಹುಟ್ಟಿ ವಿಜೃಂಭಿಸುವ ಕಾಯಿಗಳು ಎಂದಿದ್ದಾರೆ. ಶರೀರದಲ್ಲೇ ಜ್ಞಾನ ಕೂಡ ಉದ್ಭವಿಸುತ್ತಿದೆ. ಅಷ್ಟೇ ಅಲ್ಲದೆ ಅದು ಅಗ್ನಿಯಾಗಿ ಕಾಂತಿ ಹೊಂದಿದೆ. ಆದ್ದರಿಂದ ದನರು ಕಾಂತಿ ಜೊತೆಯಾಗಿ ಹಣ್ಣು ಎಂದಿದ್ದಾರೆ. ಜ್ಞಾನ ತಿಳಿಯುತ್ತಿದ್ದಂತೆ ಅದರ ಪ್ರತ್ಯೇಕತೆ ಮತ್ತು ಬೆಲೆ ತಿಳಿಯುತ್ತದೆ. ಆದ್ದರಿಂದ ಹಣ್ಣು ತಿನ್ನುತ್ತಾ ಕಾಯವರ್ಣ ತಿಳಿಯಿರಿ ಎಂದಿದ್ದಾರೆ. ಒಟ್ಟಾರೆ ಈ ಪದ್ಯದಲ್ಲಿ ಶರೀರದಲ್ಲೇ ಕರ್ಮವನ್ನು, ಅದನ್ನು ಸುಡುವ ಜ್ಞಾನಾಗ್ನಿಯನ್ನು ಎರಡನ್ನೂ ಮಾನವನು ಹೊಂದಬಹುದೆಂದು ಹೇಳಿದ್ದಾರೆ. ಶರೀರದೊಳಗೆ ಅಲ್ಲದೆ ಹೊರಗೆ ಜ್ಞಾನಾನುಭವ ಸಿಗುವುದಿಲ್ಲವೆಂದು ತಿಳಿಯಬೇಕು.

| | |
|---|---|
| **ಮೂಲ ಮೆವ್ವರನುಚು ಮುಗ್ಗುರಿ ಲೋಪಲ** | **ಮೂಲ ಯಾರೆನ್ನುತ ಮೂವರೊಳಗೆ** |
| **ಮೂಲ ಮೆರುಗ ಲೇರು ಮೂಢ ಜನುಲು** | **ಮೂಲ ತಿಳಿಯಲಾರರು ಮೂಢ ಜನರು** |
| **ಮೂಲಮು ಮುಗ್ಗುರಿಕಿ ಮುಖ್ಯಮ್ಯೆಯುಂಡುರಾ** | **ಮೂಲ ಮೂವರಿಗೆ ಮುಖ್ಯವಾಗಿರುವುದೋ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (98)** |

**ಭಾವಾರ್ಥ :–** ತ್ರೈತಸಿದ್ಧಾಂತದ ಪ್ರಕಾರ ಆತ್ಮಗಳು ಮೂರು ಇವೆಯೆನ್ನುವುದು ಸತ್ಯ. ಅದರಲ್ಲಿ ಒಂದು ಜೀವಾತ್ಮವಾದಾಗ, ಎರಡನೆಯದು ಆತ್ಮ, ಮೂರನೆಯದು ಪರಮಾತ್ಮ. ಜೀವಾತ್ಮ ಮತ್ತು ಆತ್ಮಗಳು ಶರೀರ ಧರಿಸಿದವುಗಳಲ್ಲಿರುವಾಗ ಮೂರನೆಯದು, ಆತ್ಮಗಿಂತ ಬೇರೆಯಾಗಿರುವುದಾದ ಪರಮಾತ್ಮ ಶರೀರಗಳೊಳಗು ಹೊರಗು ಎಲ್ಲೆಡೆ ಆವರಿಸಿ ಇದೆ. ಶರೀರಗಳಲ್ಲಿರುವ ಆತ್ಮಗಳಿಗು, ಜೀವಾತ್ಮಗಳಿಗು ಆಕಾರವಿರುವಾಗ ಹೆಸರೇ ಇಲ್ಲದ ಉತ್ತಮ ಪುರುಷನಾದ ಪುರುಷೋತ್ತಮನೆನ್ನುವ ಮೂರನೆಯದಕ್ಕೆ ಆಕಾರವೇ ಇಲ್ಲ. ಆಕಾರವಿಲ್ಲದ, ಆಕಾರವಿರುವ ಮತ್ತು ಹೆಸರಿಲ್ಲದ, ಹೆಸರಿರುವ ಮೂರು ಆತ್ಮಗಳಲ್ಲಿ ಯಾರು ಮುಖ್ಯವಾದವರೋ ಜ್ಞಾನ ತಿಳಿಯದ ಬಹಳ ಜನರಿಗೆ ತಿಳಿದಿಲ್ಲ. ಆದ್ದರಿಂದ ಈ ಪದ್ಯದಲ್ಲಿ ಮೂಲ ಯಾರೆನ್ನುತ್ತಾ ಮೂವ್ವರೊಳಗೆ ಮೂಲ ಅರಿಯಲಾರರು ಮೂಢಜನರು ಎಂದಿದ್ದಾರೆ. ಜೀವಾತ್ಮ, ಆತ್ಮ, ಪರಮಾತ್ಮರಲ್ಲಿ ಯಾರು ಮೂಲ ಎನ್ನುವ ವಿಷಯ ಜ್ಞಾನ ತಿಳಿಯುವ ಎಲ್ಲರು ತಿಳಿಯಬೇಕಾದ ವಿಷಯ. ಜೀವಾತ್ಮ, ಆತ್ಮಗಳು ಹುಟ್ಟಿರುವುದು ಪರಮಾತ್ಮನಿಂದಲೇ. ನಂತರ ಐಕ್ಯವಾಗುವುದು ಕೂಡ ಪರಮಾತ್ಮನಲ್ಲೇ ಆದ್ದರಿಂದ ಎಲ್ಲರಿಗೂ ಮೂಲ ಮೂರನೆ ಪುರುಷನಾದ ಪರಮಾತ್ಮ.

ಪ್ರಪಂಚದಲ್ಲಿ ಹುಟ್ಟಿದ ಪ್ರತಿ ಶರೀರ ಜೀವಾತ್ಮ, ಆತ್ಮ, ಪರಮಾತ್ಮರೆನ್ನುವ ಮೂವರಿಂದ ಆವರಿಸಲ್ಪಟ್ಟಿದೆ. ಶರೀರವನ್ನು ಧರಿಸಿದ ಪ್ರತಿ ಜೀವಿ ಸಾತ್ತ್ವಿಕ, ರಾಜಸ, ತಾಮಸಗಳೆನ್ನುವ ಗುಣಗಳಲ್ಲಿ ನಿವಾಸಿಸುತ್ತಿದ್ದಾನೆ. ಆದ್ದರಿಂದ ಜೀವಿಗಳನ್ನು ಅವರು ನಿವಾಸಿಸುವ ಗುಣಭಾಗಗಳನ್ನು ಅನುಸರಿಸಿ ಸಾತ್ತ್ವಿಕರು, ರಾಜಸರು, ತಾಮಸರು ಎನ್ನುವ ಮೂರು ವರ್ಗಗಳಾಗಿ ವಿಭಜಿಸಿದ್ದೇವೆ.

ಸಾತ್ತ್ವಿಕರಿಗಾಗಲಿ, ರಾಜಸರಿಗಾಗಲಿ, ತಾಮಸರಿಗಾಗಲಿ ಮೂಲವಾದ ಪರಮಾತ್ಮನೇ ಮುಖ್ಯಪುರುಷನು. ಮೂವರು ಕೊನೆಗೆ ಮೂರನೆ ಪರಮಾತ್ಮನಲ್ಲಿ ಬೆರೆಯಬೇಕಾಗಿದ್ದೇ. ಆದ್ದರಿಂದ ಈ ಪದ್ಯದಲ್ಲಿ ಮೂಲ ಮೂವರಿಗೆ ಮೂಲವಾಗಿ ಇರು ಎಂದಿದ್ದಾರೆ. ಮೂರು ಗುಣಗಳಲ್ಲಿರುವ ಯಾರಿಗಾದರೂ ಕೊನೆಗೆ ಪ್ರಯಾಣ ಗಮ್ಯವು ಪರಮಾತ್ಮನೇಯೆಂದು ಇದರಲ್ಲಿನ ಸಾರಾಂಶವೆಂದು ತಿಳಿಯ ಬೇಕು.

| | |
|---|---|
| **ಕಾಲ್ಲಮುಂದರೇರು ಕಡತೇರ ನೀದಕ** | **ಕಾಲು ಮುಂದೆ ನದಿಯ ದಡಕೆ ಈಜದೆ** |
| **ಮುಗ್ಗುರು ಮುಗುಡ್ರಾಲ್ಲು ಮುನಿಗಿನಾರು** | **ಮೂವರು ತ್ರಿಮೂರ್ತಿಗಳು ಮುಳುಗಿಹರು** |
| **ನರುಡು ಈದೆ ನನಗ ನಗುಬಾಟು ಕಾದಯಾ** | **ನರನು ಈಜದನೆಂದರೆ ನಗೆಗೇಡು ಅಲ್ಲವೇ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (99) |

**ಭಾವಾರ್ಥ :–** ಪ್ರಪಂಚದಲ್ಲಿ ಪ್ರತಿ ಮನುಷ್ಯನಿಗೂ ಮಾಯೆ ಎನ್ನುವುದು ಪ್ರತಿ ಬಂಧಕವಾಗಿ ಇದೆ. ಪ್ರತಿ ಮನುಷ್ಯನ ನಡುವಳಿಕೆ ಮಾಯೆ ಮೇಲೆಯೇ ಆಧಾರಪಟ್ಟಿದೆ. ಸಾತ್ತ್ವಿಕ, ರಾಜಸ, ತಾಮಸ ಎನ್ನುವ ಮೂರು ಗುಣಗಳೇ ಮಾಯೆಯಾಗಿ ಇವೆಯೆಂದು ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿದೆ. ಕೆಲವರು ಹಿರಿಯರು ಮಾಯೆಯನ್ನು ಸಮುದ್ರದೊಂದಿಗೆ ಸಮಾನವಾಗಿ ಹೋಲಿಸಿ ಹೇಳಿದ್ದಾರೆ. ಮಾಯಾಸಮುದ್ರ ಈಜುವುದು ಬಹಳ ಕಷ್ಟವೆಂದಿದ್ದಾರೆ. ಹಾಗೆಯೇ ಈ ಪದ್ಯದಲ್ಲಿ ಮಾಯೆಯನ್ನು ಒಂದು ನದಿಯೊಂದಿಗೆ ಸಮಾನವಾಗಿ ಹೋಲಿಸಿ ಹೇಳಿದ್ದಾರೆ. ಶರೀರವನ್ನು ಧರಿಸಿದ ಪ್ರತಿ ಮನುಷ್ಯ ಮಾಯೆ ಎನ್ನುವ ಗುಣಗಳಿಂದಲೇ ನಡೆಯಬೇಕಾಗಿದೆ. ಶರೀರವನ್ನು ಧರಿಸಿದ ವಿಷ್ಣು, ಈಶ್ವರ, ಬ್ರಹ್ಮ ಸಹಿತ ಮಾಯೆ ಗುಣಗಳನ್ನು ಜಯಿಸಲಾರದೆ ಹೋಗಿದ್ದಾರೆ. ಎಲ್ಲರಿಗೂ ಅಡ್ಡವಾಗಿರುವ ಮಾಯೆಯನ್ನು ದಾಟಲಾರರು ಎಂದು ಈ ಪದ್ಯದಲ್ಲಿ ಹೇಳುತ್ತಾ, ತ್ರಿಮೂರ್ತಿಗಳು ಕೂಡ ಈ ಮಾಯೆಯನ್ನು ಕೊನೆಯವರೆಗು ಈಜಲಾರದೆ ಮುಳುಗಿ ಹೋಗಿದ್ದಾರೆಂದು ದಾಟಲಾರದೆ ಕೊನೆವರೆಗು ಈಜಲಾರದೆ ಮೂವರು

ಮುಳುಗಿ ಹೋಗಿದ್ದಾರೆ ಎಂದಿದ್ದಾರೆ. ಎಷ್ಟೋ ದೊಡ್ಡವರಾದ ವಿಷ್ಣು, ಈಶ್ವರ, ಬ್ರಹ್ಮರೇ ಮಾಯೆಯನ್ನು ಜಯಿಸಲಾರದೆ ಹೋದರೇ ಸಾಧಾರಣ ಮಾನವನು ಜಯಿಸುವುದು ಬಹಳ ಕಷ್ಟ. ಸಾಧಾರಣ ಮನುಷ್ಯ ಮಾಯೆಯನ್ನು ದಾಟಿದ್ದಾನೆನ್ನುವುದು ನಾಚಿಕೆಗೇಡೆಂದು ವೇಮನ ಅಂದಿದ್ದಾನೆ. ಇದೇ ವಿಷಯವೇ ಗೀತೆಯಲ್ಲಿ ಕೂಡ ಮಾಯೆಯನ್ನು ಜಯಿಸುವುದು ದುಸ್ಸಾಧ್ಯ ಎಂದಿದ್ದಾರೆ. ಇಷ್ಟು ಜನ ದೊಡ್ಡದಾಗಿ ಹೇಳಿದ ಮಾಯೆಯನ್ನು ದಾಟಬೇಕೆಂದರೆ ಸಂಪೂರ್ಣ ಜ್ಞಾನ ತಿಳಿಯಬೇಕು. ಎಷ್ಟು ದೊಡ್ಡ ಸಮುದ್ರವನ್ನಾಗಲಿ ಚಿಕ್ಕ ಹಡಗಿನಿಂದ ದಾಟಬಹುದೆನ್ನುವ ಸೂತ್ರದ ಪ್ರಕಾರ ಎಷ್ಟೋ ದುಸ್ಸಾಧ್ಯವಾದ ಮಾಯಾ ಸಮುದ್ರವನ್ನು, ಜ್ಞಾನವೆನ್ನುವ ಹಡಗಿನಿಂದ ದಾಟಬಹುದೆಂದು ಹಿರಿಯರು ತಿಳಿಸಿದ್ದಾರೆ. ಮನುಷ್ಯರಾಗಲಿ, ತ್ರಿಮೂರ್ತಿಗಳಾಗಲಿ ಜ್ಞಾನ ಇಲ್ಲದೆ ಹೋದರೇ ಮಾಯೆಯನ್ನು ಜಯಿಸಲಾರ ರೆಂದು, ಆತ್ಮಜ್ಞಾನ ತಿಳಿದವನು ಸುಲಭವಾಗಿ ಮಾಯೆಯನ್ನು ಜಯಿಸಬಲ್ಲನೆಂದು ಹಿರಿಯರು ತಿಳಿಸಿದ್ದಾರೆ.

| | |
|---|---|
| **ಹಂಸ ಮಾನಸೋದಕ ಮಂಟಕದಿರಿಗಿನ** | **ಹಂಸ ಮಾನಸ ಜಲ ಹತ್ತದಂತೆ ತಿರುಗಿದ** |
| **ಯಟ್ಲು ಕರ್ಮಚಯಮು ನಂಟಕುಂಡ** | **ಹಾಗೆ ಕರ್ಮವು ಅಂಟದಂತೆ** |
| **ಯೋಗಿ ತಿರುಗು ಸಕಲ ಭೋಗಂಬುಲ ತೋಡನು** | **ಯೋಗಿ ತಿರುಗು ಸಕಲ ಭೋಗದ ಜೊತೆಗೆ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (100)** |

**ಭಾವಾರ್ಥ :–** ಹಂಸ ಎನ್ನುವ ಪಕ್ಷಿಗಳು ಹೆಚ್ಚಾಗಿ ಮಾನಸಸರೋವರವೆನ್ನುವ ಒಂದು ಸರಸ್ಸಿನಲ್ಲಿ ತಿರುಗುತ್ತಿರುತ್ತವೆ. ನೀರಿನಲ್ಲಿ ತಿರುಗುವ ಆ ಪಕ್ಷಿಗಳಿಗೆ ತೇವ ಅಂಟುವುದಿಲ್ಲ. ಅದೇ ವಿಧವಾಗಿ ತಾವರೆ ಎಲೆಯನ್ನು ಕೂಡ ತೇವ ಅಂಟುವುದಿಲ್ಲ. ನೀರಿನಲ್ಲಿ ಇದ್ದರೂ ಇವುಗಳಿಗೆ ತೇವ ಹೇಗೆ ಅಂಟುವುದಿಲ್ಲವೋ ಅದೇ ವಿಧವಾಗಿ ಕೆಲವರು ಕರ್ಮ ಕಾರ್ಯಗಳು ಮಾಡುತ್ತಿದ್ದರೂ ಕರ್ಮ ಅಂಟುವುದಿಲ್ಲವೆಂದು ಗೀತೆಯಲ್ಲಿ ಭಗವಂತನು ಹೇಳಿದ್ದಾನೆ. ಹಂಸ ಎನ್ನುವ ಪಕ್ಷಿಗು, ತಾವರೆ ಎಲೆಗು ನೀರಂಟದಂತೆ ಇರುವುದಕ್ಕೆ ಅವುಗಳಲ್ಲೇನೋ ಪ್ರತ್ಯೇಕತೆ ಇರುತ್ತದೆ. ಎಲ್ಲಾ ಪಕ್ಷಿಗಳಿಗಾಗಲಿ, ಎಲ್ಲ ಎಲೆಗಳಿಗಾಗಲಿ ತೇವ ಅಂಟುತ್ತಿದ್ದರೂ

ಪ್ರತ್ಯೇಕಿಸಿ ಹಂಸಕ್ಕು, ತಾವರೆ ಎಲೆಗು ನೀರಂಟುತ್ತಿಲ್ಲ. ಅದೇ ವಿಧವಾಗಿ ಕರ್ಮಗಳನ್ನಾಚರಿಸುವ ಮನುಷ್ಯರೆಲ್ಲರಿಗು ಕರ್ಮ ಅಂಟುತ್ತಿದ್ದರೂ, ಯೋಗಿ ಎನ್ನುವಾತನಿಗೆ ಮಾತ್ರ ಕರ್ಮ ಅಂಟುತ್ತಿಲ್ಲ. ಸಾಧಾರಣ ಮನುಜನಿಗೆ ಕರ್ಮ ಯಾವ ವಿಧವಾಗಿ ಅಂಟುತ್ತಿದೆ, ಯೋಗಿ ಎನ್ನುವ ವ್ಯಕ್ತಿಗೆ ಏಕೆ ಅಂಟುತ್ತಿಲ್ಲ ಎಂದು ಯೋಚಿಸಿದರೇ ಸಾಧಾರಣ ವ್ಯಕ್ತಿಗು ಯೋಗಿಗು ಒಂದೇ ಒಂದು ವ್ಯತ್ಯಾಸ ಇದೆ. ಸಾಧಾರಣ ವ್ಯಕ್ತಿಯಲ್ಲಿ ಅಹಮ್ ಎನ್ನುವ ಭಾಗ ಕೆಲಸ ಮಾಡುತ್ತಿರುವಾಗ, ಯೋಗಿ ಶರೀರದಲ್ಲಿ ಅಹಮ್ ಯಾವ ಮಾತ್ರ ಕೆಲಸ ಮಾಡುತ್ತಿಲ್ಲ. ಶರೀರದಲ್ಲಿ ಜೀವಿಯೊಂದಿಗೆ ಆತ್ಮ ಬಿಟ್ಟು ಇಪ್ಪತ್ನಾಲ್ಕು ಭಾಗಗಳು ಕೆಲಸ ಮಾಡುತ್ತಿವೆ. ಒಂದು ಕಾರ್ಯ ನಡೆಯುವುದಕ್ಕೆ ಅಹಮ್ ಬಿಟ್ಟು ಇಪ್ಪತ್ಮೂರು ಭಾಗಗಳು ಕೆಲಸ ಮಾಡುತ್ತಿವೆ. ಕಾರ್ಯಾ ಚರಣೆಯಲ್ಲಿ ಪಾಲ್ಗೊಳ್ಳದ ಅಹಮ್ ಮಾತ್ರ ಎಲ್ಲ ಶರೀರ ಭಾಗಗಳು ಕೆಲಸವನ್ನು ನೀನೇ ಮಾಡಿದ್ದೀಯೆಂದು ಜೀವಿಗೆ ಬೋಧಿಸುತ್ತಿರುವುದರಿಂದ ಸಾಧಾರಣ ವ್ಯಕ್ತಿ, ಅಹಮ್ ಮಾತು ಕೇಳಿ ಕಾರ್ಯವನ್ನು ನಾನೇ ಮಾಡಿದ್ದೇನೆಂದುಕೊಳ್ಳುವುದರಿಂದ ಕರ್ಮ ಅಂಟುತ್ತಿದೆ. ಯೋಗಿ ಶರೀರದಲ್ಲಿಯೂ ಸಹ ಇಪ್ಪತ್ಮೂರು ಶರೀರಭಾಗಗಳು ಕೆಲಸ ಮಾಡುತ್ತಿರುತ್ತವೆ. ಆದರೆ ಅಹಮ್ ನಿತ್ಯಕೃತ್ಯವಾದ, ಜೀವಿಗೆ ಬೋಧಿಸುವುದೆನ್ನುವ ಕೆಲಸ ಮಾತ್ರ ಯೋಗಿ ಶರೀರದಲ್ಲಿ ನಡೆಯುತ್ತಿಲ್ಲ. ಅಹಮ್ ತನ್ನ ಕೆಲಸದ ಪ್ರಕಾರ ನೀನೇ ಮಾಡಿದ್ದೀಯೆಂದು ಯೋಗಿಗೆ ಹೇಳಿದರೂ ಯೋಗಿ ಕೇಳುವಿದಿಲ್ಲ. ಆದ್ದರಿಂದ ಅಹಮ್ ವೊಂದರ ಕೆಲಸ ಯೋಗಿ ಶರೀರದಲ್ಲಿ ನಡೆಯುತ್ತಿಲ್ಲ. ಆದ್ದರಿಂದ ಯೋಗಿಯಾದವನು ಎಲ್ಲ ಬೋಗಗಳೊಂದಿಗೆ ಎಲ್ಲ ಕಾರ್ಯಗಳನ್ನು ಮಾಡುತ್ತಾ, ಕರ್ಮ ಅಂಟದೆ ತಿರುಗುತ್ತಿರುವನು. ಆದ್ದರಿಂದ ಈ ಪದ್ಯದಲ್ಲಿ ಕರ್ಮಅಂಟದಂತೆ ಯೋಗಿ ಸಕಲ ಭೋಗಗಳಲ್ಲಿ ತಿರುಗುತ್ತಿರುವನು ಎಂದಿದ್ದಾರೆ. ಕರ್ಮ ಅಂಟದಂತೆ ಎಲ್ಲ ಕಾರ್ಯಗಳು ಮಾಡುತ್ತಾ ಹೋಗುವುದೇ ಮುಖ್ಯವಾದ ಜ್ಞಾನವೆಂದು ಭಗವದ್ಗೀತೆ ಕೂಡ ಬೋಧಿಸಿದೆ. ಭಗವಂತನು ಬೋಧಿಸಿದ ಆ ವಿಧಾನವನ್ನು ಎಲ್ಲರು ತಿಳಿದು ಆಚರಿಸುತ್ತಾರೆಂದು ಕೋರುತ್ತಿದ್ದೇವೆ.

| | |
|---|---|
| **ಕಾಲು ಚೆಯ್ಯಿಲೇದು ಕಂಚುಕಂಬು ಗಲದು** | **ಕಾಲು ಕೈಯಿಲ್ಲ ಕಂಚಿನಂತಿಹುದು** |
| **ಕೊಮ್ಮು ಲೇದು ಯುರಿಕಿ ಚಿಮ್ಮು ವೇಗ** | **ಕೊಂಬು ಇಲ್ಲ ಇರಿಯುವುದು ವೇಗ** |
| **ಗರಿಡಿ ಲೇಕ ಜಂಪು ಗಡುಪೆದ್ದಚೋದ್ಯಮೋ** | **ಗರಡಿ ಇಲ್ಲದೆ ಸಾಯಿಸುವುದು ಬಹು ವಿಪರ್ಯಾಸ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (101)** |

**ಭಾವಾರ್ಥ :–** ಈ ಪದ್ಯ ಕರ್ಮವನ್ನು ಕುರಿತು ಹೇಳಿರುವುದೇಯೆಂದು ಹೇಳಬಹುದು. ಕರ್ಮ ಯಾರ ಕಣ್ಣಿಗೂ ಕಾಣಿಸುವುದಲ್ಲ. ಸ್ಥೂಲಾಕಾರವಿಲ್ಲದ್ದು ಕರ್ಮ ಆದ್ದರಿಂದ ಅದಕ್ಕೆ ಕಾಲು ಕೈ ಇಲ್ಲೆಂದಿದ್ದಾರೆ. ಕರ್ಮ ಮನೋಭಾವನೆಗೆ ತೊಲಗುವುದಲ್ಲ. ಅನುಭವಿಸುವುದಕ್ಕೆ ನನ್ನ ಕೈಲಾಗುವುದಿಲ್ಲ ಎಂದರೂ ತೊಲಗುವುದು ಅಲ್ಲ. ಆಚರಣೆಯಲ್ಲಿ ಬಹಳ ಗಟ್ಟಿ. ಆದ್ದರಿಂದ ಕಂಚಿನಷ್ಟು ಗಟ್ಟಿ ಇರುವುದೆಂದಿದ್ದಾರೆ. ಕರ್ಮ ಅನೇಕ ವಿಧಗಳಾಗಿ ಇದ್ದು ಅನೇಕ ವಿಧ ಬಾಧೆಗಳು ಹೊಂದಿಸುತ್ತಿರುತ್ತದೆ. ಹರಿತವಾದ ಕತ್ತಿಗಳಿಂದ ಕೆತ್ತಿಸಬಲ್ಲದು. ಚೂಪಾದ ಕೊಂಬುಗಳಿರುವ ಎತ್ತುಗಳಿಂದ ಇರಿಯುವಂತೆ ಮಾಡಬಲ್ಲದು. ಮೇಲ್ನೋಟಕ್ಕೆ ಕಾಣಿಸುವುದು ಎತ್ತಾದರೂ, ಕತ್ತಿ ಆದರೂ ಹಿಂದೆ ನಡೆಸುವುದು ಕರ್ಮ ಆದ್ದರಿಂದ ಕೊಂಬು ಇಲ್ಲ ಆದರೆ ಇರಿದು ಹಾಕಬಲ್ಲದು ಎಂದಿದ್ದಾರೆ. ಸ್ಥೂಲವಲ್ಲದ ಕರ್ಮಕ್ಕೆ ಕಾಲು, ಕೈಯ್ಯಾಗಲಿ, ಕೊಂಬುಗಳಾಗಲಿ ಇಲ್ಲ ಹಾಗೆಯೇ ಗರಿಡಿ ಸಾಧನೆ ಮಾಡಿ ಧೃಡ ಶರೀರವನ್ನು ಬೆಳಸಿದ ಬಲ ಇರುವುದು ಅಲ್ಲ. ಆದರೂ ಜೀವಿಗಳನ್ನು ದೊಡ್ಡ ಬಲವನ್ನುಪಯೋಗಿಸಿ ಸಾಯಿಸುತ್ತಿದೆ. ನೂರು ಸಾವಿರ ಮಂದಿಯನ್ನಾದರೂ ಬಲವಂತವಾಗಿ ಒಂದು ನಿಮಿಷದಲ್ಲಿ ಸಾಯಿಸುತ್ತಿದೆ. ಉದಾಹರಣೆಗೆ ಭೂಕಂಪರೂಪದಲ್ಲಿ ಭಾರವಿರುವ ವಸ್ತುಗಳನ್ನು, ಕಲ್ಲನ್ನು ಮೇಲಕ್ಕೆ ಎಸೆದು ಅವುಗಳು ಕೆಳಗೆ ಬಿದ್ದು ನಲುಗುವಂತೆ ಮಾಡುತ್ತಿದೆ. ಹೇಳುವುದಕ್ಕೆ ಲೆಕ್ಕವಿಲ್ಲದಷ್ಟು ವಿಧಗಳಾಗಿ ಕರ್ಮ ಅನೇಕ ರೂಪಗಳಾಗಿ ಜೀವಿಯನ್ನು ಹಿಂಸಿಸುತ್ತಿದೆ. ಕರ್ಮ ವಿಧಾನಗಳು ಜಗತಿಯಲ್ಲಿ ನೋಡಿದರೇ ಬಹಳ ವಿಧಗಳಾಗಿ ಇರುತ್ತಾ ಯಾರಿಂದಲೂ ಗುರುತಿಸಲ್ಪಡದೇ, ಎಷ್ಟು ಕಷ್ಟವನ್ನಾದರೂ ಅನುಭವಿಸುತ್ತಾ ಇದು ನನ್ನ ಕರ್ಮಯೆಂದು ಅವರ ಬಾಯಿಂದ

ಅನ್ನಿಸುತ್ತಲೇ ಇದೆ. ಎಲ್ಲರಿಂದ ನನ್ನ ಕರ್ಮ ಎಂದು ಆಗಾಗ ಅನ್ನಿಸುತ್ತಾ, ತನ್ನ ಇರುವಿಕೆಯನ್ನು ತಿಳಿಯದಂತೆ ಮಾನವರ ಮೇಲೆ ಅಹರ್ನಿಶೆಗಳು ದಾಳಿ ಮಾಡುವುದು ಬಹಳ ವಿಚಿತ್ರವಲ್ಲವೆ! ಆದ್ದರಿಂದಲೇ ವೇಮನಯೋಗಿ ತನ್ನ ಪದ್ಯದಲ್ಲಿ ಬಹಳ ದೊಡ್ಡ ವಿಪರ್ಯಾಸ ಎಂದಿದ್ದಾನೆ.

**ವಾನಿಗಾನನೋಡು ವಾಡು ಕಾನೇಕಾಡು**
**ವಾನಿಲೋನಿ ವಾಡು ವಾಡು ಸುಮ್ಮ**
**ವಾನಿಗನ್ನ ವಾಡು ವಾಡು ತಾ ಯೋಗಿರಾ**
**ವಿಶ್ವದಾಭಿರಾಮ ವಿನುರ ವೇಮಾ.**

**ಅವನ ಕಾಣದವನು ಅವನು ಅಲ್ಲವೇ ಅಲ್ಲ**
**ಅವನೊಳಗಿನ ಅವನು ಅವನು ಜೋಡಿ**
**ಅವನನ್ನು ಕಂಡ ಅವನು ಅವನು ಬಹುಯೋಗಿ**
**ವಿಶ್ವದಾಭಿರಾಮ ಕೇಳು ವೇಮಾ. (102)**

**ಭಾವಾರ್ಥ :–** ನಮ್ಮ ಶರಿರದಲ್ಲಿ ಮೂರು ಗುಣಗಳಿವೆ ಹಾಗೆಯೇ ಆತ್ಮಗಳು ಕೂಡ ಇವೆ. ಇದಕ್ಕು ಮೊದಲು ಅವನು, ಅವನ ಎಂದು ಪದಗಳನ್ನುಪಯೋಗಿಸಿ ಮೂರು ಗುಣಗಳ ಕುರಿತು ಹೇಳಿದ್ದಾನೆ. ಈಗ ಅವೇ ಪದಗಳು ಉಪಯೋಗಿಸಿ ಮೂರು ಆತ್ಮಗಳ ಕುರಿತು ಹೇಳುತ್ತಿದ್ದಾನೆ. ಮೂರು ಗುಣಗಳನ್ನು ಕುರಿತಾಗಲಿ, ಮೂರು ಆತ್ಮಗಳ ಕುರಿತಾಗಲಿ ತಿಳಿದವನನ್ನು ಸಂಪೂರ್ಣ ಜ್ಞಾನಿಯೆಂದು ಹೇಳಬಹುದು. ದೇವರ ಜ್ಞಾನ ತಿಳಿದವನು, ದೇವರನ್ನು ಹೊರಗೆ ಹುಡುಕದೆ ತನ್ನ ಶರೀರದಲ್ಲಿಯೇ ಶೋಧಿಸುವನು. ಶರೀರದಲ್ಲಿ ಜೀವಿಯೊಂದಿಗೆ ಆತ್ಮ ಎನ್ನುವುದು ಕೂಡ ಇದೆ. ಜೀವಾತ್ಮ ಶರೀರದಲ್ಲಿ ಕರ್ಮಗಳನ್ನನುಭವಿಸುವುದಕ್ಕೆ ಬೇಕಾದ ಶಕ್ತಿಯನ್ನು ಕೊಟ್ಟು ಕದಲಿಸುವುದು ಆತ್ಮ! ಶರೀರ ಕದಲುತ್ತಿದೆಯೆಂದರೇ ಅದು ಆತ್ಮವೊಂದರ ಕದಲಿಕೆಯೆಂದು ತಿಳಿಯಬೇಕು. ಜೀವಾತ್ಮ ಮೊದಲು ಆತ್ಮವನ್ನು ತಿಳಿದುಕೊಂಡ ನಂತರ ಕರ್ಮ ನಶಿಸಿಹೋಗುತ್ತದೆ. ಆತ್ಮವನ್ನು ತಿಳಿದವನು, ನಂತರ ಇರುವ ಪರಮಾತ್ಮನನ್ನು ತಿಳಿಯಬೇಕು. ಆತ್ಮವನ್ನು ತಿಳಿಯದ ಜೀವಾತ್ಮ, ಪರಮಾತ್ಮವನ್ನು ತಿಳಿಯಲಾರನು. ಯೋಗ ಎಂದರೆ ಸೇರುವಿಕೆ ಎಂದು ಅರ್ಥ. ಜೀವಾತ್ಮ ಪರಮಾತ್ಮನಲ್ಲಿ ಬೆರೆತು ಹೋಗುವುದನ್ನು ಕೂಡ ಯೋಗ ಎನ್ನಬಹುದು. ಪರಿಪೂರ್ಣ ಯೋಗವಾದ ಪರಮಾತ್ಮ ಸೇರುವಿಕೆ

ಹೊಂದಿದವನು ಜೀವಾತ್ಮವಾಗಿ ಎಲ್ಲಿಯೂ ಹುಟ್ಟದೆ ಪರಮಾತ್ಮವಾಗಿ ಬದಲಾಗಿಹೋಗುವನು.

ಆತ್ಮವನ್ನು ತಿಳಿಯದ ಜೀವಾತ್ಮ, ಪರಮಾತ್ಮವಾಗಿ ಬದಲಾಗುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಅವನನ್ನು ತಿಳಿಯದವನು ಎಂದು ಆತ್ಮವನ್ನು ತಿಳಿಯದ ಜೀವಾತ್ಮವನ್ನು ಕುರಿತು ವೇಮನ ಹೇಳಿದ್ದಾನೆ. ಆತ್ಮವನ್ನು ತಿಳಿಯದವನು ಪರಮಾತ್ಮವಾಗಿ ಬದಲಾಗುವುದಕ್ಕೆ ಅವಕಾಶವಿಲ್ಲ ಆದ್ದರಿಂದ ಅವನು ಅಲ್ಲವೇ ಅಲ್ಲ ಎಂದಿದ್ದಾನೆ. ಅವನು ಎಂದರೆ ಪರಮಾತ್ಮಯೆಂದು ಅರ್ಥ. ಆತ್ಮವನ್ನು ತಿಳಿಯದ ಜೀವಿಯು ಪರಮಾತ್ಮವಾಗಿ ಬದಲಾಗುವುದಕ್ಕೆ ಅವಕಾಶವಿಲ್ಲವೆಂದು ಅರ್ಥ. ಪರಮಾತ್ಮನೊಳಗಿನವರೇ ಆತ್ಮ, ಜೀವಾತ್ಮಗಳು ಆದ್ದರಿಂದ ಅವನೊಳಗಿನವನು, ಅವನು, ಜೋಡಿ ಎಂದಿದ್ದಾರೆ. ಆತ್ಮವನ್ನು ತಿಳಿದ ಜೀವಾತ್ಮ ಕೊನೆಗೆ ಪರಮಾತ್ಮನಲ್ಲಿ ಬೆರೆತು ಹೋಗುವನು ಆದ್ದರಿಂದ ಅವನನ್ನು ಹೆತ್ತವನು ಎಂದು ಆತ್ಮವನ್ನು ಅರ್ಥ ಮಾಡಿಕೊಂಡ ಜೀವಾತ್ಮನನ್ನು ಕುರಿತು ಹೇಳಿದ್ದಾರೆ. ಜೀವಿಯು ಕೊನೆಗೆ ಪರಮಾತ್ಮನಲ್ಲಿ ಐಕ್ಯವಾಗಿ ಹೋಗುವನು ಆದ್ದರಿಂದ ಅವನನ್ನು ಹೆತ್ತವನು ತಾನು ಯೋಗಿ ಎಂದಿದ್ದಾರೆ. ಈ ಪದ್ಯದಲ್ಲಿ ಜೀವಾತ್ಮ ಮಧ್ಯದಲ್ಲಿರುವ ಆತ್ಮವನ್ನು ತಿಳಿದರೇ ಕೊನೆಯಲ್ಲಿರುವ ಪರಮಾತ್ಮನನ್ನು ತಿಳಿದು ಪರಮಾತ್ಮವಾಗಿ ಬದಲಾಗಿಹೋಗುವನೆಂದು ಹೇಳುವುದಾಗಿದೆ. ಆ ಸ್ಥಿತಿ ಹೊಂದಿದವನು ಜೀವಿಯಾಗಿ ಇರದೆ ದೇವರಲ್ಲಿ ಬೆರೆತುಹೋಗುವನು.

| | |
|---|---|
| **ವ್ರಾತ ವೆಂಟಗಾನಿ ವರಮೀಡು ದೈವಂಬು** | **ವಿಧಿಲಿಖಿತಕ್ಕಿಂತ ಹೆಚ್ಚು ಕೊಡಲಾರ ದೈವವು** |
| **ಸೇತ ಕೊಲದಿ ಗಾನಿ ವ್ರಾತಗಾನು** | **ಕರ್ಮಕ್ಕೀಮತ ಅಧಿಕ ಬರಹಮಿಲ್ಲ** |
| **ವ್ರಾತ ಕಙುಡು ಕರ್ತ ಚೇತಕು ದಾ ಕರ್ತ** | **ಬರಹಕ್ಕೆ ಕರ್ತ ಬ್ರಹ್ಮ, ಕರ್ಮಕ್ಕೆ ತಾನೇ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (103)** |

**ಭಾವಾರ್ಥ :–** ಹಿಂದಿನ ಕರ್ಮ ಫಲಗಳಿಂದ ಮನುಷ್ಯ ಪ್ರತಿ ಕೆಲಸ ಮಾಡುತ್ತಿರುವನು. ಕರ್ಮದಿಂದ ಪ್ರತಿಕಾರ್ಯ ನಡೆಯುತ್ತಿದ್ದರೂ ಮನುಷ್ಯ

ತನ್ನ ಅಜ್ಞಾನದಿಂದ ಆ ಕಾರ್ಯಗಳನ್ನು ನಾನೇ ಮಾಡುತ್ತಿದ್ದೇನೆಂದು ತಿಳಿಯುತ್ತಿದ್ದಾನೆ. ಕರ್ಮದಿಂದ ಕಾರ್ಯ ನಿರ್ಣಯಿಸಲ್ಪಟ್ಟು ಆತ್ಮ, ಕಾರ್ಯಕ್ಕೆ ಶಕ್ತಿಯನ್ನು ಕೊಟ್ಟು ಕದಲಿಸುತ್ತಿರುವಾಗ ಯಾವ ಪಾತ್ರ ವಹಿಸದ ಜೀವಿಯು ತಾನೇ ಯೋಚಿಸಿ, ನಿರ್ಣಯಿಸಿ ಮಾಡುತ್ತಿದ್ದೇನೆಂದು ಅಂದುಕೊಳ್ಳುತ್ತಿದ್ದಾನೆ. ಆದ್ದರಿಂದ ನಡೆದ ಕಾರ್ಯದಲ್ಲಿ ತಯಾರಾದ ಹೊಸ ಕರ್ಮ ಜೀವಿಗೇ ಅಂಟಿಕೊಳ್ಳುತ್ತಿದೆ. ಕೆಲಸಕ್ಕೆ ಕಾರಣ ಕರ್ಮ ಆದಾಗ ಶಕ್ತಿ ಆತ್ಮದ್ದು, ಜೀವಿಯದ್ದು ಏನೂ ಇಲ್ಲದಿದ್ದರೂ ಕೆಲಸದಲ್ಲಿನ ಅನುಭವಗಳನ್ನು ಮಾತ್ರ ಅನುಭವಿಸುವುದು ಜೀವಿಯ ಕೆಲಸ. ಒಂದು ಕೆಲಸ ನಡೆಯುವುದು ಅದರಲ್ಲಿ ಜೀವಿಯು ದುಃಖವನ್ನೋ, ಸುಖವನ್ನೋ ಅನುಭವಿಸುವುದು ನಡೆಯುತ್ತಿದೆ. ಅನುಭವಿಸುವುದು ಜೀವಿಯ ಕೆಲಸ ಆದಾಗ, ತಿಳಿಯದ ತನದಿಂದ ಕಾರ್ಯಕ್ಕೆ ನಾನೇ ಕಾರಣವೆಂದು ಅಂದುಕೊಳ್ಳುವುದರಿಂದ ಮಾಡಿದ ಪಾಪವಾಗಲಿ, ಪುಣ್ಯವಾಗಲಿ ಬರಹವಾಗಿ ಬದಲಾಗಿ ಅವನ ಕರ್ಮಚಕ್ರದಲ್ಲಿ ಸೇರಿಹೋಗುತ್ತಿದೆ. ಕಾರ್ಯಕ್ಕೆ ನಾನು ಕಾರಣ ಎಂದು ಅಂದುಕೊಳ್ಳುವುದರಿಂದ ತನ್ನ ಶರೀರದಲ್ಲಿ ನಡೆಯುವ ಕಾರ್ಯವನ್ನು ಅನುಸರಿಸಿ ಜೀವಿಗೆ ಕರ್ಮ ಬರುತ್ತಿರುತ್ತದೆ. ಕೆಲಸಕ್ಕೆ ನಾನೇ ಕರ್ತನೆಂದುಕೊಂಡರೆ ಕೆಲಸದಲ್ಲಿನ ಕರ್ಮವನ್ನು ಆತ್ಮ ಜೀವಿಗೆ ತಗಲಿಸುತ್ತಿದೆ. ಆದ್ದರಿಂದ ಈ ಪದ್ಯದಲ್ಲಿ ಕೆಲಸಕ್ಕೆ ತಾನು ಕರ್ತನೆಂದುಕೊಂಡರೆ ಬರಹಕ್ಕೆ ಆತನು ಕರ್ತ ಎಂದಿದ್ದಾರೆ. ನಡೆದ ಕಾರ್ಯವನ್ನನುಸರಿಸಿ ಕರ್ಮ ಬರುತ್ತಿದೆ ಆದ್ದರಿಂದ ಕಾರ್ಯವನ್ನನುಸರಿಸಿ ಬರಹ ಎಂದಿದ್ದಾರೆ. ಮೊದಲು ಲಿಖಿತವಾದ ಕರ್ಮವನ್ನನುಸರಿಸಿ ತನಗೆ ಎಲ್ಲ ಲಭಿಸುತ್ತಿವೆ. **ದೇವರು ವರಕೊಟ್ಟರೂ ತನ್ನ ಕರ್ಮವನ್ನು ಅನುಸರಿಸಿಯೇ ಕೊಡಬೇಕಾಗಿದೆ.** ಆದ್ದರಿಂದ ಬರಹವನ್ನನುಸರಿಯೇ ವರ ಕೊಡುವ ದೈವವು ಎಂದಿದ್ದಾರೆ. ವೇಮನ ಈ ಪದ್ಯದಲ್ಲಿ ಮನುಷ್ಯನಿಗೂ, ಕರ್ಮಕ್ಕೂ ಇರುವ ಸಂಬಂಧವನ್ನು ಕುರಿತು ಪೂರ್ತಿಯಾಗಿ ವಿವರಿಸಿದ್ದಾನೆ.

| | |
|---|---|
| **ಬ್ರಹ್ಮಗುರ್ರಮಾಯೆ ಭವುಡು ಪಲ್ಲಂಬಾಯೆ** | **ಬ್ರಹ್ಮ ಕುದುರೆಯಾದ ಭವನು ಜೀನು ಆಗಿ** |
| **ನಾದಿ ವಿಷ್ಣ ವೆನ್ನಂಕೆ ಮಾಯೆ** | **ಆದಿ ವಿಷ್ಟು ಬೆನ್ನಿಗೆ ಆಸರೆಯಾಗಿ** |
| **ನಂದು ಮೀದಿವಾಡು ಆಡದೋ ಮಗವಾಡೋ** | **ಅಲ್ಲಿ ಮೇಲಿನವನು ಹೆಣ್ಣೋ ಗಂಡೋ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (104)** |

**ಭಾವಾರ್ಥ :–** ಪ್ರಪಂಚದಲ್ಲಿ ಪ್ರತಿ ಮನುಷ್ಯ, ಪ್ರತಿ ಜೀವರಾಶಿ ಗುಣಗಳಿಂದಲೇ ಚರಿಸುತ್ತಿವೆ. ಶರೀರದಲ್ಲಿ ಕಾಣಿಸದ ಕರ್ಮ ಮತ್ತು ಕಾಣಿಸದ ಗುಣಗಳು ಮನುಷ್ಯನನ್ನು ಪ್ರೇರೇಪಿಸಿ ನಡೆಸುತ್ತಿವೆ. ಕರ್ಮಕ್ಕು, ಗುಣಗಳಿಗು, ಶರೀರವೆಲ್ಲದಕ್ಕೂ ಆಧಾರವಾಗಿರುವುದು ಆತ್ಮವಾದಾಗ ಅದಕ್ಕು ಕೂಡ ಆಧಾರವಾಗಿರುವುದು ಪರಮಾತ್ಮ. ಪರಮಾತ್ಮ ಪ್ರತಿ ಶರೀರವನ್ನು ಅಧಿಷ್ಠಿಸಿದ್ದು ಕರ್ಮ, ಗುಣಗಳಿಂದ ಕಾರ್ಯವನ್ನು ಆಯ್ಕೆ ಮಾಡುವಂತೆ ಮಾಡಿ ಆತ್ಮ ಚೈತನ್ಯದಿಂದ ಮಾಡಿಸುತ್ತಿದೆ. ಆದ್ದರಿಂದ ಎಲ್ಲದಕ್ಕೂ ಮೂಲಪುರುಷನು ಪರಮಾತ್ಮಯೆಂದು ಹೇಳಬಹುದು. ಪರಮಾತ್ಮ ಎಲ್ಲ ಶರೀರಗಳಲ್ಲಿ ವ್ಯಾಪಿಸಿದ್ದರೂ ಅದಕ್ಕೆ ರೂಪ, ಹೆಸರು ಮಾತ್ರ ಇಲ್ಲ. ಆದ್ದರಿಂದ ಪರಮಾತ್ಮನನ್ನು ಏನೆಂದು ಹೇಳುವುದಕ್ಕೆ ಎಂತಹ ಆಧಾರವೂ ಇಲ್ಲ.

ಮೇಲಿನ ಪದ್ಯದಲ್ಲಿ ವೇಮನಯೋಗಿ ಮೂರು ಗುಣಗಳನ್ನು ಕುರಿತು ಶರೀರದಲ್ಲಿ ಮೂಲ ಪುರುಷನಾದ ಪರಮಾತ್ಮನನ್ನು ಕುರಿತು ಹೇಳಿದಂತೆ ತಿಳಿಯುತ್ತಿದೆ. ಅದು ಹೇಗೆಂದರೆ ಮೂರು ಗುಣಗಳಿಂದ, ಪರಮಾತ್ಮನಿಂದ ನಡೆಸಲ್ಪಡುವ ಶರೀರವಾದ್ದರಿಂದ ಮೂರು ಗುಣಗಳನ್ನು ಉದ್ದೇಶಿಸಿ ತಾಮಸ ವನ್ನು, ಬ್ರಹ್ಮವೆಂದೂ, ರಾಜಸವನ್ನು ವಿಷ್ಣುವೆಂದೂ, ಸಾತ್ತ್ವಿಕವನ್ನು ಶಿವನೆಂದೂ ಹೇಳುತ್ತಾ ಬ್ರಹ್ಮ ಕುದುರೆಯಾದ ಎಂದಿದ್ದಾನೆ. ಹಾಗೆಯೇ ವಿಷ್ಣು ಕುದುರೆಗೆ ಕಟ್ಟಿರುವ ಲಗಾಮು ಆದ ಎಂದಿದ್ದಾನೆ. ನಂತರ ಕುದುರೆ ಓಡುವ ಮೈದಾನವನ್ನು ಶಿವನೆಂದಿದ್ದಾನೆ. ಈ ವಿಧವಾಗಿ ಕಾರ್ಯಗಳನ್ನು ಮಾಡುವ ಗುಣ ಸಹಿತ ಶರೀರವನ್ನು ಸವಾರಿ ಕುದುರೆಯಾಗಿ ವರ್ಣಿಸಿದ್ದಾನೆ. ಶರೀರವನ್ನು ಅಧಿಷ್ಠಿಸಿ ಇರುವ ಪರಮಾತ್ಮನನ್ನು ಕುದುರೆಯನ್ನು ನಡೆಸುವ ಸವಾರನನ್ನಾಗಿ ಹೋಲಿಸಿ

ಆತನು ಎಂತಹವನೋ, ಯಾವ ಹೆಸರು ಇದೆಯೋ ಯಾರಿಗೂ ತಿಳಿದಿಲ್ಲ ಆದ್ದರಿಂದ ಪರಮಾತ್ಮನನ್ನು ಹೆಣ್ಣೋ, ಗಂಡೋ ತಿಳಿಯದೆಂದಿದ್ದಾನೆ. ಈ ವಿಧವಾಗಿ ವೇಮನ ಪರಮಾತ್ಮವೊಂದರ ಔನ್ನತ್ಯವನ್ನು ಮೂರು ವಾಕ್ಯಗಳ ಪದ್ಯದಲ್ಲಿ ಹೇಳುವುದು ಬಹಳ ದೊಡ್ಡವಿಷಯ. ಪರಮಾತ್ಮ ಹೆಣ್ಣೋ ಗಂಡೋ ಯಾರಿಗೂ ತಿಳಿಯದಿರುವುದರಿಂದ ಪರಮಾತ್ಮನನ್ನು ಕೆಲವು ಸಂದರ್ಭಗಳಲ್ಲಿ ಅವನು ಎಂದೂ, ಮತ್ತೆ ಕೆಲವು ಸಂದರ್ಭಗಳಲ್ಲಿ ಅದು ಎಂದೂ ಬರೆಯಲ್ಪಡುತ್ತಿದ್ದಾನೆಂದು ತಿಳಿಯಬೇಕು.

| | |
|---|---|
| **ಜಾತುಲಂದು ನೆಟ್ಟಜಾತಿ ಮುಖ್ಯಮು ಚೂಡ** | **ಜಾತಿಯೊಳಗೆ ಯಾವ ಜಾತಿ ಮುಖ್ಯ ವೆನುತ** |
| **ಯೆರುಕ ಲೇಕ ದಿರುಗ ನೇಮಿ ಗಲದು** | **ಅರಿವು ಇರದೆ ತಿರುಗೆ ಏನು ಸುಖವು** |
| **ಯೆರುಕ ಗಲಗು ಮನುಜುಡೇ ಜಾತಿ ಗಲವಾಡು** | **ಅರಿವು ಇರುವವನಿಗೆ ಯಾ ಜಾತಿ ಇರಲೇನು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (105) |

**ಭಾವಾರ್ಥ :–** ಇಲ್ಲಿ ಜಾತಿಗಳೆನ್ನುವ ಮಾತು ಬಂದಿದೆ ಆದ್ದರಿಂದ ಮನುಷ್ಯರಲ್ಲಿ ಎಷ್ಟು ಜಾತಿಗಳಿವೆಯೋ ತಿಳಿಯಬೇಕಾಗಿ ಬಂದಿದೆ. ಭಗವದ್ಗೀತಾಶಾಸ್ತ್ರ ಜ್ಞಾನಯೋಗವೆನ್ನುವ ಅಧ್ಯಾಯದಲ್ಲಿ 13ನೇ ಶ್ಲೋಕದ ಪ್ರಕಾರ ಮತ್ತು ಶ್ರೀಕೃಷ್ಣನು ನವಿಲುಗರಿಯನ್ನು ಧರಿಸಿದ ಪ್ರಕಾರ, ಮನುಷ್ಯರ ಜಾತಿಗಳು ನಾಲ್ಕು ವಿಧಗಳೆಂದು ತಿಳಿದಿದೆ. ಮೇಲಿನ ಪದ್ಯದಲ್ಲಿ ಮೊದಲ ಚರಣದಲ್ಲಿ ಹೇಳಿದಂತೆ **ಯಾವ ಜಾತಿ ಮುಖ್ಯವೆಂದು ನೋಡಿದರೆ ತಾಮಸ, ರಾಜಸ, ಸಾತ್ತ್ವಿಕ, ಯೋಗ ಎನ್ನುವ ನಾಲ್ಕು ಜಾತಿಗಳಲ್ಲಿ ಯೋಗವೆನ್ನುವ ಜಾತಿ ಮುಖ್ಯವಾಗಿ ಆ ಜಾತಿಯಲ್ಲಿರುವ ಯೋಗಿಯೇ ಉಳಿದ ತಾಮಸರಿಗಿಂತ, ರಾಜಸರಿಗಿಂತ, ಸಾತ್ತ್ವಿಕರಿಗಿಂತ ಮುಖ್ಯನೆಂದು ತಿಳಿಯುತ್ತಿದೆ.** ಉಳಿದ ಮೂರು ಜಾತಿಗಳಿಗಿಂತ ಯೋಗಜಾತಿ ಏಕೆ ಮುಖ್ಯವಾದುದೋ ಯೋಚಿಸಿ ನೋಡಿದಂತಾದರೇ, ಉಳಿದ ಮೂರು ಜಾತಿಗಳಲ್ಲಿ ಮನುಷ್ಯನಿಗೆ ತನ್ನ ಮೇಲೆ ಎಚ್ಚರ ಎನ್ನುವುದು ಇಲ್ಲವೆಂದು ತಿಳಿಯುತ್ತಿದೆ. ಶರೀರದಲ್ಲಿ ಇರುವ ಅನೇಕ ಭಾಗಗಳಲ್ಲಿ ಒಂದು ಭಾಗವಾದ ಜೀವಿಯು, ತನ್ನ ಮೇಲೆ ತನಗೆ ಎಚ್ಚರ (ಜ್ಞಾಪಕ) ಇಲ್ಲದೆ ಶರೀರವೆಲ್ಲಾ

ನಾನೇ ಅಂದುಕೊಳ್ಳುತ್ತಿರುವನು. ಹಾಗೆ ಶರೀರವನ್ನೆಲ್ಲಾ ನಾನೇ ಎಂದು ತಿಳಿಯುವುದರಿಂದ ಶರೀರದೊಂದಿಗೆ ನಡೆದ ಕೆಲಸವೆಲ್ಲವೂ ನಾನೇ ಮಾಡಿದ್ದೇನೆಂದುಕೊಳ್ಳುತ್ತಿದ್ದಾನೆ. ಹಾಗೆ ಅಂದುಕೊಳ್ಳುವುದರಿಂದ ನಡೆದ ಕೆಲಸದಲ್ಲಿನ ಪಾಪಪುಣ್ಯಗಳು ಆ ಜೀವಿಗೆ ಸೇರುತ್ತಿವೆ. ಅಂತಹವನು ಯಾವಾಗಲೂ ಪಾಪ, ಪುಣ್ಯ ಕರ್ಮಗಳನ್ನೇ ಸಂಪಾದಿಸಿಕೊಳ್ಳುತ್ತಾ, ಜನನ ಮರಣ ಚಕ್ರದಲ್ಲಿ ಬಿದ್ದು ತಿರುಗುತ್ತಿರುವನು. ಎಚ್ಚರ ಇಲ್ಲದವನು ಅಜ್ಞಾನದಲ್ಲಿದ್ದು ಜ್ಞಾನ ತಿಳಿಯಲಾರನು. ಅಂತಹವನಿಗೆ ಕರ್ಮವನ್ನು ಸುಡುವ ಜ್ಞಾನಶಕ್ತಿ ಎಂದಿಗೂ ಲಭಿಸುವುದಿಲ್ಲ. ಆದ್ದರಿಂದ ತನ್ನ ಪದ್ಯದಲ್ಲಿ ಎಚ್ಚರವಿಲ್ಲದೆ ತಿರುಗಿದರೇನು ಎಂದಿದ್ದಾನೆ. ನಾಲ್ಕು ಜಾತಿಗಳಲ್ಲಿ ಮುಖ್ಯವಾದ ಜಾತಿ ಯೋಗಜಾತಿ ಆದ್ದರಿಂದ ಆ ಜಾತಿ ಮನುಷ್ಯನನ್ನೇ ಸ್ವಚ್ಛವಾದ ಜಾತಿ ಇರುವವನೆಂದು ಅನ್ನಬಹುದು. ಆದ್ದರಿಂದ ಎಚ್ಚರವಿರುವ ಮನುಜನೇ ಜಾತಿ ಇರುವವನೆಂದು ಅನ್ನುತ್ತಿದ್ದಾರೆ. ಈ ವಿಷಯವನ್ನು ತಿಳಿಸುವ ನಿಮಿತ್ತ ಶ್ರೀಕೃಷ್ಣನು ಕೂಡ ನಾಲ್ಕು ವರ್ಣಗಳಲ್ಲಿ ಮಧ್ಯದಲ್ಲಿ ಒಂದು ಮಾತ್ರವೇ ಹೆಚ್ಚು ಗುರುತಾಗಿ ಕಾಣಿಸುವ ನವಿಲುಗರಿಯನ್ನೇ ಧರಿಸಿದ್ದಾನೆ.

| | |
|---|---|
| **ಚದುವುವಾನಿಕನ್ನ ಚಾಕಲಿ ತಾಮೇಲು** | **ಓದಿದವನಿಗಿಂತ ಮಡಿವಾಳನೇ ಮೇಲು** |
| **ಗುರಮು ವೇಲ್ಪುಕನ್ನ ಕುಕ್ಕ ಮೇಲು** | **ಕಲ್ಲಿನ ದೇವರಿಗಿಂತ ನಾಯಿ ಮೇಲು** |
| **ಸರ್ವ ಸುರುಲಕನ್ನ ಸರ್ವೇಶ್ವರುಂಡು ಮೇಲು** | **ಸಕಲ ಸುರರಿಗಿಂತ ಸರ್ವೇಶ್ವರನು ಮೇಲು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (106)** |

**ಭಾವಾರ್ಥ :–** ಕಾಗದಗಳ ಮೇಲೆ ವಿಷಯ ತಿಳಿದುಕೊಂಡ ಓದಿದವನಿಗಿಂತ ಬಟ್ಟೆಗಳ ಮೇಲೆ ಕೊಳೆಯನ್ನು ತೆಗೆದುಹಾಕುವ ಅಗಸನು ಮೇಲೆಂದಿದ್ದಾರೆ. ಈ ಚರಣದಲ್ಲಿನ ವೇಮನಯೋಗಿವೊಂದರ ಆಧ್ಯಾತ್ಮಿಕ ಭಾವವನ್ನು ಪರಿಶೀಲಿಸಿ ನೋಡಿದರೇ ಆತನ ಭಾವ ಹೀಗೆ ಇದೆ. ಓದಿದವನೆಂದರೆ ಎಲ್ಲ ವಿಷಯಗಳು ತಿಳಿದ ಜ್ಞಾನಿ ಎಂಬ ಭಾವ. ಓದಿದವನು ವಿಷಯಗಳನ್ನು ಅವಗಾಹನೆ ಮಾಡಿಕೊಂಡಂತೆ, ಜ್ಞಾನಿಯಾದವನು ಗುರುಮುಖತ ಕೇಳಿದ ಜ್ಞಾನವನ್ನು,

ಗ್ರಂಥರೂಪದಲ್ಲಿ ಓದಿದ ಜ್ಞಾನವನ್ನು ತಿಳಿದಿರುತ್ತಾನೆ. ಅಗಸ ಎಂದರೆ ಸ್ವತಃವಾಗಿ ಕೆಲಸಮಾಡಿ ಕೊಳೆಯನ್ನು ತೆಗೆಯುವವನು. ಗುರುವು ಎಂದರೆ ಶರೀರದಲ್ಲಿರುವ ಕರ್ಮ ಎನ್ನುವ ಕಲ್ಮಷಗಳನ್ನು ಇಲ್ಲದಂತೆ ಮಾಡುವವನೆಂದು ಅರ್ಥ. ಅಗಸ ಬಟ್ಟೆಗಳನ್ನು ನೀರಿನಲ್ಲಿ ಅದ್ದಿ ಸಾಬೂನು ಹಚ್ಚಿ ಹೊಗೆಯುವಂತೆ, ಗುರುವು ತನ್ನ ಹತ್ತಿರ ಸೇರಿದ ಮನುಷ್ಯರಿಗಿರುವ ಕರ್ಮಗಳನ್ನು ತೆಗೆದುಹಾಕುವುದಕ್ಕೆ ಎಷ್ಟೋ ವಿಧಗಳಲ್ಲಿ ಪ್ರಯತ್ನ ಮಾಡುವನು. ಜ್ಞಾನ ಬೋಧನೆಗಳು ಎನ್ನುವ ನೀರಿನಲ್ಲಿ ತೋಯಿಸಿ ಜ್ಞಾನ ಪರೀಕ್ಷೆಗಳೆನ್ನುವ ಸಾಬೂನು ಹಚ್ಚುತ್ತಾ, ಸ್ವಲ್ಪ ಜ್ಞಾನಶಕ್ತಿಯನ್ನು ತುಂಬಿ ಕರ್ಮ ಕೊಳೆಯಿಂದ ಮುಕ್ತನನ್ನಾಗಿ ಮಾಡುತ್ತಿರುವನು. ಆದ್ದರಿಂದ ಕರ್ಮದಿಂದ ಬಿಡುಗಡೆ ಹೊಂದಿಸುವವನನ್ನು ಅಗಸ ಎಂದಿದ್ದಾರೆ.

ಕಲ್ಲಿನ ದೇವರಿಗಿಂತ ಪ್ರಾಣದೊಂದಿಗಿರುವ ನಾಯಿ ಮೇಲೆಂದಿದ್ದಾನೆ. ಕಲ್ಲಿನ ದೇವರು ಮನೆ ಮುಂಬಾಗಿಲಲ್ಲಿದ್ದರೂ ಕಳ್ಳ ಬಂದು ತನ್ನ ಸ್ವತ್ತನ್ನೆಲ್ಲಾ ಎತ್ತಿಕೊಂಡು ಹೋಗಿ ನಷ್ಟಪಡಿಸಿದರೂ ಆ ದೇವರು ಕದಲುವುದಿಲ್ಲ ಚಲಿಸುವುದಿಲ್ಲ. ಅದೇ ಮನೆ ಮುಂಬಾಗಿಲಲ್ಲಿ ಕಟ್ಟಿಹಾಕಿದ ನಾಯಿ ಕಳ್ಳನನ್ನು ಗಮನಿಸಿ, ಬೊಗಳಿ, ಯಜಮಾನನನ್ನು ಜಾಗ್ರತೆಪಡಿಸಿ ನಷ್ಟಹೋಗದಂತೆ ಮಾಡಬಲ್ಲದು. ಹೀಗೆ ನಮ್ಮ ಶರೀರದಲ್ಲಿ ಕಲ್ಲಿನ ದೇವರ ಹಾಗೆ ಕದಲದಂತೆ ಒಂದೇ ಕಡೆ ಇರುವ ಅಹಮ್ ಇದೆ. ಅಹಮ್ ಮನುಷ್ಯನನ್ನು ಯಾವಾಗಲೂ ಕರ್ಮ ಬಂಧನಗಳಲ್ಲಿ ಸಿಲುಕಿಕೊಳ್ಳುವಂತೆ ಮಾಡುತ್ತಿರುತ್ತದೆ ಹೊರತು ಮನುಷ್ಯನನ್ನು ಕರ್ಮದಿಂದ ತಪ್ಪಿಸುವುದಿಲ್ಲ. ಮಾನವನ ಕರ್ಮದಿಂದ ತಪ್ಪಿಸದೆ ಕರ್ಮವನ್ನು ಅಂಟಿಸುವುದು ಅಹಮ್. ಕದಲದ ದೇವರು ಮನುಷ್ಯನಿಗೆ ನಷ್ಟ ಮಾಡಿದಹಾಗೆ, ಕದಲದ ಅಹಮ್ ಮನುಷ್ಯನಿಗೆ ತೀರದ ನಷ್ಟಕಷ್ಟಗಳನ್ನು ತಂದಿಡುವ ಕರ್ಮವನ್ನೇ ಅಂಟಿಸುತ್ತಿದೆ. ನಮ್ಮ ಶರೀರದಲ್ಲಿ ನಾಯಿಯೊಂದಿಗೆ ಹೋಲಿಸಿದ ಮನಸ್ಸು ಇದೆ. ಮನಸ್ಸು ನಿಲುಗಡೆಯಿಲ್ಲದ್ದು, ಸಂಚಾರ ಇರುವುದು ಆದ್ದರಿಂದ ಮನಸ್ಸನ್ನು ನಾಯಿ ಯೊಂದಿಗೆ ಹೋಲಿಸಿ ಹೇಳಿದ್ದಾರೆ. ಮನಸ್ಸನ್ನು ಬಿಟ್ಟುಹಾಕಿದರೆ ನಾಯಿ ಮನೆಮನೆ ತಿರುಗಿದಂತೆ, ಮನಸ್ಸು ಅನೇಕ ವಿಷಯಗಳ

ಮೇಲಕ್ಕೆ ತಿರುಗುತ್ತಿರುತ್ತದೆ. ಅದೇ ಮನಸ್ಸನ್ನು ಇಷ್ಟಬಂದಹಾಗೆ ಬಿಡದೆ, ಅಭ್ಯಾಸದಿಂದ ಬಂಧಿಸಿದರೆ, ಕಟ್ಟಿಹಾಕಲ್ಪಟ್ಟಿರುವ ನಾಯಿ ಮನೆಯನ್ನೇ ಕಾವಲು ಕಾಯುತ್ತಾ ಯಾವ ಮನೆ ತಿರುಗದಂತೆ, ಮನಸ್ಸು ಯಾವ ವಿಷಯಗಳ ಮೇಲಕ್ಕೆ ಹೋಗದೆ ಶರೀರದಲ್ಲಿನ ಆತ್ಮ ಮೇಲೆಯೇ ಧ್ಯಾಸವನ್ನಿಡುತ್ತದೆ. ಅದರಿಂದ ಮನುಷ್ಯನಿಗೆ ಕರ್ಮ ಅಂಟುವುದಿಲ್ಲ. ಮನುಷ್ಯನಿಗೆ ಕರ್ಮ ಬಾರದಂತಿರುವು ದರಿಂದ ಕಷ್ಟ ನಷ್ಟಗಳಿಂದ ತಪ್ಪಿಸಿಕೊಳ್ಳುವನು.

**ಓದುವವನಿಗಿಂತ ಅಗಸನು ಮೇಲು – ಜ್ಞಾನಿಗಿಂತ ಯೋಗಿ (ಗುರುವು) ಮೇಲು**

**ಗುರಮುವೇಲ್ಕುಕನ್ನ ನಾಯಿಮೇಲು – ಅಹಮ್‌ಗಿಂತ ನಿಂತಿರುವ ಮನಸ್ಸು ಮೇಲು**


**ಸರ್ವಸುರರಿಗಿಂತ ಸರ್ವೇಶ್ವರನು ಮೇಲು – ದೇವತೆಗಳೆಲ್ಲರಿಗಿಂತ ಪರಮಾತ್ಮ ಮೇಲು**

ದೇಶದಲ್ಲಿನ ದೇವತೆಗಳೆಲ್ಲರಿಗಿಂತ ದೇಹದಲ್ಲಿನ ಪರಮಾತ್ಮವೇ ದೊಡ್ಡದೆಂದು ವೇಮನ ತೀರ್ಮಾನಿಸಿ ಹೇಳಿದ್ದಾನೆ.

| | |
|---|---|
| **ಬ್ರಹ್ಮಯೆವನಿ ಕೊಡುಕು ಪರಿಕಿಂಪಗಾ ಭುವಿ** | **ಬ್ರಹ್ಮ ಯಾರ ಮಗ ಪರೀಕ್ಷಿಸಿ ಭುವಿಯಲ್ಲಿ** |
| **ವಿಷ್ಣುವೆವನಿ ಕೊಡುಕು ವೆಲಯ ಜೂಡ** | **ವಿಷ್ಣು ಯಾರ ಮಗ ಹುಡುಕಿ ನೋಡ** |
| **ಶಿವುಡು ಯೆವನಿ ಕೊಡುಕು ನಿಗ್ಗೆರುಗರು ಜನುಲ್** | **ಶಿವನು ಯಾರ ಮಗ ನಿಜ ತಿಳಿಯರು ಜನರು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ. (107)** |

**ಭಾವಾರ್ಥ :–** ಬ್ರಹ್ಮ, ವಿಷ್ಣು, ಶಿವನು ಎನ್ನುವವರು ಯಾರಿಗೋ ಒಬ್ಬರಿಗೆ ಹುಟ್ಟಿರಬೇಕು. ಮೂವರು ಯಾರ ಮಕ್ಕಳೋ ನಿಜವಾಗಿಯೂ ಜನರು ತಿಳಿಯದಂತಿದ್ದಾ ರೆಂದು ವೇಮನ ಹೇಳಿದ್ದಾನೆ. ಹುಟ್ಟಿದ ಪ್ರತಿಯೊಬ್ಬರು ಪ್ರಕೃತಿ ಪುರುಷರಿಂದಲೇ ಹುಟ್ಟಿದ್ದಾರೆಂದು, ಎಲ್ಲರಿಗೂ ತಾಯಿ ಪ್ರಕೃತಿ, ತಂದೆ

ಪರಮಾತ್ಮ ಎನ್ನುವ ಮಾತು **ಭಗವದ್ಗೀತೆ ಗುಣತ್ರಯ ವಿಭಾಗಯೋಗವೆನ್ನುವ ಅಧ್ಯಾಯದಲ್ಲಿ ಮೊದಲಿನಲ್ಲಿಯೇ ಇದೆ.** ವೇಮನ ಹೇಳಿದ ಈ ತ್ರಿಮೂರ್ತಿಗಳು ಎಲ್ಲಿ ಇದ್ದಾರೋ ಯೆಂದು ನೋಡಿದಂತಾದರೇ ಆ ಮೂವರು ನಮ್ಮ ಶರೀರದಲ್ಲೇ ಇದ್ದಾರೆಂದು ತಿಳಿಯುತ್ತಿದೆ. ನಮ್ಮ ಶಿರೋಭಾಗದಲ್ಲಿ ನಾಲ್ಕು ಚಕ್ರಗಳ ಸಮೂಹ ಒಂದು ಇದೆ. ಅದರಲ್ಲಿ ಕೆಳಗಿನ ಚಕ್ರ ಗುಣಚಕ್ರ ಎನ್ನಲ್ಪಡುತ್ತಿದೆ. ಆ ಗುಣಚಕ್ರ ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಆ ಮೂರು ಭಾಗಗಳನ್ನೇ ಕೆಳಗಿನ ಚಿತ್ರದಲ್ಲಿ ನೋಡಬಹುದು.




ತಾಮಸ – ರಾಜಸ – ಸಾತ್ತ್ವಿಕ – **ಗುಣಚಕ್ರ**

ಈ ಮೂರು ಭಾಗಗಳಲ್ಲಿ ಹೊರಗಿನಿಂದ ಮೊದಲಿರುವ ಭಾಗವನ್ನು ಬ್ರಹ್ಮ ಎಂದೂ, ಎರಡನೆಯದ್ದನ್ನು ವಿಷ್ಣುವೆಂದೂ, ಮೂರನೆಯದನ್ನು ಶಿವನು ಎಂದೂ ವೇಮನ ಗುರುತಿಸಿದ್ದಾನೆ. ಇದೇ ವಿಷಯವನ್ನೇ ಬಹಳ ಪದ್ಯಗಳಲ್ಲಿ ಹೇಳಿದ್ದಾನೆ. ಉದಾಹರಣೆಗೆ ಈ ಪುಸ್ತಕದಲ್ಲಿ ಮೊದಲು ಮೂರನೆಯ ಪದ್ಯ ಬ್ರಹ್ಮ ಸಾಯಿಸಿ, ವಿಷ್ಣು ಭಾಗದಲ್ಲಿ ಬೆರೆಸಿ ಎಂದು ಹೇಳಲ್ಪಟ್ಟಿದೆ. ತ್ರಿ ಗುಣಗಳನ್ನು ಕುರಿತು ಪೂರ್ತಿಯಾಗಿ ತಿಳಿದವನು ಸಂಪೂರ್ಣ ಜ್ಞಾನಿಯಾಗುತ್ತಾನೆ. ಗುಣಗಳ ವಿವರ ತಿಳಿದವನು ಯಾವ ಕಾರ್ಯದಲ್ಲಿನ ಕರ್ಮವನ್ನು ಹೊಂದದರೆ ಎಚ್ಚರ ಹೊಂದಿರುತ್ತಾನೆ. ಇದೇ ವಿಷಯವನ್ನೇ ಭಗವದ್ಗೀತೆ ಕ್ಷೇತ್ರಕ್ಷೇತ್ರಜ್ಞ ವಿಭಾಗಯೋಗ ದಲ್ಲಿ ಇಪ್ಪತ್ನಾಲ್ಕನೆ (24) ಶ್ಲೋಕದಲ್ಲಿ ಪ್ರಕೃತಿ ಪುರುಷರನ್ನು, ಗುಣಗಳನ್ನು ಚೆನ್ನಾಗಿ ತಿಳಿದವನು ಮೋಕ್ಷ ಹೊಂದುವನೆಂದು ತಿಳಿಸಲ್ಪಟ್ಟಿದೆ. ಗುಣಗಳ ವಿವರ ಸಂಪೂರ್ಣವಾಗಿ ತಿಳಿಯದವನಿಗೆ ಸಾವು ಹುಟ್ಟುಗಳು ತಪ್ಪುವುದಿಲ್ಲ. ಗುಣಗಳ ನಿರ್ಮಾಣ ವ್ಯವಸ್ಥೆಯನ್ನು, ಅವು ಕೆಲಸ ಮಾಡುವ ವಿಧಾನ ಜನರು ತಿಳಿಯುವುದಿಲ್ಲವೆಂದೇ ವೇಮನಯೋಗಿ ಮೇಲಿನ ಪದ್ಯದಲ್ಲಿ ಹೇಳಿದ್ದಾನೆ.

| | |
|---|---|
| **ವೇದ ವಿದ್ಯಲೆಲ್ಲ ವೇಶ್ಯಲವಂಟಿವಿ** | **ವೇದ ವಿದ್ಯೆಯೆಲ್ಲ ವೇಶ್ಯೆಯಂಥಾದ್ದು** |
| **ಭ್ರಮಲ ಬೆಟ್ಟಿ ತೇಟಪಡಗ ನೀಯವು** | **ಭ್ರಮೆಯ ಗೊಳಿಸಿ ತಿಳಿಯಪಡಿಸವು** |
| **ಗುಪ್ತವಿದ್ಯ ಯೊಕಟಿ ಕುಲಕಾಂತ ವಂಟಿದಿ** | **ಗುಪ್ತ ವಿದ್ಯೆಯೊಂದೆ ಕುಲಕಾಂತೆಯಂಥಾದ್ದು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** (108) |

**ಭಾವಾರ್ಥ :–** ವೇಶ್ಯ ಎಂದರೆ ಸ್ಥಿರಸ್ಥಾಯಿಯಾಗಿ ಒಬ್ಬ ಪುರುಷನ ಹತ್ತಿರ ಇರುವವಳಲ್ಲ. ಯಾರು ಹಣ ಜಾಸ್ತಿ ಕೊಟ್ಟರೇ ಅವನ ಹತ್ತಿರಕ್ಕೆ ಹೋಗುವಳು ವೇಶ್ಯ. ಒಬ್ಬ ಪುರುಷನೊಂದಿಗೆ ಸಂಬಂಧ ಇಟ್ಟುಕೊಳ್ಳದೆ ಅನೇಕ ಮಂದಿ ಪುರುಷರೊಂದಿಗೆ ವೇಶ್ಯ ಸಂಬಂಧ ಇಟ್ಟುಕೊಂಡು ಇರುವಳು. ಅದೇ ವಿಧವಾಗಿಯೇ ವೇದ ವಿದ್ಯೆಗಳನ್ನು ಆಶ್ರಯಿಸಿದವನು ಒಬ್ಬ ದೇವರನ್ನಲ್ಲದೆ ಅನೇಕ ದೇವತೆಗಳೊಂದಿಗೆ ಸಂಬಂಧ ಇಟ್ಟುಕೊಂಡಿರುತ್ತಾನೆ. ವೇದವಿದ್ಯೆಗಳಲ್ಲಿ

ಅನೇಕ ದೇವತೆಗಳನ್ನು ಕುರಿತು ಹೇಳುವುದರಿಂದ, ನಮ್ಮ ಕೋರಿಕೆಗಳು ಈಡೇರುವುದಕ್ಕೆ ಅನೇಕ ಆರಾಧನೆಗಳು ಕಲ್ಪಿಸಿರುವುದರಿಂದ ವಿಷ್ಣು, ಈಶ್ವರ, ಬ್ರಹ್ಮಾದಿ ದೇವತೆಗಳನ್ನಿಡಿದು ಅಷ್ಟದಿಕ್ಕುಗಳ ದೇವತೆಗಳವರೆಗು ಬೋಧಿಸುವುದರಿಂದ ಮಾನವನು ಸಂಶಯಗಳಲ್ಲಿ ಬಿದ್ದು ಹೇಗೂ ನಿರ್ಣಯಮಾಡಿಕೊಳ್ಳದೆ ವೇಶ್ಯರ ಹಾಗೆ ಅನೇಕ ದೇವತೆಗಳೊಂದಿಗೆ ಸಂಬಂಧ ಇಟ್ಟುಕೊಂಡು ಆರಾಧಿಸಲು ಶುರು ಮಾಡುವನು. ಯಾವ ದೇವರ ಹತ್ತಿರಕ್ಕೆ ಹೋದಾಗ, ಆ ದೇವರನ್ನು ಕುರಿತು ಹೊಗಳುವುದು, ನೀನೇ ನನ್ನ ನಿಜದೈವವೆಂದು ಮುಗಿಯುವುದು ಮನುಷ್ಯನಿಗೆ ಅಭ್ಯಾಸವಾಗಿ ಹೋಗುತ್ತಿದೆ. ಎಲ್ಲವನ್ನೂ ಬಿಟ್ಟು ಪರಮಾತ್ಮನನ್ನು ಆಶ್ರಯಿಸಿರೆಂದು ವೇದವಿದ್ಯೆಗಳು ಹೇಳುವುದಿಲ್ಲ. ಯಾವುದನ್ನೂ ಬಿಡಬಾರದು, ಎಲ್ಲ ದೇವತಾರಾಧನೆಗಳು ಆಚರಿಸೆಂದು ವೇದಗಳು ಹೇಳುತ್ತಿವೆ.

ರಹಸ್ಯವಿದ್ಯೆಯಾದ ಬ್ರಹ್ಮವಿದ್ಯೆ ಮಾತ್ರ ದೇವತೆಗಳನ್ನು ಕುರಿತು ಹೇಳದೆ, ದೇವತೆಗಳೆಲ್ಲರಿಗೂ ಅತೀತನಾದ ಮತ್ತು ದೇವತೆಗಳೆಲ್ಲರಿಗೂ ದೇವರಾದ ಪರಮಾತ್ಮನನ್ನು ಕುರಿತು ಬೋಧಿಸುತ್ತದೆ. ದೇವತೆಗಳ ಭ್ರಮೆಯಿಂದ ಬಿಡಿಸಿ ಪರಮಾತ್ಮನನ್ನು ಕುರಿತು ತಿಳಿಸುತ್ತದೆ. ಪರಮಾತ್ಮನನ್ನು ಬಾಹ್ಯ ಆರಾಧನೆಗಳಿಂದ ಆರಾಧಿಸಲಾರೆವೆಂದು, ಅಂತರ್ಗತವಾಗಿ ಮನಸ್ಸು, ಅಹಮ್‌ಗಳಿಂದ ಪರಮಾತ್ಮನನ್ನು ಶೋಧಿಸಬೇಕಾಗಿರುತ್ತದೆಂದು ಬ್ರಹ್ಮವಿದ್ಯೆ ತಿಳಿಸುತ್ತಿರುತ್ತದೆ. ಅನೇಕ ದೇವತೆಗಳ ಭ್ರಮೆಯನ್ನು ಬಿಡಿಸಿ, ಎಲ್ಲರಿಗು ದೊಡ್ಡವನಾದ ಪರಮಾತ್ಮನೊಬ್ಬನನ್ನೇ ಮನಸ್ಸಿನಲ್ಲಿ ನಿಲ್ಲಿಸುವುದು ಬ್ರಹ್ಮವಿದ್ಯೆ. ಈ ವಿದ್ಯೆ, ವೇದ ವಿದ್ಯೆಗಳ ಹಾಗೆ ಪ್ರಚಾರದಲ್ಲಿ ಇಲ್ಲದೆ ಎಲ್ಲರಿಗು ತಿಳಿಯದೆ ಹೋಗಿರುವುದರಿಂದ ಬ್ರಹ್ಮವಿದ್ಯೆಯನ್ನು ಗುಪ್ತವಿದ್ಯೆ ಎಂದು ಕೂಡ ಕರೆಯುತ್ತಿದ್ದಾರೆ. ಗುಪ್ತವಿದ್ಯೆ ತಿಳಿದವನು, ವೇದ ವಿದ್ಯೆಗಳನ್ನು ಲೆಕ್ಕ ಮಾಡುವುದಿಲ್ಲ ಮತ್ತು ವೇಶ್ಯಕಾಂತಯಂತಹ ವೇದವಿದ್ಯೆಯನ್ನು ಬಿಟ್ಟು ಕುಲಕಾಂತಯಂತಹ ಗುಪ್ತವಿದ್ಯೆಯನ್ನು ಆಶ್ರಯಿಸುವನೆಂದು ವೇಮನ ತನ್ನ ಪದ್ಯದಲ್ಲಿ ತಿಳಿಸಿದ್ದಾನೆ.

**ಪತಿಯೊಪ್ಪಿನ ಸತಿ ಯೊಪ್ಪುನು**
**ಪತಿ ಸತುಲೊಕಟ್ಟೆನ ಪರಮ ಪಾವನಮಂದುನ್**
**ಪತಿ ಸತಿ ನ್ಯಾಯಮೆ ಮೋಕ್ಷಂ**
**ಬತುಲಿತ ಪರಮಾತ್ಮನೈಕ್ಯಮಗುರಾ ವೇಮಾ.**

**ಪತಿಯೊಪ್ಪಿದರೆ ಸತಿಯೊಪ್ಪುವಳು**
**ಪತಿಸತಿಯೊಂದಾದರೆ ಪರಮ ಪಾವನವು**
**ಸತಿಪತಿ ನ್ಯಾಯವೇ ಮೋಕ್ಷ**
**ತಡವಿಲ್ಲದೆ ಪರಮಾತ್ಮನೈಕ್ಯವಾಗುವನು**
**ವೇಮಾ. (109)**

**ಭಾವಾರ್ಥ :–** ಪತಿ ಎಂದರೆ ಗಂಡ, ಸತಿಯೆಂದರೆ ಹೆಂಡತಿ ಎಂದು ಎಲ್ಲರಿಗೂ ತಿಳಿದಿದೆ. ಮದುವೆಯಾದರೇನೆ ಪತಿ ಸತಿಗಳಾಗುತ್ತಾರೆನ್ನುವ ವಿಷಯ ಕೂಡ ತಿಳಿದಿದೆ. ಪತಿ ಸತಿಗಳಿಗೆ ಮಕ್ಕಳು ಹುಟ್ಟುತ್ತಾರೆಂದು ಕೂಡ ತಿಳಿದಿದೆ. ಈ ವಿಧಾನವೆಲ್ಲವೂ ಜ್ಞಾನಿಗಳಿಗು, ಅಜ್ಞಾನಿಗಳಿಗು ಎಲ್ಲರಿಗು ತಿಳಿದರೂ ಬಹಳ ಜನರಿಗೆ ಈ ವಿಷಯ ದೈವೀಕವಾದುದೆಂದು, ಆ ದೈವೀಕ ವಿಷಯವೇ ಪ್ರಪಂಚದಲ್ಲಿ ಹೀಗೆ ಪ್ರತಿಬಿಂಬಿಸಿ ಇದೆಯೆಂದು, **ಪ್ರಪಂಚದಲ್ಲಿ ಪ್ರತ್ಯಕ್ಷವಾಗಿರುವ ಪತಿ, ಸತಿಯರ ವಿಧಾನವನ್ನು ಆಧಾರಮಾಡಿಕೊಂಡು ಪರೋಕ್ಷವಾಗಿರುವ ದೈವ ವಿಧಾನವನ್ನು ಅರ್ಥ ಮಾಡಿಕೊಳ್ಳುತ್ತೀರೆಂದು ದೇವರೇ ಹೀಗೆ ಇಟ್ಟಿದ್ದಾನೆ.** ದೈವೀಕವಾದ ಪತಿ, ಸತಿ ವಿಧಾನಯಾವುದೋ ಈಗ ವಿವರಿಸಿ ನೋಡಿಕೊಳ್ಳೋಣ.

ಭಗವದ್ಗೀತೆ ಗುಣತ್ರಯ ವಿಭಾಗ ಯೋಗವೆನ್ನುವ ಅಧ್ಯಾಯದಲ್ಲಿ ಪ್ರಾರಂಭದಲ್ಲಿಯೇ ಪರಮಾತ್ಮನನ್ನು ಪತಿಯಾಗಿ, ಪ್ರಕೃತಿಯನ್ನು ಸತಿಯಾಗಿ ಹೇಳಿದ್ದಾರೆ. ಶ್ರೀಕೃಷ್ಣನು ಹೇಳಿದ ಭಗವದ್ಗೀತೆಯ ಪ್ರಕಾರ ಜಗತಿ ಎಲ್ಲದಕ್ಕು ಪ್ರಕೃತಿ, ಪುರುಷರು ಸತಿ ಪತಿಗಳಾಗಿ ಇದ್ದೂ ಪ್ರತಿ ಜೀವರಾಶಿಗು ಅವರೇ ತಾಯಿತಂದೆಯರಾಗಿದ್ದಾರೆ. ಪ್ರಪಂಚದಲ್ಲಿನ ಮನುಷ್ಯಜಾತಿಗೇ ಅಲ್ಲದೆ ಕ್ರಿಮಿ, ಕೀಟ, ಪಶು, ಪಕ್ಷಿ, ವೃಕ್ಷಲತಾದಿಗಳೆಲ್ಲವುಗಳಿಗು ತಾಯಿ ಪ್ರಕೃತಿ, ತಂದೆ ಪರಮಾತ್ಮ ಎಂದು ತಿಳಿಸಲಾಗಿದೆ. ಜಗತಿ ಎಲ್ಲದಕ್ಕು ತಾಯಿ ತಂದೆಯರಾಗಿದ್ದು ಪತಿಸತಿಗಳಾಗಿ ಒಪ್ಪುವ ಪರಮಾತ್ಮ ಪ್ರಕೃತಿ ಪ್ರಪಂಚದಲ್ಲಿ ವಿಭಿನ್ನವಾಗಿ ಪ್ರವರ್ತಿಸುತ್ತಿದ್ದಾರೆ. ಪತಿಯಾದ ಪರಮಾತ್ಮನಿಗೆ ಸತಿಯಾದ ಪ್ರಕೃತಿ ವಿಧೇಯಳಾಗಿದ್ದರೂ, ಪರಮಾತ್ಮ ಆದೇಶಾನುಸಾರ ಜಗತಿ ಬಗ್ಗೆ ಪರಮಾತ್ಮ ಮಾರ್ಗವಾದ ದೈವಮಾರ್ಗಕ್ಕೆ

ಪ್ರಕೃತಿಯಾದ ಮಾಯೆ ಎಷ್ಟೋ ವಿರುದ್ಧವಾಗಿ ಇದೆ. **ದೈವಮಾರ್ಗ ವನ್ನು ಅನುಸರಿಸಬೇಕೆಂದುಕೊಳ್ಳುವವನನ್ನು ಆ ಪ್ರಯತ್ನವನ್ನು ಭಂಗಮಾಡಿ ಇದರಿಂದ ಪಕ್ಕಕ್ಕೆ ಸರಿದುಕೊಳ್ಳುವಂತೆ ಮಾಡುತ್ತಿದೆ. ಎಲ್ಲವೂ ದೇವರಿಗೆ ತಿಳಿದೇ ನಡೆಯುತ್ತಿದೆ.** ದೇವರನ್ನು ಕುರಿತ ಪ್ರಯತ್ನದಲ್ಲಿ ಮಾಯೆ ಪ್ರಭಾವಕ್ಕೆ ತಡೆಯಲಾರದೆ ಎಲ್ಲರೂ ಹಿಂತಿರುಗುತ್ತಿದ್ದಾರೆ. ಆದರೂ ಎಷ್ಟೋ ಲಕ್ಷ ಜನರಲ್ಲಿ ಯಾವ ಒಬ್ಬನೋ ಮಾಯೆಯನ್ನು ವಿರೋಧಿಸಿ ಎಲ್ಲ ಕಷ್ಟಗಳಿಗು ಸಹಿಸಿಕೊಂಡು ದೇವರನ್ನು ಸೇರಿಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಅಂತಹವನನ್ನು ದೇವರು, ಅವನ ಮಾರ್ಗವನ್ನು ಸುಗಮಗೊಳಿಸಿ ಮಾಯೆ ಆತಂಕವನ್ನು ತೊಲಗಿಸಿ, ತನ್ನಲ್ಲಿ ಸೇರಿಸಿಕೊಳ್ಳುವನು. ಬಲವಾದ ಮಾಯೆ ಕಲ್ಪಿಸುವ ಪರಿಸ್ಥಿತಿಗಳೆಲ್ಲವನ್ನು ಅನುಭವಿಸುತ್ತಾ, ಛಲಬಿಡದೆ ದೇವರಿಗೋಸ್ಕರ ಪ್ರಯತ್ನಿಸುವವನನ್ನು ದೇವರು ಒಪ್ಪಿಕೊಳ್ಳುವನು. ದೇವರು ಒಪ್ಪಿಕೊಂಡಾಗ ಮಾಯೆ ಅವನನ್ನು ಆತಂಕಪಡಿಸುವುದಿಲ್ಲ ಅಂತಹವನ ಯೋಗವೊಂದರ ಕ್ಷೇಮವನ್ನು ದೇವರೇ ಪರಿರಕ್ಷಿಸು ವನು. ಆಗ ಅವನು ದೇವರಲ್ಲಿ ಐಕ್ಯವಾಗಿ ಹೋಗುವನು.

**ಪ್ರಪಂಚದಲ್ಲಿ ಮಾಯೆ ಉಂಟುಮಾಡುವ ಅನೇಕ ಕಷ್ಟಗಳನ್ನು ಅತಿಕ್ರಮಿಸಿ, ದೇವರ ಮಾರ್ಗವನ್ನು ಬಿಡದವನನ್ನು, ದೇವರು ತನ್ನ ಮನುಷ್ಯನಾಗಿ ಅಂಗೀಕರಿಸುವನು. ಆಗ ಕೂಡಲೇ ಪ್ರಕೃತಿಯಾದ ಮಾಯೆ ತಾನು ಕೂಡ ಅವನನ್ನು ಒಪ್ಪಿಕೊಂಡು ಅವನಿಗೆ ಆತಂಕವನ್ನುಂಟುಮಾಡುವುದಿಲ್ಲ.** ಆದ್ದರಿಂದ ಮೇಲಿನ ಪದ್ಯದಲ್ಲಿ ಪತಿಯೊಪ್ಪಿದರೆ ಸತಿ ಯೊಪ್ಪುವಳು ಎಂದಿದ್ದಾರೆ. ಆ ವಿಧವಾಗಿ ಪರಮಾತ್ಮ, ಪ್ರಕೃತಿ ಇಬ್ಬರು ಅವನ ಬಗ್ಗೆ ಒಂದಾಗಿ ನಡೆದುಕೊಂಡಾಗ ಅವನು ಮೋಕ್ಷ ಹೊಂದುವನು. ಅದನ್ನೇ ಪದ್ಯದಲ್ಲಿ ವ್ಯಕ್ತಪಡಿಸುತ್ತಾ ಪತಿಸತಿಗಳೊಂದಾದರೆ ಪರಮ ಪಾವನದಲ್ಲಿ ಎಂದಿದ್ದಾರೆ. ಪತಿ, ಸತಿ, ಇಬ್ಬರು ಒಂದು ಮಾರ್ಗದಲ್ಲಿ ನಡೆದುಕೊಳ್ಳುವುದು ನ್ಯಾಯವಾಗುತ್ತದೆ. ಪತಿಗೆ ಸತಿ ವಿರುದ್ಧವಾಗಿ ನಡೆದು ಕೊಳ್ಳುವುದು ಅನ್ಯಾಯವಾಗುತ್ತದೆ. ಪ್ರಕೃತಿ, ಪರಮಾತ್ಮ ಭಕ್ತನ ಬಗ್ಗೆ ನ್ಯಾಯಮಾರ್ಗದಲ್ಲಿ ಪ್ರವರ್ತಿಸಿದರೆ ಮೋಕ್ಷ ಲಭಿಸುತ್ತದೆ. ಆದ್ದರಿಂದ ಮೇಲಿನ ಪದ್ಯದಲ್ಲಿ ಪತಿಸತಿ ನ್ಯಾಯವೇ ಮೋಕ್ಷ ಎಂದಿದ್ದಾರೆ. ಪತಿ, ಸತಿ ನ್ಯಾಯವಾಗಿ

ಪ್ರವರ್ತಿಸಿದಾಗ ಭಕ್ತನು ಕೂಡಲೇ ಜನ್ಮರಾಹಿತ್ಯ ಹೊಂದುವನು. ಆದ್ದರಿಂದ ಬತುಲಿತ ಪರಮಾತ್ಮ ನೈಕ್ಯವಾಗು ಎಂದಿದ್ದಾರೆ.

ಪ್ರಪಂಚದಲ್ಲಿ ಒಬ್ಬ ಭಕ್ತನ ಬಗ್ಗೆ ಗಂಡಹೆಂಡತಿಯರಾದ ಪ್ರಕೃತಿ ಪರಮಾತ್ಮರು ಮೊದಲು ಅನ್ಯಾಯವಾಗಿ ಪ್ರವರ್ತಿಸುತ್ತಾರೆಂದು ಈ ಪದ್ಯದಿಂದ ವೇಮನ ನಮಗೆ ತಿಳಿಸಿದ್ದಾನೆ. ಪತಿಯೊಪ್ಪಿದಾಗಲೇ ಸತಿಯು ಒಪ್ಪಿಕೊಂಡು ಇಬ್ಬರು ನ್ಯಾಯವಾಗಿ ಪ್ರವರ್ತಿಸುತ್ತಾರೆ. ಅವರಿಬ್ಬರು ಒಂದಾಗಿ ನ್ಯಾಯವಾಗಿ ಪ್ರವರ್ತಿಸಿದಾಗಲೇ ಭಕ್ತನಿಗೆ ಮೋಕ್ಷ ಲಭಿಸುತ್ತದೆ. ಮಾಯೆ ಆತಂಕಗಳನ್ನು ಸಹಿಸಿಕೊಳ್ಳಲಾರದೆ ನಾನೆಷ್ಟು ಭಕ್ತಿಯಿಂದ ಇದ್ದರೂ ನನಗೇ ಕಷ್ಟಗಳುಬರುತ್ತಿವೆ ಯೆಂದು, ದೇವರ ಹತ್ತಿರ ನ್ಯಾಯವೇ ಇಲ್ಲವೆಂದುಕೊಂಡವನು ದೇವರ ಮಾರ್ಗದಲ್ಲಿ ಭ್ರಷ್ಟನಾಗುತ್ತಾನೆ. ದೇವರನ್ನು ಕುರಿತು ಏನೂ ಅಂದುಕೊಳ್ಳದೆ ಎಲ್ಲದಕ್ಕೂ ಸಹಿಸಿಕೊಂಡವನು ಮೊದಲು ಪರಮಾತ್ಮನಿಂದ ಒಪ್ಪಿಗೆ ಪಡೆದುಕೊಂಡವನಾಗಿ ಪ್ರಕೃತಿ, ಪರಮಾತ್ಮರು ನ್ಯಾಯವಾಗಿ ಪ್ರವರ್ತಿಸಿದಾಗ ಭಕ್ತನು ಮೋಕ್ಷ ಹೊಂದುವನು.

ಪತಿ ಸತಿಗಳ ವಿಧಾನ ಪ್ರಪಂಚದಲ್ಲಿ ಪ್ರತಿಬಿಂಬಿಸಿದೆಯೆಂದು ಮೊದಲೇ ಹೇಳಿಕೊಂಡಿದ್ದೇವೆ. ಪತಿಗೆ ಸತಿ ವಿರುದ್ಧವಾಗಿ ನಡೆದುಕೊಳ್ಳುವುದು, ಪತಿಯನ್ನು ತನ್ನ ಮಾತು ಕೇಳುವಂತೆ ಮಾಡಿಕೊಳ್ಳುವುದಾದ ಅನ್ಯಾಯವಿಧಾನ ಭೂಮಿ ಮೇಲೆ ಇದೆ. ಹಾಗೆಯೇ ಪತಿಗೆ, ಸತಿ ಅನುಕೂಲವಾಗಿ ನಡೆದುಕೊಳ್ಳುವುದು, ಪತಿಮಾತೇ ತನ್ನ ಮಾತಾಗಿ ಪತಿ ಹೇಳಿದಂತೆ ಸತಿ ನಡೆದುಕೊಳ್ಳುವ ನ್ಯಾಯ ಮಾರ್ಗವೂ ಭೂಮಿಮೇಲೆ ಇದೆ. ನಿಮ್ಮ ಅನುಭವದಲ್ಲಿ ನ್ಯಾಯ, ಅನ್ಯಾಯ, ಪತಿ, ಸತಿಯರನ್ನು ಕುರಿತು ತಿಳಿದಂತಾದರೇ ಯಾರಾದರೂ ಸಂಪೂರ್ಣ ಜ್ಞಾನಿಗಳಾಗಬಲ್ಲರು. ದೇವರ ಮಾರ್ಗದಲ್ಲಿ ನಡೆಯುವವರಿಗೆ ಆತಂಕಗಳೇರ್ಪಟ್ಟರೆ, ದೇವರ ಹತ್ತಿರ ನ್ಯಾಯವಿದೆಯಾ? ಎಂದು ಸಹನೆ ಕಳೆದುಕೊಂಡು ಮಾತನಾಡುವುದಿಲ್ಲ. **ಎಷ್ಟು ಕಷ್ಟಗಳು ಬಂದರು ಇದು ತಾಯಿಯಾದ ಮಾಯೆ ಕೆಲಸ ಎಂದು ಎಚ್ಚರದಿಂದ ನಡೆದುಕೊಳ್ಳುವರು.**

| | |
|---|---|
| **ಆರ್ಗುರು ದೊಂಗಲ ಬಟ್ಟುಕ** | **ಆರುಮಂದಿ ಕಳ್ಳರನ್ನು ಹಿಡಿಯಲು** |
| **ಮಾರ್ಗಮುನನೆ ಕೊಟ್ಟಿ ಯೊಕನಿ ಮನ್ನಿಂಪದಗು** | **ಮಾರ್ಗದಲ್ಲಿ ಹೊಡೆದು ಒಬ್ಬನನ್ನು ಮನ್ನಿಸಬಹುದು** |
| **ದುರ್ಗಮ ಮಿದಿ ತೆಲಿಯಂಗಾ** | **ದುರ್ಗಮವಿದು ತಿಳಿಯಲು** |
| **ನಿರ್ಗುಣ ರೂಪಂಬು ತೆಲಿಯು ನಿಜಮುಗ ವೇಮಾ.** | **ನಿರ್ಗುಣ ರೂಪವನ್ನು ತಿಳಿಯುವ ನಿಜವಾಗಿ** |
| | **ವೇಮಾ. (110)** |

**ಭಾವಾರ್ಥ :–** ಶರೀರದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮಧ, ಮತ್ಸರಗಳೆನ್ನುವ ಆರು ಕೆಟ್ಟ ಗುಣಗಳು ಇವೆ. ಈ ಆರು ಪಾಪ ಸಂಪಾದಿಸಿಡುತ್ತಿವೆ. ಇವುಗಳಿಗೆ ವಿಭಿನ್ನವಾಗಿ ಒಳ್ಳೆಯ ಗುಣಗಳು ಆರಿರುವುದರಿಂದ ಇವುಗಳಿಗೆ ಕೆಟ್ಟ ಹೆಸರು ಬಂದಿದೆ. ಈ ಆರು ಗುಣಗಳು ಮನುಷ್ಯನಲ್ಲಿನ ಜ್ಞಾನವನ್ನು ಹರಿಸುವಂತೆ ಮಾಡುತ್ತಿವೆ. ಆದ್ದರಿಂದ ಇವುಗಳನ್ನು ಕಳ್ಳರೊಂದಿಗೆ ಸಮಾನವಾಗಿ ಹೋಲಿಸಿ ಹೇಳುವುದಾಗಿದೆ. ಕೆಟ್ಟದ್ದನ್ನುಂಟುಮಾಡುವ, ಜ್ಞಾನವನ್ನು ಹರಿಸುವ ಷಟ್‌ವರ್ಗವಾದ ಗುಣಗಳನ್ನು ಅಡಗಿಸಿ ಹಾಕಬೇಕೆಂದು ವೇಮನ ತನ್ನ ಪದ್ಯದಲ್ಲಿ ಹೇಳುತ್ತಾ ಆರು ಮಂದಿ ಕಳ್ಳರ ಹಿಡಿದು ಮಾರ್ಗದಲ್ಲಿಯೇ ಹೊಡೆಯಬೇಕೆಂದಿದ್ದಾನೆ. ಆರು ಗುಣಗಳನ್ನು ಅಡಗಿಸಿ ಅವುಗಳೊಂದಿಗೆ ಸಂಬಂಧ ಇಟ್ಟುಕೊಂಡ ಮನಸ್ಸನ್ನು ಅಡಗಿಸದೆ, ಕೇವಲ ಗುಣಗಳ ಸಂಬಂಧದಿಂದ ತೊಲಗಿಸಿ, ಮನಸ್ಸನ್ನು ಶರೀರದ ಒಳಗಿರುವ ಆತ್ಮ ಮೇಲೆ ಲಗ್ನ ಮಾಡಬೇಕು. ಶರೀರವೆನ್ನುವ ದುರ್ಗದಲ್ಲಿ (ಕೋಟೆಯಲ್ಲಿ) ಅಡಗಿರುವ ಆತ್ಮವನ್ನು ತಿಳಿಯಬೇಕು. ಹಾಗೆ ತಿಳಿಯುವುದರಿಂದ ನಂತರ ಆಕಾರವಿಲ್ಲದ ಪರಮಾತ್ಮನನ್ನು ತಪ್ಪದೆ ತಿಳಿಯಬಹುದು. ಅಂದರೆ ಮೋಕ್ಷ ಹೊಂದಬಹುದು.

ಮನಸ್ಸನ್ನು ಆತ್ಮದ ಮೇಲೆ ಮರಳಿಸುವುದಕ್ಕೆ ಆರು ಗುಣಗಳನ್ನು ಅಡಗಿಸಿದಂತೆ, ಮನಸ್ಸನ್ನು ಮಾತ್ರ ಆತ್ಮ ಮೇಲೆ ಮರಳಿಸಬೇಕು ಆದ್ದರಿಂದ ಒಬ್ಬನನ್ನು ಕ್ಷಮಿಸಬಹುದೆಂದು ಮನಸ್ಸನ್ನು ಕುರಿತು ಹೇಳಿದ್ದಾರೆ. ಶರೀರವೆನ್ನುವ ಕೋಟೆಯಲ್ಲಿ ರಹಸ್ಯವಾಗಿರುವ ಆತ್ಮವನ್ನು ತಿಳಿಯುವುದು ಕಷ್ಟ ಆದ್ದರಿಂದ ದುರ್ಗವಿದು ತಿಳಿದರೆ ಎಂದು ಆತ್ಮವನ್ನು ಕುರಿತು ಹೇಳಿದ್ದಾರೆ. ಆತ್ಮವನ್ನು

ತಿಳಿಯುವುದರಿಂದ ನಿರ್ಗುಣ, ನಿರಾಕಾರವಾದ ಪರಮಾತ್ಮನನ್ನು ತಿಳಿಯಬಹುದು. ಆದ್ದರಿಂದ ನಿರ್ಗುಣ ರೂಪಂಬು ತಿಳಿ ನಿಜವಾಗಿ ಎಂದು ವೇಮನಯೋಗಿ ಈ ಪದ್ಯದಲ್ಲಿ ತಿಳಿಸಿದ್ದಾನೆ.

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ ಅದು ಸತ್ಯವಲ್ಲ.**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ ಅದು ಅಸತ್ಯವಲ್ಲ.**

# ಕೊನೆಯ ಮಾತು

ವೇಮನ ವೇದಗಳು ಓದದಿದ್ದರೂ, ವೇದಾಂತ ಸುಲಭವಾಗಿ ಅಳವಡಿಸಿಕೊಂಡಿದ್ದಾನೆ. ಯೋಚಿಸದಂತೆ ಸಾಧಾರಣ ಪೂಜೆಗಳು ಮಾಡುವ ವರಿಗಿಂತ, ವ್ರತಗಳು ಮಾಡುತ್ತಾ ಉಪವಾಸಗಳು ಇರುವವರಿಗಿಂತ, ದೇವರನ್ನು ಕುರಿತು ಹೇತುಬದ್ಧವಾಗಿ ಯೋಚಿಸುವವನೇ ದೊಡ್ಡವನೆಂದು ನಾವಂದು ಕೊಳ್ಳುತ್ತಿದ್ದೇವೆ. ಏಕೆಂದರೆ ಹೇತುಬದ್ಧವಾಗಿ ಯೋಚಿಸುವವನು, ಅವನಲ್ಲಿ ಉದ್ಭವಿಸುವ ಪ್ರಶ್ನೆಗಳಿಗೆ ಸಮಾಧಾನಗಳನ್ನು ಹುಡುಕುತ್ತಿರುವನು. ಆದ್ದರಿಂದ ಅವನಲ್ಲಿ ಜ್ಞಾನಶೇಕರಣೆ ಇರುತ್ತದೆ. ಅವನಲ್ಲಿನ ಪ್ರಶ್ನೆಗಳಿಗೆ ನಿಜ ಸಮಾಧಾನ ಸಿಗುವವರೆಗು ಅನ್ವೇಷಿಸುತ್ತಾ, ಅನಾಚಾರಗಳನ್ನು ಅಶಾಸ್ತ್ರೀಯಗಳನ್ನು ಖಂಡಿಸುತ್ತಿರುವನು. ವೇಮನ ಈ ವರ್ಗಕ್ಕೆ ಸೇರಿದ ಹೇತುಬದ್ಧನು. ಆತನು ತನ್ನ ಹೇತುವಾದದೊಂದಿಗೆ ದೇವತಾ ಪೂಜೆಗಳೆಲ್ಲವನ್ನೂ ಮೂಢಭಕ್ತಿಯನ್ನು ಖಂಡಿಸಿದ್ದಾನೆ. ನಿಜವಾಗಿ ತನ್ನ ಪ್ರಶ್ನೆಗಳಿಗೆ ಸಮಾಧಾನ ಸಿಗದ ಆಧ್ಯಾತ್ಮಿಕ ರೆಲ್ಲರನ್ನೂ ವಿಮರ್ಶಿಸಿದ್ದಾನೆ. ಕೊನೆಗೆ ತನ್ನ ಅನ್ವೇಷಣೆಯಲ್ಲಿ ಸತ್ಯವನ್ನು ತಿಳಿದುಕೊಂಡು ಶರೀರದಲ್ಲಿಯೇ ದೇವರಿದ್ದಾನೆನ್ನುವ ವೇದಾಂತ ಕೊನೆಯ ಅಂಶವನ್ನೇ ಒಂದು ಸಲ ತಿಳಿದುಕೊಂಡಿದ್ದಾನೆ. ಆತ್ಮ ವಿವರವಿಲ್ಲದ ಎಲ್ಲರ

ಆಚಾರಗಳನ್ನು ವಿಮರ್ಶಿಸಿದ್ದಾನೆ. ಆತನ ಭಾವನೆಗಳನ್ನು ಅರ್ಥ ಮಾಡಿ ಕೊಳ್ಳದವರು ಆತನನ್ನು ಹುಚ್ಚು ವೇಮನ ಎಂದಿದ್ದಾರೆ. ಮೂಢಾಚಾರಗಳಿಗೆ ಅಭ್ಯಾಸವಾದವರೆಲ್ಲರೂ ಇಂದಿಗೂ ವೇಮನನನ್ನು ಜ್ಞಾನಿಯೇ ಅಲ್ಲ ಎನ್ನುವುದು ಕೂಡ ನಡೆಯುತ್ತಿದೆ. ಯಾರೇನೆಂದರೂ ನಮ್ಮ ದೃಷ್ಠಿಯಲ್ಲಿ ಆತನು ಒಬ್ಬ ದೊಡ್ಡ ಆಧ್ಯಾತ್ಮಿಕ ತಜ್ಞ, ಒಂದು ಗ್ರಂಥದಲ್ಲಿರುವ ಸಾರಾಂಶವೆಲ್ಲವನ್ನೂ ಒಂದು ಪದ್ಯದಲ್ಲಿ ಅಳವಡಿಸಿ ಹೇಳಿದವನಿ ವೇಮನ ಒಬ್ಬನೇಯೆಂದು ಹೇಳಬಹುದು. ಮೂಢಭಕ್ತಿಗೆ ಅಭ್ಯಾಸವಾಗಿ, ಆಧ್ಯಾತ್ಮಿಕ ವಾಸನೆ ಕಡಿಮೆಯಾದ ಹಿಂದೂಮತದಲ್ಲಿ ಆತನ ಪದ್ಯಗಳಿಗೆ ದೊಡ್ಡ ಆದರಣೆ ಇಲ್ಲವೆಂದೇ ಹೇಳ ಬಹುದು. ಯಾರೋ ವಿದೇಶಸ್ಥನು ಹೊರಗೆ ತೆಗೆದು ಮುದ್ರಣ ಮಾಡುವವರೆಗು ಆತನ ಪದ್ಯಗಳನ್ನು ಹಿಡಿಸಿಕೊಂಡ ನಾಥನೇ ಇಲ್ಲ. ಆತನ ಪದ್ಯಗಳು ಮುದ್ರಣವಾಗಿ ಬಂದರೂ, ಅವುಗಳನ್ನು ಅರ್ಥ ಮಾಡಿಕೊಳ್ಳುವವರು ಕೂಡ ಅಸಲಿಗೆ ಇಲ್ಲದಂತೆ ಹೋಗುವುದು ವಿಚಾರಿಸುವಂತಹ ವಿಷಯ. ಕೆಲವರು ಬೇರ್ಪಡಿಸಿ ಹೇಳಿಕೊಂಡರೂ ಅವುಗಳಿಗೆ ಪ್ರಪಂಚ ಬಣ್ಣವನ್ನೇ ಬಳೆದು ಅವುಗಳಲ್ಲಿ ಆಧ್ಯಾತ್ಮಿಕ ಕಾಣಿಸದಂತೆ ಮಾಡಿದ್ದಾರೆ. ಆತನ ಪದ್ಯಗಳಲ್ಲಿನ ಜ್ಞಾನವನ್ನು ತಿಳಿಯದೆ ಅವು ಬಂಗಾರವನ್ನು ತಯಾರು ಮಾಡುವ ವಿಧಾನವೆಂದೋ, ಸ್ವಲ್ಪ ವೈದ್ಯವಿಧಾನ ವೆಂದೋ, ಸ್ವಲ್ಪ ನೀತಿ ಎಂದೋ ಹೇಳಿಕೊಳ್ಳುವುದು ನಡೆದಿದೆ. ಅವುಗಳನ್ನು ನೋಡಿದ ನಾವು ವೇಮನ ನಿಜಭಾವವನ್ನು ತಿಳಿಸಬೇಕೆಂದು ನಮ್ಮಿಂದ ಬರೆಯಲ್ಪಟ್ಟಿರುವ 110 ಪದ್ಯಗಳಿಗೆ ಪೂರ್ತಿ ಆಧ್ಯಾತ್ಮಿಕ ಬಣ್ಣ ಹಚ್ಚಿ ತೋರಿಸಿದ್ದೇವೆ. ಆತನು ನಿಜವಾದ ಕರ್ಮಯೋಗಿ ಎನ್ನುವಂತೆ ತಿಳಿಸಿದ್ದೇವೆ. ಈ ಪದ್ಯಗಳನ್ನು ಪೂರ್ತಿ ಅವಗಾಹನೆ ಮಾಡಿಕೊಂಡು ವೇಮನವೊಂದರ ಹಿರಿಮೆಯನ್ನು ಗುರುತಿಸಬಲ್ಲರೆಂದು ಕೋರುತ್ತಿದ್ದೇವೆ.

**ಇಂತಿ**

**ಸಂಚಲನಾತ್ಮಕ ರಚನೆಕಾರರು, ತ್ರೈತಸಿದ್ಧಾಂತ ಆದಿಕರ್ತ**

**ಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

1. ನಾಲ್ಕು ಅಧರ್ಮಗಳು ಶೇ. ಹತ್ತರಷ್ಟು ಮನುಷ್ಯರಲ್ಲಿರುವಾಗ,
ಒಂದು ಮತವೆಂಬ ಅಧರ್ಮ 99 ರಷ್ಟು ಇದೆ.

2. ಯಜ್ಞ, ದಾನ, ವೇದ, ತಪಸ್ಸುಗಳು ನಾಲ್ಕು ಆದಾಗ, ಐದನೆಯ ಅಧರ್ಮ ಮತ.

3. ದೈವ ಮಾರ್ಗಕ್ಕೆ ದೊಡ್ಡ ಆತಂಕ ಮತ.

4. ಎಲ್ಲ ಅಧರ್ಮಗಳನ್ನು ಮೀರಿರುವುದು ಮತವೆಂಬ ಅಧರ್ಮ.

5. ಪ್ರಪಂಚ ಮಾರ್ಗದಲ್ಲಿ ಮತವಿದ್ದರೇ ದೈವ ಮಾರ್ಗದಲ್ಲಿ ಹತವಾಗಿ ಹೋಗುತ್ತೀಯ.

6. ಕಲಿಯುಗದಲ್ಲಿ ಹೊಸದಾಗಿ ಹುಟ್ಟಿ ಬಂದಿರುವ ಐದನೆಯ ಅಧರ್ಮವೇ ಮತ.

ಮತಗಳು ನಿಷೇಧ, ನಿಷಿದ್ಧ. ಕುಲಗಳು ಅಹೇತುಕ, ಅಶಾಸ್ತ್ರೀಯ.

ಭಗವದ್ಗೀತಾ, ಬೈಬಲ್, ಖುರಾನ್ ಮೂರೂ ಒಂದೇ ದೈವಗ್ರಂಥಗಳಲ್ಲಿನ ಭಾಗಗಳೇ.

ನಿಮ್ಮ ಮನೋಭಾವನೆಗಳು ಕುಲಮತಗಳಿಗೆ ಅತೀತವಾದರೇ ಕೂಡಲೇ "ಪ್ರಬೋಧ ಸೇವಾಸಮಿತಿ"

ಯಲ್ಲಿ ಸದಸ್ಯರಾಗಿ ಸೇರಿರಿ. ದೇವರು ನಿಮ್ಮನ್ನು ಜ್ಞಾನಿಗಳಾಗಿ ಮಾಡಬೇಕೆಂದು ಕೋರುತ್ತಿರುವ

——ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು

**Cell:09705864675, 09440556968, 09611133635**